ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂಭ್ರಮ

ಓಲ್ಡ್ ಟ್ರಾಫರ್ಡ್‌ನಲ್ಲಿ ಶನಿವಾರ ನಡೆದ ಇಂಗ್ಲಿಷ್ ಪ್ರೀಮಿಯರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ನಾರ್ವಿಕ್ ಸಿಟಿ ಎದುರಿನ ಪಂದ್ಯದಲ್ಲಿ ಗೋಲು ಗಳಿಸಿದ ಮ್ಯಾಂಚೆಸ್ಟರ್ ಯುನೈಟೆಡ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಸಂಭ್ರಮ



ಭಯೋತ್ಪಾದನೆ: ಮೂವರ ವಿರುದ್ಧ ಆರೋಪ ಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರ ಸಂಘಟನೆ ಜೊತೆ ಸೇರಿ ತಮಿಳುನಾಡು ಹಾಗೂ ಕರ್ನಾಟಕದಲ್ಲಿ ಭಯೋತ್ಪಾದನಾ ಕೃತ್ಯ ಎಸಗಲು ಸಂಚು ರೂಪಿಸಿದ್ದ ಪ್ರಕರಣದಲ್ಲಿ ಮತ್ತೆ ಮೂವರ ವಿರುದ್ಧ ರಾಷ್ಟ್ರೀಯ ತನಿಖಾ ದಳದ (ಎನ್ಐಎ) ಅಧಿಕಾರಿಗಳು ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಆರೋಪಿಗಳಾದ ಬೆಂಗಳೂರಿನ ಮೊಹಮ್ಮದ್ ತೌಕೀರ್, ಜುಹೇಬ್ ಮನ್ನಾ ಹಾಗೂ ಭಟ್ಕಳದ ಮೊಹಮ್ಮದ್ ಶಿಹಾಬ್ ವಿರುದ್ಧ ನಗರದ ಎನ್ಐಎ ವಿಶೇಷ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಕೆಯಾಗಿದೆ.

'ಅಲ್ ಹಿಂದ್' ಹೆಸರಿನಲ್ಲಿ ಸಂಘಟಿತರಾಗಿ 'ಕುರಾನ್ ಸರ್ಕಲ್' ಗುಂಪು ಕಟ್ಟಿಕೊಂಡಿದ್ದ ಶಂಕಿತರು, ಭಯೋತ್ಪಾದನಾ ಕೃತ್ಯ ಎಸಗಲು 2019ರಿಂದ ಸಂಚು ರೂಪಿಸುತ್ತಿದ್ದರು. ಇಸ್ಲಾಂ ಧರ್ಮದ ಹೆಸರಿನಲ್ಲಿ ಯುವಕರನ್ನು ಪ್ರಚೋದಿಸಿ ನೇಮಿಸಿಕೊಳ್ಳುತ್ತಿದ್ದರು. ತಮಿಳುನಾಡಿನ ಹಿಂದೂ ಸಂಘಟನೆ ಮುಖಂಡ ಸುರೇಶ್ ಮತ್ತು ಎಎಸ್ಐ ವಿಲ್ಸನ್ ಹತ್ಯೆ ಪ್ರಕರಣದಲ್ಲೂ ಭಾಗಿಯಾಗಿದ್ದರು. ಶಂಕಿತರ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಕೆಲವರನ್ನು ಬಂಧಿಸಲಾಗಿತ್ತು' ಎಂದು ಎನ್ಐಎ ಮೂಲಗಳು ಹೇಳಿವೆ.

'ಬೆಂಗಳೂರಿನ ಸುದ್ದಗುಂಟೆಪಾಳ್ಯ ಠಾಣೆ ವ್ಯಾಪ್ತಿಯಲ್ಲೂ 2020ರಲ್ಲಿ ಕಾರ್ಯಾಚರಣೆ ನಡೆಸಿ ಹಲವರನ್ನು ಬಂಧಿಸಲಾಗಿತ್ತು. ಸ್ಫೋಟಕ ತಯಾರಿಕೆ ವಸ್ತುಗಳನ್ನೂ ಜಪ್ತಿ ಮಾಡಲಾಗಿತ್ತು. ಇದೇ ಪ್ರಕರಣದಲ್ಲಿ ಮೊಹಮ್ಮದ್ ತೌಕೀರ್, ಜುಹೇಬ್ ಮನ್ನಾ ಹಾಗೂ ಮೊಹಮ್ಮದ್ ಶಿಹಾಬ್‌ನನ್ನು ಬಂಧಿಸಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

'ಹಾವೇರಿ ಸಮ್ಮೇಳನಕ್ಕೆ ಮುನ್ನ ನಾಡಗೀತೆ ಧಾಟಿ ನಿರ್ಧರಿಸಿ'

ಬೆಂಗಳೂರು: 'ಕುವೆಂಪು ರಚಿಸಿರುವ ನಾಡಗೀತೆಯ ಗಾಯನದ ಧಾಟಿಯನ್ನು ಹಾವೇರಿ ಸಾಹಿತ್ಯ ಸಮ್ಮೇಳನಕ್ಕೂ ಮುನ್ನವೇ ನಿರ್ಧರಿಸಬೇಕು' ಎಂದು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಆಗ್ರಹಿಸಿದೆ.

'ಜಯ ಭಾರತ ಜನನಿಯ ತನುಜಾತೆ' ಗೀತೆ ರಚನೆಯಾಗಿ 98 ವರ್ಷಗಳಾಗಿವೆ. ಭಾರತದ ಅಖಂಡತೆ ಹಾಗೂ ಭಾವೈಕ್ಯತೆ ಎತ್ತಿಹಿಡಿಯುವ ಗೀತೆ ಇದಾಗಿದೆ. 2004ರಲ್ಲಿ ರಾಜ್ಯ ಸರ್ಕಾರವು ಇದನ್ನು ನಾಡಗೀತೆಯಾಗಿ ಆಯ್ಕೆಮಾಡಿತ್ತು. ಅದಾಗಿ 18 ವರ್ಷವಾದರೂ ಯಾವ ಧಾಟಿಯಲ್ಲಿ ಹಾಡಬೇಕು, ಇದರ ಅವಧಿ ಎಷ್ಟಿರಬೇಕು ಎಂಬುದನ್ನು ನಿರ್ಧರಿಸದೆ ಮೀನಮೇಷ ಎಣಿಸಲಾಗುತ್ತಿದೆ' ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು ಮುಖ್ಯಮಂತ್ರಿಯವರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.





ತಿಗಳರಪೇಟೆಯ ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ಶನಿವಾರ ಕರಗ ಮಹೋತ್ಸವದಲ್ಲಿ ಭಕ್ತರು ಭಾಗವಹಿಸಿದ್ದರು (ಎಡಚಿತ್ರ) ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕರಗ ಹೊರುವ ಜ್ಞಾನೇಂದ್ರ ಅವರು ದೇವಸ್ಥಾನದಿಂದ ಹೊರಬಂದರು –ಪ್ರಜಾವಾಣಿ ಚಿತ್ರಗಳು/ಎಂ.ಎಸ್‌ಮಂಜುನಾಥ್

ವರುಣನ ಸಿಂಚನ ● ಭಕ್ತರ ಹರ್ಷೋದ್ಗಾರ ● ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ಧಾರ್ಮಿಕ ವಿಧಿ–ವಿಧಾನ

ಪೌರ್ಣಿಮೆ ರಾತ್ರಿಯಲ್ಲಿ ಸಂಭ್ರಮದ ಕರಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿರು ಬಿಸಿಲಿನಿಂದ ಕಾದಿದ್ದ ಇಳೆಗೆ ಮಳೆ ತಂಪೆರೆದರೆ, ಚೈತ್ರ ಪೌರ್ಣಿಮೆಯ ರಾತ್ರಿಯಲ್ಲಿ ತಿಗಳರಪೇಟೆ ಧರ್ಮರಾಯಸ್ವಾಮಿ ದೇವಸ್ಥಾನದ ಗರ್ಭಗುಡಿಯತ್ತ ಸಹಸ್ರಾರು ಕಣ್ಣುಗಳು ದೃಷ್ಟಿ ನೆಟ್ಟಿದ್ದವು.

ಝಗಮಗಿಸುವ ಬೆಳಕು, ಓಲಗದ ಸದ್ದು ಇಡೀ ಪೇಟೆಯನ್ನೇ ಆವರಿಸಿಕೊಂಡಿತ್ತು. ಶನಿವಾರ ತಡರಾತ್ರಿ ಮಲ್ಲಿಗೆಯ ಪರಿಮಳ ಹರಡುತ್ತ ಧರ್ಮರಾಯಸ್ವಾಮಿ ದೇವಸ್ಥಾನದಿಂದ ಕರಗದ ಮೆರವಣಿಗೆ ಹೊರಟಿತು. ಕರಗ ಹೊರ ಬಂದ ಕೂಡಲೇ ಭಕ್ತರ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು. ಐತಿಹಾಸಿಕ ಬೆಂಗಳೂರು ಕರಗ ಶಕ್ತ್ಯೋತ್ಸವ ವೈಭವಪೂರ್ಣವಾಗಿ ನಡೆಯಿತು.


ಕಿಷ್ಕಿಂದೆಯಂತೆ ಇರುವ ಈ ಪ್ರದೇಶದ ಪ್ರತಿ ಗಲ್ಲಿಯಲ್ಲೂ ಜನಸಾಗರ ಸೇರಿತ್ತು. ರಾಜ್ಯ ಹಾಗೂ ಹೊರ ರಾಜ್ಯಗಳಿಂದಲೂ ಬಂದಿದ್ದ ಸಾವಿರಾರು ಭಕ್ತರು ಉತ್ಸವಕ್ಕೆ ಸಾಕ್ಷಿಯಾದರು. ಶನಿವಾರ ರಾತ್ರಿ ಸುರಿದ ಮಳೆ ಭಕ್ತರ ಉತ್ಸಾಹವನ್ನು ಕುಗ್ಗಿಸಲಿಲ್ಲ. ಮಳೆ ಕಡಿಮೆಯಾದಂತೆ ಭಕ್ತರ ದಂಡು ದೇವಸ್ಥಾನದ ಆಗಮಿಸಿತು.

ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ಧಾರ್ಮಿಕ ವಿಧಿ–ವಿಧಾನಗಳು ನಡೆದವು. ಕರಗ ಹೊತ್ತಿದ್ದ ಅರ್ಚಕ ಎ. ಜ್ಞಾನೇಂದ್ರ ಅವರು ಪೂಜೆ ಸಲ್ಲಿಸುವ ಮೂಲಕ ಉತ್ಸವಕ್ಕೆ ಚಾಲನೆ ನೀಡಿದರು.

ಸರ್ವಾಲಂಕಾರ ಭೂಷಿತರಾಗಿದ್ದ ಎ. ಜ್ಞಾನೇಂದ್ರ ಅವರು ಒಂದು ಕೈಯಲ್ಲಿ ಕತ್ತಿ, ಮತ್ತೊಂದು ಕೈಯಲ್ಲಿ ಮಂತ್ರದಂಡ ಹಿಡಿದು ಧರ್ಮರಾಯಸ್ವಾಮಿ ದೇವಾಲಯದ ಗರ್ಭಗುಡಿಯಿಂದ ಹೊರಕ್ಕೆ ಬರುತ್ತಿದ್ದಂತೆ ತಮಟೆ, ಮಂಗಳ ವಾದ್ಯಗಳು ಮೊಳಗಿದವು. ಖಡ್ಗ ಹಿಡಿದಿದ್ದ ನೂರಾರು ವೀರಕುಮಾರರು 'ಗೋವಿಂದಾ, ಗೋವಿಂದಾ' ಎಂದು ನಾಮಸ್ಮರಣೆ ಮಾಡುತ್ತ ಕರಗದೊಂದಿಗೆ ಹೆಜ್ಜೆ ಹಾಕಿದರು.

ಹಲಸೂರು ಪೇಟೆ ಆಂಜನೇಯಸ್ವಾಮಿ ಮತ್ತು ಪ್ರಸನ್ನ ಗಂಗಾಧರೇಶ್ವರಸ್ವಾಮಿ ದೇವಾಲಯಗಳಲ್ಲಿ ಪೂಜೆ ಸ್ವೀಕರಿಸಿದ ನಂತರ ಕರಗ ಮುಂದೆ ಸಾಗಿತು. ನಗರ್ತಪೇಟೆಯ ವೇಣುಗೋಪಾಲಸ್ವಾಮಿ, ಸಿದ್ದಣ್ಣಗಲ್ಲಿಯ ಭೈರೇದೇವರ ದೇವಸ್ಥಾನ, ಕಬ್ಬನ್ ಪೇಟೆಯ ರಾಮಸೇವಾ ಮಂದಿರ, ಮಕ್ಕಳ ಬಸವನಗುಡಿ, ಗಾಣಿಗರಪೇಟೆಯ ಚನ್ನರಾಯಸ್ವಾಮಿ, ಚಾಮುಂಡೇಶ್ವರಿ ದೇವಸ್ಥಾನದ ಮೂಲಕ ನಗರದ ನಾಲ್ಕೂ ದಿಕ್ಕುಗಳಲ್ಲಿ ಕರಗ ಸಂಚರಿಸಿತು.

ವೀರಕುಮಾರರು ರಕ್ಷಕರಾಗಿ ನಿರ್ದಿಷ್ಟ ಸ್ಥಳಗಳಲ್ಲಿ ಅಲಗು ಸೇವೆ ಮಾಡುತ್ತ ಕರಗದೊಂದಿಗೆ ಸಾಗಿದರು. ಕರಗಧಾರಿಗಳ ಸ್ವಾಗತಕ್ಕೆ ಮನೆಗಳ ಮುಂದೆ ರಂಗೋಲಿ, ತಳಿರು ತೋರಣಗಳಿಂದ ಅಲಂಕಾರ ಮಾಡಲಾಗಿತ್ತು.



ಧರ್ಮರಾಯಸ್ವಾಮಿ ದೇವಸ್ಥಾನದ ಮುಂದೆ ಭಕ್ತರು ಕರ್ಪೂರ ಹಚ್ಚಿ ಪೂಜೆ ಸಲ್ಲಿಸಿದರು –ಪಿಟಿಐ ಚಿತ್ರ

ದ್ರೌಪದಿಯಂತೆ ಸಿಂಗಾರ

ಹನ್ನೊಂದು ದಿನಗಳ ಕಾಲ ನಡೆಯುವ ಕರಗ ಉತ್ಸವದಲ್ಲಿ ಹೂವಿನ ಕರಗವೇ ಉತ್ಸವದ ಕೇಂದ್ರಬಿಂದು.

ಮುಖದ ಮೇಲ್ಭಾಗದಲ್ಲಿ ವಿಷ್ಣು, ಕೊರಳಲ್ಲಿ ಶಿವ, ಕೆಳ ಭಾಗದಲ್ಲಿ ಬ್ರಹ್ಮ ಮತ್ತು ಮಧ್ಯ ಭಾಗದಲ್ಲಿ ಮಾತೃಗಣಗಳಿವೆ ಎಂಬ ನಂಬಿಕೆ ಇರುವ 'ಕರಗ' ಸೂಸುವ ಮಲ್ಲಿಗೆಯ ಪರಿಮಳ ಜನರನ್ನು ಮಂತ್ರ ಮುಗ್ಧರನ್ನಾಗಿಸಿತು. ಮಲ್ಲಿಗೆ ಹೂವಿನ ಅಲಂಕಾರ, ಕನಕಾಂಬರ ಹೂವಿನ ಎಸಳುಗಳು, ಮೇಲ್ತುದಿಯಲ್ಲಿ ಬೆಳ್ಳಿ ಛತ್ರಿ ನೋಡಲು ಆಕರ್ಷಕವಾಗಿತ್ತು.

ಲೋಕಕಂಟಕನಾಗಿ ಮೆರೆಯುತ್ತಿದ್ದ ತ್ರಿಪುರಾಸುರನೆಂಬ ರಾಕ್ಷಸನ ಸಂಹಾರಕ್ಕಾಗಿ ದ್ರೌಪದಿಯು ಶಕ್ತಿದೇವತೆಯ ಅವತಾರ ತಾಳಿದಳು ಎಂಬ ಕಥೆ ಇದೆ. ಅದಕ್ಕಾಗಿ ದ್ರೌಪದಿ ಸೈನಿಕ ಪಡೆಯನ್ನೂ ಸೃಷ್ಟಿಸಿಕೊಂಡಿದ್ದಳಂತೆ. ಅವರೇ ವೀರಕುಮಾರರು ಎಂಬ ನಂಬಿಕೆ ಇದೆ.

ಲೋಕಕಲ್ಯಾಣ ಮಾಡಿದ ದ್ರೌಪದಿ ಯುದ್ಧ ಮುಗಿದ ಬಳಿಕ ಪೂರ್ವಾಶ್ರಮಕ್ಕೆ ತೆರಳಲು ಸಿದ್ಧಳಾಗುತ್ತಾಳೆ. ಆಗ ವೀರಕುಮಾರರಿಗೆ ದುಃಖವಾಗುತ್ತದೆ. 'ಪ್ರತಿ ಹೊಸ ವರ್ಷದಲ್ಲಿ ಬರುವ ಮೊದಲ ಹುಣ್ಣಿಮೆಯಂದು ನಿಮ್ಮಲ್ಲಿಗೆ ಬರುತ್ತೇನೆ' ಎಂದಳು. ಚೈತ್ರ ಮಾಸದ ಮೊದಲ ಹುಣ್ಣಿಮೆಯ ದಿನ ದ್ರೌಪದಿ ಧರೆಗಿಳಿದು ಬರುತ್ತಾಳೆ ಎಂಬುದು ಭಕ್ತರ ನಂಬಿಕೆ.

ಉತ್ಸವ ಮೂರ್ತಿಗಳ ಮೆರವಣಿಗೆ

ರಾತ್ರಿ ಕರಗ ಹೊರಬರುವ ಮುನ್ನ ಮಹಾರಥದಲ್ಲಿ ಅರ್ಜುನ, ದ್ರೌಪದಿ ದೇವಿ ಹಾಗೂ ಮುತ್ಯಾಲಮ್ಮ ದೇವಿಯ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿತ್ತು. ಹೂವು ಮತ್ತು ತಳಿರು– ತೋರಣಗಳಿಂದ ಸಿಂಗಾರಗೊಂಡಿದ್ದ ಈ ರಥದೊಂದಿಗೆ ಉತ್ಸವ ಮೂರ್ತಿಗಳ ಮೆರವಣಿಗೆಯೂ ಸಾಗಿತು.

ಇದಕ್ಕೂ ಮುನ್ನ ಶನಿವಾರ ಬೆಳಿಗ್ಗೆ ಕಬ್ಬನ್ ಪಾರ್ಕ್‌ನ ಕರಗದ ಕುಂಟೆಯಲ್ಲಿ ಜ್ಞಾನೇಂದ್ರ ಅವರು ಗಂಗಾಪೂಜೆ ಸಲ್ಲಿಸಿದರು.

ಬಳಿಕ ಅಲ್ಲಿಂದ ಹಸಿಕರಗವನ್ನು ಮಂಟಪಕ್ಕೆ ತಂದು ವಿಶೇಷ ಪೂಜೆ ನೆರವೇರಿಸಿ ಧರ್ಮರಾಯಸ್ವಾಮಿ ದೇವಾಲಯಕ್ಕೆ ಕರೆತರಲಾಯಿತು. ಜ್ಞಾನೇಂದ್ರ ಅವರು ದೇವಸ್ಥಾನದ ಸುತ್ತಮುತ್ತ ಇರುವ ಸಮುದಾಯದ ಮನೆಗಳಿಗೆ ಹೋಗಿ ಪೂಜೆ ಸ್ವೀಕರಿಸಿದರು.

ಸಮುದಾಯದ ಮುಖಂಡರು ಜ್ಞಾನೇಂದ್ರ ಅವರ ಮನೆಗೆ ತೆರಳಿ ಹಣ್ಣು–ಹಂಪಲು, ಸೀರೆ, ಬಳೆ ನೀಡಿ ಸತ್ಕರಿಸಿದರು. ಬಳಿಕ ಅಲ್ಲಿಂದ ಅವರನ್ನು ದೇವಸ್ಥಾನಕ್ಕೆ ಕರೆತರಲಾಯಿತು. ಸಂಜೆ ವೇಳೆಗೆ ಅವರಿಗೆ ಕಂಕಣಧಾರಣೆ ಮಾಡಿ, ಕೈತುಂಬ ಕರಿಬಳೆ ತೊಡಿಸಲಾಯಿತು.

ದೇವಸ್ಥಾನದಲ್ಲಿ ವೈಷ್ಣವಾಗಮ ರೀತಿಯಲ್ಲಿ ಪೂಜೆ, ಹೋಮಗಳು ನಡೆದವು. ಹೋಮದ ಬೂದಿಯನ್ನು ದೇವರ ಬಳಿ ಇಡಲಾಯಿತು. ಅನಂತರ ಅರ್ಜುನ, ದ್ರೌಪದಿಯರ ಕಲ್ಯಾಣೋತ್ಸವ ನಡೆಯಿತು.

ಪ್ರಧಾನ ಪುರೋಹಿತರು ತಾಳಿಯನ್ನು ಅರ್ಜುನನ ವಿಗ್ರಹಕ್ಕೆ ಮುಟ್ಟಿಸಿ ದ್ರೌಪದಿಯಂತೆ ಸಿಂಗಾರಗೊಂಡಿದ್ದ ಜ್ಞಾನೇಂದ್ರ ಅವರಿಗೆ ಕಟ್ಟಿದರು. ಬಳಿಕ ಅನ್ನಕ್ಕೆ ಕುಂಕುಮ ಬೆರೆಸಿ 'ದೃಷ್ಟಿ ಉಂಡೆ' ಮಾಡಿ ಕರಗ ಸಾಗುವ ಹಲಸೂರುಪೇಟೆ, ನಗರ್ತಪೇಟೆ, ಸಿದ್ದಣ್ಣಗಲ್ಲಿ, ಕಬ್ಬನ್‌ಪೇಟೆ, ಅರಳೆಪೇಟೆ, ಗಾಣಿಗರಪೇಟೆ, ಅಕ್ಕಿಪೇಟೆ, ಅರಳೆಪೇಟೆ, ಕುಂಬಾರಪೇಟೆ, ಗೊಲ್ಲರಪೇಟೆ, ತಿಗಳರಪೇಟೆಯ ಮುಖ್ಯದ್ವಾರಗಳ ಬಳಿ ಇಡಲಾಯಿತು.

ರಾತ್ರಿ 10ರ ಸುಮಾರಿಗೆ ಜ್ಞಾನೇಂದ್ರ, ಗಂಟೆ ಪೂಜಾರಿಗಳು, ವೀರಕುಮಾರರು ಹಾಗೂ ಸಮುದಾಯದ ಕೆಲ ಮುಖಂಡರು ಸಂಪಂಗಿ ಕೆರೆಯಂಗಳದಲ್ಲಿ ಸೇರಿದರು. ಅಲ್ಲಿ ಜ್ಞಾನೇಂದ್ರ ಅವರನ್ನು ಅಚ್ಚಮಲ್ಲಿಗೆ, ಜಡೆಕುಚ್ಚು, ಹಾರಗಳಿಂದ ಸಿಂಗರಿಸಿ, ಅರಿಶಿಣ ಬಣ್ಣದ ಸೀರೆ ಉಡಿಸಿ, ಕುಪ್ಪಸ ತೊಡಿಸಿ, ವಕ್ಷಸ್ಥಲವನ್ನು ಹವಳದ ಹಾರ, ರತ್ನಾಭರಣಗಳಿಂದ ಅಲಂಕರಿಸಲಾಯಿತು.

ಅವರಿಗೆ ಧೂಪ, ದೀಪ, ಆರತಿಗಳ ಅರ್ಚನೆ ಮಾಡಲಾಯಿತು. ವೀರಕುಮಾರರಿಂದ ಅಲಗುಸೇವೆಯಾದ ಬಳಿಕ ಅವರ ಮೈಮೇಲೆ ಆದಿಶಕ್ತಿಯ ಆವಿರ್ಭಾವವಾಯಿತು. ಬಳಿಕ ಮಂಗಳವಾದ್ಯಗಳೊಂದಿಗೆ ಎಲ್ಲರೂ ದೇವಾಲಯದ ಬಳಿಗೆ ಬಂದರು. ಜ್ಞಾನೇಂದ್ರ ಅವರು ಮಾತ್ರ ಗರ್ಭಗುಡಿಯನ್ನು ಪ್ರವೇಶಿಸಿದರು.

ಉತ್ಸವ ಕಣ್ತುಂಬಿಕೊಂಡ ಭಕ್ತರು

ಹೂವಿನ ಕರಗ ಶಕ್ತ್ಯೋತ್ಸವವನ್ನು ಭಕ್ತರು ರಸ್ತೆಯ ಇಕ್ಕೆಲಗಳಲ್ಲಿ ನಿಂತು ಕಣ್ತುಂಬಿಕೊಂಡರು. ಕೋವಿಡ್‌ನಿಂದ ಕಳೆದ ಎರಡು ವರ್ಷ ಸರಳವಾಗಿ ನಡೆದಿದ್ದ ಕರಗ ಈ ಬಾರಿ ವಿಜೃಂಭಣೆಯಿಂದ ನಡೆಯಿತು.

ಉತ್ಸವ ಸಾಗಿದ ರಸ್ತೆಗಳಲ್ಲಿ ಸಾಲುಗಟ್ಟಿ ನಿಂತಿದ್ದ ಭಕ್ತರು ಕರಗದ ದರ್ಶನ ಪಡೆದು, ವಿವಿಧ ಬಗೆಯ ಹೂಗಳನ್ನು ಅರ್ಪಿಸಿ ಧನ್ಯತೆ ಅನುಭವಿಸಿದರು.

ತಿಗಳರಪೇಟೆ ಸೇರಿದಂತೆ ಕರಗ ಸಾಗುವ ಮಾರ್ಗದಲ್ಲಿ ವಿಶೇಷ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ಕರಗ ತಲುಪುವ ದೇವಸ್ಥಾನಗಳನ್ನು ದೀಪಾಲಂಕಾರಗಳಿಂದ ಆಕರ್ಷಕವಾಗಿ ಸಿಂಗರಿಸಲಾಗಿತ್ತು.

ಹಳೇ ಹುಬ್ಬಳ್ಳಿ ಉದ್ವಿಗ್ನ

ಪ್ರಚೋದನಕಾರಿ ಪೋಸ್ಟ್ ಆರೋಪ ● ಗಾಳಿಯಲ್ಲಿ ಗುಂಡು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಮಸೀದಿಯ ಚಿತ್ರದ ಮೇಲೆ ಭಗವಾಧ್ವಜದ ಚಿತ್ರವನ್ನು ಬಿಡಿಸಿ ಯುವಕನೊಬ್ಬ ಸಾಮಾಜಿಕ ತಾಣದಲ್ಲಿ ಹಂಚಿಕೊಂಡಿದ್ದ ಪೋಸ್ಟ್‌ಗೆ ತೀವ್ರ ಆಕ್ರೋಶ ವ್ಯಕ್ತವಾಗಿದ್ದು, ಶನಿವಾರ ರಾತ್ರಿ ನಗರದ ಹಳೇ ಹುಬ್ಬಳ್ಳಿಯಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿತ್ತು.

'ತಲೆ ಕೆಟ್ಟರೆ ಇಲ್ಲೂ ಭಗವಾಧ್ವಜ ಹಾರಿಸುವೆ, ಜೈ ಶ್ರೀರಾಮ್, ಹಿಂದೂ ಸಾಮ್ರಾಟ್' ಎಂದು ಚಿತ್ರದ ಮೇಲೆ ಬರೆಯಲಾಗಿತ್ತು. ಇದು ವಿವಾದಕ್ಕೆ ಕಾರಣವಾಗಿದೆ. ಪೋಸ್ಟ್ ಮಾಡಿದ್ದ ಆರೋಪದ ಮೇಲೆ ಅಭಿಷೇಕ್ ಹಿರೇಮಠ ಎಂಬವನನ್ನು ಪೊಲೀಸರು ಬಂಧಿಸಿದ್ದಾರೆ.

ಹಳೇ ಹುಬ್ಬಳ್ಳಿಯ ದಿಡ್ಡಿ ಓಣಿಯಲ್ಲಿ ಘಟನೆ ನಡೆದಿದ್ದು ಪುಂಡರು ಗುರುವ ಆಸ್ಪತ್ರೆ ಮೇಲೂ ದಾಳಿ ಮಾಡಿದ್ದಾರೆ. ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದರು.

ಘಟನೆಯಲ್ಲಿ ಮೂರಕ್ಕೂ ಹೆಚ್ಚು ಪೊಲೀಸ್ ಜೀಪ್‌ಗಳು ಧ್ವಂಸಗೊಂಡಿವೆ. ಕಲ್ಲು ತೂರಾಟ ಹಿನ್ನೆಲೆಯಲ್ಲಿ ಪರಿಸ್ಥಿತಿ ನಿಯಂತ್ರಣ ಕ್ರಮವಾಗಿ ಸೆಕ್ಷನ್ 144ರ ಅನ್ವಯ ನಿಷೇಧಾಜ್ಞೆ ವಿಧಿಸಲಾಗಿದೆ.



ಘಟನೆಯಲ್ಲಿ ಜಖಂಗೊಂಡಿರುವ ಪೊಲೀಸ್ ಜೀಪ್

ಮುಖ್ಯಾಂಶಗಳು

- ಪೋಸ್ಟ್ ಮಾಡಿದ್ದ ಯುವಕನ ಬಂಧನ
- ಮೂರಕ್ಕೂ ಹೆಚ್ಚು ಪೊಲೀಸ್ ಜೀಪ್ ಧ್ವಂಸ
- ಇನ್ಸ್‌ಪೆಕ್ಟರ್ ಸೇರಿ ಇಬ್ಬರಿಗೆ ಗಾಯ

ಕಲ್ಲು ತೂರಾಟ: ಪೋಸ್ಟ್ ಹಂಚಿಕೊಂಡಿದ್ದರಿಂದ ಆಕ್ರೋಶಗೊಂಡ ಮುಸ್ಲಿಮರು ಪೊಲೀಸರ ಮೇಲೆ ಕಲ್ಲು ತೂರಾಟ ಮಾಡಿದರು. ಇದನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಟ್ಟರು.

ಉದ್ವಿಗ್ನ ಗುಂಪಿನವರು ಬಸ್, ಪೊಲೀಸ್ ವಾಹನಗಳ ಮೇಲೆ ಕಲ್ಲು ತೂರಾಟ ಮಾಡಿದ್ದಾರೆ. ಕಾನ್‌ಸ್ಟೆಬಲ್ ಗುರುಪಾದಪ್ಪ ಸ್ವಾದಿ, ಪೂರ್ವ ಸಂಚಾರಿ ಇನ್ಸ್ ಪೆಕ್ಟರ್ ಕಾಡದೇವರಮಠ ಗಾಯಗೊಂಡಿದ್ದಾರೆ.

ಹುಬ್ಬಳ್ಳಿ–ಧಾರವಾಡದ ಪೊಲೀಸ್ ಕಮಿಷನರ್ ಲಾಭೂರಾಮ್ ಅವರು ಮುಸ್ಲಿಂ ಮುಖಂಡರ ಜೊತೆ ಸಮಾಲೋಚನೆ ನಡೆಸಿ ಪರಿಸ್ಥಿತಿ ತಿಳಿಗೊಳಿಸುವ ಯತ್ನ ಮಾಡಿದರು. ಘಟನೆ ಹಿನ್ನೆಲೆಯಲ್ಲಿ ಹಳೆ ಹುಬ್ಬಳ್ಳಿಯಲ್ಲಿ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಗಿದೆ.

ಧಾರಾಕಾರ ಮಳೆ: ಗುಡುಗು– ಸಿಡಿಲಿನ ಅಬ್ಬರ ● ವಾಹನಗಳ ಸಂಚಾರ ಅಸ್ತವ್ಯಸ್ತ

ಹೊಳೆಯಂತಾದ ರಸ್ತೆಗಳು: ಮನೆಗಳಿಗೆ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶನಿವಾರವೂ ಸಂಜೆಯಿಂದ ತಡರಾತ್ರಿಯವರೆಗೆ ವರುಣನ ಆರ್ಭಟ ಜೋರಾಗಿತ್ತು. ಗುಡುಗು– ಸಿಡಿಲಿನ ಅಬ್ಬರದ ನಡುವೆ ಜೋರಾದ ಗಾಳಿಯೂ ಬೀಸಿತು.

ಗುರುವಾರ ರಾತ್ರಿ ಸುರಿದಿದ್ದ ಮಳೆಯಿಂದಾಗಿ ಕಾಮಾಕ್ಯ, ಉತ್ತರಹಳ್ಳಿ, ರಾಜರಾಜೇಶ್ವರಿ ನಗರದ 250ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿತ್ತು. ಶುಕ್ರವಾರವು ಹಲವೆಡೆ ಮಳೆ ಆಗಿತ್ತು.

ನಗರದಲ್ಲಿ ಶನಿವಾರ ಬೆಳಿಗ್ಗೆ ಕಾಣಿಸಿಕೊಂಡಿದ್ದ ಬಿಸಿಲು ಬಹಳ ಹೊತ್ತು ಇರಲಿಲ್ಲ. ಬಹುತೇಕ ಪ್ರದೇಶಗಳಲ್ಲಿ ಮೋಡ ಕವಿದ ವಾತಾವರಣ ಕಂಡು ಬಂತು. ಸಂಜೆ ಶುರುವಾದ ಮಳೆ ತಡರಾತ್ರಿಯವರೆಗೂ ಸುರಿಯಿತು.

ರಾಜರಾಜೇಶ್ವರಿನಗರ, ಬನಶಂಕರಿ, ಜಯನಗರ, ಹನುಮಂತನಗರ, ಗಿರಿನಗರ, ಚಾಮರಾಜಪೇಟೆ, ರಾಜರಾಜೇಶ್ವರಿನಗರ, ನಾಯಂಡನಹಳ್ಳಿ, ಉತ್ತರಹಳ್ಳಿ, ಕೆಂಗೇರಿ ಹಾಗೂ ಸುತ್ತಮುತ್ತ ಮಳೆ ಜೋರಾಗಿತ್ತು.

ದೀಪಾಂಜಲಿನಗರ, ವಿಜಯನಗರ, ರಾಜಾಜಿನಗರ, ಮಾಗಡಿ ರಸ್ತೆ, ಸುಂಕದಕಟ್ಟೆ, ಲಗ್ಗೆರೆ, ಪೀಣ್ಯ, ಯಶವಂತಪುರ, ಜಾಲಹಳ್ಳಿ, ಹೆಬ್ಬಾಳ, ಆರ್.ಟಿ. ನಗರ, ಮಲ್ಲೇಶ್ವರ, ಶೇಷಾದ್ರಿಪುರ, ಶಿವಾಜಿನಗರ, ಎಂ.ಜಿ.ರಸ್ತೆ, ಅಶೋಕ ನಗರ, ಮೆಜೆಸ್ಟಿಕ್, ಗಾಂಧಿನಗರ, ಚಿಕ್ಕಪೇಟೆ, ಕಲಾಸಿಪಾಳ್ಯ, ಸಿಟಿ ಮಾರ್ಕೆಟ್ ವ್ಯಾಪ್ತಿಯಲ್ಲಿ ಮಳೆ ಅಬ್ಬರವಿತ್ತು.

ಕೋರಮಂಗಲ, ಮಡಿವಾಳ, ಲಾಲ್‌ಬಾಗ್, ಶಾಂತಿನಗರ, ವಿಲ್ಸನ್ ಗಾರ್ಡನ್ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲೂ ಮಳೆ ಜೋರಾಗಿ ಸುರಿಯಿತು.

ಮುಳಗಿದ ವಾಹನಗಳು: ಚಿಕ್ಕಪೇಟೆ ಮೆಟ್ರೊ ನಿಲ್ದಾಣ ಬಳಿಯ ಸುಲ್ತಾನ್ ಪೇಟೆ ರಸ್ತೆಯಲ್ಲಿ ಮೂರು ಅಡಿಯಷ್ಟು ನೀರು ಹರಿಯಿತು. ರಸ್ತೆ ಅಕ್ಕ– ಪಕ್ಕದಲ್ಲಿ ನಿಲ್ಲಿಸಿದ್ದ ದ್ವಿಚಕ್ರ ವಾಹನಗಳು, ಗೂಡ್ಸ್ ವಾಹನಗಳು ನೀರಿನಲ್ಲಿ ಅರ್ಧ ಮುಳುಗಿದ್ದವು. ಬೀದಿಬದಿ ಮಾರಾಟಕ್ಕೆ ಇರಿಸಿದ್ದ ವಸ್ತುಗಳೂ ನೀರಿನಲ್ಲಿ ಕೊಚ್ಚಿಕೊಂಡು ಹೋದವು.

'ಕಾಲುವೆಗಳು ಹೂಳು ತುಂಬಿದ್ದರಿಂದ ನೀರು ರಸ್ತೆ ಮೇಲೆ ಹರಿಯುತ್ತಿದೆ. ಸಾಕಷ್ಟು ಸಮಸ್ಯೆ ಉಂಟಾಗಿದೆ' ಎಂದು ಸ್ಥಳೀಯರು ದೂರಿದರು.

ಮನೆ, ಅಂಗಡಿಗಳಿಗೆ ನುಗ್ಗಿದ್ದ ನೀರು: ಮಾಗಡಿ ರಸ್ತೆ, ಕೆ.ಪಿ. ಅಗ್ರಹಾರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಹಲವೆಡೆ ಮನೆ,ಅಂಗಡಿಗಳಿಗೆ ನೀರು ನುಗ್ಗಿತ್ತು.

'ಕಾಲುವೆಯಲ್ಲಿ ತ್ಯಾಜ್ಯ ಹೆಚ್ಚಿದ್ದರಿಂದ ನೀರು ಹರಿಯಲು ಅವಕಾಶವಿರಲಿಲ್ಲ. ಹೀಗಾಗಿ, ರಸ್ತೆ ಮೇಲೆ ಹರಿದ ನೀರು ಮನೆ ಹಾಗೂ ಅಂಗಡಿಗೆ ನುಗ್ಗಿತ್ತು' ಎಂದು ಸ್ಥಳೀಯರು ಹೇಳಿದರು.

ಮನೆಯೊಳಗೆ ನೀರು ನುಗ್ಗಿದ್ದರಿಂದ ನಿವಾಸಿಗಳು ತೊಂದರೆ ಅನುಭವಿಸಿದರು. ಪೀಠೋಪಕರಣ, ಎಲೆಕ್ಟ್ರಾನಿಕ್ ವಸ್ತುಗಳು ನೀರಿನಲ್ಲಿ ತೇಲುತ್ತಿದ್ದವು. ನಿವಾಸಿಗಳು ರಾತ್ರಿಯಿಡಿ ನೀರು ಹೊರಹಾಕುವುದರಲ್ಲಿ ನಿರತರಾಗಿದ್ದರು.

ಓಕಳಿಪುರ ಕೆಳ ಸೇತುವೆ, ಶಿವಾನಂದ ವೃತ್ತ, ಮೆಜೆಸ್ಟಿಕ್ ಕೆಳಸೇತುವೆ, ಮಲ್ಲೇಶ್ವರದ ಸಂಪಿಗೆ ರಸ್ತೆ ಸೇರಿದಂತೆ ಹಲವು ರಸ್ತೆಗಳ ಮೇಲೆಯೇ ನೀರು ಹೊಳೆಯಂತೆ ಹರಿಯಿತು. ವಾಹನಗಳು ನೀರಿನಲ್ಲೇ ಸಂಚರಿಸಿದವು. ಕೆಲ ವಾಹನಗಳು ಕೆಟ್ಟು ನಿಂತಿದ್ದು ಕಂಡುಬಂತು.

'ನಗರದಲ್ಲಿ ಉತ್ತಮ ಮಳೆ ಆಗಿದೆ. ಹಲವೆಡೆ ಮರ, ಕೊಂಬೆಗಳು ಬಿದ್ದಿವೆ. ಮನೆಗಳಿಗೆ ನೀರು ನುಗ್ಗಿರುವ ದೂರುಗಳು ಬಂದಿದೆ. ಸಂಬಂಧಪಟ್ಟ ವಲಯ ಸಿಬ್ಬಂದಿಗೆ ಮಾಹಿತಿ ನೀಡಲಾಗಿದೆ. ಅವರು ಸ್ಥಳಕ್ಕೆ ಹೋಗಿ ಕಾರ್ಯಾಚರಣೆ ನಡಸುತ್ತಿದ್ದಾರೆ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

4.70 ಸೆಂ. ಮೀ ಮಳೆ: 'ನಗರದಲ್ಲಿ ಶನಿವಾರ ಸಂಜೆ 5.30ರಿಂದ ರಾತ್ರಿ 7.30ರವರೆಗೆ 4.70 ಸೆಂ.ಮೀ ಹಾಗೂ ಎಚ್‌ಎಎಲ್ ಸುತ್ತಮುತ್ತ 0.92 ಸೆಂ.ಮೀ ಮಳೆ ಆಗಿದೆ' ಎಂದು ಹವಾಮಾನ ಇಲಾಖೆ ತಿಳಿಸಿದೆ.



ಸುಲ್ತಾನ್ ಪೇಟೆ ರಸ್ತೆಯಲ್ಲಿ ನೀರು ಹರಿದು, ವಾಹನಗಳು ಮುಳುಗಿದ್ದವು



ಶನಿವಾರ ರಾತ್ರಿ ಮಳೆಯಲ್ಲೇ ಜನರು ಸಾಗಿದರು – ಪ್ರಜಾವಾಣಿ ಚಿತ್ರ



ಸಚಿವ ವಿ.ಸೋಮಣ್ಣ, ಸಂಸದ ಪ್ರತಾಪ್ ಸಿಂಹ ಹಾಗೂ ಬಿಜೆಪಿ ಮುಖಂಡ ಡಾ.ಅರುಣ್ ಸೋಮಣ್ಣ ಅವರು ಶ್ರೀರಾಮನ ವಿಗ್ರಹಕ್ಕೆ ಪುಷ್ಪನಮನ ಸಲ್ಲಿಸಿ ರಥಯಾತ್ರೆಗೆ ಚಾಲನೆ ನೀಡಿದರು–ಪ್ರಜಾವಾಣಿ ಚಿತ್ರ

ಶ್ರೀರಾಮ ರಥಯಾತ್ರೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶ್ರೀರಾಮನ ಆದರ್ಶ, ತತ್ವ ಸಿದ್ಧಾಂತದಂತೆ ಬಿಜೆಪಿಯು ಜನಪರ ಹಾಗೂ ಪಾರದರ್ಶಕ ಆಡಳಿತ ನೀಡುತ್ತಿದೆ' ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ಬೆಂಗಳೂರು ಕರಗ ಶಕ್ತ್ಯೋತ್ಸವದ ಪ್ರಯುಕ್ತ ವಿ.ಸೋಮಣ್ಣ ಯುವ ಪಡೆ ಹಾಗೂ ಗೋವಿಂದರಾಜನಗರ ಮಂಡಳ ಬಿಜೆಪಿ ಹಮ್ಮಿಕೊಂಡಿದ್ದ ಶ್ರೀರಾಮನವಮಿ ಉತ್ಸವ ಹಾಗೂ ಶ್ರೀರಾಮ ರಥಯಾತ್ರೆಗೆ ಚಾಲನೆ ನೀಡಿ ಶನಿವಾರ ಮಾತನಾಡಿದರು.

ರಥಯಾತ್ರೆಯು ಟೋಲ್‌ಗೇಟ್ ಬಳಿಯ ಸರ್ಕಲ್ ಶನಿಮಹಾತ್ಮ ದೇವಸ್ಥಾನದಿಂದ ಆರಂಭವಾಗಿ ಮಾರುತಿ ಮಂದಿರದ ಬಳಿ ಕೊನೆಗೊಂಡಿತು. ಶ್ರೀರಾಮ, ಸೀತಾದೇವಿ ಹಾಗೂ ಲಕ್ಷ್ಮಣರ ವಿಗ್ರಹಗಳನ್ನು ಹೊತ್ತಿದ್ದ ರಥವನ್ನು ಭಕ್ತರು ಆದರದಿಂದ ಬರಮಾಡಿಕೊಂಡರು. ಕಂಸಾಳೆ, ವೀರಗಾಸೆ, ಡೊಲು, ಕೀಲುಕುದುರೆ ಹಾಗೂ ವಿವಿಧ ದೇವರ ವೇಷಭೂಷಣ ತೊಟ್ಟವರು ಎಲ್ಲರನ್ನು ರಂಜಿಸಿದರು.

ಗೋವಿಂದರಾಜನಗರ ಮಂಡಲ ಬಿಜೆಪಿ ಅಧ್ಯಕ್ಷ ವಿಶ್ವನಾಥ ಗೌಡ, ವಿಜಯನಗರ ಮಂಡಲ ಬಿಜೆಪಿ ಅಧ್ಯಕ್ಷ ಟಿ.ವಿ.ಕೃಷ್ಣ, ಮುಖಂಡರಾದ ಕೆ.ಉಮೇಶ್ ಶೆಟ್ಟಿ, ಮೋಹನ್ ಕುಮಾರ್, ದಾಸೇಗೌಡ, ಆನಂದ್, ರಾಮಪ್ಪ ಇದ್ದರು.



ಅಕ್ಕನ ಮನೆ ಪ್ರತಿಷ್ಠಾನವು ನಗರದಲ್ಲಿ ಶನಿವಾರ ಆಯೋಜಿಸಿದ್ದ 'ದೇಸೀ ದಿಬ್ಬಣ–2022' ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಅಕ್ಷರ ಫೌಂಡೇಷನ್‌ನ ವಿಭಾಗೀಯ ವ್ಯವಸ್ಥಾಪಕಿ ಆಂಜಲೀನಾ ಗ್ರೇಗರಿ, ಸಮಾಜ ಸೇವಕ ಕನ್ನಡವೇ ಸತ್ಯ ರಂಗಣ್ಣ, ಸುಮಂಗಲಿ ಸೇವಾಶ್ರಮದ ಸಂಸ್ಥಾಪಕಿ ಸುಶೀಲಮ್ಮ, ರಾಜು ಕೃಷ್ಣಮೂರ್ತಿ ಮತ್ತು ಗಾಯಕ ಶಶಿಧರ್ ಕೋಟೆ ಅವರಿಗೆ 'ಅಲ್ಲಮ ಶೂನ್ಯ ಸಿರಿ ಪ್ರಶಸ್ತಿ' ನೀಡಿ ಗೌರವಿಸಲಾಯಿತು. (ನಿಂತವರು ಎಡದಿಂದ) ಪ್ರತಿಷ್ಠಾನದ ಸದಸ್ಯ ಕುಮಾರ್, ಬಿ.ಎಸ್.ಪುಟ್ಟರಾಜು, ವೀರಶೈವ ಲಿಂಗಾಯತ ಮಹಾವೇದಿಕೆ ಅಧ್ಯಕ್ಷ ಪ್ರಶಾಂತ್ ಕಲ್ಲೂರ್, ಸಾಹಿತಿ ಶಶಿಕಾಂತ್ ಪಟ್ಟಣ, ಅಕ್ಕನ ಮನೆ ಸಮೂಹ ಸಂಸ್ಥೆಯ ಅಧ್ಯಕ್ಷೆ ಸಿ.ಸಿ. ಹೇಮಲತಾ, ಅಶೋಕ್ ಪಟ್ಟಣ ಮತ್ತು ಸಾಹಿತಿ ಎಸ್.ಜಿ.ಸಿದ್ದರಾಮಯ್ಯ ಇದ್ದಾರೆ –ಪ್ರಜಾವಾಣಿ ಚಿತ್ರ

ಭಾನುವಾರ, ಏಪ್ರಿಲ್ 17, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 106 | ಪುಟ 24
www.prajavani.net /prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಬರೀ ಪ್ರತಿಕ್ರಿಯಾಶೀಲತೆಯಿಂದ ಕನ್ನಡ ಕಟ್ಟಲು ಸಾಧ್ಯವೇ? ಹಾಗಾದರೆ ನಿಜಕ್ಕೂ ಕನ್ನಡವನ್ನು ಕಟ್ಟುವ ಕ್ರಿಯಾಶೀಲ ಹಾದಿ ಯಾವುದು?



ಪ್ರಶಾಂತ್ ಕಿಶೋರ್ ಕಾಂಗ್ರೆಸ್‌ಗೆ? 5B
ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿಯೇ ಪ್ರಕರಣ ದಾಖಲಿಸಲು ಆಗ್ರಹ
ಐಪಿಎಲ್: ರಾಹುಲ್ 100ನೇ ಪಂದ್ಯಕ್ಕೆ ಶತಕದ ರಂಗು 10
ಈಶ್ವರಪ್ಪ ಬಂಧನಕ್ಕೆ ಒತ್ತಾಯ: ಕಾಂಗ್ರೆಸ್ ಪ್ರತಿಭಟನೆ 5

ಒಳ ಪುಟ
ಲುವಿವ್, ಕೀವ್‌ಗೆ ಅಪ್ಪಳಿಸಿದ ಬಾಂಬ್, ಕ್ಷಿಪಣಿ 8

ಚಿನಕುರಳಿ
ಪ್ರಕಾಶ್ ಶೆಟ್ಟಿ



ಕೋವಿಡ್: ಮೌನವಾಗಿ ನೋವು ಉಣ್ಣುತ್ತಿರುವ ಮಕ್ಕಳು

ಅನಾಥರಿಗೆ ಸಿಗದ ಆಸರೆ

• ಕೆ.ಜೆ. ಮರಿಯಪ್ಪ

ಒಳನೋಟ
ಕೊನೆಯಾಗಲಿ ಮಕ್ಕಳ ನೋವು
ಪ್ರತಿಕ್ರಿಯಿಸಿ: 9606038256
feedback@prajavani.co.in

ತುಮಕೂರು: 'ಕೊರೊನಾ ಬಂದು ನರಳಿದ ಗಂಡನಿಗೆ ಸಕಾಲದಲ್ಲಿ ಚಿಕಿತ್ಸೆಯೂ ಸಿಗಲಿಲ್ಲ. ಕೊನೆಗೆ ಜೀವ ಉಳಿಸಿಕೊಳ್ಳಲೂ ಆಗಲಿಲ್ಲ. ಇಬ್ಬರು ಹೆಣ್ಣು ಮಕ್ಕಳು ಕಟ್ಟಿಕೊಂಡು ಬದುಕು ಹೇಗೆ ಸಾಗಿಸಲಿ, ಮಕ್ಕಳ ಜೀವನಕ್ಕೆ ಯಾರು ದಾರಿ ತೋರಿಸುತ್ತಾರೆ' –ಹೀಗೆ ಪ್ರಶ್ನಿಸುತ್ತಲೇ ಶಿರಾ ತಾಲ್ಲೂಕು ಗೌಡಗೆರೆ ಗ್ರಾಮದ ಸರೋಜಮ್ಮ (ಹೆಸರು ಬದಲಿಸಲಾಗಿದೆ) ಕಣ್ಣೀರಾದರು.

'ಗಂಡನನ್ನು ನಡು ದಾರಿಯಲ್ಲಿ ದೇವರು ಕಿತ್ತುಕೊಂಡ.ನನ್ನ ಜೀವನಕ್ಕೆ ಕಲ್ಲು ಬಿತ್ತು. ಮಕ್ಕಳಿಗೆ ಏನಾದರೂ ಮಾಡಬೇಕು. ಅವರಿಗೆ ಭವಿಷ್ಯ ರೂಪಿಸಬೇಕು. ಅದಕ್ಕಾಗಿ ಇನ್ನೂ ಜೀವ ಹಿಡಿದು ಬದುಕಿದ್ದೇನೆ' ಎನ್ನುತ್ತ ಮುಂದಿನ ಜೀವನ ನೆನಪಿಸಿಕೊಂಡು ಕಣ್ಣೀರು ಒರೆಸಿಕೊಂಡರು.

ಇದು ಇವರೊಬ್ಬರ ಕತೆಯಲ್ಲ. ರಾಜ್ಯದಲ್ಲಿ ಇಂತಹ ಸಾವಿರಾರು ಮಹಿಳೆಯರು ಕಣ್ಣೀರಲ್ಲಿ ಕೈತೊಳೆಯುತ್ತಿದ್ದಾರೆ. ಅದರಲ್ಲೂ ತಂದೆ, ತಾಯಿ ಕಳೆದುಕೊಂಡ ಮಕ್ಕಳು ಮೌನವಾಗಿ ನೋವುಣ್ಣುತ್ತಿದ್ದಾರೆ. ಕೋವಿಡ್ ತಂದಿತ್ತ ನೋವು ಅಷ್ಟಿಷ್ಟಲ್ಲ. ಜೀವದ ಜತೆಗೆ ನೆಮ್ಮದಿಯ ಜೀವನವನ್ನೂ ಕಸಿದು ಕೊಂಡಿದೆ

ಕೋವಿಡ್ ಮೊದಲನೇ ಅಲೆಗಿಂತ ಎರಡನೇ ಅಲೆಯೇ ಹೆಚ್ಚು ಕಂಟಕ ತಂದಿಟ್ಟಿತ್ತು. ಮಧ್ಯ ವಯಸ್ಸಿನ, ದುಡಿಯುವ ತಂದೆ–ತಾಯಿಯನ್ನು ಮಕ್ಕಳಿಂದ ಕಸಿದುಕೊಂಡಿದೆ. ಕೆಲವರಿಗೆ ತಂದೆ–ತಾಯಿ ಇಬ್ಬರೂ ಇಲ್ಲವಾಗಿದ್ದು, ಅನಾಥರಾಗಿದ್ದಾರೆ. ರಾಜ್ಯದಲ್ಲಿ 216 ಮಕ್ಕಳು ತಮ್ಮನ್ನು ಸಾಕಿ ಸಲಹಬೇಕಿದ್ದವರನ್ನು ಕಳೆದುಕೊಂಡಿದ್ದಾರೆ. ಈ ಸಂಖ್ಯೆ ಇನ್ನೂ ದೊಡ್ಡದಿರಬಹುದು. ಇನ್ನೂ ಹಲವರಿಗೆ ತಂದೆ ಅಥವಾ ತಾಯಿ ಇಬ್ಬರಲ್ಲಿ ಒಬ್ಬರು (ಏಕ ಪೋಷಕರು) ಇದ್ದಾರೆ. ಅವರಲ್ಲಿ ಶೇ 90ರಷ್ಟು ಮಕ್ಕಳಿಗೆ ತಂದೆ ಇಲ್ಲ.


ಕೋವಿಡ್‌ನಿಂದ ಉಸಿರು ನಿಲ್ಲಿಸಿದವರಲ್ಲಿ ಬಹುತೇಕರು ಬಡ ಅಥವಾ ಕೆಳ ಮಧ್ಯಮ ವರ್ಗಕ್ಕೆ ಸೇರಿದವರು. ದಿನದ ದುಡಿಮೆ ನಂಬಿ ಬದುಕು ಕಟ್ಟಿಕೊಂಡವರು. ಅದರಲ್ಲೇ ಅಲ್ಪ ಸ್ವಲ್ಪ ಉಳಿಸಿ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುತ್ತಿದ್ದರು. ಗಾರೆ ಕೆಲಸ, ಫ್ಯಾಕ್ಟರಿಯಲ್ಲಿ ದಿನಗೂಲಿ, ಎಪಿಎಂಸಿಗಳಲ್ಲಿ ಹಮಾಲಿಗಳಾಗಿದ್ದರು, ಕೃಷಿ ಕೂಲಿಕಾರರು, ಸಣ್ಣಪುಟ್ಟ ಕೆಲಸಮಾಡಿ ಬದುಕುತ್ತಿದ್ದವರೇ ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್‌ಗೆ ಬಲಿಯಾಗಿದ್ದಾರೆ. ಶಾಲೆ, ಕಾಲೇಜಿಗೆ ಹೋಗಿ ಬದುಕು ರೂಪಿಸಿಕೊಳ್ಳುವ ಕನಸು ಕಾಣುತ್ತಿದ್ದ ಮಕ್ಕಳಿಗೆ ತಂದೆ ಕಳೆದುಕೊಂಡು ದಿಕ್ಕು ತೋಚದಂತಾಗಿದೆ. ಆಡಿ, ಕುಣಿಯುವ ವಯಸ್ಸಿನಲ್ಲಿ ಸಂಸಾರದ ಜವಾಬ್ದಾರಿ ಹೆಗಲೇರಿದೆ.

ಗಂಡನನ್ನು ಕಳೆದುಕೊಂಡ ಮಹಿಳೆಯರು ಹೊಟ್ಟೆ ಹೊರೆಯಲು ಕೂಲಿ ಮಾಡುತ್ತಿದ್ದಾರೆ. ಮಕ್ಕಳ ಓದು ಮುಂದುವರಿಸುವುದು ಕಷ್ಟವಾಗಿದ್ದು, ಮುಂದಿನ ದಾರಿ ತೋಚದೆ ಕಂಗಾಲಾಗಿದ್ದಾರೆ.

ತವರು ಮನೆಯತ್ತ ಹೆಜ್ಜೆ: ತಂದೆ–ತಾಯಿ ಕಳೆದುಕೊಂಡ ಮಕ್ಕಳು ಅಜ್ಜಿ, ತಾತ, ಚಿಕ್ಕಪ್ಪ, ದೊಡ್ಡಪ್ಪ ಇಲ್ಲವೇ ಸಂಬಂಧಿಗಳ ಬಳಿ ಆಸರೆ ಪಡೆದಿದ್ದಾರೆ. ಹಲವು ಮಹಿಳೆಯರು ಗಂಡನ ಮನೆ ತೊರೆದು ಮಕ್ಕಳ ಜತೆ ತವರು ಸೇರಿದ್ದಾರೆ.

ಗಂಡನ ಮನೆಯಲ್ಲಿ ತನ್ನದೆಂದು ಹೇಳಿಕೊಳ್ಳಲು ಏನೂ ಇಲ್ಲ. ಕೂಲಿ ಮಾಡಿಯೇ ಬದುಕಬೇಕು. ಅಲ್ಲಿದ್ದು ಇನ್ನೇನು ಮಾಡುವುದು ಎಂದು ತವರಿನತ್ತ ಮುಖ ಮಾಡಿದ್ದಾರೆ. ಅಲ್ಲಿ ಒಡಹುಟ್ಟಿದವರು, ತಂದೆ–ತಾಯಿ ಬೆಂಬಲಕ್ಕೆ ನಿಲ್ಲುತ್ತಾರೆ. ಇಲ್ಲಿ ಮಾಡುವ ಕೂಲಿಯನ್ನು ಅಲ್ಲೇ ಮಾಡಿ ಬದುಕಿದರಾಯಿತು ಎನ್ನುವ ಸ್ಥಿತಿ ತಲುಪಿದ್ದಾರೆ.

ಇನ್ನಷ್ಟು ಸುದ್ದಿಗಳು 6



ಸರ್ಕಾರದ ನೆರವು

ತಂದೆ–ತಾಯಿ ಇಬ್ಬರನ್ನೂ ಕಳೆದುಕೊಂಡು ಅನಾಥರಾದ ಮಕ್ಕಳಿಗೆ ಮುಖ್ಯಮಂತ್ರಿ ಬಾಲಸೇವಾ ಯೋಜನೆ ಜಾರಿ ಮಾಡಲಾಗಿದೆ. ನೋಂದಣಿ ಮಾಡಿಕೊಂಡ ಮಗುವಿಗೆ 18 ವರ್ಷದವರೆಗೆ ಪ್ರತಿ ತಿಂಗಳೂ ₹ 3,500 ನೆರವು ನೀಡಲಾಗುತ್ತದೆ. ಪಿ.ಎಂ ಕೇರ್ ಫಂಡ್‌ನಿಂದ ₹10 ಲಕ್ಷ (23 ವರ್ಷ ತುಂಬಿದ ನಂತರ) ಸಿಗಲಿದೆ. ಆದರೆ, ಇಂತಹ ಮಕ್ಕಳನ್ನು ಪೂರ್ಣ ಪ್ರಮಾಣದಲ್ಲಿ ಗುರುತಿಸುವ ಕೆಲಸ ಆಗಿಲ್ಲ. ನೋಂದಣಿ ಪ್ರಕ್ರಿಯೆ ಪ್ರಗತಿಯಲ್ಲಿದೆ ಎನ್ನುತ್ತಾರೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು.

ತಂದೆ ಅಥವಾ ತಾಯಿ ಕಳೆದುಕೊಂಡ (ಏಕ ಪೋಷಕರು) ಬಡ ಕುಟುಂಬಗಳಿಗೆ ಸಮಾಜದಿಂದಲೂ ನಿರೀಕ್ಷಿತ ನೆರವು ಸಿಕ್ಕಿಲ್ಲ.ಕೋವಿಡ್ ಸಮಯದಲ್ಲಿ ದಿನಸಿ, ಬಟ್ಟೆ ನೀಡಿದ್ದನ್ನು ಬಿಟ್ಟರೆ ಬಡ ಮಕ್ಕಳಿಗೆ ನೆರವಾದವರ ಸಂಖ್ಯೆ ವಿರಳ. ಸಂಘ–ಸಂಸ್ಥೆ, ಶಿಕ್ಷಣ ಸಂಸ್ಥೆ, ಉದ್ಯಮಿಗಳು, ದಾನಿಗಳು, ಮಠಗಳು ನೆರವಿನ ಭರವಸೆ ನೀಡಿದ್ದರೂ ಸ್ಪಂದಿಸಿರುವುದು ಬೆರಳೆಣಿಕೆಯಷ್ಟು ಮಾತ್ರ.

ರಾಜ್ಯದಲ್ಲಿ ಕೋವಿಡ್‌ನಿಂದ ಪಾಲಕರನ್ನು ಕಳೆದುಕೊಂಡ ಮಕ್ಕಳ ಸಂಖ್ಯೆ

ಸಂಖ್ಯೆ	ವಿವರ
216	ಅನಾಥರಾದ ಒಟ್ಟು ಮಕ್ಕಳ ಸಂಖ್ಯೆ
110	ಅನಾಥರಾದ ಬಾಲಕರ ಸಂಖ್ಯೆ
106	ಅನಾಥರಾದ ಬಾಲಕಿಯರ ಸಂಖ್ಯೆ
193	ಸರ್ಕಾರದಿಂದ ಪರಿಹಾರ ಪಡೆದ ಮಕ್ಕಳ ಸಂಖ್ಯೆ

'ಜನತಾ ಜಲಧಾರೆ'ಗೆ ಜೆಡಿಎಸ್ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ನದಿ ನೀರಿನ ಸದ್ಬಳಕೆ ಹಾಗೂ ವಿವಿಧ ನೀರಾವರಿ ಯೋಜನೆಗಳ ಸಮಗ್ರ ಅನುಷ್ಠಾನದ ಸಂಕಲ್ಪದೊಂದಿಗೆ ಆರಂಭಿಸಿರುವ 'ಜನತಾ ಜಲಧಾರೆ' ಕಾರ್ಯಕ್ರಮವನ್ನು ಜೆಡಿಎಸ್ ಪಕ್ಷ ರಾಜ್ಯದ ವಿವಿಧೆಡೆ ಶನಿವಾರ ಏಕಕಾಲದಲ್ಲಿ ಆರಂಭಿಸಿತು.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಅವರು ಮೈಸೂರಿನಲ್ಲಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು ಆಲಮಟ್ಟಿಯಲ್ಲಿ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

5ನೇ ಪುಟ ನೋಡಿ



ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು ಕೆಆರ್‌ಎಸ್ ಜಲಾಶಯದ ಕಾವೇರಿ ಪ್ರತಿಮೆಗೆ ಪೂಜೆ ಸಲ್ಲಿಸಿ 'ಜನತಾ ಜಲಧಾರೆ' ಯಾತ್ರೆಗೆ ಶನಿವಾರ ಚಾಲನೆ ನೀಡಿದರು. ಶಾಸಕ ರವೀಂದ್ರ ಶ್ರೀಕಂಠಯ್ಯ, ವಕ್ತಾರ ಟಿ.ಎ.ಶರವಣ ಇದ್ದಾರೆ –ಪ್ರಜಾವಾಣಿ ಚಿತ್ರ

ರಾಜ್ಯದಲ್ಲಿ ಕಲ್ಲಿದ್ದಲು ಕೊರತೆ ನೀಗಿಸಿದ 'ಹಸಿರು ಇಂಧನ'

• ಸಚ್ಚಿದಾನಂದ ಕುರಗುಂದ

ಪ್ರಜಾವಾಣಿ ವಿಶೇಷ

ಬೆಂಗಳೂರು: ಹಲವು ರಾಜ್ಯಗಳಲ್ಲಿ ಕಲ್ಲಿದ್ದಲು ಕೊರತೆಯಾಗಿರುವ ಸಂದರ್ಭದಲ್ಲಿ ಕರ್ನಾಟಕ ಇಂಧನ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸುವತ್ತ ಹೆಜ್ಜೆಗಳನ್ನು ಹಾಕಿದೆ.

ಮಹಾರಾಷ್ಟ್ರ, ಗುಜರಾತ್, ಆಂಧ್ರ ಪ್ರದೇಶ, ತೆಲಂಗಾಣ, ಒಡಿಶಾ ಸೇರಿ ಹಲವು ರಾಜ್ಯಗಳಲ್ಲಿ ಕಲ್ಲಿದ್ದಲು ಕೊರತೆಯಾಗಿದೆ. ಸದ್ಯ ಆಯಾ ದಿನದ ವಿದ್ಯುತ್ ಉತ್ಪಾದನೆಯಾಗುವಷ್ಟು ಮಾತ್ರ ಕಲ್ಲಿದ್ದಲು ಪೂರೈಕೆಯಾಗುತ್ತಿದೆ.

ಗಣಿಗಳಿಂದ ಪೂರೈಕೆಯಲ್ಲಿ ವ್ಯತ್ಯಯ ಸೇರಿ ವಿವಿಧ ಕಾರಣಗಳಿಂದಾಗಿ ಕಲ್ಲಿದ್ದಲು ಕೊರತೆಯಾಗಿದೆ. ಕೇಂದ್ರ ಸರ್ಕಾರವು ಸಕಾಲಕ್ಕೆ ಕಲ್ಲಿದ್ದಲು ಪೂರೈಸುವ ಕ್ರಮಗಳನ್ನು ಸಹ ಕೈಗೊಳ್ಳುತ್ತಿಲ್ಲ ಎಂದು ದೂರಲಾಗಿದೆ. ಹೀಗಾಗಿ, ಶಾಖೋತ್ಪನ್ನ ಘಟಕಗಳಲ್ಲಿ ವಿದ್ಯುತ್ ಉತ್ಪಾದನೆ ಮೇಲೆ ಪರಿಣಾಮ ಬೀರಿದೆ. ತಮಿಳುನಾಡು ಮತ್ತು ತೆಲಂಗಾಣದಲ್ಲಿ ಕೃಷಿ ವಲಯಕ್ಕೆ ವಿದ್ಯುತ್ ಪೂರೈಕೆಯ ಅವಧಿಯನ್ನು ಸಹ ಕಡಿಮೆ ಮಾಡಲಾಗಿದೆ ಎಂದು ಇಂಧನ ಇಲಾಖೆಯ ಮೂಲಗಳು ಹೇಳುತ್ತವೆ.

ಆಮದು ಮಾಡಿಕೊಳ್ಳುವ ಕಲ್ಲಿದ್ದಲು ದರ ಹೆಚ್ಚಾಗಿದೆ. ಪ್ರತಿ ಟನ್‌ಗೆ ₹20 ಸಾವಿರ ತಲುಪಿದೆ. ಆದರೆ, ದೇಶೀಯವಾಗಿ ಉತ್ಪಾದನೆಯಾಗುವ ಕಲ್ಲಿದ್ದಲು ದರ ಪ್ರತಿ ಟನ್‌ಗೆ ಕೇವಲ ₹4 ಸಾವಿರ. ಕಲ್ಲಿದ್ದಲು ಆಮದು ದುಬಾರಿಯಾಗಿದೆ. ಇದರಿಂದ, ಶಾಖೋತ್ಪನ್ನ ಘಟಕಗಳಲ್ಲಿನ ವಿದ್ಯುತ್ ಉತ್ಪಾದನೆಯ ವೆಚ್ಚವೇ ಕನಿಷ್ಠ ಪ್ರತಿ ಯೂನಿಟ್‌ಗೆ ₹11 ಆಗಲಿದೆ ಎಂದು ಅಧಿಕಾರಿಗಳು ಅಭಿಪ್ರಾಯಪಡುತ್ತಾರೆ.

9ನೇ ಪುಟ ನೋಡಿ

> **ಕಲ್ಲಿದ್ದಲು ಕೊರತೆಯಾಗಿದ್ದರೂ ರಾಜ್ಯದಲ್ಲಿ ವಿದ್ಯುತ್ ಬಿಕ್ಕಟ್ಟು ಸೃಷ್ಟಿಯಾಗಿಲ್ಲ. ದೂರದೃಷ್ಟಿಯ ಫಲವಾಗಿ ಹೆಚ್ಚುವರಿ ವಿದ್ಯುತ್ ನಮ್ಮಲ್ಲಿದೆ**
> **ವಿ.ಸುನೀಲ್ ಕುಮಾರ್**
> ಇಂಧನ ಇಲಾಖೆ ಸಚಿವ

ರಾಜ್ಯದಲ್ಲಿ ಇಂಧನ ಉತ್ಪಾದನೆ ಪ್ರಮಾಣ (ಮೆಗಾ ವಾಟ್‌ಗಳಲ್ಲಿ)

ಪ್ರಮಾಣ	ಮೂಲ
15,833 (51%)	ನವೀಕರೀಸಬಹುದಾದ ಇಂಧನ ಮೂಲ
10,605 (34%)	ಶಾಖೋತ್ಪನ್ನ ಘಟಕಗಳಿಂದ
779 (3%)	ಅಣುವಿದ್ಯುತ್ ಸ್ಥಾವರಗಳಿಂದ
3632 (12%)	ಜಲ ವಿದ್ಯುತ್ ಮೂಲಗಳಿಂದ

ವಿದ್ಯುತ್ ವ್ಯತ್ಯಯ

ಬೆಂಗಳೂರು: ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ಏ.17, 18 ಮತ್ತು 19ರಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ

ಸ್ಥಳಗಳು: ಪಟ್ಟಣಗೆರೆ, ಕೃಷ್ಣಗಾರ್ಡನ್, ಬಿಎಚ್ಇಎಲ್ ಬಡಾವಣೆ, ಭೂಮಿಕಾ ಬಡಾವಣೆ, ಬಿಇಎಂಎಲ್ 1,2ನೇ ಮತ್ತು 10ನೇ ಹಂತ, ಮೈಲಸಂದ್ರ, ಉತ್ತರಹಳ್ಳಿ ಮುಖ್ಯ ರಸ್ತೆ, ಓಂಕಾರ ನಗರ, ಕೋಡಿ ಪಾಳ್ಯ, ಕೋಣಸಂದ್ರ, ಹೆಮ್ಮಿಗೆಪುರ, ಕಾಟನಾಯಕನಪುರ, ಬಿಜಿಎಸ್ ಆಸ್ಪತ್ರೆ, ಗಾಣಕಲ್ಲು, ಶ್ರೀನಿವಾಸಪುರ ಕಾಲೋನಿ, ದ್ವಾರಕನಗರ ಸುತ್ತಮುತ್ತಲಿನ ಪ್ರದೇಶಗಳು

ವಿಶೇಷ ಶಿಕ್ಷಕರಿಗೆ ಅನ್ಯಾಯ:ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಕ್ಷಣ ಇಲಾಖೆಯು ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಿಬ್ಬಂದಿ ರಚನೆಯ ಸ್ತರವಿನ್ಯಾಸದಲ್ಲಿ ಚಿತ್ರಕಲೆ, ನಾಟಕ, ಸಂಗೀತದಂತಹ ವಿಶೇಷ ಶಿಕ್ಷಕರನ್ನು ಕೈಬಿಟ್ಟಿರುವ ಕ್ರಮ ಖಂಡನೀಯ' ಎಂದು ಕರ್ನಾಟಕ ರಾಜ್ಯ ಚಿತ್ರಕಲಾ ಶಿಕ್ಷಕರ ಸಂಘದ ಅಧ್ಯಕ್ಷ ಅಧ್ಯಕ್ಷ ಬಿ.ಜಿ.ಅವಟಿ ಅವರು ಆಕ್ಷೇಪ ವ್ಯಕ್ತಪಡಿಸಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ರಾಜ್ಯದಾದ್ಯಂತ 1,436 ಚಿತ್ರಕಲಾ ಶಿಕ್ಷಕರು, ತಲಾ ಒಂದು ಸಾವಿರಕ್ಕೂ ಹೆಚ್ಚು ಸಂಗೀತ ಮತ್ತು ನೃತ್ಯ ಶಿಕ್ಷಕರು ಸೇರಿದಂತೆ ಮೂರು ಸಾವಿರಕ್ಕೂ ಹೆಚ್ಚು ವಿಶೇಷ ಶಿಕ್ಷಕರಿದ್ದಾರೆ. ಇಲಾಖೆಯ ನಿರ್ಧಾರದಿಂದ ಇವರಿಗೆಲ್ಲ ಅನ್ಯಾಯವಾಗಲಿದೆ' ಎಂದು ಹೇಳಿದರು.

'ರಾಷ್ಟ್ರೀಯ ಶಿಕ್ಷಣ ನೀತಿಯಡಿ (ಎನ್ಇಪಿ) ಕಲಾ ಶಿಕ್ಷಣಕ್ಕೆ ಮಹತ್ವ ನೀಡಲಾಗಿದೆ. ವಿದ್ಯಾರ್ಥಿಯ ಶೈಕ್ಷಣಿಕ ಪ್ರಗತಿಗೆ ಹಾಗೂ ಮಾನಸಿಕ ಬೆಳವಣಿಗೆಗೆ ವಿಶೇಷ ಶಿಕ್ಷಣವು ಪೂರಕ ಮತ್ತು ಅತ್ಯಗತ್ಯ. ಹಾಗಾಗಿ ಪ್ರತಿ ಶಾಲೆಗೆ ನೃತ್ಯ, ಸಂಗೀತ, ಚಿತ್ರಕಲೆ, ನಾಟಕ ಹಾಗೂ ವೃತ್ತಿ ಶಿಕ್ಷಣ ವಿಷಯಗಳ ಒಬ್ಬರು ವಿಶೇಷ ಶಿಕ್ಷಕರ ಹುದ್ದೆಯನ್ನು ಸೇರ್ಪಡೆ ಮಾಡಬೇಕು' ಎಂದು ಅವರು ಒತ್ತಾಯಿಸಿದರು.

'2022-23ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿಶೇಷ ಶಿಕ್ಷಣ ಹುದ್ದೆಯನ್ನು ಹೆಚ್ಚುವರಿ ಎಂದು ಗುರುತಿಸಿ, ವರ್ಗಾವಣೆ ಮಾಡುವ ಪ್ರಕ್ರಿಯೆಯನ್ನು ಕೂಡಲೇ ಸ್ಥಗಿತಗೊಳಿಸಬೇಕು. ಪ್ರಾಥಮಿಕ ಶಾಲೆಗಳಲ್ಲಿ ಒಂದು ವಿಶೇಷ ಶಿಕ್ಷಕರ ಹುದ್ದೆ ಮತ್ತು ಕನ್ನಡ ಮಾಧ್ಯಮ ಪ್ರೌಢಶಾಲೆಗಳಲ್ಲಿ ಸಿಬ್ಬಂದಿ ಸ್ತರವಿನ್ಯಾಸದಲ್ಲಿ ಹಿಂದಿನಂತೆಯೇ 8ನೇ ಹುದ್ದೆಯಾಗಿ ವಿಶೇಷ ಶಿಕ್ಷಣದ ಹುದ್ದೆಯನ್ನು ಸೇರ್ಪಡೆ ಮಾಡಬೇಕು. ಇದನ್ನು ಎಸ್.ಎ.ಟಿ.ಎಸ್ ತಂತ್ರಾಂಶದಲ್ಲಿ ಅಳವಡಿಸಬೇಕು' ಎಂದು ಒತ್ತಾಯಿಸಿದರು.



ಐಎಸ್‌ಬಿಆರ್ ಘಟಿಕೋತ್ಸವ: 364 ಮಂದಿಗೆ ಪದವಿ ಪ್ರದಾನ

ವಿದ್ಯಾರ್ಥಿಗಳಿಗೆ 17 ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಟರ್‌ನ್ಯಾಷನಲ್ ಸ್ಕೂಲ್ ಆಫ್ ಬ್ಯುಸಿನೆಸ್ ಆ್ಯಂಡ್ ರೀಸರ್ಚ್ (ಐಎಸ್‌ಬಿಆರ್) ವತಿಯಿಂದ ನಗರದಲ್ಲಿ ಶನಿವಾರ ನಡೆದ ಘಟಿಕೋತ್ಸವದಲ್ಲಿ ವಿವಿಧ ವಿಭಾಗಗಳ ವಿದ್ಯಾರ್ಥಿಗಳಿಗೆ 17 ಚಿನ್ನದ ಪದಕ ಪ್ರದಾನ ಮಾಡಲಾಯಿತು.

ಪಿಜಿಡಿಎಂ (171), ಎಂಬಿಎ (73), ಪಿಎಚ್.ಡಿ (22), ಪಿಜಿ ಡಿಪ್ಲೊಮಾ (7), ಕಾನೂನು (3), ಬಿಬಿಎ (45), ಬಿಬಿಎ ಏವಿಯೇಷನ್ (11), ಬಿ.ಕಾಂ (12), ಎಂ.ಕಾಂ (20) ಸೇರಿದಂತೆ ಸಂಸ್ಥೆಯ ವಿವಿಧ ನಿಕಾಯಗಳ 364 ವಿದ್ಯಾರ್ಥಿಗಳಿಗೆ ಪದವಿ, ಸ್ನಾತಕೋತ್ತರ ಪದವಿ ಮತ್ತು ಗೌರವ ಡಾಕ್ಟರೇಟ್ ಪದವಿ ಪ್ರದಾನ ನಡೆಯಿತು.

ಪಠ್ಯಕ್ರಮ ಹೊರತುಪಡಿಸಿ ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಿರುವ ಸಂಸ್ಥೆಯ 28 ವಿದ್ಯಾರ್ಥಿಗಳಿಗೆ 'ಜೆಮ್ಸ್ ಪುರಸ್ಕಾರ' ನೀಡಿ ಗೌರವಿಸಲಾಯಿತು.

ಮಾರ್ಕೆಟಿಂಗ್ ವಿಭಾಗದಲ್ಲಿ ಅತ್ಯುತ್ತಮ ಅಂಕ ಗಳಿಸಿದ ಶ್ವೇತಾ ಪೂಜಾರಿ ಅವರಿಗೆ ಚಿನ್ನದ ಪದಕ ನೀಡಲಾಯಿತು. ಫೈನಾನ್ಸ್ ಎಕ್ಸಲೆನ್ಸ್ ವಿಭಾಗದ ಸಾಧನೆ ಮತ್ತು ಅತ್ಯುತ್ತಮ ವಿದ್ಯಾರ್ಥಿಗೆ ನೀಡುವ 'ಪ್ರಕಾಶ್ ಕೊಠಾರಿ ಚಿನ್ನದ ಪದಕ'ವನ್ನು ಜೆ.ಯಶಸ್ ಪಡೆದುಕೊಂಡರು.

'ಶೈಕ್ಷಣಿಕ ಸಾಧನೆಯ ಜೊತೆಗೆ ಸಾಮಾಜಿಕ ರಂಗದಲ್ಲಿ ಸಾಧನೆಗೈದ ವಿದ್ಯಾರ್ಥಿಗಳನ್ನು ಜೆಮ್ ಪುರಸ್ಕಾರದ ಮೂಲಕ ಗುರುತಿಸಲಾಗುತ್ತಿದೆ. ಕೋವಿಡ್ ವ್ಯಾಪಕವಾಗಿ ಹರಡಿದ್ದ ಸಂದರ್ಭದಲ್ಲಿಯೂ ಇವರೆಲ್ಲ ಸಮಾಜಕ್ಕೆ ನೆರವಾಗಿದ್ದು ಶ್ಲಾಘನೀಯ' ಎಂದು ಐಎಸ್‌ಬಿಆರ್ ಸಮೂಹ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಮನೀಶ್ ಕೊಠಾರಿ ಹೇಳಿದರು.

ಐಎಸ್‌ಬಿಆರ್ ಬ್ಯುಸಿನೆಸ್ ಸ್ಕೂಲ್‌ನ ಆಡಳಿತ ಮಂಡಳಿ ಅಧ್ಯಕ್ಷ ಶಡಗೋಪನ್ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಿದರು. ನಿರ್ದೇಶಕ ವೈ.ಲಕ್ಷ್ಮಣ್ ಕುಮಾರ್ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ನ್ಯಾಷನಲ್ ಬೋರ್ಡ್ ಆಫ್ ಅಕ್ರೆಡಿಷನ್ (ಎನ್‌ಬಿಎ) ಅಧ್ಯಕ್ಷ ಕೆ.ಕೆ. ಅಗರ್ವಾಲ್ ಅವರು ಆನ್‌ಲೈನ್ ಮೂಲಕ ಮಾತನಾಡಿದರು. ಐಎಸ್‌ಬಿಆರ್ ಸಮೂಹ ಸಂಸ್ಥೆಗಳ ಅಧ್ಯಕ್ಷ ಪ್ರಕಾಶ್ ಕೊಠಾರಿ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿದ್ದರು.

ಎಫ್‌ಕೆಸಿಸಿಐ ಅಧ್ಯಕ್ಷ ಐ.ಎಸ್. ಪ್ರಸಾದ್, ಹಿತಾಚಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಎನ್.ವೇಣು, ಮೈಕ್ರೊಸಾಫ್ಟ್ ವೆಂಚರ್ ಕ್ಯಾಪಿಟಲ್‌ನ ಲತಿಕಾ ಇದ್ದರು.



ಘಟಿಕೋತ್ಸವದಲ್ಲಿ (ಎಡದಿಂದ) ಜೆ.ಯಶಸ್, ಎಲ್‌.ಸೀಮಾ, ಡೊಯಿಲ್ ಭಟ್ಟಾಚಾರ್ಯ ಮತ್ತು ಐಶ್ವರ್ಯಾ ಲಾಡ್ ಚಿನ್ನದ ಪದಕಗಳನ್ನು ಸಂಭ್ರಮದಿಂದ ಪ್ರದರ್ಶಿಸಿದರು —ಪ್ರಜಾವಾಣಿ ಚಿತ್ರ

'ಪತ್ರಿಕೋದ್ಯಮದ ನೀತಿ ಪಾಠ ಹೇಳುವ ಪುಸ್ತಕ'

ದಿನೇಶ್ ಅಮಿನ್‌ಮಟ್ಟು ಸಂಪಾದಿಸಿರುವ 'ಬೇರೆಯೇ ಮಾತು' ಕೃತಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪತ್ರಕರ್ತ ವಡ್ಡರ್ಸೆ ರಘುರಾಮ ಶೆಟ್ಟರು ವಸ್ತುನಿಷ್ಠ ದೃಷ್ಟಿಕೋನದ ಬರಹಗಾರ. ಈ ಪುಸ್ತಕದಲ್ಲಿರುವ ಪ್ರತಿಯೊಂದು ಲೇಖನವೂ ಓದುಗರಿಗೆ ಬೇರೆಯದೇ ಮಾತಾಗಿ ಕೇಳಿಸುತ್ತವೆ. ಪತ್ರಿಕೋದ್ಯಮ ಯಾವ ದಿಸೆಯಲ್ಲಿ ಸಾಗಬೇಕು ಎಂಬುದನ್ನೂ ಸೂಚಿಸುತ್ತವೆ' ಎಂದು ಸಾಹಿತಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಹೇಳಿದರು.

ಪತ್ರಕರ್ತ ದಿನೇಶ್ ಅಮಿನ್‌ಮಟ್ಟು ಸಂಪಾದಿಸಿರುವ, ವಡ್ಡರ್ಸೆ ರಘುರಾಮ ಶೆಟ್ಟರ ಬರಹಗಳನ್ನು ಒಳಗೊಂಡ 'ಬೇರೆಯೇ ಮಾತು' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಶನಿವಾರ ಮಾತನಾಡಿದರು.

'ಇದು ಪತ್ರಿಕೋದ್ಯಮದ ನೀತಿ ಪಾಠ ಹೇಳುವ ಕೃತಿ. ಇದರಲ್ಲಿರುವ ಎಲ್ಲ ಲೇಖನಗಳಲ್ಲೂ ಪತ್ರಿಕೋದ್ಯಮದ ಘನತೆ ಹಾಗೂ ಗೌರವ ಉಳಿಸುವ ಭಾಷೆ ವ್ಯಕ್ತವಾಗಿದೆ' ಎಂದರು.

'ರಾಜ್ಯದೊಳಗೆ ಕನ್ನಡ ಪ್ರಥಮ ಭಾಷೆಯಾಗಬೇಕು ಎಂದು ಸರ್ಕಾರವು ಹಿಂದೊಮ್ಮೆ ಆದೇಶ ಹೊರಡಿಸಿತ್ತು. ಅದನ್ನು ಹೈಕೋರ್ಟ್ ತಿರಸ್ಕರಿಸಿತ್ತು. ಅದರ ವಿರುದ್ಧವಾಗಿ ವಡ್ಡರ್ಸೆಯವರು ಬರೆದಿದ್ದ 'ಜನವಿರೋಧಿ ತೀರ್ಪು' ಎಂಬ ಲೇಖನ ಪುಸ್ತಕದ 82ನೇ ಪುಟದಲ್ಲಿದೆ. ಇದರಲ್ಲಿ ಅವರು ಪ್ರಾದೇಶಿಕ ಭಾಷೆಗಳ ಅಸ್ಮಿತೆ ಬಗ್ಗೆ ತರ್ಕಶುದ್ಧವಾಗಿ ಬರೆದಿದ್ದಾರೆ' ಎಂದು ಹೇಳಿದರು.

'ಪ್ರಜಾಸತ್ತಾತ್ಮಕ ವ್ಯವಸ್ಥೆಯೊಳಗೆ ಹೇಗೆ ಕಾರ್ಯನಿರ್ವಹಿಸಬೇಕು ಎಂಬುದನ್ನು ಪುಸ್ತಕದಲ್ಲಿರುವ ಲೇಖನಗಳು ವಿದ್ಯಾರ್ಥಿಗಳಿಗೆ ತಿಳಿಸುತ್ತವೆ. ಪತ್ರಕರ್ತರು ವಿವೇಕ, ಸಾಮಾಜಿಕ ಹೊಣೆಗಾರಿಕೆ ಹಾಗೂ ಬಹುತ್ವ ಭಾರತದ ಸಾಮಾಜಿಕ ಸಂರಚನೆಯೊಳಗೆ ಎಲ್ಲವನ್ನೂ ವಿಶ್ಲೇಷಿಸಬೇಕು ಎಂಬುದನ್ನೂ ಲೇಖನಗಳು ಪ್ರತಿಪಾದಿಸುತ್ತವೆ' ಎಂದು ವಿವರಿಸಿದರು.

ಸಾಹಿತಿ ಕೆ.ಮರುಳಸಿದ್ದಪ್ಪ, 'ರಘುರಾಮ ಶೆಟ್ಟರು ಓದುಗರೊಂದಿಗೆ ಸಂವಾದ ನಡೆಸಿದ್ದ ವಿಶೇಷ ಲೇಖನಗಳನ್ನು ಪ್ರತ್ಯೇಕವಾಗಿ ಪುಸ್ತಕದಲ್ಲಿ ನೀಡಲಾಗಿದೆ. ಜಾತಿವಾದದ ಕುರಿತು ಅವರು ಲೇಖನಗಳ ಮೂಲಕ ಧ್ವನಿ ಎತ್ತಿದ್ದರು. ವ್ಯಕ್ತಿ ಪ್ರಧಾನ ವ್ಯವಸ್ಥೆಯೇ ಭ್ರಷ್ಟಾಚಾರದ ಮೂಲ ಎಂಬುದನ್ನು ಲೇಖನವೊಂದರಲ್ಲಿ ಉಲ್ಲೇಖಿಸಿದ್ದಾರೆ. ರಾಜಕಾರಣ ಮತ್ತು ಚುನಾವಣೆ ಭ್ರಷ್ಟಾಚಾರದ ಮೂಲಗಳು ಎಂಬುದನ್ನೂ ಲೇಖನಗಳ ಮೂಲಕ ಪ್ರತಿಪಾದಿಸಿದ್ದಾರೆ' ಎಂದು ಹೇಳಿದರು.

ಪತ್ರಕರ್ತ ದಿನೇಶ ಅಮಿನ್‌ಮಟ್ಟು, 'ಪತ್ರಿಕೆಯಲ್ಲಿ ಪ್ರಕಟವಾಗಿದ್ದ ರಘುರಾಮ ಶೆಟ್ಟರ ಅಂಕಣ ಹಾಗೂ ಬರಹಗಳನ್ನು ಸಂಗ್ರಹಿಸಿ ಇಟ್ಟುಕೊಂಡಿದ್ದೆ. ಸಮಯ ಸಿಕ್ಕಾಗಲೆಲ್ಲಾ ಅವುಗಳನ್ನು ಓದುತ್ತಿದೆ. ಅಹರ್ನಿಶಿ ಪ್ರಕಾಶನದ ಅಕ್ಷತಾ ಹುಂಚದಕಟ್ಟೆ ಒತ್ತಾಸೆಯ ಮೇರೆಗೆ ಅವುಗಳನ್ನು ಪುಸ್ತಕ ರೂಪದಲ್ಲಿ ಹೊರತರಲಾಗಿದೆ' ಎಂದು ಹೇಳಿದರು.

ಪುಸ್ತಕ ಪರಿಚಯ

ಪುಸ್ತಕದ ಹೆಸರು: ಬೇರೆಯೇ ಮಾತು
ಸಂಪಾದನೆ: ದಿನೇಶ್ ಅಮಿನ್‌ಮಟ್ಟು
ಪುಟಗಳ ಸಂಖ್ಯೆ: 408
ದರ: ₹380
ಪ್ರಕಾಶಕರು: ಅಹರ್ನಿಶಿ ಪ್ರಕಾಶನ.



ಕಾರ್ಯಕ್ರಮದಲ್ಲಿ ದೇವನೂರ ಮಹಾದೇವ ಪುಸ್ತಕ ಬಿಡುಗಡೆ ಮಾಡಿದರು. (ಎಡದಿಂದ) ದಿನೇಶ್ ಅಮಿನ್‌ಮಟ್ಟು, ಸಾಹಿತಿಗಳಾದ ಕೆ.ಮರುಳಸಿದ್ದಪ್ಪ, ಪ್ರೊ. ಎಸ್‌.ಜಿ.ಸಿದ್ಧರಾಮಯ್ಯ ಮತ್ತು ಲೇಖಕ ಕೆ.ಪುಟ್ಟಸ್ವಾಮಿ ಇದ್ದರು —ಪ್ರಜಾವಾಣಿ ಚಿತ್ರ

'ಸಮಾನತೆಯ ಜಲಕ್ಕಾಗಿ ಕಾಯುತ್ತಿರುವ ನೆಲ'

'ಸಹನೆ, ಪ್ರೀತಿ, ನ್ಯಾಯ ಹಾಗೂ ಸಮಾನತೆಯ ಜಲಕ್ಕಾಗಿ ಭಾರತದ ನೆಲ ಚಾತಕ ಪಕ್ಷಿಯಂತೆ ಕಾಯುತ್ತಿದೆ' ಎಂದು ಸಾಹಿತಿ ದೇವನೂರ ಮಹಾದೇವ ತಿಳಿಸಿದರು.

'ಚಾತುರ್ವರ್ಣ್ಯ ಗುಂಪಿನ ಹಿಂದೂ ಪ್ರತಿಪಾದಕ ಗೋಳ್ವಾಲ್ಕರ್ ಹಾಗೂ ಹಿಂಸಾ ಪ್ರವೃತ್ತಿಯ ನಾಥುರಾಮ್ ಗೋಡ್ಸೆ ಅವರ ಕುಮೌಲ್ಯಗಳನ್ನು ಭಾರತದೆಲ್ಲೆಡೆ ಬಿತ್ತಲು ಆರ್‌ಎಸ್ಎಸ್ ಅವಿರತವಾಗಿ ಶ್ರಮಿಸುತ್ತಿದೆ. ದೇಶದಲ್ಲೆಲ್ಲಾ ಗೋಡ್ಸೆ ಮತ್ತು ಗೋಳ್ವಾಲ್ಕರ್ ಅವರನ್ನು ತುಂಬಲು ಸ್ಥಳಾವಕಾಶ ಹುಡುಕುತ್ತಿರುವ ಆರ್‌ಎಸ್ಎಸ್, ಗಾಂಧಿ ಮತ್ತು ಅಂಬೇಡ್ಕರ್ ಅವರನ್ನು ನಿರ್ನಾಮ ಮಾಡಲು ಹವಣಿಸುತ್ತಿದೆ' ಎಂದು ದೂರಿದರು.

'ಲವ್ ಜಿಹಾದ್' ಬಗ್ಗೆ ಪ್ರಸ್ತಾಪಿಸಿ, 'ಲವ್ ಎಂದರೆ ಪ್ರೀತಿ. ಜಿಹಾದ್ ಎಂದರೆ ಧರ್ಮಯುದ್ಧ. ನಿಜವಾದ ಪ್ರೀತಿಯು ಧರ್ಮವನ್ನೂ ಮೀರಿದುದು. ಪ್ರೀತಿ ಮತ್ತು ಯುದ್ಧ ಅಜಗಜಾಂತರ ಕ್ರಿಯೆಗಳು. ಇತ್ತೀಚೆಗೆ 'ಲವ್ ಕೇಸರಿ' ರಂಗಪ್ರವೇಶ ಮಾಡಿದೆ. ಕೇಸರಿ ಎಂದರೆ ವಿರಕ್ತಿ. ಈ ಪ್ರೀತಿ ಮತ್ತು ವಿರಕ್ತಿ ಹೇಗೆ ಕೂಡುತ್ತವೆ. ವಿರಕ್ತಿ ಹೊಂದಿರುವವರನ್ನು ಪ್ರೀತಿ ಮಾಡಿದವರ ಪಾಡೇನು?' ಎಂದು ವ್ಯಂಗ್ಯವಾಡಿದರು. 'ರಘುರಾಮ ಶೆಟ್ಟರು ಪ್ರಸ್ತುತ ಸಮಾಜದಲ್ಲಿ ಕಣ್ಮರೆಯಾಗುತ್ತಿರುವ ಸಾಮಾಜಿಕ ನ್ಯಾಯದ ಪ್ರತೀಕವಾಗಿದ್ದರು' ಎಂದರು.

ಪಿಯು ಪರೀಕ್ಷೆ: ಉಚಿತ ಪ್ರಯಾಣಕ್ಕೆ ಕೆಎಸ್‌ಆರ್‌ಟಿಸಿ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏ.22ರಿಂದ ಮೇ 18ರವರೆಗೆ ನಡೆಯಲಿರುವ ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾಗಲು ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ಉಚಿತವಾಗಿ ಪ್ರಯಾಣ ಮಾಡಲು ಕೆಎಸ್‌ಆರ್‌ಟಿಸಿ ಅವಕಾಶ ಕಲ್ಪಿಸಿದೆ.

ವ್ಯಾಸಂಗ ಮಾಡುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಪರೀಕ್ಷಾ ಕೇಂದ್ರ ಇಲ್ಲದಿದ್ದರೆ ನಿರ್ವಾಹಕರಿಗೆ ಪರೀಕ್ಷಾ ಪ್ರವೇಶ ಪತ್ರ ತೋರಿಸಿ ಪರೀಕ್ಷಾ ಕೇಂದ್ರಗಳಿಗೆ ಬಸ್‌ಗಳಲ್ಲಿ ಉಚಿತವಾಗಿ ಹೋಗಿ ಬರಬಹುದು. ಪರೀಕ್ಷೆ ಇರುವ ದಿನದಂದು ಪರೀಕ್ಷಾ ಕೇಂದ್ರದ ಬಳಿ ವಿದ್ಯಾರ್ಥಿಗಳು ಬಸ್ ಹತ್ತಲು ಮತ್ತು ಇಳಿಯಲು ಅನುಕೂಲ ಆಗುವಂತೆ ಕೋರಿಕೆ ನಿಲುಗಡೆಯನ್ನೂ ನೀಡಲು ನಿಗಮದ ಮುಖ್ಯ ಸಂಚಾರ ವ್ಯವಸ್ಥಾಪಕರು ಆದೇಶಿಸಿದ್ದಾರೆ.





ಬಿ.ಆರ್. ಅಂಬೇಡ್ಕರ್ ಜನ್ಮದಿನ ಕಾರ್ಯಕ್ರಮದಲ್ಲಿ ಸಾಹಿತಿ ಚಂದ್ರಶೇಖರ ಕಂಬಾರ ಮತ್ತು ಎಚ್‌.ಸಿ.ಮಹದೇವಪ್ಪ ಅವರು 'ಸಂವಿಧಾನ ಓದು' ಪುಸ್ತಕ ಪ್ರದರ್ಶಿಸಿದರು. ಎಂ.ಸಿ.ವೇಣುಗೋಪಾಲ್, ವಿವಿಧ ಮಠಾಧೀಶರು, ಧರ್ಮಗುರುಗಳು ಇದ್ದಾರೆ.

'ಸಂವಿಧಾನಕ್ಕೆ ಸವಾಲಿನ ರಾಜಕೀಯ ಸ್ಥಿತಿ'

ಬೆಂಗಳೂರು: '21ನೇ ಶತಮಾನ ಸವಾಲಿನಿಂದ ಕೂಡಿದೆ. ಇದು ಭಾಷೆ, ಧರ್ಮ, ಜಾತಿಗೆ ಸೀಮಿತವಾಗದೆ, ಇಡೀ ಸಂವಿಧಾನಕ್ಕೆ ಸವಾಲು ಎಸೆಯುವ ರಾಜಕೀಯ ಸ್ಥಿತಿ ನಿರ್ಮಾಣವಾಗಿದೆ' ಎಂದು ಕಾಂಗ್ರೆಸ್ ಮುಖಂಡ ಎಚ್‌.ಸಿ.ಮಹದೇವಪ್ಪ ಕಳವಳ ವ್ಯಕ್ತಪಡಿಸಿದರು.

ರಾಜ್ಯ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯು ನಗರದಲ್ಲಿ ಆಯೋಜಿಸಿದ್ದ ಬಿ.ಆರ್. ಅಂಬೇಡ್ಕರ್ ಜನ್ಮದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ದೇಶದ ಬಹುತ್ವ ಮತ್ತು ಸೌಹಾರ್ದ ನಾಶ ಮಾಡಲು ಬಿಜೆಪಿ ಧರ್ಮಾಧಾರಿತ ರಾಜಕಾರಣ ಮಾಡುತ್ತಿದೆ. ಅಂಬೇಡ್ಕರ್ ಮತ್ತು ಸಂವಿಧಾನದ ಆಶಯಗಳಿಂದ ಕೋಮುವಾದ ಮತ್ತು ಜಾತಿವಾದವನ್ನು ಹಿಮ್ಮೆಟ್ಟಿಸಿ, ಸಮೃದ್ಧ ಭಾರತ ನಿರ್ಮಿಸಬೇಕು' ಎಂದರು.

'ಅಂಬೇಡ್ಕರ್ ಜಯಂತಿ ರಾಜಕೀಯ ಹುಟ್ಟುಹಬ್ಬದ ಆಚರಣೆಯಲ್ಲ. ಭಾರತದಲ್ಲಿ ಪ್ರತಿ ಹೋರಾಟಗಳನ್ನು ನಿರೂಪಿಸುವ ಮಹತ್ವದ ದಿನ. ಧರ್ಮ, ಜಾತಿ, ಪ್ರದೇಶಗಳಲ್ಲಿ ತಾರತಮ್ಯ ಮಾಡದೆ, ಎಲ್ಲರಿಗೂ ಸಮಾನತೆ ಮತ್ತು ಸಮಾನ ಅವಕಾಶಗಳನ್ನು ನೀಡುವ ಮೂಲಕ ಸಮ ಸಮಾಜ ಸೃಷ್ಟಿಸಬೇಕು' ಎಂದರು.

'ನಾವು ಉಳಿಯಬೇಕಾದರೆ ಸಂವಿಧಾನವನ್ನು ಉಳಿಸಬೇಕು. ಹಾಗಾಗಿ ನಾವೆಲ್ಲರೂ ಒಗ್ಗಟ್ಟಿನಿಂದ ಹೋರಾಟ ನಡೆಸಿ, ಸಂವಿಧಾನದ ರಕ್ಷಣೆ ಮಾಡಬೇಕು. ಶೂದ್ರ ಸಮಾಜ ಸಂಘಟನಾತ್ಮಕವಾಗಿ ಹೋರಾಟ ನಡೆಸಬೇಕು' ಎಂದೂ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ನಟರಾಜ್ ಹುಳಿಯಾರ್ ಉಪನ್ಯಾಸ ನೀಡಿದರು. ವೇದಿಕೆಯ ಅಧ್ಯಕ್ಷ ಎಂ.ಸಿ.ವೇಣುಗೋಪಾಲ್ ಅವರು ವಿವಿಧ ಮಠಾಧೀಶರು, ಧರ್ಮಗುರುಗಳು ಹಾಗೂ ಸಾಹಿತಿಗಳನ್ನು ಸನ್ಮಾನಿಸಿದರು.

‘ಧರ್ಮಗಳ ವೈಭವೀಕರಣ ನಿಲ್ಲಲಿ’

ಮೈಸೂರು: ‘ಒಂದು ಧರ್ಮದವರು ಮತ್ತೊಂದು ಧರ್ಮದವರನ್ನು ಗೌರವಿಸಿ, ಪ್ರೀತಿಸಬೇಕೇ ಹೊರತು ನಮ್ಮ ಧರ್ಮವೇ ಮೇಲು ಎಂದು ವೈಭವೀಕರಿಸಬಾರದು’ ಎಂದು ಸಂಸದ ವಿ. ಶ್ರೀನಿವಾಸಪ್ರಸಾದ್ ಪ್ರತಿಪಾದಿಸಿದರು.

ಮೈಸೂರು ಜಿಲ್ಲಾ ವಕೀಲರ ಸಂಘವು ನ್ಯಾಯಾಲಯದ ಆವರಣದಲ್ಲಿ ಶನಿವಾರ ಏರ್ಪಡಿಸಿದ್ದ ಬಿ.ಆರ್.ಅಂಬೇಡ್ಕರ್ ಜನ್ಮದಿನಾಚರಣೆಯಲ್ಲಿ ಅವರು ಮಾತನಾಡಿದರು.

‘ವಿಶ್ವದಲ್ಲಿರುವ ಎಲ್ಲ ಧರ್ಮಗಳೂ ನಮ್ಮ ದೇಶದಲ್ಲಿವೆ. ಧರ್ಮದ ಅಮಲಿನಲ್ಲಿ ಗಲಾಟೆ ಮಾಡುವುದು ಸರಿಯಲ್ಲ. ಧರ್ಮ ಇರುವುದು ಮನುಷ್ಯರ ಒಳಿತಿಗಾಗಿ ಎಂಬುದನ್ನು ಯಾರು ಮರೆಯಬಾರದು’ ಎಂದು ಕಿವಿಮಾತು ಹೇಳಿದರು.

‘ಗಣರಾಜ್ಯೋತ್ಸವದ ದಿನ ರಾಯಚೂರು ಜಿಲ್ಲಾ ನ್ಯಾಯಾಲಯದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರ ತೆಗೆಸಿದ ಪ್ರಕರಣದ ಆರೋಪಿ ವಿರುದ್ಧ ಕ್ರಮ ಕೈಗೊಳ್ಳದ ಹಾಗೂ ಕೊಪ್ಪಳದಲ್ಲಿ ದೇಗುಲ ಪ್ರವೇಶಿಸಿದ 3 ವರ್ಷದ ಬಾಲಕನಿಗೆ ₹ 10 ಸಾವಿರ ದಂಡ ವಿಧಿಸಿರುವ ಈ ಹೊತ್ತಿನಲ್ಲಿ ಮುಖ್ಯಮಂತ್ರಿಗಳಿಂದ ಅಸ್ಪೃಶ್ಯತೆ ನಿವಾರಣೆ ಹೇಗೆ ಸಾಧ್ಯ’ ಎಂದು ಪ್ರಶ್ನಿಸಿದರು.

‘ಇಂತಹ ಮುಖ್ಯಮಂತ್ರಿಯು ಮುಂದಿನ ಬಜೆಟ್‌ನಲ್ಲಿ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಘೋಷಿಸುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಯಾವ ರೀತಿ ಅಸ್ಪೃಶ್ಯತೆ ನಿವಾರಿಸುತ್ತಾರೆ ಎಂದು ಅವರೇ ಹೇಳಬೇಕು’ ಎಂದರು.

ಶ್ರಮಿಕರ ಕ್ಲಿನಿಕ್ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರೋಗ್ಯವಂತರಾಗಿರಲು ಒತ್ತಡ ಕಡಿಮೆ ಮಾಡಿಕೊಳ್ಳುವ ಜತೆಗೆ ದುರಾಸೆಯಿಂದಲೂ ದೂರವಿರಬೇಕು’ ಎಂದು ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ. ಎನ್.ಮಂಜುನಾಥ್ ಕಿವಿಮಾತು ಹೇಳಿದರು.

ಸಿಐಟಿಯು ಬೆಂಗಳೂರು ಜಿಲ್ಲಾ ಸಮಿತಿಯು ಬಸವನಗುಡಿಯಲ್ಲಿ ಸ್ಥಾಪಿಸಿರುವ ಅಸಂಘಟಿತ ಕಾರ್ಮಿಕರ ಉಚಿತ ‘ಶ್ರಮಿಕರ ಕ್ಲಿನಿಕ್’ ಅನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

‘ಸಿಐಟಿಯು ಸಂಘಟನೆ ಜನಸಾಮಾನ್ಯರಿಗೆ ಉಚಿತ ಚಿಕಿತ್ಸೆ ನೀಡುವ ಸದುದ್ದೇಶದಿಂದ ಕ್ಲಿನಿಕ್ ಸ್ಥಾಪಿಸಿರುವುದು ಶ್ಲಾಘನೀಯ. ಇದನ್ನು ಮತ್ತಷ್ಟು ಕಡೆ ವಿಸ್ತರಿಸುವ ಕೆಲಸವಾಗಲಿ’ ಎಂದು ಸಲಹೆ ನೀಡಿದರು.

‘ಸಮಾಜದ ಕಟ್ಟಕಡೆಯ ಜನರಿಗೆ ಆರೋಗ್ಯ ಸಿಗಬೇಕೆಂಬುದು ನಮ್ಮ ಆಶಯ. ಜಯದೇವ ಸಂಸ್ಥೆ ಈ ಧ್ಯೇಯದೊಂದಿಗೆ ಕೆಲಸ ಮಾಡುತ್ತಿದೆ. ಈವರೆಗೆ 50 ಲಕ್ಷ ಮಂದಿಗೆ ಚಿಕಿತ್ಸೆ ನೀಡಿದ ಹೆಗ್ಗಳಿಕೆ ಹೊಂದಿದೆ. ಚಿಕಿತ್ಸೆ ಮೊದಲು ಪಾವತಿ ನಂತರ ಎಂಬ ನಮ್ಮ ನೀತಿಗೆ ಬದ್ಧರಾಗಿದ್ದೇವೆ’ ಎಂದರು.



ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಅವರು ಬಸವನಗುಡಿಯಲ್ಲಿ ಶ್ರಮಿಕರ ಕ್ಲಿನಿಕ್ ಉದ್ಘಾಟಿಸಿದರು. ಸಿಐಟಿಯು ಸಂಘಟನೆಯ ಪದಾಧಿಕಾರಿಗಳು ಇದ್ದಾರೆ

ಸಿಐಟಿಯು ರಾಷ್ಟ್ರೀಯ ಉಪಾಧ್ಯಕ್ಷ ಎ.ಕೆ.ಪದ್ಮನಾಭನ್, ‘ಕಾರ್ಮಿಕರು ಹಾಗೂ ಇತರ ದುಡಿಯುವ ಜನರಿಗೆ ಸಾಧ್ಯವಿರುವ ಎಲ್ಲ ಸಹಾಯ ಮಾಡುವ ಬದ್ಧತೆಯೊಂದಿಗೆ ಕೆಲಸ ಮಾಡುತ್ತಿದ್ದೇವೆ. ಸಂಘಟನೆಯಿಂದ ದೇಶದ ಅನೇಕ ಕಡೆ ಅಸಂಘಟಿತರು ಹಾಗೂ ಬಡವರಿಗಾಗಿ ಆಸ್ಪತ್ರೆ, ಶಾಲೆಗಳನ್ನು ನಡೆಸಲಾಗುತ್ತಿದೆ’ ಎಂದರು.

ಸಿಐಟಿಯು ಜಿಲ್ಲಾ ಘಟಕದ ಅಧ್ಯಕ್ಷ ಕೆ.ಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಕಾರ್ಯದರ್ಶಿ ಕೆ.ಎನ್.ಉಮೇಶ್, ಉಪಾಧ್ಯಕ್ಷ ಗೋಪಾಲಗೌಡ, ಪ್ರತಾಪ ಸಿಂಹ, ಬಿ.ಎನ್.ಮಂಜುನಾಥ್ ಇದ್ದರು.

ಉಚಿತ ತರಬೇತಿ

ಬೆಂಗಳೂರು: ಸಿದ್ಧಾರ್ಥ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಸಂಘದ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಬ್ಯಾಂಕಿಂಗ್, ರೈಲ್ವೆ ಹಾಗೂ ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮೂರು ತಿಂಗಳ ಉಚಿತ ತರಬೇತಿ ನೀಡಲಾಗುವುದು.

ಏಪ್ರಿಲ್ 18ರಿಂದ ತರಬೇತಿ ಆರಂಭವಾಗಲಿದೆ. ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ಗಂಟೆಯವರೆಗೆ ತರಬೇತಿ ನಡೆಯಲಿದೆ.

ಆಸಕ್ತರು ತಮ್ಮ ಮೂಲ ದಾಖಲಾತಿಗಳು ಮತ್ತು ಅವುಗಳ ಪ್ರತಿಗಳೊಂದಿಗೆ ಜ್ಞಾನಗಂಗೋತ್ರಿ ಸಂಸ್ಥೆಯ ಕಚೇರಿಯನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ತರಬೇತಿ ಸ್ಥಳ: ಜ್ಞಾನಗಂಗೋತ್ರಿ ಸಂಸ್ಥೆ, ಹಾಸ್ಪಿಟೆಕ್ ಹೌಸ್, ಮೆಟ್ರೊ ನಿಲ್ದಾಣದ ಹತ್ತಿರ, ವಿಜಯನಗರ.
ಸಂಪರ್ಕ:9620030679

ಹೆಬ್ಬಾಳ ವಿಧಾನಸಭಾ ಕ್ಷೇತ್ರದಲ್ಲಿ ವಾರ್ಡ್‌ವಾರು ಪಿಂಚಣಿ ಅದಾಲತ್– ಬೈರತಿ • ₹180 ಕೋಟಿ ವೆಚ್ಚದಲ್ಲಿ ನೆಲದಡಿ ವಿದ್ಯುತ್ ಕೇಬಲ್ ಅಳವಡಿಕೆ

ಬಹುದಿನದ ಬವಣೆಗೆ ಸ್ಥಳದಲ್ಲೇ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ನೀರು ಬರದೆ ಸಮಸ್ಯೆ ಎದುರಿಸುತ್ತಿರುವವರು, ಆಗಾಗ ಒಳಚರಂಡಿ ಕಟ್ಟಿಕೊಂಡು ತೊಂದರೆ ಅನುಭವಿಸುತ್ತಿರುವವರು, ಹೆಬ್ಬಾಳದ ಸಂಚಾರ ದಟ್ಟಣೆಯಲ್ಲಿ ದಿನವೂ ಸಿಲುಕಿ ಬಸವಳಿದವರು, ಟಿಡಿಆರ್ ಸಿಗದೆ ಪರದಾಡುತ್ತಿರುವವರು... ಹೀಗೆ ಹತ್ತಾರು ಸಮಸ್ಯೆಗಳಿಂದ ತತ್ತರಿಸಿರುವ ಹೆಬ್ಬಾಳ ವಿಧಾನಸಭಾ ಕ್ಷೇತ್ರದ ನಾಗರಿಕರು ಶನಿವಾರ ತುಸು ನಿರಾಳರಾದರು.

ಕಚೇರಿಗಳಿಗೆ ಅಲೆದಾಡಿ ಸುಸ್ತಾಗಿದ್ದ ಜನರಲ್ಲಿ ಹೊಸ ಆಶಾಕಿರಣ ಮೂಡಿತು. ಇದಕ್ಕೆ ಕಾರಣವಾಗಿದ್ದು 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ವತಿಯಿಂದ ಆರ್.ಟಿ.ನಗರದಲ್ಲಿ ಶನಿವಾರ ಏರ್ಪಡಿಸಿದ್ದ ಜನಸ್ಪಂದನ ಕಾರ್ಯಕ್ರಮ.

'ನಾವು ಸ್ಮಾರ್ಟ್ ಸಿಟಿಯಲ್ಲಿ ಜೀವನ ಮಾಡುತ್ತಿಲ್ಲ, ಇಲ್ಲಿ ಹೆಣ ಹೊತ್ಕೊಂಡು ಹೋಗೋಕೆ ಮನೆ ಮುಂದೆ ರಸ್ತೇನೇ ಇಲ್ಲ, ಡ್ರೈನೇಜ್ ಪೈಪ್‌ಗಳಂತೂ ಓವರ್ ಲೋಡ್‌ನಿಂದ ಲೀಕ್ ಆಗಿ ಕೊಳಚೆ ನೀರು ಮನೆ ಒಳಗೇ ನುಗ್ಗುತ್ತಿದೆ, ಕಸ ಎತ್ತುವುದಕ್ಕೆ ಬಿಬಿಎಂಪಿ ಸಿಬ್ಬಂದಿಗೆ ವಾರಗಟ್ಟಲೆ ಸಮಯ ಬೇಕು, ಅಗೆದ ರಸ್ತೆಗಳನ್ನು ಹಾಗೇ ಬಿಟ್ಟಿರುವ ಜಲಮಂಡಳಿ... ನಾಗರಿಕರು ಬಿಡಿಸಿಟ್ಟ ಸಾಲು ಸಾಲು ಸಮಸ್ಯೆಗಳಿವು.

ಜನಸ್ಪಂದನ
ಸಿಟಿಜನ್ಸ್ ಫಾರ್ ಚೇಂಜ್

ಮೂರು ಗಂಟೆಗೂ ಹೆಚ್ಚು ಕಾಲ ಜನರ ಸಮಸ್ಯೆಗಳನ್ನು ಒಂದೊಂದಾಗಿ ಆಲಿಸಿದ ಕ್ಷೇತ್ರದ ಶಾಸಕ ಬೈರತಿ ಸುರೇಶ್, ತಕ್ಷಣವೇ ನಾಗರಿಕರ ಎಲ್ಲ ಅಹವಾಲುಗಳಿಗೂ ಸ್ಪಂದಿಸುವಂತೆ ಹಾಜರಿದ್ದ ಇಲಾಖಾ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಶೀಘ್ರವೇ ಕ್ಷೇತ್ರದಲ್ಲಿ ವಾರ್ಡ್‌ವಾರು ಪಿಂಚಣಿ ಅದಾಲತ್ ಆರಂಭಿಸುವುದಾಗಿಯೂ ಅವರು ಇದೇ ವೇಳೆ ಪ್ರಕಟಿಸಿದರು.

'ನನ್ನ ಕ್ಷೇತ್ರದಲ್ಲಿ ಶೇ 80ರಷ್ಟು ಬಡವರು, ಕಡುಬಡವರು ಹಾಗೂ ಮಧ್ಯಮ ವರ್ಗದವರೇ ಇದ್ದಾರೆ. ಇವರೆಲ್ಲರ ದೊಡ್ಡ ಸಮಸ್ಯೆ ಎಂದರೆ ಕುಡಿಯುವ ನೀರು, ನೈರ್ಮಲ್ಯ ಮತ್ತು ಕಸ ವಿಲೇವಾರಿ. ಹಾಗಾಗಿ ಅಧಿಕಾರಿಗಳು ಇಂತಹ ಸಮಸ್ಯೆಗಳನ್ನು ಹೊತ್ತು ತಂದ ನಾಗರಿಕರ ದೂರುಗಳಿಗೆ ತಡಮಾಡದೆ ಸ್ಪಂದಿಸಬೇಕು' ಎಂದು ಶಾಸಕರು ಅಧಿಕಾರಿ ವರ್ಗಕ್ಕೆ ತಾಕೀತು ಮಾಡಿದರು.


'ಕ್ಷೇತ್ರದ ಜನರು ನನ್ನನ್ನು ಯಾವಾಗ ಬೇಕಾದರೂ ಪ್ರಶ್ನೆ ಮಾಡಬಹುದು. ಅವರಿಗೆ ಆ ಅಧಿಕಾರ ಯಾವಾಗಲೂ ಇದ್ದೇ ಇದೆ. ಸರ್ಕಾರದ ಕೆಲಸ ದೇವರ ಕೆಲಸ. ಇದನ್ನು ಅರಿತು ಅಧಿಕಾರಿಗಳು ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕು' ಎಂದು ಎಚ್ಚರಿಸಿದ ಅವರು, 'ನಾಲ್ಕೈದು ಎಕರೆ ಸರ್ಕಾರಿ ಸ್ವತ್ತು ಒತ್ತುವರಿ ಮಾಡಿದ ಶ್ರೀಮಂತರನ್ನು ಸುಮ್ಮನೇ ಬಿಡುತ್ತೀರಿ. ಆದರೆ, ಸಣ್ಣಪುಟ್ಟ ತಪ್ಪು ಮಾಡಿದ ಬಡವರ ಬಗ್ಗೆ ನಿಮಗೆ ಉದಾರತೆ ಇಲ್ಲವಲ್ಲಾ' ಎಂದು ಕಿಡಿಕಾರಿದರು.

'ಹೆಬ್ಬಾಳ ಕ್ಷೇತ್ರದಲ್ಲಿ ವಿದ್ಯುತ್ ಕೇಬಲ್ ಸಮಸ್ಯೆಯನ್ನು ಅಂತ್ಯಗೊಳಿಸುವ ನಿಟ್ಟಿನಲ್ಲಿ ನೆಲದಡಿ ಕೇಬಲ್ ಹಾಕಲಾಗುತ್ತಿದೆ. ಕ್ಷೇತ್ರದಾದ್ಯಂತ ₹ 180 ಕೋಟಿ ವೆಚ್ಚದಲ್ಲಿ 110 ಕಿ.ಮೀ. ಉದ್ದದ ಯುಜಿಸಿ (ಅಂಡರ್ ಗ್ರೌಂಡ್ ಕೇಬಲ್) ಕಾಮಗಾರಿ ಕೈಗೊಳ್ಳಲಾಗಿದೆ' ಎಂದು ಅವರು ತಿಳಿಸಿದರು.


ಜನಸ್ಪಂದನದಲ್ಲಿ ಶಾಸಕ ಬೈರತಿ ಸುರೇಶ್ ಮಾತನಾಡಿದರು. ಪಾಲಿಕೆ ಮಾಜಿ ಸದಸ್ಯರಾದ ಎಂ. ಆನಂದ್, ಅಬ್ದುಲ್ ವಾಜಿದ್ ಹಾಗೂ ಅಧಿಕಾರಿಗಳು ಇದ್ದಾರೆ–ಪ್ರಜಾವಾಣಿ ಚಿತ್ರ


ಜನಸ್ಪಂದನ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಜನರು–ಪ್ರಜಾವಾಣಿ ಚಿತ್ರ

ಹೆಸರು ಬರೆದಿಟ್ಟು ಆತ್ಮಹತ್ಯೆ ಮಾಡಿಕೊಳ್ತೇನೆ..!


ಶಂಭಯ್ಯ

'ಹೆಬ್ಬಾಳ ಕ್ಷೇತ್ರದಲ್ಲಿ 40 ವರ್ಷಗಳಿಂದ ವಾಸ ಮಾಡುತ್ತಿರುವ ನನಗೆ ಈ ತನಕ ಉಚಿತ ನಿವೇಶನ ಸಿಕ್ಕಿಲ್ಲ. ಇನ್ನೂ ನೀವು ನನಗೆ ನಿವೇಶನ ಕೊಡಿಸಲಿಲ್ಲ ಎಂದರೆ ನಿಮ್ಮ ಹೆಸರನ್ನು ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡು ಬಿಡುತ್ತೇನೆ' ಎಂದು ಕುಂತಿ ಗ್ರಾಮದ ಸಿ.ಶಂಭಯ್ಯ ಎಂಬ ಹಿರಿಯ ನಾಗರಿಕರೊಬ್ಬರು ಶಾಸಕ ಬೈರತಿ ಸುರೇಶ್ ಅವರಿಗೆ ಬೆದರಿಕೆ ಒಡ್ಡಿದ ಪ್ರಸಂಗಕ್ಕೂ 'ಜನ್ವಸಂದನ' ಸಾಕ್ಷಿಯಾಯಿತು.


ಈ ಮಾತಿಗೆ ತಬ್ಬಿಬ್ಬಾದ ಸುರೇಶ್ ತಕ್ಷಣವೇ ಸಾವರಿಸಿಕೊಂಡು, 'ಅಯ್ಯೋ ಯಜಮಾನ್ರೇ ಸುಮ್ನಿರಿ, ಕೊಡಿಸೋಣ. ನೀವು ನಾಲ್ಕು ವರ್ಷಗಳಿಂದ ಹೀಗೇ ಹೇಳ್ತಾನೇ ಇದ್ದೀರಿ' ಎಂದು ಸಮಾಧಾನಪಡಿಸಿದರು! ಕೂಡಲೇ ಈ ಕುರಿತು ಪರಿಶೀಲನೆ ನಡೆಸಿ ಹಿರಿಯರಿಗೆ ಒಂದು ಸೂರು ಕಲ್ಪಿಸುವ ಬಗ್ಗೆ ವ್ಯವಸ್ಥೆ ಮಾಡೋಣ ಎಂದೂ ಅವರು ತಿಳಿಸಿದರು.

ಗನ್ ಹಿಡಿದುಕೊಂಡು ಬರ್ತಾರೆ...


ಡಿಫೆನ್ಸ್ ಕಾಲೊನಿಯ ಸುತ್ತಮುತ್ತಲಿನ ಸಮಸ್ಯೆಯೊಂದಕ್ಕೆ ಉತ್ತರಿಸುತ್ತಾ ಶಾಸಕರು, 'ನಾವು ಅವರ ಪರಿಧಿಯೊಳಗೇ ಪ್ರವೇಶ ಮಾಡಲು ಆಗುವುದಿಲ್ಲ. ಏನಾದರೂ ಹೇಳಲು ಹೋದರೆ ಗನ್ ಎತ್ತಿಕೊಂಡು ಬಂದು ಬಿಡುತ್ತಾರೆ' ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ರಕ್ಷಣಾ ಇಲಾಖೆಗೆ ಸೇರಿದ ಪ್ರದೇಶಗಳ ಸುತ್ತಮುತ್ತಲಿನ ಸಮಸ್ಯೆಗಳಲ್ಲಿ ಪ್ರಮುಖವಾಗಿ ಚರಂಡಿಗಳ ಉನ್ನತೀಕರಣಕ್ಕೆ ಒತ್ತು ನೀಡುವುದಾಗಿ ಅವರು ಭರವಸೆ ನೀಡಿದರು.

ನೀರಿನ ಸಮಸ್ಯೆಯೇ ಹೆಚ್ಚು


ನಂಜಪ್ಪ


ದೇವಿ


ನಾಗೇಶ್ ಕುಮಾರ್

ಜನಸ್ಪಂದನ ಕಾರ್ಯಕ್ರಮದಲ್ಲಿ ಜನರಿಂದ ಎದುರಾದ ಪ್ರಶ್ನೆಗಳಲ್ಲಿ ಬಹುತೇಕವು ಕಾವೇರಿ ನೀರು ಪೂರೈಕೆಗೆ ಸಂಬಂಧಿಸಿದ್ದವೇ ಆಗಿದ್ದವು.

ಚೋಳನಾಯಕನಹಳ್ಳಿ ನಂಜಪ್ಪ ಮಾತನಾಡಿ, 'ನಮ್ಮ ಬಡಾವಣೆಗೆ 5 ದಿನಕ್ಕೊಮ್ಮೆ ಕಾವೇರಿ ನೀರು ಬರುತ್ತಿದೆ. 5ನೇ ದಿನ ತಾಂತ್ರಿಕ ಸಮಸ್ಯೆ ಉಂಟಾಗಿ ನೀರು ಬರದಿದ್ದರೆ, ಮುಂದಿನ 5ನೇ ದಿನದ ಸರದಿ ಬರುವ ತನಕ ಅಂದರೆ 10 ದಿನ ಕಾಯಬೇಕಾಗುತ್ತದೆ' ಎಂದು ಅಳಲು ತೋಡಿಕೊಂಡರು.

ಚೋಳನಾಯಕನಹಳ್ಳಿಯ ವಿಕ್ಟರಿ ಹಾರ್ಮನಿ ಅಪಾರ್ಟ್‌ಮೆಂಟ್‌ನಲ್ಲಿ 100 ಮನೆಗಳಿದ್ದು, ಕಾವೇರಿ ನೀರಿಗೆ ನಿತ್ಯ ಪರದಾಡುವ ಸ್ಥಿತಿ ಇದೆ. ಟ್ಯಾಂಕರ್ ಮೂಲಕ ನೀರು ತರಿಸಿಕೊಳ್ಳುವುದು ಅನಿವಾರ್ಯವಾಗಿದೆ ಎಂದು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ದೇವಿ ಅವರು ಸಮಸ್ಯೆ ಬಿಚ್ಚಿಟ್ಟರು. ಸೆಂಟ್ರಲ್ ಎಕ್ಸೈಜ್ ಲೇಔಟ್‌ನಲ್ಲಿ ಒಂದು ತೊಟ್ಟು ಕಾವೇರಿ ನೀರೂ ಬರುತ್ತಿಲ್ಲ ಎಂದು ನಾಗೇಶ್‌ಕುಮಾರ್ ವಿವರಿಸಿದರು. ಇದೇ ರೀತಿಯ ಹಲವು ಪ್ರಶ್ನೆಗಳು ಸಭೆಯಲ್ಲಿ ಎದುರಾದವು.

ಇದಕ್ಕೆ ಉತ್ತರಿಸಿದ ಶಾಸಕ ಬೈರತಿ ಸುರೇಶ್ ಅವರು, 'ಜನರಿಗೆ ಕುಡಿಯುವ ನೀರು ಪೂರೈಸಲು ಸಾಧ್ಯವಾಗದಿದ್ದರೆ, ಸರ್ಕಾರವಾಗಲೀ, ಜಲಮಂಡಲಿಯಾಗಲಿ, ಜನಪ್ರತಿನಿಧಿಯಾಗಿ ನಾವ್ಯಾರು ಇರಲು ನಾಲಾಯಕ್ ಎಂದೇ ಪರಿಗಣಿಸಬೇಕಾಗುತ್ತದೆ. ಕುಡಿಯುವ ನೀರಿನ ಸಮಸ್ಯೆಯನ್ನು ಜಲ ಮಂಡಳಿ ಅಧಿಕಾರಿಗಳು ಕೂಡಲೇ ಪರಿಹರಿಸಬೇಕು' ಎಂದು ಹೇಳಿದರು.

'ಈಗ ಒದಗಿಸುತ್ತಿರುವ ನೀರಿನ ಪ್ರಮಾಣ ಸಾಕಾಗುತ್ತಿಲ್ಲ. ಅದನ್ನು ಹೆಚ್ಚಿಸದಿದ್ದರೆ ಪ್ರಯೋಜನವಾಗುವುದಿಲ್ಲ. ಜಲ ಮಂಡಳಿ ಅಧಿಕಾರಿಗಳು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ನೀರು ಪೂರೈಕೆ ಪ್ರಮಾಣ ಹೆಚ್ಚಿಸಬೇಕು' ಎಂದು ಸೂಚನೆ ನೀಡಿದರು.

'ಕ್ಷೇತ್ರದಲ್ಲಿ ಭ್ರಷ್ಟರಿಗೆ ಕಡಿವಾಣ'

'ನನ್ನ ಕ್ಷೇತ್ರದಲ್ಲಿ ಯಾವುದೇ ಕಾಮಗಾರಿಯಲ್ಲಿ ಭ್ರಷ್ಟಾಚಾರ ನಡೆಯಲು ಅವಕಾಶ ಕೊಟ್ಟಿಲ್ಲ. ಯಾರು ಭ್ರಷ್ಟಾಚಾರ ಮಾಡದೆಯೇ ಕಾಮಗಾರಿ ಮಾಡುತ್ತಿದ್ದಾರೊ ಅಂಥವರಿಗೆ ಫ್ರೀ ಬಿಟ್ಟಿದ್ದೇವೆ. ಭ್ರಷ್ಟರ ಮೇಲೆ ಕಣ್ಣಿಟ್ಟಿದ್ದೇವೆ' ಎಂದು ಸುರೇಶ್ ಸ್ಪಷ್ಟಪಡಿಸಿದರು. 'ಜಲಮಂಡಳಿಯವರು ಬಿಬಿಎಂಪಿ ಪರವಾನಗಿ ಇಲ್ಲದೆಯೇ ರಸ್ತೆಗಳಲ್ಲಿ ಗುಂಡಿ ತೆಗೆಯುತ್ತಿದ್ದಾರೆ' ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಅವರು, 'ಜನರ ಕೆಲಸ ಮಾಡದ ಯಾವುದೇ ಅಧಿಕಾರಿಗಳು, ಶಾಸಕರು, ಸಂಸದರು ನಾಲಾಯಕ್‌ಗಳು' ಎಂದು ಹೀಗಳೆದರು.

'ಬಸ್ ನಿಲ್ದಾಣಕ್ಕೆ ಜಾಗ ಪಡೆಯಲು ಯತ್ನ'

ಹೆಬ್ಬಾಳ ಮೇಲ್ಸೇತುವೆ ಬಳಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಕೃಷಿ ವಿಶ್ವವಿದ್ಯಾಲಯದಿಂದ ಅರ್ಧ ಎಕರೆ ಜಾಗ ಪಡೆದುಕೊಳ್ಳಲು ಪ್ರಯತ್ನಿಸಲಾಗುವುದು ಎಂದು ಬೈರತಿ ಸುರೇಶ್ ಭರವಸೆ ನೀಡಿದರು.

'ಹೆಬ್ಬಾಳದಲ್ಲಿ ಬಸ್ ನಿಲುಗಡೆಗೆ ಸ್ಥಳ ಇಲ್ಲದೆ ಮೇಲ್ಸೇತುವೆಯ ಕೆಳಗೆ ನಿಲ್ಲುತ್ತಿವೆ. ಅರ್ಧ ಎಕರೆ ಜಾಗ ಪಡೆದುಕೊಂಡರೆ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಿಸಲು ಸಾಧ್ಯ' ಎಂದು 34ನೇ ವಾರ್ಡ್‌ನ ಜಿ. ವೆಂಕಟೇಶ್ ಸಲಹೆ ನೀಡಿದರು.

ಇದಕ್ಕೆ ಉತ್ತರಿಸಿದ ಸುರೇಶ್, 'ಇದು ಉತ್ತಮವಾದ ಸಲಹೆ. ಅರ್ಧ ಎಕರೆ ಜಾಗ ಪಡೆದರೆ ಬಸ್ ನಿಲ್ದಾಣ ಮತ್ತು ಆಸ್ಪತ್ರೆ ನಿರ್ಮಿಸಬಹುದು. ಜಾಗ ಪಡೆದುಕೊಳ್ಳುವ ಸಂಬಂಧ ಕೃಷಿ ವಿಶ್ವವಿದ್ಯಾಲಯದ ಜತೆ ಪತ್ರ ವ್ಯವಹಾರ ನಡೆಸಿ' ಎಂದು ಬಿಬಿಎಂಪಿ ಜಂಟಿ ಆಯುಕ್ತೆ ಶಿಲ್ಪಾ ಅವರಿಗೆ ಸ್ಥಳದಲ್ಲೇ ಸೂಚನೆ ನೀಡಿದರು.

'ಹೆಬ್ಬಾಳ ಕ್ಷೇತ್ರದ ಲಕ್ಷಾಂತರ ಜನರಿಗೆ ಅಂಬೇಡ್ಕರ್ ಆಸ್ಪತ್ರೆಯಲ್ಲಿ ಉಚಿತವಾಗಿ ಡಯಾಲಿಸಿಸ್ ಮಾಡಿಸಿಕೊಡುತ್ತಿದ್ದೇನೆ. ಗಂಗಾನಗರದ ಹೆರಿಗೆ ಆಸ್ಪತ್ರೆ ಮೊದಲನೇ ಮಹಡಿಯಲ್ಲಿ ಡಯಾಲಿಸಿಸ್ ಕೇಂದ್ರ ಇನ್ನು ಮೂರು ತಿಂಗಳಲ್ಲಿ ಆರಂಭವಾಗಲಿದೆ' ಎಂದು ತಿಳಿಸಿದರು.

'ವೈಟ್‌ಹೌಸ್ ಒತ್ತುವರಿ ತೆರವುಗೊಳಿಸಿ'

'ದಿಣ್ಣೂರು ಮುಖ್ಯರಸ್ತೆ ಬಳಿ ಇರುವ ವೈಟ್‌ಹೌಸ್ ಆವರಣ ರಾಜಕಾಲುವೆ ಜಾಗದಲ್ಲಿದ್ದರೂ ತೆರವುಗೊಳಿಸಲು ಏಕೆ ಕ್ರಮಕೈಗೊಂಡಿಲ್ಲ' ಎಂದು ಶಾಸಕ ಬೈರತಿ ಸುರೇಶ್ ಅವರು ಬಿಬಿಎಂಪಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಈ ಬಗ್ಗೆ ಸಭೆಯಲ್ಲಿ ಪ್ರಶ್ನೆ ಕೇಳಿದ ವಕೀಲ ಶ್ರವಣ್, 'ರಾಜಕಾಲುವೆ ಒತ್ತುವರಿ ಬಗ್ಗೆ ಎಷ್ಟು ಬಾರಿ ದೂರು ನೀಡಿದ್ದರೂ ಕ್ರಮ ಕೈಗೊಂಡಿಲ್ಲ' ಎಂದರು.

'ಬಡವರು ನಾಲ್ಕೈದು ಅಡಿ ಒತ್ತುವರಿ ಮಾಡಿದ್ದರೂ ತೆರವು ಮಾಡುತ್ತೀರಿ. ದೊಡ್ಡವರು ನಾಲ್ಕು ಎಕರೆ ಒತ್ತುವರಿ ಮಾಡಿದ್ದರೂ ಕೈಕಟ್ಟಿ ಕುಳಿತಿದ್ದೀರಿ, ನ್ಯಾಯಾಲಯದ ಕಡೆಗೆ ಬೊಟ್ಟು ಮಾಡಿಕೊಂಡು ಸುಮ್ಮನೆ ಕೂರುವುದರಿಂದ ಪ್ರಯೋಜನವಿಲ್ಲ. ಪ್ರಾಮಾಣಿಕತೆಯಿಂದ ಕೆಲಸ ಮಾಡಿ' ಎಂದರು.

ರೈಲು ತಡೆ ಮಾಡೋಣ...

'ಹೆಬ್ಬಾಳ ಮೇಲ್ಸೇತುವೆ ಕೆಳಗಿನ ರೈಲ್ವೆ ಹಳಿ ದಾಟುವ ಪಾದಚಾರಿಗಳ ಸಮಸ್ಯೆಗೆ ಕೇಂದ್ರ ಸರ್ಕಾರವೇ ಸ್ಪಂದಿಸಬೇಕು. ಸಂಸದ ಡಿ.ವಿ.ಸದಾನಂದ ಗೌಡ ಅವರಿಗೆ ಸಾಕಷ್ಟು ಬಾರಿ ಮನವಿ ಮಾಡಿದ್ದರೂ ಪ್ರಯೋಜನವಾಗಿಲ್ಲ. ಹೀಗಾಗಿ ನಮಗೆ ರೈಲು ತಡೆ ಮಾಡುವುದೊಂದೇ ಉಳಿದಿರುವ ಮಾರ್ಗ. ಆಗಲಾದರೂ ಗಮನ ಹರಿಸುತ್ತಾರೊ ನೋಡೋಣ' ಎಂದು ಬೈರತಿ ಸುರೇಶ್ ಹೇಳಿದರು.

'ಇಲ್ಲಿ ರೈಲ್ವೆ ಹಳಿ ದಾಟುವುದು ಅತ್ಯಂತ ಅಪಾಯಕಾರಿ. ಎಷ್ಟೊ ಬಾರಿ ನಾನು ಮತ್ತು ಶಾಸಕ ಕೃಷ್ಣ ಬೈರೇಗೌಡರು ಇಲ್ಲಿನ ಸಂಕಟವನ್ನು ಪರೀಕ್ಷಿಸಲಿಕ್ಕಾಗಿಯೇ ಬಂದು ಹೋಗಿದ್ದೇವೆ. ಹಳಿ ದಾಟಲು ನನಗೇ ಹೆದರಿಕೆ ಆಗುತ್ತದೆ. ಈಗಾಗಲೇ ಇಲ್ಲಿ 15–20 ಜನ ಸತ್ತು ಹೋಗಿದ್ದಾರೆ. ಆದರೆ, ಸಂಸದರಿಗೆ ಈ ಬಗ್ಗೆ ಗಮನವಿಲ್ಲ. ಕೊರೊನಾದಲ್ಲಿ ದೇಶದಾದ್ಯಂತ 5 ಲಕ್ಷ ಜನರು ಸತ್ತರೂ ಕೇರ್ ಮಾಡದ ಇವರಿಗೆ 15–20 ಜನರ ಸಾವು ಯಾವ ಲೆಕ್ಕ' ಎಂದು ಕೇಂದ್ರ ಸರ್ಕಾರವನ್ನು ಪರೋಕ್ಷವಾಗಿ ಕುಟುಕಿದರು.

ದೂರು ದುಮ್ಮಾನ - ಪರಿಹಾರ

ಸಾರ್ವಜನಿಕರ ದೂರು–ದುಮ್ಮಾನ ಆಲಿಸಿದ ಶಾಸಕ ಬೈರತಿ ಸುರೇಶ್, ಸ್ಥಳದಲ್ಲೇ ಇತ್ಯರ್ಥ ಪಡಿಸಲು ಕ್ರಮಕೈಗೊಂಡರು


ನಜ್ಮಾ ಬೇಗಂ

ನಜ್ಮಾಂ ಬೇಗಂ: ಮನೋರಾಯನಪಾಳ್ಯದಲ್ಲಿ ಮಗಳು ಮತ್ತು ನಾನು ಇಬ್ಬರೇ ವಾಸವಿದ್ದೇವೆ. ತಿಂಗಳಿಗೆ ₹300 ಬರುತ್ತಿದ್ದ ನೀರಿನ ಶುಲ್ಕ ಕಳೆದ ಜೂನ್‌ನಿಂದ ತಿಂಗಳಿಗೆ ₹5 ಸಾವಿರ ಬರುತ್ತಿದೆ. ಡಿಸೆಂಬರ್‌ನಲ್ಲಿ ಲೋಕ ಅದಾಲತ್‌ನಲ್ಲಿ ಭಾಗವಹಿಸಿ ಒಡವೆ ಅಡಮಾನವಿಟ್ಟು ₹18 ಸಾವಿರ ಪಾವತಿಸಿದ್ದೆ. ಈಗ ಮತ್ತೆ ₹36 ಸಾವಿರಕ್ಕೆ ಏರಿಕೆಯಾಗಿದೆ. ಇಷ್ಟೊಂದು ಹಣ ಎಲ್ಲಿಂದ ತರಬೇಕು, ಮಂಜುನಾಥ್ ಎಂಬ ಅಧಿಕಾರಿ ಮನೆ ಬಳಿ ಬಂದು ಶುಲ್ಕ ಕಟ್ಟಬೇಕು ಎಂದು ಬೆದರಿಸುತ್ತಾರೆ.

ಬೈರತಿ ಸುರೇಶ್: ತಿಂಗಳಿಗೆ ₹1 ಸಾವಿರ ಶುಲ್ಕವಾದರೂ ವರ್ಷಕ್ಕೆ ₹12 ಸಾವಿರ ಆಗುತ್ತಿತ್ತು. ₹36 ಸಾವಿರ ಶುಲ್ಕ ಎಂದರೆ ಪಾವತಿಸಲು ಸಾಧ್ಯವೇ? ನೀವು ಶುಲ್ಕ ಕಟ್ಟುವುದು ಬೇಡ. ಏನಾಗಿದೆ ಎಂಬುದನ್ನು ಜಲಮಂಡಳಿ ಅಧಿಕಾರಿಗಳು ಕೂಡಲೇ ಪರಿಶೀಲಿಸಿ ಸಮಸ್ಯೆ ಬಗೆಹರಿಸಬೇಕು.


ಜಯಚಂದ್ರಪ್ಪ

ಎಂ.ಜಯಚಂದ್ರಪ್ಪ, ಸಂಜಯ್‌ನಗರ: ಕೆಇಬಿ ಬಡಾವಣೆಯಲ್ಲಿ ಇದ್ದ ರಸ್ತೆಯನ್ನು ಕಿತ್ತು ಕಾಂಕ್ರಿಟ್ ರಸ್ತೆ ಮಾಡಲಾಗಿದೆ. ಚರಂಡಿ ಸರಿಯಾಗಿಲ್ಲದ ಕಾರಣ ರಸ್ತೆಯ ನೀರೆಲ್ಲಾ ನಮ್ಮ ಮನೆ ಮುಂದೆ ಬಂದು ನಿಲ್ಲುತ್ತಿದೆ.

ಸುರೇಶ್: ಬಿಬಿಎಂಪಿಯ ಸಂಬಂಧಪಟ್ಟ ಅಧಿಕಾರಿ ಕೂಡಲೇ ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಿ ಸಮಸ್ಯೆ ಬಗೆಹರಿಸಬೇಕು.


ಶಾಲಿನಿ ದೇಶಪಾಂಡೆ

ಡಾ.ಶಾಲಿನಿ ದೇಶಪಾಂಡೆ, ಎಚ್‌ಎಂಟಿ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ: ಆರ್.ಟಿ.ನಗರ ಬಸ್ ನಿಲ್ದಾಣ ಹೆಸರಿಗಷ್ಟೇ ಇದ್ದು, ಬಸ್‌ಗಳೇ ಬರುವುದಿಲ್ಲ. ಎಚ್‌ಎಂಟಿ ಲೇಔಟ್‌ನ ಪಾದಚಾರಿ ಮಾರ್ಗಗಳು ಹಾಳಾಗಿವೆ. ರಸ್ತೆ ಬದಿ ಹಣ್ಣು–ತರಕಾರಿ ವ್ಯಾಪಾರದಿಂದಲೂ ತೊಂದರೆ ಆಗುತ್ತಿದೆ.

ಸುರೇಶ್: ಈ ಹಿಂದೆ ನಾನು ಮನವಿ ಮಾಡಿದ್ದರಿಂದ ಬಸ್ ವ್ಯವಸ್ಥೆಯನ್ನು ಬಿಎಂಟಿಸಿ ಕಲ್ಪಿಸಿತ್ತು. ಪ್ರಯಾಣಿಕರೇ ಇಲ್ಲದಿದ್ದರಿಂದ ಸ್ಥಗಿತಗೊಳಿಸಿದೆ. ಪಾದಚಾರಿ ಮಾರ್ಗಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು. ರಸ್ತೆ ಬದಿ ಇರುವ ಹಣ್ಣು–ತರಕಾರಿ ವ್ಯಾಪಾರಿಗಳು ಪರವಾನಗಿ ಪಡೆದುಕೊಂಡಿದ್ದಾರೆ.


ವಿಜಯಾ ವಿ. ಗೌಡ

ವಿಜಯಾ ವಿ.ಗೌಡ, ಎಚ್‌ಎಂಟಿ ಲೇಔಟ್: ನಮ್ಮ ಬಡಾವಣೆಯಲ್ಲಿರುವ ಆಟದ ಮೈದಾನದಲ್ಲಿ ಹಿರಿಯ ನಾಗರಿಕರಿಗೆ ನಡಿಗೆ ಪಥ ನಿರ್ಮಿಸಿಕೊಡಬೇಕು.

ಸುರೇಶ್: ಇಡೀ ಕ್ಷೇತ್ರದಲ್ಲಿ ಎರಡು ಕಡೆ ಮಾತ್ರ ಆಟದ ಮೈದಾನಗಳಿವೆ. ಮಕ್ಕಳಿಗಾಗಿ ಆಟದ ಮೈದಾನ ಉಳಿಸಿಕೊಳ್ಳುವ ಅಗತ್ಯವಿದೆ. ಅರ್ಧ ಭಾಗವನ್ನು ಉದ್ಯಾನವಾಗಿ ಅಭಿವೃದ್ಧಿಪಡಿಸಿದರೆ ಆಟದ ಮೈದಾನಕ್ಕೆ ತೊಂದರೆ ಆಗಲಿದೆ. ಹಿರಿಯರ ನಡಿಗೆ ಪಥದ ಬಗ್ಗೆ ಪರಿಶೀಲಿಸೋಣ.


ರಾಮಕೃಷ್ಣ


ರಾಮಕೃಷ್ಣ, ವೆಂಕಟಾಚಾರಿನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ: ಮೊದಲ ಮತ್ತು ಎರಡನೇ ಮುಖ್ಯರಸ್ತೆಗೆ ಇರುವ ಅಡ್ಡರಸ್ತೆ ದಿನದಿಂದ ದಿನಕ್ಕೆ ಕಿರಿದಾಗುತ್ತಿದೆ. 25 ಅಡಿ ಇದ್ದ ರಸ್ತೆ ಈಗ 10 ಅಡಿ ಆಗಿದೆ. ನ್ಯೂ ಬಿಇಎಲ್ ರಸ್ತೆಯಿಂದ ಎಂಎಲ್‌ಎ ಲೇಔಟ್‌ಗೆ ಹೋಗುವ ರಸ್ತೆಯಲ್ಲಿ ಅಲ್ಲಲ್ಲಿ ಕಸ ಸುರಿದು ಮೂಗು ಮುಚ್ಚಿ ತಿರುಗುವ ಸ್ಥಿತಿ ಇದೆ.

ಸುರೇಶ್: ಕಸ ಸುರಿಯುವುದನ್ನು ತಪ್ಪಿಸಲು ಮಾರ್ಷಲ್‌ಗಳು ಕ್ರಮ ಕೈಗೊಳ್ಳಬೇಕು. ಮಾರ್ಷಲ್‌ಗಳನ್ನು ನಿರ್ವಹಿಸುವ ಮುಖ್ಯಸ್ಥರು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಅವರನ್ನು ಬದಲಾವಣೆ ಮಾಡಿ ಸಮಸ್ಯೆ ತಪ್ಪಿಸಬೇಕು. ಸಿಸಿಟಿವಿ ಕ್ಯಾಮರಾ ಅಳವಡಿಕೆಗೆ ₹1 ಕೋಟಿ ಅನುದಾನ ಬಂದಿದೆ. 50 ಕಡೆ ಅಳವಡಿಕೆಗೆ ಕ್ರಮ ಕೈಗೊಳ್ಳಲಾಗುವುದು.


ಫಯಾಜುಲ್ಲಾ ಹಸನ್

ಫಯಾಜುಲ್ ಹಸನ್, ವಿಶ್ವನಾಥ ನಾಗೇನಹಳ್ಳಿ: ಎಂಟು ಹತ್ತು ದಿನಗಳಿಂದ ಕಸದ ಗಾಡಿಯೇ ಬಂದಿಲ್ಲ. ಕುಡಿಯುವ ನೀರಿನ ಸಮಸ್ಯೆಯೂ ಬಗೆಹರಿದಿಲ್ಲ.

ಸುರೇಶ್: ಕುಡಿಯುವ ನೀರು ಮತ್ತು ಕಸದ ಸಮಸ್ಯೆಯೇ ನಮ್ಮ ಕ್ಷೇತ್ರದಲ್ಲಿ ದೊಡ್ಡ ಸಮಸ್ಯೆ ಇದ್ದಂತೆ ಕಾಣಿಸುತ್ತಿದೆ. ಕಸ ನಿರ್ವಹಣೆ ಮಾಡುವ ಗುತ್ತಿಗೆದಾರನಿಗೆ ಬಿಬಿಎಂಪಿ ಅಧಿಕಾರಿಗಳು ನೋಟಿಸ್ ಕೊಟ್ಟು ಸಮಸ್ಯೆ ಸರಿಪಡಿಸಬೇಕು. ಇಲ್ಲದಿದ್ದರೆ ನಿಮ್ಮ ವಿರುದ್ಧವೇ ಕ್ರಮ ಕೈಗೊಳ್ಳಬೇಕಾಗುತ್ತದೆ.


ಜಗನ್ನಾಥರಾವ್

ಜಗನ್ನಾಥ ರಾವ್, ಮನೋರಾಯನಪಾಳ್ಯ: ಬಡಾವಣೆಯಲ್ಲಿ ನೆಲ ಮಹಡಿ ಸೇರಿ ನಾಲ್ಕು ಮಹಡಿ ಕಟ್ಟಡಗಳನ್ನು ಕಟ್ಟಲು ಮಾತ್ರ ಕಾನೂನಿನಲ್ಲಿ ಅವಕಾಶ ಇದೆ. ವಸತಿ ಪ್ರದೇಶದಲ್ಲಿ ಐದು–ಆರು ಅಂತಸ್ತಿನ ಅಪಾರ್ಟ್‌ಮೆಂಟ್ ಸಮುಚ್ಚಯಗಳನ್ನು ನಿರ್ಮಿಸಲಾಗುತ್ತಿದೆ. ಇದು ಕಾನೂನುಬಾಹಿರ ಆದರೂ ಅಧಿಕಾರಿಗಳ ಮೌನವಾಗಿದ್ದಾರೆ.

ಸುರೇಶ್: ಅಕ್ರಮವಾಗಿ ಕಟ್ಟಿ ಮುಂದೆ ಸಕ್ರಮ ಮಾಡಿಕೊಳ್ಳಬಹುದು ಎಂದುಕೊಂಡು ಕಾನೂನುಬಾಹಿರವಾಗಿ ಕಟ್ಟಡಗಳನ್ನು ಕಟ್ಟುತ್ತಿದ್ದರೆ, ಬಿಬಿಎಂಪಿ ಅಧಿಕಾರಿಗಳು ಗಮನ ಹರಿಸಿ.


ಸಯ್ಯದ್ ವಾಸಿಮ್

ಸೈಯದ್ ವಾಸಿಮ್: ಭೂಪಸಂದ್ರದಲ್ಲಿ ಕಾವೇರಿ ಪೈಪ್‌ಲೈನ್‌ನಲ್ಲಿ ಒಳಚರಂಡಿ ನೀರು ಮಿಶ್ರಣವಾಗಿ ಬರುತ್ತಿದೆ. ನಾಲ್ಕು ವರ್ಷಗಳಿಂದ ಸಮಸ್ಯೆ ಬಗೆಹರಿದಿಲ್ಲ.

ಸುರೇಶ್: ಈ ರೀತಿಯ ಸಮಸ್ಯೆಗಳನ್ನು ಜಲಮಂಡಳಿ ಅಧಿಕಾರಿಗಳು ಕೂಡಲೇ ಪರಿಹರಿಸಬೇಕು. ಜನರಿಗೆ ತೊಂದರೆ ಆಗುವುದನ್ನು ತಪ್ಪಿಸಬೇಕು.


ಡಾ.ನೀಲಿಮಾ

ಡಾ.ನೀಲಿಮಾ: ಎಚ್‌ಎಂಟಿ ಲೇಔಟ್‌ನಲ್ಲಿ ನಮ್ಮ ಕ್ಲಿನಿಕ್ ಇದೆ. ಇದು ವಸತಿ ಪ್ರದೇಶ. ಇಲ್ಲಿ ಹಲವು ರೆಸ್ಟೋರೆಂಟ್‌ಗಳಿಗೆ ಅವಕಾಶ ನೀಡಿರುವುದರಿಂದ ಪ್ರತಿವಾರ ಒಳಚರಂಡಿ ಕಟ್ಟಿಕೊಂಡು ತೊಂದರೆ ಅನುಭವಿಸುವಂತಾಗಿದೆ.

ಸುರೇಶ್: ಹೋಟೆಲ್‌ಗಳು ಇರುವುದರಿಂದ 10 ಪಟ್ಟು ನೀರು ಹೆಚ್ಚಾಗಿ ಸಮಸ್ಯೆ ಆಗುತ್ತಿದೆ. ಹೋಟೆಲ್‌ಗಳಿಗೆ ಅನುಮತಿ ನೀಡಿದ ನಂತರ ದೊಡ್ಡ ಪೈಪ್‌ಗಳನ್ನು ಹಾಕಿಸಲು ಜಲ ಮಂಡಳಿ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು. ಡಾಕ್ಟರ್ ನೀಲಿಮಾ ಅವರೊಂದಿಗೇ ಇಂದೇ ಸ್ಥಳಕ್ಕೆ ಹೋಗಿ ಸಮಸ್ಯೆ ಪರಿಹರಿಸಿ ನಮ್ಮ ಕಚೇರಿಗೆ ಜಲಮಂಡಳಿ ಅಧಿಕಾರಿಗಳು ವರದಿ ನೀಡಬೇಕು.

'ತಂದೆ–ತಾಯಿ ಶಿಸ್ತು ಕಲಿಸದಿದ್ದರೆ ನಾವು ಕಲಿಸುತ್ತೇವೆ'


ರೀನಾ ಸುವರ್ಣ

'ಗಾಂಜಾ, ಸಿಗರೇಟು ಸೇದಿಕೊಂಡು ಹೆಣ್ಣು ಮಕ್ಕಳನ್ನು ಚುಡಾಯಿಸುವ ಯುವಕರನ್ನು ನಾವು ಸನ್ಮಾನಿಸಿ ಪೂಜಿಸಬೇಕಾ, ತಂದೆ–ತಾಯಿ ಮಕ್ಕಳಿಗೆ ಶಿಸ್ತು ಹೇಳಿಕೊಡದಿದ್ದರೆ ನಾವು ದಾರಿಗೆ ತರುತ್ತೇವೆ' ಎಂದು ಜೆ.ಸಿ.ನಗರ ಉಪವಿಭಾಗದ ಸಹಾಯಕ ಪೊಲೀಸ್ ಕಮಿಷನರ್ ರೀನಾ ಸುವರ್ಣ ಖಡಕ್ ಎಚ್ಚರಿಕೆ ನೀಡಿದರು.

'ರಸ್ತೆ ಬದಿ ನಿಂತಿದ್ದರೆ, ರಾತ್ರಿ ಕೆಲಸ ಮುಗಿಸಿ ಮನೆಗೆ ಹೋಗುತ್ತಿದ್ದರೆ ಪೊಲೀಸ್ ಕಾನ್‌ಸ್ಟೇಬಲ್‌ಗಳು ಅಡ್ಡಗಟ್ಟಿ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ' ಎಂದು ರೋಷನ್ ಜಮೀರ್ ಸಭೆಯಲ್ಲಿ ಅಹವಾಲು ಹೇಳಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, 'ರೆಹಮತ್ ನಗರದಲ್ಲಿ ಗಾಂಜಾ ಪ್ರಕರಣಗಳು ಹೆಚ್ಚಾಗಿ ದಾಖಲಾಗುತ್ತಿವೆ. ನಿಯಂತ್ರಣ ಮಾಡಬೇಕೆಂದರೆ ಪೊಲೀಸರು ಖಡಕ್ ಆಗಿ ಕೆಲಸ ಮಾಡಲೇಬೇಕಾಗುತ್ತದೆ' ಎಂದರು.

'ಬೈಕ್‌ಗಳನ್ನು ನೋಡಿದರೆ ಅವುಗಳನ್ನು ವೀಲಿಂಗ್ ಮಾಡಲು ಬಳಸುತ್ತಾರೆ ಎಂಬುದು ಗೊತ್ತಾಗುತ್ತದೆ. ರಾತ್ರಿ 2–3 ಗಂಟೆ ಹೊತ್ತಿನಲ್ಲಿ ಮಕ್ಕಳು ಎಲ್ಲಿ ಹೋಗುತ್ತಾರೆ ಎಂದು ಅಪ್ಪ ಅಮ್ಮ ಕೇಳಬೇಕು. ಬೈಕ್‌ನಲ್ಲಿ ರಾತ್ರಿ ವೀಲಿಂಗ್ ಮಾಡುವವರನ್ನು ನಾವು ಕರೆದು ಸತ್ಕಾರ ಮಾಡುತ್ತೇವೆ ಎಂಬುದಾಗಿ ಭಾವಿಸಲೇಬೇಡಿ' ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿದ ಶಾಸಕ ಬೈರತಿ ಸುರೇಶ್, 'ಎಸಿಪಿ ಮೇಡಂ ಸಮಾಧಾನದಿಂದಲೇ ಮಾತನಾಡಿ. ಯುವಕ ಆರೋಪ ಮಾಡುತ್ತಿಲ್ಲ. ಕಷ್ಟ ಹೇಳಿಕೊಂಡಿದ್ದಾನೆ ಅಷ್ಟೇ. ನೀವು ಜೋರಾಗಿ ಮಾತನಾಡಿದರೆ ಅವರು ಹೆದರಿ ಪ್ರಶ್ನೆಗಳನ್ನೇ ಕೇಳುವುದಿಲ್ಲ' ಎಂದು ಸಮಾಧಾನ ಮಾಡಿದರು. ನಂತರ ನಗುತ್ತಾ ಮಾತನಾಡಿದ ರೀನಾ ಸುವರ್ಣ, 'ನಿಮ್ಮ ಸುರಕ್ಷತೆಗಾಗಿಯೇ ನಾವು ಇದ್ದೇವೆ. ಬೇಜಾರಾಗುವ ಸಂಗತಿಗಳು ನಮ್ಮಿಂದಲೂ ಆಗುತ್ತವೆ. ರಜೆಯಲ್ಲಿ ಮನೆಗೆ ಬೀಗ ಹಾಕಿಕೊಂಡು ಊರಿಗೆ ಹೋಗುವವರು ಸ್ಥಳೀಯ ಠಾಣೆಗೆ ಮಾಹಿತಿ ನೀಡಿ ಹೋಗಿ. ಕಳ್ಳತನ ಆಗುವುದು ತಪ್ಪುತ್ತದೆ. ಪೊಲೀಸ್ ಸ್ನೇಹಿಯಾಗಿ ಸಾರ್ವಜನಿಕರು ವರ್ತಿಸಬೇಕು, ನಾವು ಕೂಡ ಜನಸ್ನೇಹಿಯಾಗಿ ವರ್ತಿಸಬೇಕು' ಎಂದರು.

ಯಾತ್ರೆ ಹೊರಟವರು ಶುದ್ಧಹಸ್ತರಾ: ಸಿ.ಎಂ ಬೊಮ್ಮಾಯಿ ಪ್ರಶ್ನೆ

ಬೆಂಗಳೂರು: ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣವನ್ನು ಮುಂದಿಟ್ಟುಕೊಂಡು ರಾಜ್ಯ ಸರ್ಕಾರದ ವಿರುದ್ಧ ಯಾತ್ರೆ ಹೊರಟಿರುವ ಕಾಂಗ್ರೆಸ್‌ನವರು ಶುದ್ಧಹಸ್ತರಾ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಕಾಂಗ್ರೆಸ್‌ನವರ ಕಾಲದಲ್ಲಿ ಏನೆಲ್ಲಾ ನಡೆದಿದೆ? ಇವರ ಕಪಾಟುಗಳಲ್ಲಿ ಭ್ರಷ್ಟಾಚಾರದ ಎಷ್ಟು ಅಸ್ಥಿಪಂಜರಗಳಿವೆ ಎಂಬುದು ನಮಗೆ ಗೊತ್ತಿದೆ. ಈ ಪ್ರಕರಣವನ್ನು ಮುಂದಿಟ್ಟುಕೊಂಡು ಬಿಜೆಪಿ ವಿರುದ್ಧ ಅಭಿಪ್ರಾಯ ರೂಪಿಸುವ ಕಾಂಗ್ರೆಸ್ ನಾಯಕರ ಪ್ರಯತ್ನ ಯಶಸ್ವಿಯಾಗುವುದಿಲ್ಲ' ಎಂದರು.

ಸಂತೋಷ್ ಆತ್ಮಹತ್ಯೆ ಪ್ರಕರಣದಲ್ಲಿ ಅವರ ಕುಟುಂಬದವರು ನೀಡಿದ್ದ ದೂರಿನ ಆಧಾರದಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಈ ಪ್ರಕ್ರಿಯೆಯಲ್ಲಿ ಯಾವ ಲೋಪವೂ ಆಗಿಲ್ಲ. ಮರಣೋತ್ತರ ಪರೀಕ್ಷೆ ಮತ್ತು ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರ ವರದಿಗಳ ಆಧಾರದಲ್ಲಿ ಮುಂದಿನ ತನಿಖೆ ನಡೆಯಲಿದೆ. ಕಾಂಗ್ರೆಸ್‌ನವರು ವಕೀಲರು, ನ್ಯಾಯಾಧೀಶರು ಎಲ್ಲವೂ ಆಗಿ ತೀರ್ಪು ಕೊಡಲು ಹೊರಟಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈಗ ಪ್ರಾಥಮಿಕ ಹಂತದ ತನಿಖೆ ನಡೆಯುತ್ತಿದೆ. ತನಿಖೆಯ ವೇಳೆ ಲಭ್ಯವಾಗುವ ಮಾಹಿತಿ ಆಧಾರದಲ್ಲಿ ಭ್ರಷ್ಟಾಚಾರ ಕಾಯ್ದೆಯಡಿ ಹೊಸ ಸೆಕ್ಷನ್ ಸೇರಿಸಬೇಕೆ? ಉನ್ನತಮಟ್ಟದ ತನಿಖೆಗೆ ಆದೇಶಿಸಬೇಕೆ? ಎಂಬುದನ್ನು ನಿರ್ಧರಿಸಲಾಗುವುದು. ತಾವು ಯಾರಿಗೂ ಪ್ರಮಾಣಪತ್ರ ನೀಡುವ ಪ್ರಶ್ನೆಯೇ ಇಲ್ಲ. ಮೊದಲು ತನಿಖೆ ಆಗಬೇಕು. ನಂತರ ನ್ಯಾಯಾಲಯದಲ್ಲಿ ವಿಚಾರಣೆ ನಡೆಯಬೇಕು. ಆ ಬಳಿಕವೇ ತೀರ್ಮಾನ ಆಗಬೇಕು ಎಂದರು.

'ಕಮಿಷನ್ ಪಡೆದವರ ತನಿಖೆಗೆ ಆಯೋಗ ರಚಿಸಲಿ'

ಮಂಗಳೂರು: 'ಹಿಂದೆ ಯಾರೆಲ್ಲ ಕಮಿಷನ್ ಪಡೆದಿದ್ದಾರೆ ಎಂಬ ಬಗ್ಗೆ ಆಯೋಗ ರಚಿಸಿ ತನಿಖೆ ನಡೆಸಲಿ' ಎಂದು ಶಾಸಕ ಡಾ.ಜಿ.ಪರಮೇಶ್ವರ್ ತಿರುಗೇಟು ನೀಡಿದರು.

'ಕಾಂಗ್ರೆಸ್ ಅವಧಿಯಲ್ಲಿ ಕಮಿಷನ್ ಇರಲಿಲ್ಲವೇ' ಎಂಬ ಎಚ್‌.ಡಿ. ಕುಮಾರಸ್ವಾಮಿ ಹೇಳಿಕೆಗೆ ನಗರದಲ್ಲಿ ಪ್ರತಿಕ್ರಿಯಿಸಿದ ಅವರು, 'ಈ ಮೂಲಕ ಕಮಿಷನ್ ಆರೋಪವನ್ನು ಕುಮಾರಸ್ವಾಮಿ ಸಮರ್ಥನೆ ಮಾಡಿಕೊಂಡಂತಾಗಿದೆ. ಸ್ವಾತಂತ್ರ್ಯ ಬಂದ 75 ವರ್ಷಗಳಲ್ಲಿ ಹಲವು ಸರ್ಕಾರಗಳು ಆಡಳಿತ ನಡೆಸಿವೆ. ಏನೆಲ್ಲ ಆಗಿವೆ ಎಂಬ ಬಗ್ಗೆ ಆಯೋಗದ ಮೂಲಕ ತನಿಖೆ ನಡೆಯಲಿ' ಎಂದರು.

'ಸಿದ್ದರಾಮಯ್ಯ, ಎಸ್‌.ಎಂ. ಕೃಷ್ಣ, ಬಿಜೆಪಿಯವರೇ ಆದ ಯಡಿಯೂರಪ್ಪ ಇದ್ದಾಗಿನ ಅವಧಿಯ ತನಿಖೆಯನ್ನೂ ಮಾಡಿಸಿ ಯಾರು ಬೇಡ ಅಂದಿದ್ದು' ಎಂದರು.

'ಕೆ.ಜೆ.ಜಾರ್ಜ್ ಪ್ರಕರಣ ಹಾಗೂ ಈಶ್ವರಪ್ಪ ಪ್ರಕರಣ ಬೇರೆ ಬೇರೆಯಾಗಿದ್ದು, ಆರೋಪ ಬಂದ ಕೂಡಲೇ ಜಾರ್ಜ್ ರಾಜೀನಾಮೆ ನೀಡಿದ್ದರು. ಸಿಬಿಐ ತನಿಖೆ ಕೂಡ ನಡೆಯಿತು. ಸಂತೋಷ್ ಪಾಟೀಲ ಪ್ರಕರಣವೂ ತನಿಖೆಯಾಗಲಿ. ಸದ್ಯ ಪ್ರಮುಖ ಆರೋಪಿಯನ್ನು ಬಂಧಿಸಲಿ' ಎಂದು ಆಗ್ರಹಿಸಿದರು.

ಈಶ್ವರಪ್ಪಗೆ ಮಠಾಧೀಶರಿಂದ ಧೈರ್ಯ

ಶಿವಮೊಗ್ಗ: ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಕೆ.ಎಸ್. ಈಶ್ವರಪ್ಪ ಅವರ ನಿವಾಸಕ್ಕೆ ಶನಿವಾರ ಹಿಂದುಳಿದ, ಪರಿಶಿಷ್ಟ ಸಮುದಾಯದ ಮಠಾಧೀಶರ ಒಕ್ಕೂಟದ ವಿವಿಧ ಮಠಾಧೀಶರು ಭೇಟಿ ನೀಡಿ, ಧೈರ್ಯ ತುಂಬಿದರು.

ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ, ಚಿತ್ರದುರ್ಗ ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮ ಸ್ವಾಮೀಜಿ, ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಮಡಿವಾಳ ಗುರುಪೀಠದ ಮಡಿವಾಳ ಮಾಚಿದೇವ ಸ್ವಾಮೀಜಿ, ಮೇದಾರ ಗುರುಪೀಠದ ಇಮ್ಮಡಿ ಕೇತೇಶ್ವರ ಸ್ವಾಮೀಜಿ, ಹೊಸದುರ್ಗ ಕುಂಚಿಟಿಗ ಮಹಾಸಂಸ್ಥಾನದ ಶಾಂತವೀರ ಸ್ವಾಮೀಜಿ, ಭಗೀರಥ ಗುರುಪೀಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ, ಹೊಸದುರ್ಗ ಕನಕ ಗುರುಪೀಠದ ಈಶ್ವರಾನಂದಪುರಿ ಸ್ವಾಮೀಜಿ, ಶಿವಮೊಗ್ಗ ಶ್ರೀನಾರಾಯಣಗುರು ಮಹಾಸಂಸ್ಥಾನದ ರೇಣುಕಾನಂದ ಸ್ವಾಮೀಜಿ ಅವರು ಈಶ್ವರಪ್ಪ ಅವರೊಂದಿಗೆ ಚರ್ಚಿಸಿದರು. ಯಡೆಯೂರು ಕ್ಷೇತ್ರದ ರೇಣುಕಾ ಶಿವಾಚಾರ್ಯ ಸ್ವಾಮೀಜಿ ಪ್ರತ್ಯೇಕವಾಗಿ ಬಂದು ಆತ್ಮಸ್ಥೈರ್ಯ ತುಂಬಿದರು.

'ರಾಜ್ಯದ ಮಠಾಧೀಶರು, ಪಕ್ಷದ ಮುಖಂಡರು, ಕಾರ್ಯಕರ್ತರು ಎಷ್ಟೊಂದು ಪ್ರೀತಿ, ವಿಶ್ವಾಸ ತೋರಿದ್ದಾರೆ. ಈ ಪ್ರಕರಣದಲ್ಲಿ ಆರೋಪಮುಕ್ತನಾಗಿ ಹೊರಬರುವೆ. ನಿಷ್ಪಕ್ಷಪಾತ ತನಿಖೆಗೆ ಸಹಕರಿಸಲು ರಾಜೀನಾಮೆ ನೀಡಿದ್ದೇನೆ' ಎಂದು ಈಶ್ವರಪ್ಪ ಪ್ರತಿಕ್ರಿಯಿಸಿದರು.

ಈಶ್ವರಪ್ಪ ಶನಿವಾರ ಇಡೀ ದಿನ ಮನೆಯಲ್ಲೇ ಉಳಿದರು.

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿಯೇ ಪ್ರಕರಣ ದಾಖಲಿಸಲು ಆಗ್ರಹ

ಈಶ್ವರಪ್ಪ ಬಂಧನಕ್ಕೆ ಒತ್ತಾಯ: ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ರಾಮನಗರ: ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿ ಪ್ರಕರಣ ದಾಖಲಿಸಬೇಕು. ಪೊಲೀಸರು ಅವರನ್ನು ಬಂಧಿಸಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಒತ್ತಾಯಿಸಿದರು.

ಈಶ್ವರಪ್ಪ ಬಂಧನಕ್ಕೆ ಆಗ್ರಹಿಸಿ ನಗರದಲ್ಲಿ ಶನಿವಾರ ನಡೆದ ಪ್ರತಿಭಟನಾ ಮೆರವಣಿಗೆ ವೇಳೆ ಅವರು ಪತ್ರಕರ್ತರ ಜೊತೆ ಮಾತನಾಡಿದರು.

'ಶೇ 40ರಷ್ಟು ಕಮಿಷನ್ ಕೇಳಿದ್ದಕ್ಕೆ ಸಂತೋಷ್ ಪಾಟೀಲ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದೇ ದೂರಿನಲ್ಲಿ ದಾಖಲಾಗಿದೆ. ಹೀಗಾಗಿ, ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿಯೇ ಪ್ರಕರಣ ದಾಖಲಾಗಬೇಕು' ಎಂದು ಒತ್ತಾಯಿಸಿದರು.



ರಾಮನಗರದಲ್ಲಿ ಶನಿವಾರ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಪ್ರತಿಭಟನಾ ಸಭೆ ನಡೆಯಿತು

'ಮುಖ್ಯಮಂತ್ರಿ, ಗೃಹ ಸಚಿವರೇ ಈಶ್ವರಪ್ಪ ಏನು ತಪ್ಪು ಮಾಡಿಲ್ಲ ಎಂದು ಸರ್ಟಿಫಿಕೆಟ್ ಕೊಡುತ್ತಿದ್ದಾರೆ. ಹೀಗಿರುವಾಗ ನ್ಯಾಯ ಸಿಗುತ್ತದೆಯೇ' ಎಂದು ಪ್ರಶ್ನಿಸಿದ ಡಿಕೆಶಿ, ಪ್ರಕರಣದ ವಿಚಾರಣೆಗೆ ಆಯೋಗ ನೇಮಿಸಬೇಕು. ಇಲ್ಲವೇ ಸಿಬಿಐಗೆ ಪ್ರಕರಣ ವಹಿಸಬೇಕು ಎಂದು ಒತ್ತಾಯಿಸಿದರು.

'ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದಲ್ಲಿ ಡಿಕೆಶಿ ಕೈವಾಡ ಇದೆ' ಎಂಬ ರಮೇಶ್ ಜಾರಕಿಹೊಳಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಯಾರೋ ಮೆಂಟಲ್ ಕೇಸ್‌ಗೆ ನಾನು ಉತ್ತರ ಕೊಡುವುದಿಲ್ಲ' ಎಂದರು.

'ಕಾಂಗ್ರೆಸ್‌ನವರನ್ನು ಜೈಲಿಗೆ ಕಳಿಸಬೇಕು' ಎಂಬ ನಳಿನ್‌ಕುಮಾರ್ ಕಟೀಲ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿ, 'ಅಮಿತ್ ಶಾ, ಯಡಿಯೂರಪ್ಪ ಎಲ್ಲರೂ ಜೈಲಿಗೆ ಹೋಗಿದ್ದಾರೆ ಅಲ್ವಾ? ನಾನೂ ಹೋಗ್ತೀನಿ ಬಿಡಿ. ಅಲ್ಲೂ ಚೆನ್ನಾಗಿ ಊಟ ಕೊಡುತ್ತಾರೆ' ಎಂದು ಲೇವಡಿ ಮಾಡಿದರು.

'ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಿ'

ಚಿಕ್ಕಮಗಳೂರು: 'ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಯಹತ್ಯೆ ಪ್ರಕರಣದಲ್ಲಿ ಕೆ.ಎಸ್.ಈಶ್ವರಪ್ಪ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 7(ಎ) ಹಾಗೂ 13/1 ರ ಅಡಿ ಪ್ರಕರಣ ದಾಖಲಿಸಬೇಕು. ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದರು.

'ಈಶ್ವರಪ್ಪ ಅವರನ್ನು ಬಂಧಿಸದಿದ್ದರೆ ಸಾಕ್ಷ್ಯ ನಾಶ ಮಾಡುವ ಸಾಧ್ಯತೆ ಇದೆ. ತಪ್ಪು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಾಣುತ್ತಿದ್ದರೂ, ಈಶ್ವರಪ್ಪ ಅಮಾಯಕ ಎಂದು ಬಿಜೆಪಿಯ ಹಲವರು ಪ್ರತಿಪಾದಿಸುತ್ತಿದ್ದಾರೆ. ಅವರನ್ನು ಈವರೆಗೆ ಬಂಧನ ಮಾಡದಿರುವುದರ ಹಿಂದೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೈವಾಡ ಇದೆ' ಎಂದು ದೂರಿದರು.

'ಸಂತೋಷ್ ಕುಟುಂಬಕ್ಕೆ ₹ 1 ಕೋಟಿ ಪರಿಹಾರ ನೀಡಬೇಕು. ಕಾಮಗಾರಿಯ ಬಿಲ್ ಪಾವತಿಸಬೇಕು. ಅವರ ಪತ್ನಿಗೆ ಅನುಕಂಪದ ಆಧಾರದಲ್ಲಿ ಸರ್ಕಾರಿ ನೌಕರಿ ನೀಡಬೇಕು' ಎಂದು ಒತ್ತಾಯಿಸಿದರು.

'ಬಿಜೆಪಿ ಶೇ 40 ಕಮಿಷನ್ ಸರ್ಕಾರ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಹೇಳಿದ್ದಾರೆ. ಮುಂದಿನ ಚುನಾವಣೆಯಲ್ಲಿ ಜನರು ಬಿಜೆಪಿಗೆ ಪಾಠ ಕಲಿಸಬೇಕು' ಎಂದರು.

ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣ

7 ತನಿಖಾ ತಂಡಗಳ ರಚನೆ: ಎಡಿಜಿಪಿ

ಪ್ರಜಾವಾಣಿ ವಾರ್ತೆ

ಉಡುಪಿ: 'ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದ ತನಿಖೆಗೆ ಏಳು ವಿಶೇಷ ತನಿಖಾ ತಂಡಗಳನ್ನು ರಚಿಸಲಾಗಿದ್ದು, ತನಿಖಾ ತಂಡಗಳ ಮೇಲುಸ್ತುವಾರಿಯನ್ನು ನಾನೇ ವಹಿಸಿಕೊಂಡಿದ್ದೇನೆ' ಎಂದು ಎಡಿಜಿಪಿ ಪ್ರತಾಪ್ ರೆಡ್ಡಿ ತಿಳಿಸಿದರು.



ಪ್ರತಾಪ್ ರೆಡ್ಡಿ

ಪ್ರಕರಣಕ್ಕೆ ಸಂಬಂಧಿಸಿದಂತೆ ಶನಿವಾರ ನಗರದ ಎಸ್‌ಪಿ ಕಚೇರಿಯಲ್ಲಿ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, 'ಎಸ್‌ಪಿ ಎನ್.ವಿಷ್ಣುವರ್ಧನ್ ನೇತೃತ್ವದ ತಂಡಗಳು ರಾಜ್ಯದ ವಿವಿಧ ಭಾಗಗಳಿಗೆ ತೆರಳಿ ಸಮಗ್ರವಾಗಿ ತನಿಖೆ ನಡೆಸಲಿವೆ. ಮೃತ ವ್ಯಕ್ತಿಯ ಮರಣೋತ್ತರ ಪರೀಕ್ಷಾ ವರದಿ ಹಾಗೂ ಎಫ್‌ಎಸ್‌ಎಲ್ ವರದಿ ಪಡೆದು ಪರಿಶೀಲಿಸಲಾಗುವುದು. ಶೀಘ್ರ ವರದಿ ನೀಡುವಂತೆ ಮನವಿ ಮಾಡಲಾಗಿದೆ ಎಂದರು.

'ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪ್ರಾಥಮಿಕ ತನಿಖೆಯ ವೇಳೆ ಗೊತ್ತಾಗಿದೆ. ಈ ಪ್ರಕರಣದ ಸಮಗ್ರ ತನಿಖೆ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದರು.

ಹೋಂ ಸ್ಟೇನಲ್ಲಿ ಮೂರು ದಿನ

ಚಿಕ್ಕಮಗಳೂರು: ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಉಡುಪಿ ಪೊಲೀಸ್ ತನಿಖಾ ತಂಡವು ಚಿಕ್ಕಮಗಳೂರಿನ ಕೈಮರ ಸಮೀಪದ ಬಾನ್ ಆಫ್ ಬೆರ್ರಿ ಹೋಂ ಸ್ಟೇನಲ್ಲಿ ಶನಿವಾರ ಪರಿಶೀಲನೆ ನಡೆಸಿದೆ.

ಹೋಂ ಸ್ಟೇ ನೌಕರರಿಂದ ಮಾಹಿತಿ ಕಲೆ ಹಾಕಿರುವ ತಂಡ, ಸಿಸಿಟಿವಿ ದೃಶ್ಯಾವಳಿಗಳನ್ನು ಪಡೆದುಕೊಂಡಿದೆ. 'ಸಂತೋಷ್ ಎಷ್ಟು ದಿನ ತಂಗಿದ್ದರು ಮತ್ತು ಅವರ ಚಲನವಲನಗಳ ಕುರಿತು ಮಾಹಿತಿ ಪಡೆದರು. ಸಂತೋಷ್ ಜೊತೆ ತಂಗಿದ್ದ ಒಬ್ಬರನ್ನು ಪೊಲೀಸರು ಕರೆ ತಂದಿದ್ದರು' ಎಂದು ಹೋಂ ಸ್ಟೇ ನೌಕರರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಸಂತೋಷ್ ತಮ್ಮ ಗೆಳೆಯರೊಂದಿಗೆ ಏ.8, 9 ಹಾಗೂ 10 ರಂದು ಇಲ್ಲಿ ತಂಗಿದ್ದರು. 11ರಂದು ಉಡುಪಿಗೆ ತೆರಳಿದ್ದರು' ಎಂದು ತಿಳಿದು ಬಂದಿದೆ.

ಕಾಮಗಾರಿ ಸ್ಥಳ ಪರಿಶೀಲಿಸಿದ ಪೊಲೀಸ್ ತಂಡ

ಬೆಳಗಾವಿ: ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದ ತನಿಖೆಯ ಭಾಗವಾಗಿ ಉಡುಪಿ ಪೊಲೀಸರು, ಇಲ್ಲಿನ ವಿಜಯನಗರದ ಸಮರ್ಥ ಕಾಲೊನಿಯಲ್ಲಿರುವ ಮತ್ತು ತಾಲ್ಲೂಕಿನ ಬಡಸ ಕೆ.ಎಚ್. ಗ್ರಾಮದಲ್ಲಿರುವ ಅವರ ಮನೆಗೆ ಶನಿವಾರ ಭೇಟಿ ನೀಡಿ ಕುಟುಂಬದವರಿಂದ ಮಾಹಿತಿ ಪಡೆದರು.

ಸಂತೋಷ್ ಅವರ ಸೋದರ ಸಂಬಂಧಿ ಪ್ರಶಾಂತ್ ಪಾಟೀಲ ಅವರಿಂದಲೂ ಮಾಹಿತಿ ಪಡೆದರು. ಹಿಂಡಲಗಾ ವ್ಯಾಪ್ತಿಯಲ್ಲಿ ಸಂತೋಷ್ ನಡೆಸಿದ್ದಾರೆ ಎನ್ನಲಾದ ಕಾಮಗಾರಿಗಳ ಸ್ಥಳ ಪರಿಶೀಲಿಸಿ, ವಿವರ ಸಂಗ್ರಹಿಸಿದರು ಎಂದು ತಿಳಿದುಬಂದಿದೆ. ಉಡುಪಿ ಪೊಲೀಸ್ ಠಾಣೆಯ ಸಿಪಿಐ ಶರಣಗೌಡ ಮತ್ತು ನಾಲ್ವರು ಸಿಬ್ಬಂದಿ, ಹಿರೇಬಾಗೇವಾಡಿ ಪೊಲೀಸ್ ಠಾಣೆಯ ಇಬ್ಬರು ಸಿಬ್ಬಂದಿ ತಂಡದಲ್ಲಿದ್ದರು. ಸಂತೋಷ್ ಉಡುಪಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ಸಂತೋಷ್ ಆತ್ಮಹತ್ಯೆಯಲ್ಲ, ಕೊಲೆ: ಈಶ್ವರಪ್ಪ ಅನುಮಾನ

ಶಿವಮೊಗ್ಗ: 'ಗುತ್ತಿಗೆದಾರ ಸಂತೋಷ್ ಪಾಟೀಲ ಸಾವು ಆತ್ಮಹತ್ಯೆಯೋ, ಕೊಲೆಯೋ ಎಂಬ ಅನುಮಾನ ಶುರುವಾಗಿದೆ. ಈ ಕುರಿತು ಸಮಗ್ರ ತನಿಖೆ ನಡೆಸಬೇಕು' ಎಂದು ಪ್ರಕರಣದಲ್ಲಿ ಆರೋಪಿಯೂ ಆಗಿರುವ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಒತ್ತಾಯಿಸಿದರು. ನಗರದಲ್ಲಿ ಶನಿವಾರ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ಪ್ರಕರಣದಲ್ಲಿ ಯಾರೋ ಸಂತೋಷ್ ಅವರನ್ನು ದುರುಪಯೋಗಪಡಿಸಿಕೊಂಡಿರುವ ಸಾಧ್ಯತೆ ಇದೆ. ಸೂಕ್ತ ತನಿಖೆಯಿಂದ ಸತ್ಯ ಹೊರಗೆ ಬರಬೇಕಿದೆ. ಪ್ರಕರಣದ ಹಿಂದೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಇದ್ದಾರೆ ಎನ್ನುವ ಸಂಗತಿ ಇದೆ. ತನಿಖೆ ಮೂಲಕ ಸತ್ಯ ಬಹಿರಂಗವಾಗಬೇಕಿದೆ. ನಂತರ ಈ ಕುರಿತು ಮಾತನಾಡುವೆ' ಎಂದರು.

ಪಿಎಸ್‌ಐ ಪರೀಕ್ಷಾ ಅಕ್ರಮ: ಮತ್ತೆ ಆರು ಮಂದಿ ಬಂಧನ

ಕಲಬುರಗಿ: ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ನಡೆದ ಅಕ್ರಮಕ್ಕೆ ಸಂಬಂಧಿಸಿದಂತೆ ಸಿಐಡಿ ಪೊಲೀಸರು ಮತ್ತೆ ಮೂವರು ಅಭ್ಯರ್ಥಿಗಳು ಹಾಗೂ ಪರೀಕ್ಷಾ ಕೇಂದ್ರದ ಮೂವರು ಮೇಲ್ವಿಚಾರಕಿಯರನ್ನು ಶನಿವಾರ ಬಂಧಿಸಿದ್ದಾರೆ. ಇದರೊಂದಿಗೆ ಬಂಧಿತರ ಸಂಖ್ಯೆ ಏಳಕ್ಕೆ ಏರಿದೆ.

ಪರೀಕ್ಷೆಗೆ ಹಾಜರಾಗಿದ್ದ ರಾಯಚೂರಿನ ಅಭ್ಯರ್ಥಿ ಕೆ.ಪ್ರವೀಣಕುಮಾರ, ಕಲಬುರಗಿಯ ಅಭ್ಯರ್ಥಿ ಅರುಣ ಪಾಟೀಲ, ಚೇತನ ನಂದಗಾಂವ, ಪರೀಕ್ಷಾ ಮೇಲ್ವಿಚಾರಣೆಗೆ ನಿಯೋಜನೆಗೊಂಡಿದ್ದ ಕಲಬುರಗಿಯ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಶಿಕ್ಷಕಿಯರಾದ ಸುಮಾ, ಸಿದ್ದಮ್ಮ ಹಾಗೂ ಸಾವಿತ್ರಿ ಬಂಧಿತರು. ಆರೋಪಿ ಚೇತನ್ ರಾಯಚೂರಿನಲ್ಲಿ ಜೈಲ್ ವಾರ್ಡನ್ ಆಗಿದ್ದು ಪರೀಕ್ಷೆ ಬರೆದಿದ್ದರು.

ಅಭ್ಯರ್ಥಿ ವೀರೇಶ ನಿಡಗುಂದಾ ಎಂಬುವವರನ್ನು ಈ ಹಿಂದೆಯೇ ಬಂಧಿಸಲಾಗಿದೆ. ಸಿಐಡಿ ಪೊಲೀಸರು ಶನಿವಾರ ಸಂಜೆ ಅವರನ್ನು ಇಲ್ಲಿನ ಮೂರನೇ ಜೆಎಂಎಫ್‌ಸಿ ನ್ಯಾಯಾಧೀಶ ಬಸವರಾಜ ನೇಸರ್ಗಿ ಅವರ ಮುಂದೆ ಹಾಜರುಪಡಿಸಿದರು. ಬಂಧಿತರನ್ನು ವಶಕ್ಕೆ ನೀಡುವಂತೆ ಸಿಐಡಿ ಪರ ವಕೀಲರು ಮನವಿ ಮಾಡಿದರು. ಇದನ್ನು ಆಕ್ಷೇಪಿಸಿದ ಆರೋಪಿಗಳ ಪರ ವಕೀಲ, 'ಈಗಾಗಲೇ ವಿಚಾರಣೆ ಮುಗಿಸಿದ್ದಾರೆ. ಹೀಗಾಗಿ ಸಿಐಡಿ ವಶಕ್ಕೆ ನೀಡದೆ, ನ್ಯಾಯಾಂಗ ವಶಕ್ಕೆ ನೀಡಬೇಕು, ಇಲ್ಲವೇ ಜಾಮೀನು ನೀಡಬೇಕು' ಎಂದು ಮನವಿ ಮಾಡಿದರು.

ಸಂಜೆ 7ರವರೆಗೂ ವಿಚಾರಣೆ ನಡೆಸಿದ ನ್ಯಾಯಾಧೀಶರು, ಆರೋಪಿಗಳನ್ನು ಸೋಮವಾರದಿಂದ (ಏ. 18) ಮೂರು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ವಹಿಸುವಂತೆ ಆದೇಶಿಸಿದರು.

ಈ ಮೊದಲು ಬಂಧಿಸಿರುವ ವೀರೇಶ ಅವರನ್ನೂ ಶನಿವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ವಿಚಾರಣೆ ಪೂರ್ಣಗೊಂಡಿದೆ ಎಂದು ಹೇಳಿದಾಗ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು.

ಪ್ರಕರಣ ಏನು?: ಅಕ್ಟೋಬರ್‌ನಲ್ಲಿ 545 ಪಿಎಸ್‌ಐ ನೇಮಕಾತಿ ಪರೀಕ್ಷೆ ಕಲಬುರಗಿಯ ಗೋಕುಲ ನಗರದಲ್ಲಿರುವ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿಯೂ ನಡೆದಿತ್ತು.

'ಈ ಪರೀಕ್ಷಾ ಕೇಂದ್ರದಲ್ಲಿ ಹಾಜರಾಗಿದ್ದ ವೀರೇಶ, ಒಎಂಆರ್ ಶೀಟ್‌ನಲ್ಲಿ 21 ಪ್ರಶ್ನೆಗಳಿಗೆ ಮಾತ್ರ ಉತ್ತರಿಸಿದ್ದ. ಉಳಿದ ಪ್ರಶ್ನೆಗಳನ್ನು ಹಾಗೇ ಬಿಟ್ಟಿದ್ದ. ಆದರೆ, ನಂತರ ನೇಮಕಾತಿ ವಿಭಾಗದಿಂದ ಪಡೆಯಲಾದ ಪ್ರತಿಯಲ್ಲಿ ಎಲ್ಲ ಪ್ರಶ್ನೆಗಳಿಗೂ ಗುರುತು ಹಾಕಿ ಸರಿಯಾದ ಉತ್ತರ ನೀಡಿದ್ದು ಕಂಡುಬಂದಿದೆ' ಎಂದು ಸಿಐಡಿಯವರು ಚೌಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ.

'ನೀರಾವರಿ: ರಾಷ್ಟ್ರೀಯ ಪಕ್ಷಗಳ ನಿರ್ಲಕ್ಷ್ಯ'

ಪ್ರಜಾವಾಣಿ ವಾರ್ತೆ

ವಿಜಯಪುರ/ ಬೆಳಗಾವಿ: 'ರಾಜ್ಯದಲ್ಲಿ ಕೃಷ್ಣಾ, ಮಹದಾಯಿ ಸೇರಿದಂತೆ ಹಲವು ನದಿಗಳ ನೀರಿನ ಸದ್ಬಳಕೆ ಆಗದಿರಲು ರಾಷ್ಟ್ರೀಯ ಪಕ್ಷಗಳ ನಿರ್ಲಕ್ಷ್ಯ ಧೋರಣೆಯೇ ಕಾರಣ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಆರೋಪಿಸಿದರು.



ವಿಜಯಪುರ ಜಿಲ್ಲೆಯ ಆಲಮಟ್ಟಿ ಜಲಾಶಯದ ಬಳಿ ಜನತಾ ಜಲಧಾರೆ ಅಂಗವಾಗಿ ಕೃಷ್ಣಾ ನದಿ ನೀರನ್ನು ಕಳಸದಲ್ಲಿ ಸಂಗ್ರಹಿಸಿ ಮೆರವಣಿಗೆ ಮೂಲಕ ತೆಗೆದುಕೊಂಡು ಬರಲಾಯಿತು –ಪ್ರಜಾವಾಣಿ ಚಿತ್ರ

ರಾಜ್ಯದ ಸಮಗ್ರ ನೀರಾವರಿ ಯೋಜನೆಗಳ ಅನುಷ್ಠಾನಕ್ಕಾಗಿ ಪಕ್ಷ ಹಮ್ಮಿಕೊಂಡಿರುವ 'ಜನತಾ ಜಲಧಾರೆ' ಕಾರ್ಯಕ್ರಮಕ್ಕೆ ಶನಿವಾರ ವಿಜಯಪುರ ಜಿಲ್ಲೆಯ ಆಲಮಟ್ಟಿಯ ಕೃಷ್ಣಾ ನದಿ ತೀರದಲ್ಲಿ ಚಾಲನೆ ನೀಡಿ ಅವರು ಮಾತನಾಡಿದರು.

'ರಾಜ್ಯದಲ್ಲಿ ಹರಿಯುತ್ತಿರುವ ಎಲ್ಲ ನದಿ ನೀರನ್ನು ಉಪಯೋಗಿಸಿಕೊಂಡು ಸಂಪೂರ್ಣ ನೀರಾವರಿ ಕಲ್ಪಿಸುವ ಸಂಕಲ್ಪ ಜನತಾ ಜಲಧಾರೆಯ ಉದ್ದೇಶವಾಗಿದೆ. ಜೆಡಿಎಸ್ ಅಧಿಕಾರಕ್ಕೆ ಬಂದರೆ ಇದನ್ನು ಈಡೇರಿಸಲಾಗುವುದು' ಎಂದು ಹೇಳಿದರು.

'ಕಾಂಗ್ರೆಸ್ ನಡಿಗೆ ಕೃಷ್ಣೆಯ ಕಡೆಗೆ' ಪಾದಯಾತ್ರೆ ನಡೆಸಿತು. ಆದರೆ, ನೀರಾವರಿಗೆ ಆದ್ಯತೆ ನೀಡಲಿಲ್ಲ. ಆಂಧ್ರ, ತೆಲಂಗಾಣ, ತಮಿಳುನಾಡಿನಲ್ಲಿ ನೀರಾವರಿ ಸೇರಿ ಎಲ್ಲ ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದಲು ಪ್ರಾದೇಶಿಕ ಪಕ್ಷಗಳ ಆಡಳಿತ ಕಾರಣ' ಎಂದರು.

'ಜನತಾ ಜಲಧಾರೆ' ಕಾರ್ಯಕ್ರಮಕ್ಕೆ ಬೆಳಗಾವಿ ಜಿಲ್ಲೆ ಖಾನಾಪುರದ ಕಣಕುಂಬಿಯ ಬಳಿ ಮಲಪ್ರಭಾ, ಮಹದಾಯಿ ನದಿ ತೀರದಲ್ಲಿ ಸಂಸದ ಪ್ರಜ್ವಲ್ ರೇವಣ್ಣ ಚಾಲನೆ ನೀಡಿದರು.

ಜನತಾ ಜಲಧಾರೆ ಸಮಾವೇಶದಲ್ಲಿ ಬೆಳಗಾವಿ, ವಿಜಯಪುರ, ಬಾಗಲಕೋಟೆ ಸೇರಿದಂತೆ ಉತ್ತರ ಕರ್ನಾಟಕ ಭಾಗದ ವಿವಿಧ ಜಿಲ್ಲೆಗಳ ಮುಖಂಡರು, ಕಾರ್ಯಕರ್ತರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಆಲಮಟ್ಟಿ ಆಣೆಕಟ್ಟೆ ವೃತ್ತದಿಂದ ಕೃಷ್ಣಾ ನದಿ ತೀರದ ಚಂದ್ರಮ್ಮಾ ದೇವಿ ದೇವಸ್ಥಾನದವರೆಗೆ ಭವ್ಯ ಮೆರವಣಿಗೆ ನಡೆಯಿತು. ಕೃಷ್ಣಾ ನದಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಬೃಹತ್ ಕಳಸದಲ್ಲಿ ಕೃಷ್ಣೆಯ ನೀರನ್ನು ಸಂಗ್ರಹಿಸಲಾಯಿತು.

ವಿವಿಧೆಡೆ ಚಾಲನೆ: 'ಜನತಾ ಜಲಧಾರೆ' ಕಾರ್ಯಕ್ರಮಕ್ಕೆ ಕಾವೇರಿ ಉಗಮಸ್ಥಳ ಮಡಿಕೇರಿ ತಾಲ್ಲೂಕಿನ ತಲಕಾವೇರಿಯಲ್ಲಿ ಶಾಸಕ ಸಾ.ರಾ. ಮಹೇಶ್, ಹೊಳೆನರಸೀಪುರದಲ್ಲಿ ಶಾಸಕ ಎಚ್‌.ಡಿ.ರೇವಣ್ಣ, ಸಕಲೇಶಪುರ ತಾಲ್ಲೂಕು ಎತ್ತಿನಹೊಳೆಯಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಕೆ.ಕುಮಾರಸ್ವಾಮಿ, ರಾಮನಗರ ಜಿಲ್ಲೆಯ ಸಂಗಮ–ಮೇಕೆದಾಟು ಬಳಿ ಶಾಸಕಿ ಅನಿತಾ ಕುಮಾರಸ್ವಾಮಿ, ಗೌರಿಬಿದನೂರಿನಲ್ಲಿ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಬೆಳಗಾವಿಯಲ್ಲಿ ಪ್ರಜ್ವಲ್ ರೇವಣ್ಣ ಅವರು ಚಾಲನೆ ನೀಡಿದರು. ಪಕ್ಷದ ಶಾಸಕರು, ಸ್ಥಳೀಯ ಮುಖಂಡರು ಹಾಜರಿದ್ದರು.

'ಕಾಲಲ್ಲಿ ಶಕ್ತಿ ಇಲ್ಲ, ತಲೆಯಲ್ಲಿದೆ'

ಮೈಸೂರು: 'ನನ್ನ ಕಾಲಲ್ಲಿ ಶಕ್ತಿ ಇಲ್ಲದಿರಬಹುದು. ಆದರೆ, ತಲೆಯಲ್ಲಿ ಶಕ್ತಿಯಿದೆ. ರಾಜ್ಯದ ಜನರ ಹಿತಕ್ಕಾಗಿ ಜೀವನದ ಕೊನೆವರೆಗೂ ಹೋರಾಡುವೆ' ಎಂದು ಎಚ್‌.ಡಿ. ದೇವೇಗೌಡರು ಘೋಷಿಸಿದರು.

ಎಚ್‌.ಡಿ.ಕೋಟೆ ತಾಲ್ಲೂಕಿನ ಕಬಿನಿ ಜಲಾಶಯದ ಬಳಿ ಮಾತನಾಡಿದ ಅವರು, 'ದೇವೇಗೌಡ ಎಂದೂ ಅಧಿಕಾರಕ್ಕಾಗಿ ಹೋರಾಟ ನಡೆಸಿಲ್ಲ. ಅಧಿಕಾರ ಬರುತ್ತೆ, ಹೋಗುತ್ತೆ. ಜಲಧಾರೆ ಕಾರ್ಯಕ್ರಮವು ಎಚ್‌.ಡಿ.ಕುಮಾರಸ್ವಾಮಿ ಅವರ ಕನಸಿನ ಕೂಸು. ನಾನು ಅದರ ಯಶಸ್ಸಿಗೆ ಕೈಜೋಡಿಸಿದ್ದೇನೆ' ಎಂದರು.

ಇದಕ್ಕೂ ಮುನ್ನ ಮಾಧ್ಯಮದವರ ಜತೆ ಮಾತನಾಡುತ್ತಾ, ಶೇ 40 ಕಮಿಷನ್ ಕುರಿತ ಪ್ರಶ್ನೆಗೆ, 'ಇದಕ್ಕೂ ನನಗೂ ಏನು ಸಂಬಂಧ? ಕಾಂಗ್ರೆಸ್‌ನವರು ಏನೂ ಮಾಡಿಯೇ ಇಲ್ಲವೇ? ಅವರ ಸರ್ಕಾರ ಇದ್ದಾಗ ಪ್ರಧಾನ ಮಂತ್ರಿಯೇ ಶೇ 10, ಶೇ 15 ಕಮಿಷನ್ ಅಂತ ಆರೋಪಿಸಿದ್ದರು. ಆಗಲೂ ನಾನು ಮಾತನಾಡಲಿಲ್ಲ. ಇಂದಿನ ವ್ಯವಸ್ಥೆಯಲ್ಲಿ ದುಡ್ಡಿದ್ದರೆ ಮಾತ್ರ ರಾಜಕೀಯ. ಅಷ್ಟು ಕೆಟ್ಟು ಹೋಗಿದೆ' ಎಂದು ಪ್ರತಿಕ್ರಿಯಿಸಿದರು.

ಬಿಜೆಪಿ ಬಗ್ಗೆ ಮೃದು ಧೋರಣೆ ತಾಳುತ್ತೀರಾ ಎಂಬ ಪ್ರಶ್ನೆಗೆ, 'ಏಯ್.. ನಿಲ್ಸಿ ಈ ಮಾತನ್ನ. ನಾನು ಶ್ರೇಷ್ಠ ಕಾರ್ಯಕ್ರಮಕ್ಕೆ ಚಾಲನೆ ನೀಡಲು ಬಂದಿದ್ದೇನೆ. ಇಲ್ಲಿ ಕತೆ ಹೇಳುತ್ತಾ ಕೂರಲು ಆಗುವುದಿಲ್ಲ' ಎಂದರು.

'ಹೋರಾಟಕ್ಕೆ ಸಿಗದ ಬೆಂಬಲ'

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): 'ಕುಡಿಯುವ ನೀರಿಗಾಗಿ ಸಂಸತ್‌ನಲ್ಲಿ ನನ್ನದು ಏಕಾಂಗಿ ಹೋರಾಟವಾಗಿತ್ತು. ಕಾಂಗ್ರೆಸ್, ಬಿಜೆಪಿ ಸದಸ್ಯರಾರೂ ಬೆಂಬಲ ನೀಡಲಿಲ್ಲ ಎಂಬ ನೋವು ಈಗಲೂ ಕಾಡುತ್ತಿದೆ' ಎಂದು ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಹೇಳಿದರು.

ಕೆಆರ್‌ಎಸ್‌ನಲ್ಲಿ ಶನಿವಾರ 'ಜನತಾ ಜಲಧಾರೆ ಯಾತ್ರೆ'ಗೆ ಚಾಲನೆ ನೀಡಿದ ಅವರು, ಬಿಜೆಪಿ ಸರ್ಕಾರವಿದ್ದಾಗ ಹೋರಾಟಕ್ಕೆ ಕೈಜೋಡಿಸಲು ಅನಂತಕುಮಾರ್ ಅವರಿಗೆ ಕೇಳಿದ್ದೆ. ಕಾಂಗ್ರೆಸ್ ಸರ್ಕಾರದಲ್ಲಿ ಮಲ್ಲಿಕಾರ್ಜುನ ಖರ್ಗೆ, ಎಸ್‌.ಎಂ.ಕೃಷ್ಣ, ಕೆ.ಎಚ್‌.ಮುನಿಯಪ್ಪ, ವೀರಪ್ಪ ಮೊಯಿಲಿ ಸಚಿವರಾಗಿದ್ದರು. ಅವರೂ ಹೋರಾಟಕ್ಕೆ ಬೆಂಬಲ ಕೊಡಲಿಲ್ಲ. ಆದರೂ ನಾನೊಬ್ಬನೇ ತಮಿಳುನಾಡಿನ 47 ಸಂಸದರ ಸದ್ದಡಗಿಸಿದೆ' ಎಂದರು.

'ಅಂತರರಾಜ್ಯ ನೀರಿನ ಪ್ರಕರಣಕ್ಕೆ ನ್ಯಾಯಾಧೀಕರಣ ರಚನೆ ನಂತರ ಮಧ್ಯಂತರ ತೀರ್ಪು ನೀಡಿದ ಉದಾಹರಣೆಗಳಿಲ್ಲ. ಆದರೆ, ತಮಿಳುನಾಡು ಸಿ.ಎಂ ಆಗಿದ್ದ ಜಯಲಲಿತಾ ಒತ್ತಡಕ್ಕೆ ಮಣಿದು ತೀರ್ಪು ಕೊಡಿಸಲಾಯಿತು. ರಾಜ್ಯಕ್ಕೆ ನೆರವಿಗೆ ಆಗಿನ ಪ್ರಧಾನಿ ಪಿ.ವಿ.ನರಸಿಂಹರಾವ್ ಕೂಡಾ ಬರಲಿಲ್ಲ' ಎಂದರು. 'ಮೇಕೆದಾಟು ಯೋಜನೆಗೆ ನಾನು ಪ್ರಧಾನಿಯಾಗಿದ್ದಾಗಲೇ ₹ 650 ಕೋಟಿ ಅಂದಾಜು ಪಟ್ಟಿ ಸಿದ್ಧಪಡಿಸಿದ್ದೆ. ಕುಮಾರಸ್ವಾಮಿ ಸಿ.ಎಂ ಆಗಿದ್ದಾಗ ಈ ಯೋಜನೆಗೆ ಡಿಪಿಆರ್ ಆಗಿದೆ. ಕಾಂಗ್ರೆಸ್ ಮುಖಂಡರು ಪಾದಯಾತ್ರೆ ನಾಟಕ ಮಾಡಿದ್ದಾರೆ. ಪಕ್ಷ ಚುನಾವಣೆ ದೃಷ್ಟಿಯಿಂದ 'ಜನತಾ ಜಲಧಾರೆ' ಮಾಡುತ್ತಿಲ್ಲ' ಎಂದು ಹೇಳಿದರು.

'ಜನತಾ ಜಲಧಾರೆ'ಗೆ ಜೆಡಿಎಸ್ ಚಾಲನೆ

ಒಂದನೇ ಪುಟದಿಂದ

ಮೈಸೂರಿನಲ್ಲಿ ಮಾತನಾಡಿದ ಎಚ್‌.ಡಿ.ದೇವೇಗೌಡ ಅವರು, 'ಕುಡಿಯುವ ನೀರಿಗಾಗಿ ಸಂಸತ್‌ನಲ್ಲಿ ನನ್ನದು ಏಕಾಂಗಿ ಹೋರಾಟ ಆಗಿತ್ತು. ರಾಜ್ಯದ ಕಾಂಗ್ರೆಸ್, ಬಿಜೆಪಿ ಸಂಸದರು ನನ್ನ ಹೋರಾಟಕ್ಕೆ ಬೆಂಬಲ ನೀಡಲಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಆಲಮಟ್ಟಿಯಲ್ಲಿ ಎಚ್‌.ಡಿ.ಕುಮಾರಸ್ವಾಮಿ ಅವರು, 'ಜೆಡಿಎಸ್ ಅಧಿಕಾರಕ್ಕೆ ಬಂದರೆ ನದಿ ನೀರಿನ ಸದ್ಬಳಕೆ ಮಾಡಲಿದೆ. ನೀರಾವರಿಗಾಗಿಯೇ ₹ 3 ಲಕ್ಷ ಕೋಟಿ ಮೀಸಲಿರಿಸಲಾಗುವುದು' ಎಂದು ಹೇಳಿದರು.

ರಾಜ್ಯದ 15 ಕಡೆ ಜಲಧಾರೆಯ 'ಗಂಗಾರಥ'ಗಳಿಗೆ ಚಾಲನೆ ನೀಡಲಾಯಿತು. 94 ಕಡೆಗಳಲ್ಲಿ ನದಿ ನೀರು ಸಂಗ್ರಹಿಸಿ, 180 ವಿಧಾನಸಭಾ ಕ್ಷೇತ್ರಗಳ ಮೂಲಕ ಈ 'ಗಂಗಾರಥ'ಗಳು ಹಾದುಹೋಗಲಿವೆ. ಮೇ 8ರಂದು ರಾಜಧಾನಿ ಬೆಂಗಳೂರು ತಲುಪಲಿವೆ.

ವಿವಾಹ ನೋಂದಣಿ ಅಧಿಕಾರ ಪಿಡಿಒಗಳಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ವಿವಾಹ ನೋಂದಣಿ ಅಧಿಕಾರವನ್ನು ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳಿಗೆ (ಪಿಡಿಒ) ವಹಿಸಿ ಸರ್ಕಾರ ಆದೇಶ ಹೊರಡಿಸಿದೆ.

ಇಲ್ಲಿಯವರೆಗೆ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿರುವ ಉಪನೋಂದಣಾಧಿಕಾರಿ (ಸಬ್ ರಿಜಿಸ್ಟ್ರಾರ್) ಕಚೇರಿಗಳಲ್ಲಿ ಮಾತ್ರ ವಿವಾಹ ನೋಂದಣಿ ಮಾಡಬೇಕಾಗಿತ್ತು. ವಿವಾಹ ನೋಂದಣಿ ಮಾಡಿಸಿಕೊಳ್ಳಲು ತಾಲ್ಲೂಕು ಕೇಂದ್ರಗಳಿಗೆ ಬರಬೇಕಿತ್ತು. ಸರ್ಕಾರದ ಈ ಹೊಸ ತೀರ್ಮಾನದಿಂದಾಗಿ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನಗಳಲ್ಲೇ ವಿವಾಹ ನೋಂದಣಿ ಮಾಡಿಕೊಳ್ಳುವ ಅವಕಾಶ ಸಿಗಲಿದೆ. ಇದರಿಂದ ತಾಲ್ಲೂಕು ಕೇಂದ್ರಕ್ಕೆ ಓಡಾಡುವ ತಾಪತ್ರಯವೂ ತಪ್ಪಲಿದೆ.

ಈ ಸಂಬಂಧ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಶನಿವಾರ ಆದೇಶ ಹೊರಡಿಸಿದೆ. ಜನನ–ಮರಣದ ನೋಂದಣಿ ಅಧಿಕಾರವನ್ನು ಪಿಡಿಒಗಳಿಗೆ ವಹಿಸಿ ಈ ಹಿಂದೆ ಸರ್ಕಾರ ಆದೇಶ ಹೊರಡಿಸಿತ್ತು.

ಪ್ರಶಾಂತ್ ಕಾಂಗ್ರೆಸ್‌ಗೆ?


ಪ್ರಶಾಂತ್ ಕಿಶೋರ್

ನವದೆಹಲಿ (ಪಿಟಿಐ): ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ ಅವರು ಕಾಂಗ್ರೆಸ್ ಪಕ್ಷ ಸೇರುವ ಇಚ್ಛೆ ಹೊಂದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಪ್ರಶಾಂತ್ ಅವರು ಪಕ್ಷಕ್ಕೆ ಸೇರುವ ಕುರಿತು ಒಂದು ವಾರದಲ್ಲಿ ನಿರ್ಧಾರ ಆಗಲಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಶನಿವಾರ ತಿಳಿಸಿದ್ದಾರೆ.

ಪ್ರಶಾಂತ್ ಅವರು ಕಾಂಗ್ರೆಸ್ ಸೇರಲಿದ್ದಾರೆ ಎಂಬ ದಟ್ಟ ವದಂತಿ ಈ ಹಿಂದೆಯೂ ಹರಡಿತ್ತು. ಐದು ರಾಜ್ಯಗಳ ವಿಧಾನಸಭೆಗಳಿಗೆ ಇತ್ತೀಚೆಗೆ ನಡೆದ ಚುನಾವಣೆಗೂ ಮುನ್ನ ಅವರು ಕಾಂಗ್ರೆಸ್ ಸೇರಲಿದ್ದಾರೆ ಎಂದೂ ಹೇಳಲಾಗಿತ್ತು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಪ್ರಶಾಂತ್ ಅವರು ಹಲವು ಬಾರಿ ಭೇಟಿ ಕೂಡ ಆಗಿದ್ದರು. ಆದರೆ, ಪ್ರಶಾಂತ್ ಅವರ ಕಾಂಗ್ರೆಸ್ ಸೇರ್ಪಡೆ ಆಗ ಕಾರ್ಯರೂಪಕ್ಕೆ ಬರಲಿಲ್ಲ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ನಾಯಕರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ, ಕೆ.ಸಿ. ವೇಣುಗೋಪಾಲ್, ಮಲ್ಲಿಕಾರ್ಜುನ ಖರ್ಗೆ ಮುಂತಾದವರ ಸಮ್ಮುಖದಲ್ಲಿ ಶನಿವಾರ ನಾಲ್ಕು ತಾಸು ಸಭೆ ನಡೆದಿದೆ. ಈ ಸಭೆಯು ಸೋನಿಯಾ ನಿವಾಸದಲ್ಲಿ ನಡೆಯಿತು.

ಯಾವುದೇ ನಿರೀಕ್ಷೆ ಇಲ್ಲದೆ ಕಾಂಗ್ರೆಸ್ ಸೇರಲು ಸಿದ್ಧ ಎಂದು ಪ್ರಶಾಂತ್ ಅವರು ಸಭೆಯಲ್ಲಿ ಹೇಳಿದರು ಎನ್ನಲಾಗಿದೆ. ತಮಗೆ ಪ್ರತಿಫಲವಾಗಿ ಏನೂ ಬೇಕಾಗಿಲ್ಲ. ಆದರೆ, ಪಕ್ಷವನ್ನು ತಳಮಟ್ಟದಲ್ಲಿ ಗಟ್ಟಿಗೊಳಿಸಲು ತಮ್ಮ ಯೋಜನೆಯನ್ನು ಅನುಷ್ಠಾನಗೊಳಿಸಬೇಕು ಎಂದು ಅವರು ಹೇಳಿದ್ದಾರೆ ಎಂಬುದಾಗಿ ವರದಿಯಾಗಿದೆ.

ಪ್ರಶಾಂತ್ ಅವರು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ಜೆಡಿಯುನಲ್ಲಿ ಈ ಹಿಂದೆ ಇದ್ದರು. ಆದರೆ, ಪೌರತ್ವ ತಿದ್ದುಪಡಿ ಕಾಯ್ದೆಯ ವಿರುದ್ಧದ ನಿಲುವಿನ ಕಾರಣಕ್ಕೆ ಅವರನ್ನು ಜೆಡಿಯುನಿಂದ 2020ರ ಜನವರಿಯಲ್ಲಿ ಉಚ್ಚಾಟಿಸಲಾಗಿತ್ತು.

ವಿಧಾನಸಭಾ ಚುನಾವಣೆ ಕಾರ್ಯತಂತ್ರ ರೂಪಿಸಲು ತೃಣಮೂಲ ಕಾಂಗ್ರೆಸ್, ಡಿಎಂಕೆ ಮತ್ತು ಆಮ್ ಆದ್ಮಿ ಪಕ್ಷವು ಪ್ರಶಾಂತ್ ಅವರ ನೆರವನ್ನು ಇತ್ತೀಚೆಗೆ ಪಡೆದಿದ್ದವು.

ಇನ್ನೊಂದು ಸುದ್ದಿ 8

ವಿಜಯನಗರದಲ್ಲಿ ಬಿಜೆಪಿ ವಿಜಯ ಸಂಕಲ್ಪ

‘ಕಾಂಗ್ರೆಸ್ ಭ್ರಷ್ಟಾಚಾರದ ಗಂಗೋತ್ರಿ’

ಈಶ್ವರಪ್ಪ ಗೈರು, ಬಿಜೆಪಿ ಟೋಪಿ ಧರಿಸದ ಯಡಿಯೂರಪ್ಪ

ಕಾರ್ಯಕಾರಿಣಿಗೆ ಶಾಸಕ ಕೆ.ಎಸ್. ಈಶ್ವರಪ್ಪ ಗೈರಾಗಿದ್ದರು. ಕಾರ್ಯಕ್ರಮಕ್ಕೂ ಮುನ್ನ ಪಕ್ಷದ ಧ್ವಜಾರೋಹಣದಲ್ಲಿ ಕಾರ್ಯಕರ್ತರೊಬ್ಬರು ಶಾಸಕ ಬಿ.ಎಸ್. ಯಡಿಯೂರಪ್ಪನವರಿಗೆ ಬಿಜೆಪಿಯ ಟೋಪಿ ಹಾಕಲು ಮುಂದಾದರು. ಆದರೆ, ಅವರು ಅದನ್ನು ನಿರಾಕರಿಸಿದರು. ಉಳಿದ ಎಲ್ಲ ಮುಖಂಡರು ಟೋಪಿ ಧರಿಸಿದ್ದರು.

ಬೆಳಿಗ್ಗೆಯಿಂದ ಎಲ್ಲೆಡೆ ಓಡಾಡಿಕೊಂಡಿದ್ದ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರು ಎಲ್ಲ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಂಡರು. ಆದರೆ, ಸಭಾ ಕಾರ್ಯಕ್ರಮದ ವೇದಿಕೆಗೆ ಬರಲಿಲ್ಲ. ನಿರೂಪಕರು ಅವರನ್ನು ಕರೆದರೂ ಕೂಡ ಬರದೇ ಕಾರ್ಯಕಾರಿಣಿ ಸದಸ್ಯರೊಂದಿಗೆ ಕುಳಿತರು.

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ‘ಕಾಂಗ್ರೆಸ್ ಭ್ರಷ್ಟಾಚಾರದ ಗಂಗೋತ್ರಿ. ದೇಶದಲ್ಲಿ ಮೊದಲ ಭ್ರಷ್ಟಾಚಾರ ಪ್ರಕರಣವಾಗಿದ್ದು ಕಾಂಗ್ರೆಸ್ ಅವಧಿಯಲ್ಲಿ. ಇತ್ತೀಚಿನ ಪಂಚರಾಜ್ಯಗಳ ಚುನಾವಣೆಯಲ್ಲಿ ಸೋತ ನಂತರ ಇನ್ನಷ್ಟು ದಿಕ್ಕೆಟ್ಟಿದೆ. ಅವರ ಕಾಲದ ಹಗರಣಗಳು ಈಗಲೂ ಜೀವಂತವಾಗಿವೆ. ಹಾಸಿಗೆ, ದಿಂಬು ಕೂಡ ಬಿಟ್ಟಿಲ್ಲ. ಎಲ್ಲ ಇಲಾಖೆಗಳಲ್ಲಿ ಹಗರಣ ಮಾಡಿದ್ದಾರೆ. ಎಲ್ಲ ಪ್ರಕರಣಗಳಲ್ಲಿ ಸತ್ಯ ಹೊರಬರುತ್ತದೆ. ಅವರ ಮುಖವಾಡ ಕಳಚಿ ಬೀಳುತ್ತದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಜಯನಗರದಲ್ಲಿ ಶನಿವಾರ ಆರಂಭವಾದ ಬಿಜೆಪಿ ರಾಜ್ಯ ಕಾರ್ಯಕಾರಿಣಿಯಲ್ಲಿ ಮಾತನಾಡಿದ ಅವರು, ‘ವಿಜಯನಗರದ ನೆಲ ಬಹಳ ಗಟ್ಟಿ. ಇಲ್ಲಿ ಏನೇ ಸಂಕಲ್ಪ ಮಾಡಿದರೂ ಅದು ಈಡೇರುತ್ತದೆ. ವಿಜಯದ ಸಂಕಲ್ಪ ಕೈಗೊಂಡು 2023ರ ಚುನಾವಣೆಯಲ್ಲಿ ಪಕ್ಷದ ಎಲ್ಲ ಮುಖಂಡರು ಒಗ್ಗಟ್ಟಿನಿಂದ ಜನರ ಬಳಿ ಹೋಗುತ್ತೇವೆ. ನಮ್ಮದು ಸಕಾರಾತ್ಮಕ ರಾಜಕಾರಣ. ಜನರ ವಿಶ್ವಾಸ ಗಳಿಸಿ ಪುನಃ ಅಧಿಕಾರಕ್ಕೆ ಬರುತ್ತೇವೆ’ ಎಂದು ಭರವಸೆ ವ್ಯಕ್ತಪಡಿಸಿದರು.

‘ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣವನ್ನು ಕಾಂಗ್ರೆಸ್ ದೊಡ್ಡದಾಗಿ ಬಿಂಬಿಸುತ್ತಿದೆ. ಆದರೆ, ಅವರ ಕಾಲದಲ್ಲಿ ಡಿವೈಎಸ್ಪಿ ಗಣಪತಿ ಅವರು ವಿಡಿಯೊ ಮಾಡಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಕನಿಷ್ಠ ಎಫ್‌ಐಆರ್ ಕೂಡ ದಾಖಲಿಸಿರಲಿಲ್ಲ. ನಮ್ಮ ಸರ್ಕಾರ, ಸಂತೋಷ್ ಸಾವಿನ ನಂತರ ತಕ್ಷಣವೇ ಎಫ್‌ಐಆರ್ ದಾಖಲಿಸಿತ್ತು’ ಎಂದರು.

ಕಾರ್ಯಕಾರಿಣಿಯಲ್ಲಿ ಮುಖಂಡರು ಒಗ್ಗಟ್ಟಿನ ಮಂತ್ರ ಜಪಿಸಿದರು. ಮುಖ್ಯಮಂತ್ರಿ ಆದಿಯಾಗಿ ಹಲವು ಮುಖಂಡರು ತಮ್ಮ ಭಾಷಣದ ಹೆಚ್ಚಿನ ಸಮಯವನ್ನು ಕಾಂಗ್ರೆಸ್ ವಿರುದ್ಧ ವಾಗ್ದಾಳಿಗೆ ಮೀಸಲಿಟ್ಟರು. ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಜಯಭೇರಿ ಗಳಿಸುವ ವಿಜಯದ ಸಂಕಲ್ಪವನ್ನೂ ಅವರು ಮಾಡಿದರು.

ಪಕ್ಷದ ರಾಜ್ಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮಾತನಾಡಿ, ‘ಬಿಜೆಪಿ ವಿರುದ್ಧ ಕಾಂಗ್ರೆಸ್ ಭ್ರಷ್ಟಾಚಾರದ ಆರೋಪ ಮಾಡುತ್ತಿದೆ. ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ನಡೆದ ಅರ್ಕಾವತಿ ಹಗರಣದ ತನಿಖೆ ನಡೆಸಿದರೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರು ಜೈಲಿಗೆ ಹೋಗುತ್ತಾರೆ. ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷರು ಸೇರಿದಂತೆ ಎಲ್ಲರೂ ಜಾಮೀನಿನ ಮೇಲೆ ಹೊರಗೆ ಇದ್ದಾರೆ. ಅವರಿಗೆ ಬಿಜೆಪಿಯನ್ನು ಟೀಕಿಸುವ ನೈತಿಕ ಹಕ್ಕಿಲ್ಲ’ ಎಂದರು.

ಮುಜರಾಯಿ ಖಾತೆ ಸಚಿವೆ ಶಶಿಕಲಾ ಜೊಲ್ಲೆ, ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್, ಸಂಸದ ಡಿ.ವಿ. ಸದಾನಂದಗೌಡ, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಪಕ್ಷದ ಸಹ ಕಾರ್ಯದರ್ಶಿ ಡಿ.ಕೆ.ಅರುಣಾ, ಶಾಸಕರಾದ ಬಿ.ಎಸ್. ಯಡಿಯೂರಪ್ಪ, ಜಗದೀಶ ಶೆಟ್ಟರ್, ಪಕ್ಷದ ಜಿಲ್ಲಾ ಅಧ್ಯಕ್ಷ ಚನ್ನಬಸವನಗೌಡ ಪಾಟೀಲ ಇದ್ದರು.

ಉಪಚುನಾವಣೆ: ಟಿಎಂಸಿ, ಕಾಂಗ್ರೆಸ್, ಆರ್‌ಜೆಡಿಗೆ ಗೆಲುವು

ಕೋಲ್ಕತ್ತ/ಕೊಲ್ಹಾಪುರ (ಪಿಟಿಐ): ಲೋಕಸಭೆಯ ಒಂದು ಮತ್ತು ನಾಲ್ಕು ರಾಜ್ಯಗಳ ವಿಧಾನಸಭೆಯ ತಲಾ ಒಂದೊಂದು ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯ ಫಲಿತಾಂಶ ಶನಿವಾರ ಪ್ರಕಟವಾಗಿದೆ. ಪಶ್ಚಿಮ ಬಂಗಾಳದ ಅಸನ್‌ಸೋಲ್ ಲೋಕಸಭಾ ಕ್ಷೇತ್ರದಲ್ಲಿ ನಟ ಶತ್ರುಘ್ನ ಸಿನ್ಹಾ ತೃಣಮೂಲ ಕಾಂಗ್ರೆಸ್‌ನಿಂದ (ಟಿಎಂಸಿ) ಗೆದ್ದಿದ್ದಾರೆ.

ಪಶ್ಚಿಮ ಬಂಗಾಳದ ಬಾಲಿಗಂಜ್ ವಿಧಾನಸಭಾ ಕ್ಷೇತ್ರದಿಂದ ಟಿಎಂಸಿಯ ಬಾಬುಲ್ ಸುಪ್ರಿಯೊ ಗೆದ್ದಿದ್ದಾರೆ.

ಬಿಹಾರದ ಬೊಚಹಾಂ ವಿಧಾನಸಭಾ ಕ್ಷೇತ್ರದಲ್ಲಿ ಆರ್‌ಜೆಡಿಯ ಅಮರ್ ಪಾಸ್ವಾನ್, ಮಹಾರಾಷ್ಟ್ರದ ಕೊಲ್ಹಾಪುರ ವಿಧಾನಸಭಾ ಕ್ಷೇತ್ರದಲ್ಲಿ ಮಹಾವಿಕಾಸ ಆಘಾಡಿ ಅಭ್ಯರ್ಥಿ ಕಾಂಗ್ರೆಸ್‌ನ ಜಯಶ್ರೀ ಜಾಧವ್ ಗೆಲುವು ಪಡೆದಿದ್ದಾರೆ. ಛತ್ತೀಸಗಡದ ಖೈರಗಡ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಯಶೋದಾ ವರ್ಮಾ ಗೆದ್ದಿದ್ದಾರೆ.

ಏಪ್ರಿಲ್ 12ರಂದು ಈ ಕ್ಷೇತ್ರಗಳಲ್ಲಿ ಮತದಾನ ನಡೆದಿತ್ತು.

ಇನ್ನೊಂದು ಸುದ್ದಿ 8

ಪ್ರಯಾಣಿಕರ ಸೋಗಿನಲ್ಲಿ ಕ್ಯಾಬ್ ಚಾಲಕನ ಸುಲಿಗೆ

ಬೆಂಗಳೂರು: ಪ್ರಯಾಣಿಕರ ಸೋಗಿನಲ್ಲಿ ಕ್ಯಾಬ್ ಕರೆಸಿಕೊಂಡು, ಚಾಲಕನನ್ನು ಸುಲಿಗೆ ಮಾಡಿದ್ದ ಆರೋಪದಡಿ ನಾಲ್ವರನ್ನು ಸಂಪಿಗೆಹಳ್ಳಿ ಪೊಲೀಸರು ಬಂಧಿಸಿದ್ದಾರೆ.

‘ನಂದಿನಿ ಲೇಔಟ್ ಲಕ್ಷ್ಮಿದೇವಿನಗರ ನಿವಾಸಿ ಹೃತಿಕ್ ಗೌಡ (20), ಸಂಪಿಗೆಹಳ್ಳಿ ವೆಂಕಟೇಶ್ವರನಗರದ ನಿತಿನ್‌ಗೌಡ (21), ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಇಜ್ಜಲಘಟ್ಟದ ಇ.ಕೆ. ಸುಮಂತ್ (20) ಹಾಗೂ ಕಲ್ಲನಾಥಪುರದ ಎಸ್. ದರ್ಶನ್ ಬಂಧಿತರು. ಇವರಿಂದ ಮಾರುತಿ ಸ್ವಿಫ್ಟ್ ಕಾರು ಹಾಗೂ ಬಜಾಜ್ ಪಲ್ಸರ್ ಬೈಕ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸಂಪಿಗೆಹಳ್ಳಿಯ ಶಿವರಾಮ ಕಾರಂತ ನಗರ ಕ್ಲಬ್ ಬಳಿ ಏಪ್ರಿಲ್ 1ರಂದು ಆರೋಪಿಗಳು ಬಂದಿದ್ದರು. ಉಬರ್ ಆ್ಯಪ್‌ನಲ್ಲಿ ಕ್ಯಾಬ್ ಕಾಯ್ದಿರಿಸಿದ್ದರು. ಸ್ಥಳಕ್ಕೆ ಬಂದ ಕ್ಯಾಬ್ ಚಾಲಕನಿಗೆ ಚಾಕು ತೋರಿಸಿ ಬೆದರಿಸಿದ್ದ ಆರೋಪಿಗಳು, ಹಣ ಹಾಗೂ ಮೊಬೈಲ್ ಸುಲಿಗೆ ಮಾಡಿದ್ದರು.’

‘ಚಾಲಕನನ್ನು ಕ್ಯಾಬ್‌ನಿಂದ ಇಳಿಸಿದ್ದ ಆರೋಪಿಗಳು, ರಸ್ತೆಗೆ ತಳ್ಳಿದ್ದರು. ನಂತರ, ಕ್ಯಾಬ್ ಸಮೇತ ಸ್ಥಳದಿಂದ ಪರಾರಿಯಾಗಿದ್ದರು. ಚಾಲಕ ನೀಡಿದ್ದ ದೂರು ಆಧರಿಸಿ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ದುಶ್ಚಟಗಳಿಗೆ ಹಣ ಹೊಂದಿಸಲು ಆರೋಪಿಗಳು ಕೃತ್ಯ ಎಸಗಿರುವುದು ಗೊತ್ತಾಗಿದೆ’ ಎಂದೂ ಪೊಲೀಸರು ತಿಳಿಸಿದರು.

ಠಾಣೆಯಲ್ಲಿ ತಲೆ ಜಜ್ಜಿಕೊಂಡ ಆರೋಪಿ

ಬೆಂಗಳೂರು: ಪ್ರಕರಣವೊಂದರ ಆರೋಪಿ ಕೆ.ಟಿ. ಸಂತೋಷ್ ಕುಮಾರ್ ಎಂಬುವರು ಪೊಲೀಸರನ್ನು ಬೆದರಿಸಿ ಠಾಣೆ ಸೆಲ್‌ನ ಕಬ್ಬಿಣದ ಸರಳುಗಳಿಗೆ ತಲೆ ಜಜ್ಜಿಕೊಂಡು ರಂಪಾಟ ಮಾಡಿದ್ದು, ಗಾಯಗೊಂಡಿರುವ ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

‘ಏಪ್ರಿಲ್ 14ರಂದು ಬೆಳಿಗ್ಗೆ ನಡೆದಿರುವ ಘಟನೆ ಸಂಬಂಧ ಹೆಡ್ ಕಾನ್‌ಸ್ಟೆಬಲ್ ರವಿ ಜಾಧವ್ ದೂರು ನೀಡಿದ್ದಾರೆ. ಜೀವ ಬೆದರಿಕೆ (ಐಪಿಸಿ 506) ಹಾಗೂ ಕರ್ತವ್ಯಕ್ಕೆ ಅಡ್ಡಿ (ಐಪಿಸಿ 353) ಆರೋಪದಡಿ ಸಂತೋಷ್‌ಕುಮಾರ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪ್ರಕರಣವೊಂದರ ಆರೋಪಿ ಸಂತೋಷ್‌ಕುಮಾರ್‌ನನ್ನು ಸಿಬ್ಬಂದಿ ಠಾಣೆಗೆ ಕರೆತಂದಿದ್ದರು. ಸಿಬ್ಬಂದಿ ವಿರುದ್ಧವೇ ಹರಿಹಾಯ್ದಿದ್ದ ಆರೋಪಿ, ಏರುಧ್ವನಿಯಲ್ಲಿ ಮಾತನಾಡಿದ್ದ. ಸಿಬ್ಬಂದಿಯನ್ನು ತಳ್ಳಾಡಿ ತನ್ನ ಬಟ್ಟೆಗಳನ್ನು ಬಿಚ್ಚಿ ಅರೆನಗ್ನವಾಗಿದ್ದ. ಎಲ್ಲ ಪೊಲೀಸರ ಬಟ್ಟೆ ಬಿಚ್ಚಿಸಿ, ಅಮಾನತು ಮಾಡಿಸುವುದಾಗಿ ಕೂಗಾಡಿದ್ದ. ಜೀವ ಸಹಿತ ಬಿಡುವುದಿಲ್ಲವೆಂದು ಬೆದರಿಕೆಯೊಡ್ಡಿದ್ದ’

‘ಸೆಲ್‌ನ ಕಬ್ಬಿಣದ ಸರಳುಗಳಿಗೆ ತಲೆ ಜಜ್ಜಿಕೊಂಡಿದ್ದ. ಆತನ ತಲೆಯಿಂದ ರಕ್ತ ಸೋರಲಾರಂಭಿಸಿತ್ತು. ಸಿಬ್ಬಂದಿ, ಆತನನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ. ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಕ್ಕಾಗಿ ಸಂತೋಷ್ ಕುಮಾರ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದೂ ಮೂಲಗಳು ತಿಳಿಸಿವೆ.

ಬಿಬಿಎಂಪಿ: ಯಲಹಂಕ ವಲಯ ಕಚೇರಿಯಲ್ಲಿ ಬೆಂಕಿ ಅವಘಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಯಲಹಂಕ ವಲಯದ ಮುಖ್ಯ ಎಂಜಿನಿಯರ್ ಕಚೇರಿಯಲ್ಲಿ ಶನಿವಾರ ಬೆಂಕಿ ಅವಘಡ ಸಂಭವಿಸಿದ್ದು, ಪೀಠೋಪಕರಣ ಹಾಗೂ ಕೆಲ ದಾಖಲೆಗಳು ಸುಟ್ಟಿವೆ.

‘ಬ್ಯಾಟರಾಯನಪುರದ ಅಮೃತಹಳ್ಳಿ ಮುಖ್ಯರಸ್ತೆಯಲ್ಲಿರುವ ಬಹುಮಹಡಿ ಕಟ್ಟಡದ ಎರಡನೇ ಮಹಡಿಯಲ್ಲಿ ಎಂಜಿನಿಯರ್ ಕಚೇರಿ ಇದೆ. ಅದೇ ಕಚೇರಿಯ ಎ.ಸಿ.ಯಲ್ಲಿ (ಹವಾನಿಯಂತ್ರಿತ) ತಾಂತ್ರಿಕ ದೋಷ ಕಾಣಿಸಿಕೊಂಡು, ಮಧ್ಯಾಹ್ನ 1.15 ಗಂಟೆ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿತ್ತು ಎನ್ನಲಾಗಿದೆ. ಕ್ರಮೇಣ ಕೆನ್ನಾಲಗೆ ಹೆಚ್ಚಾಗಿ ಇಡೀ ಕೊಠಡಿಯಲ್ಲಿ ಬೆಂಕಿ ಧಗ ಧಗ ಉರಿಯಲಾರಂಭಿಸಿತ್ತು’ ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ಹೇಳಿದರು.

‘ಎಂಜಿನಿಯರ್ ಕಚೇರಿ ಸಮೀಪದಲ್ಲೇ ದಾಖಲೆಗಳ ಸಂಗ್ರಹ ಕೊಠಡಿ ಇದ್ದು, ಅಲ್ಲಿಯೂ ಬೆಂಕಿ ಕಾಣಿಸಿಕೊಂಡಿತ್ತು. ಸ್ಥಳಕ್ಕೆ ಹೋಗಿ ಮೂರು ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಲಾಯಿತು’ ಎಂದೂ ತಿಳಿಸಿದರು.

‘ಕಚೇರಿಯಲ್ಲಿದ್ದ ಪೀಠೋಪಕರಣ ಹಾಗೂ ಹಲವು ದಾಖಲೆಗಳು ಸುಟ್ಟಿವೆ. ಬೆಂಕಿ ಹೊತ್ತಿಕೊಂಡಿದ್ದು ಆಕಸ್ಮಿಕವೋ ಅಥವಾ ಬೇರೆ ಏನಾದರೂ ಕಾರಣ ಇದೆಯಾ ಎಂಬುದು ತನಿಖೆಯಿಂದ ತಿಳಿಯಬೇಕಿದೆ’ ಎಂದೂ ಹೇಳಿದರು.

ಅನುಮಾನ: ಬಿಬಿಎಂಪಿ ವಲಯ ಕಚೇರಿ ಮೇಲೆ ಇತ್ತೀಚೆಗಷ್ಟೇ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಅಧಿಕಾರಿಗಳು ದಾಳಿ ಮಾಡಿದ್ದರು. ಅದೇ ಕಚೇರಿಯಲ್ಲಿ ಬೆಂಕಿ ಅವಘಡ ಸಂಭವಿಸಿರುವುದು ಸಾರ್ವಜನಿಕರ ಅನುಮಾನಕ್ಕೆ ಕಾರಣವಾಗಿದೆ.

‘ದಾಖಲೆಗಳನ್ನು ನಾಶ ಮಾಡಲು ಬೆಂಕಿ ಅವಘಡ ಸೃಷ್ಟಿಸಿರುವ ಸಾಧ್ಯತೆ ಇದೆ. ಈ ಬಗ್ಗೆ ಪೊಲೀಸರು ತನಿಖೆ ನಡೆಸಬೇಕು’ ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಅಮೃತಹಳ್ಳಿ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.


ಬಿಬಿಎಂಪಿ ವಲಯ ಮುಖ್ಯ ಎಂಜಿನಿಯರ್ ಕಚೇರಿ ಪೀಠೋಪಕರಣ ಹಾಗೂ ದಾಖಲೆಗಳು ಸುಟ್ಟಿರುವುದು

‘ಕೆಪಿಸಿಸಿಗೆ ಲಕ್ಷ್ಮಿ ಹೆಬ್ಬಾಳ್ಕರ್ ಬೇನಾಮಿ ಅಧ್ಯಕ್ಷೆ’

ಬೆಂಗಳೂರು: ‘ಕೆಪಿಸಿಸಿಗೆ ಡಿ.ಕೆ. ಶಿವಕುಮಾರ್ ಅಧ್ಯಕ್ಷರಾಗಿದ್ದರೆ, ಶಾಸಕಿ ಲಕ್ಷ್ಮಿ ಹೆಬ್ಬಾಳ್ಕರ್ ಬೇನಾಮಿ ಅಧ್ಯಕ್ಷೆ. ಇಬ್ಬರೂ ಅಕ್ರಮಗಳ ಸರದಾರರು’ ಎಂದು ಬಿಜೆಪಿ ರಾಜ್ಯ ಘಟಕ ಟ್ವಿಟರ್‌ನಲ್ಲಿ ವಾಗ್ದಾಳಿ ನಡೆಸಿದೆ.

ಬೆಳಗಾವಿಯ ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣ ಕುರಿತು ಬಿಜೆಪಿ ರಾಜ್ಯ ಘಟಕದ ಅಧಿಕೃತ ಟ್ವಿಟರ್ ಖಾತೆಯಿಂದ ಶನಿವಾರ ಸರಣಿ ಟ್ವೀಟ್ ಮಾಡಿದ್ದು, ‘ಬೇನಾಮಿ ಅಧ್ಯಕ್ಷೆ ಬೇನಾಮಿ ಕಾಮಗಾರಿ ನಡೆಸುವುದರಲ್ಲೂ ಎತ್ತಿದ ಕೈ. ಕಾರ್ಯಾದೇಶ ಇಲ್ಲದ ಕಾಮಗಾರಿಗಳಿಗೆ ಕೋಟಿ ಕೋಟಿ ಸುರಿಯುವ ಧೈರ್ಯವನ್ನು ಒಬ್ಬ ಸಣ್ಣ ಗುತ್ತಿಗೆದಾರ ಮಾಡಲಾರ. ಇದರ ಹಿಂದೆ ಬೇನಾಮಿ ಅಧ್ಯಕ್ಷೆಯ ಕೈವಾಡವಿದೆ’ ಎಂದು ಆರೋಪಿಸಿದೆ.

ಕೆಪಿಸಿಸಿಯ ಬೇನಾಮಿ ಅಧ್ಯಕ್ಷೆಯ ಆಸ್ತಿ ಹೆಚ್ಚಳದ ಹಿಂದಿರುವ ವ್ಯಕ್ತಿ ಹಾಗೂ ಶಕ್ತಿ ಯಾರು? ಇವರ ಅಕ್ರಮದ ಆಚಾರ–ವಿಚಾರಗಳನ್ನು ಪ್ರಚಾರ ಮಾಡುವುದಕ್ಕೆ ಇದು ಸಕಾಲ. ಸಕ್ರಮ ಮಾರ್ಗದಲ್ಲಿ ಇಷ್ಟೊಂದು ಸಂಪತ್ತು ಗಳಿಸಲು ಸಾಧ್ಯವೆ ಎಂದು ಪ್ರಶ್ನಿಸಿದೆ.

‘ಅಕ್ರಮವನ್ನೇ ರಾಜಕಾರಣ ಮಾಡಿಕೊಂಡಿರುವ ಕೆಪಿಸಿಸಿಯ ಸೂಪರ್ ಅಧ್ಯಕ್ಷರೇ ನಿಮ್ಮ ಅಕ್ರಮ ಆಸ್ತಿಯ ಲೆಕ್ಕ ಕೊಡುತ್ತೀರಾ? ಬೆಳಗಾವಿಯ ‘ಲಕ್ಷ್ಮಿ’ಗೆ ಮಂಗಳೂರು, ಉತ್ತರಕನ್ನಡ ಮತ್ತಿತರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳಿಂದ ನೂರಾರು ಕೋಟಿ ರೂಪಾಯಿ ಸಾಲ ಕೊಡಿಸಿರುವುದರ ಹಿಂದೆ ಕೆಪಿಸಿಸಿಯ ಭ್ರಷ್ಟ ಅಧ್ಯಕ್ಷರ ಕೈವಾಡವಿಲ್ಲವೆ’ ಎಂದು ಬಿಜೆಪಿ ಕೇಳಿದೆ.

ಎಸಿಪಿ ಶೋಭಾ ಸಾವು ಯುಡಿಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆ.ಪಿ. ನಗರ 5ನೇ ಹಂತದಲ್ಲಿರುವ ವಸತಿ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ಎಸಿಪಿ ಶೋಭಾ ಕಟಾವ್ಕರ್ (59) ಅನುಮಾನಾಸ್ಪದವಾಗಿ ಸಾವಿಗೀಡಾಗಿರುವ ಬಗ್ಗೆ ನಗರದ ಪುಟ್ಟೇನಹಳ್ಳಿ ಠಾಣೆಯಲ್ಲಿ ಯುಡಿಆರ್ (ಅಸಹಜ ಸಾವು) ಪ್ರಕರಣ ದಾಖಲಾಗಿದೆ.

ನಗರದ ವಿಶೇಷ ವಿಭಾಗದ ಎಸಿಪಿ ಆಗಿದ್ದ ಶೋಭಾ ಅವರಿಗೆ ಇತ್ತೀಚೆಗಷ್ಟೇ ಎಸ್ಪಿ ಹುದ್ದೆಗೆ ಬಡ್ತಿ ನೀಡಲಾಗಿತ್ತು. ಹುಬ್ಬಳ್ಳಿ ಹೆಸ್ಕಾಂ ಅಧೀಕ್ಷಕರಾಗಿಯೂ ವರ್ಗಾಯಿಸಲಾಗಿತ್ತು.

‘ಶೋಭಾ ಅವರ ಪತಿ ಕೆಲ ವರ್ಷಗಳ ಹಿಂದೆ ತೀರಿಕೊಂಡಿದ್ದರು. ಸದ್ಯ ಪುತ್ರಿ, ಪುತ್ರ ಹಾಗೂ ಸೊಸೆ ಜೊತೆಯಲ್ಲಿ ವಾಸವಿದ್ದರು. ಆ ಮೂವರು ಇತ್ತೀಚೆಗೆ ಪ್ರವಾಸಕ್ಕೆ ಹೋಗಿದ್ದರು. ಹೀಗಾಗಿ, ಶೋಭಾ ಅವರೊಬ್ಬರೇ ಮನೆಯಲ್ಲಿದ್ದರು. ಶುಕ್ರವಾರ ಮಧ್ಯಾಹ್ನದಿಂದಲೇ ಶೋಭಾ ಅವರ ಮೊಬೈಲ್‌ಗೆ ಮಗ ಕರೆ ಮಾಡಿದ್ದರು. ಆದರೆ, ಕರೆ ಸ್ವೀಕರಿಸಿರಲಿಲ್ಲ. ಅನುಮಾನಗೊಂಡು ಭದ್ರತಾ ಸಿಬ್ಬಂದಿಯನ್ನು ಫ್ಲ್ಯಾಟ್ ಬಳಿ ಕಳುಹಿಸಿದಾಗಲೇ ಮೃತದೇಹ ಕಂಡಿತ್ತು’ ಎಂದು ಪೊಲೀಸ್ ಅಧಿಕಾರಿ ಹೇಳಿದರು.


ಶೋಭಾ ಕಟಾವ್ಕರ್

‘ಪುಟ್ಟೇನಹಳ್ಳಿ ಠಾಣೆ ಪೊಲೀಸರು ಸ್ಥಳಕ್ಕೆ ಹೋಗಿ ಮೃತದೇಹವನ್ನು ಕಿಮ್ಸ್ ಆಸ್ಪತ್ರೆಗೆ ಸಾಗಿಸಿದ್ದರು. ಶನಿವಾರ ಬೆಳಿಗ್ಗೆ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಿದರು. ಮಧ್ಯಾಹ್ನವೇ ಅಂತ್ಯಕ್ರಿಯೆ ನೆರವೇರಿಸಲಾಗಿದೆ’ ಎಂದೂ ತಿಳಿಸಿದರು.

‘ಹೃದಯಾಘಾತದಿಂದ ಸಾವಿಗೀಡಾಗಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ನಿಖರ ಕಾರಣ ತಿಳಿಯಲಿದೆ’ ಎಂದೂ ಅವರು ಹೇಳಿದರು.

ಪಿಎಂಎಲ್ ಕಾಯ್ದೆ: ಬೆಂಗಳೂರಿಗೆ 14 ಜಿಲ್ಲೆ ವ್ಯಾಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾವು ಮಂಡ್ಯದ ನಿವಾಸಿಗಳು. ಪ್ರಕರಣ ನಡೆದಿರುವುದು ಮಂಡ್ಯದಲ್ಲೇ. ಆದರೆ, ಜಾರಿ ನಿರ್ದೇಶನಾಲಯ ನಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣವನ್ನು ಬೆಂಗಳೂರಿನ ವಿಶೇಷ ನ್ಯಾಯಾಲಯದಲ್ಲಿ ದಾಖಲಿಸಿ ವಿಚಾರಣೆಗೆ ಕೈಗೆತ್ತಿಕೊಂಡಿರುವುದು ಸರಿಯಲ್ಲ. ಆದ್ದರಿಂದ ಇದನ್ನು ರದ್ದುಗೊಳಿಸಬೇಕು’ ಎಂದು ಕೋರಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾ ಮಾಡಿದೆ.

ಈ ಕುರಿತಂತೆ ಮಂಡ್ಯದ ಗಾಂಧಿ ನಗರ ನಿವಾಸಿಗಳಾದ ಅಸಾದುಲ್ಲಾ ಖಾನ್, ಅಯೇಷಾ ನಜಮ್, ಉದಯಗಿರಿಯ ಝುರೀನ್ ತಾಜ್ ಎಂಬುವರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಒಮ್ಮೆ ದೋಷಾರೋಪ ಹೊರಿಸಿ ವಿಚಾರಣೆ ಆರಂಭಿಸಿದ ನಂತರ ಕ್ರಿಮಿನಲ್ ಪ್ರಕರಣವನ್ನು ರದ್ದುಗೊಳಿಸುವ ಪ್ರಮೇಯ ಉದ್ಭವಿಸುವುದಿಲ್ಲ’ ಎಂದು ಅರ್ಜಿದಾರರ ಮನವಿಯನ್ನು ಸಾರಾಸಗಟಾಗಿ ತಿರಸ್ಕರಿಸಿದೆ.

‘ನಮ್ಮ ವಿರುದ್ಧ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ–2002ರ ಕಲಂ 3 ಮತ್ತು 4 ಹಾಗೂ ಭಾರತೀಯ ದಂಡ ಸಂಹಿತೆಯ (ಐಪಿಸಿ) ಕಲಂ 120ಬಿ ಹಾಗೂ 420ಗೆ ಅನುಗುಣವಾಗಿ ಜಾರಿ ನಿರ್ದೇಶನಾಲಯದ ಉಪ ನಿರ್ದೇಶಕರು ಇಸಿಐಆರ್ (ಎನ್‌ಫೋರ್ಸ್‌ಮೆಂಟ್ ಕೇಸ್ ಇನ್‌ಫಾರ್ಮೇಶನ್ ರಿಪೋರ್ಟ್) ದಾಖಲಿಸಿದ್ದಾರೆ. ಅಂತೆಯೇ, ವಿಚಾರಣಾ ನ್ಯಾಯಾಲಯ ಪ್ರಕರಣವನ್ನು ವಿಚಾರಣೆಗೆ ಪರಿಗಣಿಸಿದ್ದು ಇದನ್ನು ರದ್ದುಗೊಳಿಸಬೇಕು’ ಎಂದು ಅರ್ಜಿದಾರರು ಕೋರಿದ್ದರು.

ಇದಕ್ಕೆ ಪ್ರತಿಯಾಗಿ ಇ.ಡಿ ಪರ ವಕೀಲ ಪಿ.ಪ್ರಸನ್ನಕುಮಾರ್, ‘ವಿಚಾರಣಾ ವ್ಯಾಪ್ತಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು 2006ರಲ್ಲೇ ಅಧಿಸೂಚನೆ ಹೊರಡಿಸಿದ್ದು, ಬೆಂಗಳೂರು ಪ್ರಧಾನ ಸೆಷನ್ಸ್ ನ್ಯಾಯಾಲಯಕ್ಕೆ ಏನಿಲ್ಲವೆಂದರೂ 14 ಜಿಲ್ಲೆಗಳ ಇ.ಡಿ ಪ್ರಕರಣಗಳ ವಿಚಾರಣಾ ವ್ಯಾಪ್ತಿಯಿದೆ. ಈಗಾಗಲೇ ವಿಚಾರಣಾ ನ್ಯಾಯಾಲಯವು ಆರೋಪಿಗಳ ವಿರುದ್ಧ 2021ರ ಫೆಬ್ರುವರಿ 20ರಂದು ದೋಷಾರೋಪಣೆ ಹೊರಿಸಿ ವಿಚಾರಣೆ ಕೈಗೆತ್ತಿಕೊಂಡಿದೆ. ಆದ್ದರಿಂದ, ಅರ್ಜಿದಾರರ ಮನವಿ ಸಾಪೇಕ್ಷವಲ್ಲ’ ಎಂದು ವಾದ ಮಂಡಿಸಿದ್ದರು.

ಎಟಿಎಂ ಹೊತ್ತೊಯ್ದು ₹12 ಲಕ್ಷ ಕಳವು

ಬೆಂಗಳೂರು: ಅಪರಿಚಿತರ ಗುಂಪೊಂದು ಎಟಿಎಂ ಯಂತ್ರವೊಂದನ್ನು 2 ಕಿ.ಮೀ. ವರೆಗೂ ಹೊತ್ತೊಯ್ದು ಬಳಿಕ ಗ್ಯಾಸ್ ಕಟರ್‌ನಿಂದ ಕತ್ತರಿಸಿ ಅದರೊಳಗಿದ್ದ ₹12 ಲಕ್ಷ ಮೊತ್ತ ದೋಚಿ ಪರಾರಿಯಾಗಿದೆ. ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಗೊಲ್ಲರಹಟ್ಟಿಯಲ್ಲಿ ಬ್ಯಾಂಕೊಂದರ ಎಟಿಎಂ ಯಂತ್ರ ಅಳವಡಿಸಲಾಗಿತ್ತು. ದುಷ್ಕರ್ಮಿಗಳು ರಾತ್ರಿ ವೇಳೆ ಕೊಠಡಿಯ ಷಟರ್ ಮುರಿದು ಎಟಿಎಂ ಯಂತ್ರವನ್ನು ಸಮೀಪದ ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಅದರಲ್ಲಿದ್ದ ಹಣ ದೋಚಿಕೊಂಡು ಪರಾರಿಯಾಗಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಗಾಂಜಾ ಮಾರಾಟ: ಮಗ ಬಂಧನ, ತಂದೆ ಪರಾರಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನಗರದಲ್ಲಿ ವ್ಯವಸ್ಥಿತವಾಗಿ ಗಾಂಜಾ ಮಾರುತ್ತಿದ್ದ ತಂದೆ–ಮಗನ ಕೃತ್ಯವನ್ನು ಎಚ್‌ಎಸ್‌ಆರ್ ಲೇಔಟ್ ಠಾಣೆ ಪೊಲೀಸರು ಪತ್ತೆ ಮಾಡಿದ್ದಾರೆ.

ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪದಡಿ ತಮಿಳುನಾಡಿನ ಸಾದಿಕ್ ಎಂಬುವರನ್ನು ಪೊಲೀಸರು ಬಂಧಿಸಿದ್ದು, ಕೃತ್ಯದಲ್ಲಿ ಭಾಗಿಯಾಗಿದ್ದ ತಂದೆ ಅಮೀರ್ ತಲೆಮರೆಸಿಕೊಂಡಿದ್ದಾರೆ.

‘ಏಪ್ರಿಲ್ 12ರಂದು ಬೆಳಿಗ್ಗೆ ಆರೋಪಿ ಸಾದಿಕ್, ಟಿವಿಎಸ್ ಎಕ್ಸೆಲ್ ದ್ವಿಚಕ್ರ ವಾಹನದಲ್ಲಿ ಗಾಂಜಾ ಸಾಗಿಸುತ್ತಿದ್ದ. ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆತನನ್ನು ವಶಕ್ಕೆ ಪಡೆದು ವಿಚಾರಿಸಲಾಯಿತು. ಆತನ ಬಳಿ 5 ಕೆ.ಜಿ 360 ಗ್ರಾಂ ಗಾಂಜಾ ಸಿಕ್ಕಿತ್ತು’ ಎಂದು ಪೊಲೀಸರು ಹೇಳಿದರು.

‘ತಂದೆ ಜೊತೆ ಸೇರಿಕೊಂಡು ಗಾಂಜಾ ಮಾರಾಟ ಮಾಡುತ್ತಿದ್ದ ಸಂಗತಿಯನ್ನು ಆರೋಪಿ ಬಾಯ್ಬಿಟ್ಟಿದ್ದ. ಸ್ಥಳವೊಂದರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಗಾಂಜಾ ಸಂಗ್ರಹಿಸಿರುವ ಮಾಹಿತಿ ತಿಳಿಸಿದ್ದ. ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ, ₹ 52.50 ಲಕ್ಷ ಮೌಲ್ಯದ 105 ಕೆ.ಜಿ 445 ಗ್ರಾಂ ಗಾಂಜಾ ಪತ್ತೆಯಾಯಿತು. ಅದನ್ನೂ ಜಪ್ತಿ ಮಾಡಲಾಗಿದೆ’ ಎಂದೂ ತಿಳಿಸಿದರು.

‘ಆರೋಪಿಗಳು ಒಡಿಶಾದಿಂದ ಗಾಂಜಾ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಖಾಸಗಿ ಕಂಪನಿ ಉದ್ಯೋಗಿಗಳು ಹಾಗೂ ಕೆಲ ಕಾರ್ಮಿಕರು ಗಾಂಜಾ ಖರೀದಿಸುತ್ತಿದ್ದರು. ಬಂಧಿತ ಆರೋಪಿ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಸಾದಿಕ್ ತಂದೆ ಅಮೀರ್ ತಲೆಮರೆಸಿಕೊಂಡಿದ್ದಾನೆ. ಆತನ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿದೆ’ ಎಂದೂ ಪೊಲೀಸರು ಹೇಳಿದರು.

ಚಿತ್ರಾವಳಿ


ನೇಕಾರ ಕುಲದೇವತೆ ಶ್ರೀ ಚಂದ್ರ ಚೌಡೇಶ್ವರಿ ದೇವಿಯ ಬ್ರಹ್ಮ ರಥೋತ್ಸವವು ಪೌರ್ಣಿಮೆ ದಿನವಾದ ಶನಿವಾರ ಚೌಡೇಶ್ವರಿ ಗುಡಿ ಬೀದಿಯಲ್ಲಿ ವಿಜೃಂಭಣೆಯಿಂದ ನೆರವೇರಿತು – ಪ್ರಜಾವಾಣಿ ಚಿತ್ರ


ಕೆ.ಆರ್‌.ಪುರ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ದಿವಂಗತ ಎಂ.ರಾಮಚಂದ್ರ ಅವರ ಸ್ಮರಣಾರ್ಥ ನಿರ್ಮಿಸಿರುವ ಶ್ರೀವಿಜಯ್ ಗಣಪತಿ ಡಯಾಲಿಸಿಸ್ ಕೇಂದ್ರವನ್ನು ಉದ್ಘಾಟಿಸಿದ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಸಮಾಜ ಸೇವಕಿ ಸುಶೀಲಾದೇವಿ, ತಾಲ್ಲೂಕು ವೈದ್ಯ ಆಡಳಿತಾಧಿಕಾರಿ ಮಂಜುನಾಥ್, ಪಾಲಿಕೆ ಮಾಜಿ ಸದಸ್ಯ ಅಂತೋಣಿಸ್ವಾಮಿ, ಮುಖಂಡರಾದ ಮುನೇಗೌಡ, ಪಟಾಕಿ ರವಿ, ಶಿವಪ್ಪ, ಶ್ರೀನಿವಾಸರಾಜು ಇದ್ದರು.


ಹನುಮ ಜಯಂತಿ ಉತ್ಸವದ ಅಂಗವಾಗಿ ಜಯನಗರದ ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿ ಮಠದಲ್ಲಿರುವ ಹನುಮ ವಿಗ್ರಹ ಹಾಗೂ ರಾಘವೇಂದ್ರ ಸ್ವಾಮಿಗಳ ಬೃಂದಾವನಕ್ಕೆ ವಿಶೇಷ ಅಭಿಷೇಕ ಮಾಡಲಾಯಿತು.

ಕಾರುಗಳ ಮೇಲೆ ಹೂಡಿಕೆ: ₹1.60 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರುಗಳ ಮೇಲೆ ಹೂಡಿಕೆ ಮಾಡಿದರೆ ಪ್ರತಿ ತಿಂಗಳು ಲಾಭಾಂಶ ನೀಡುವುದಾಗಿ ಹೇಳಿ ಜನರಿಂದ ₹ 1.60 ಕೋಟಿ ಪಡೆದು ವಂಚಿಸಲಾಗಿದ್ದು, ಈ ಬಗ್ಗೆ ಅಶೋಕನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಹಣ ಹೂಡಿಕೆ ಮಾಡಿ ವಂಚನೆಗೀಡಾಗಿರುವ ಉದ್ಯಮಿ ಮಧುಸೂದನ್ ದೂರು ನೀಡಿದ್ದಾರೆ. ‘ಸ್ಟೆರ್ಲಿಂಗ್ ಕ್ಯಾಬ್ಸ್’ ಕಂಪನಿಯ ಕೆ.ಜಿ. ಎಡ್ವಿನ್, ವಿನಯ್, ರಾಘವೇಂದ್ರ, ಮಹೇಶ್ ಶೆಟ್ಟಿ, ರವಿಕುಮಾರ್, ಮಣಿ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘2021ರಲ್ಲಿ ದೂರುದಾರರಿಗೆ ಕರೆ ಮಾಡಿದ್ದ ಆರೋಪಿಗಳು, ‘ನಮ್ಮದು ಸ್ಟೆರ್ಲಿಂಗ್ ಕ್ಯಾಬ್ಸ್ ಕಂಪನಿ ಇದೆ. ಕಾರುಗಳನ್ನು ಸಾಫ್ಟ್‌ವೇರ್ ಹಾಗೂ ಇತರೆ ಕಂಪನಿಗಳಿಗೆ ಬಾಡಿಗೆ ನೀಡುತ್ತಿದ್ದೇವೆ. ಒಂದು ಕಾರಿನ ಮೇಲೆ ₹ 4 ಲಕ್ಷ ಹೂಡಿಕೆ ಮಾಡಿದರೆ, ಅದರ ಬಾಡಿಗೆಯಿಂದ ಬರುವ ಹಣದಲ್ಲಿ ಪ್ರತಿ ತಿಂಗಳು ₹ 20 ಸಾವಿರ ನೀಡಲಾಗುವುದು. 48 ತಿಂಗಳ ಬಳಿಕ ಕಾರನ್ನೂ ವಾಪಸು ಕೊಡಲಾಗುವುದು’ ಎಂಬುದಾಗಿ ಹೇಳಿದ್ದರು. ಅದನ್ನು ನಂಬಿದ್ದ ದೂರುದಾರ, ಹಣ ಹೂಡಿಕೆ ಮಾಡಿದ್ದರು.’

‘ಆರೋಪಿಗಳು ಮೂರು ತಿಂಗಳು ಮಾತ್ರ ಹಣ ನೀಡಿದ್ದರು. ನಂತರ ನಿಲ್ಲಿಸಿದ್ದರು. ಈ ಬಗ್ಗೆ ಪ್ರಶ್ನಿಸಲು ಆರೋಪಿಗಳು ಸಂಪರ್ಕಕ್ಕೆ ಸಿಗುತ್ತಿಲ್ಲವೆಂದು ಮಧುಸೂದನ್ ದೂರಿದ್ದಾರೆ’ ಎಂದೂ ಮೂಲಗಳು ತಿಳಿಸಿವೆ.

‘ಕಂಪನಿಯಲ್ಲಿ 40ಕ್ಕೂ ಹೆಚ್ಚು ಮಂದಿ ₹ 1.60 ಕೋಟಿ ಹೂಡಿಕೆ ಮಾಡಿದ್ದು, ಬಹುತೇಕರಿಗೆ ವಂಚನೆಯಾಗಿರುವ ಮಾಹಿತಿ ಇದೆ’ ಎಂದೂ ಹೇಳಿವೆ.

ಜಿಪಿಎಸ್ ಸುಳಿವಿನಿಂದ ಸಿಕ್ಕಿಬಿದ್ದ ಆರೋಪಿಗಳು

ಬೆಂಗಳೂರು: ಬಂಡೇಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ನಿಲ್ಲಿಸಿದ್ದ ಕಾರು ಕಳ್ಳತನ ಮಾಡಿದ್ದ ಆರೋಪದಡಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

‘ಕೊಡಗಿನ ಆಶಿಕ್ ಹಾಗೂ ಅಬ್ದುಲ್ ಬಂಧಿತರು. ಅವರಿಂದ ₹ 18 ಲಕ್ಷ ಮೌಲ್ಯದ ಹುಂಡೈ ಕ್ರೆಟಾ ಕಾರು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು. ‘ಕೇರಳದ ನಿವಾಸಿಯಾಗಿರುವ ಸಾಫ್ಟ್‌ವೇರ್ ಎಂಜಿನಿಯರ್ ಖಾಸಿಫ್ ಮೊಹಿನ್ ಅವರು ಏಪ್ರಿಲ್ 6ರಂದು ಬೆಂಗಳೂರಿಗೆ ಬಂದಿದ್ದರು. ಹೊಸೂರು ರಸ್ತೆಯಲ್ಲಿರುವ ಪೆಟ್ರೋಲ್ ಬಂಕ್‌ವೊಂದರ ಮುಂದೆ ಕಾರು ನಿಲ್ಲಿಸಿ, ಕೆಲಸ ನಿಮಿತ್ತ ಬೇರೆಡೆ ಹೋಗಿದ್ದರು.’

‘ಖಾಸಿಫ್ ಅವರ ಸ್ನೇಹಿತರೇ ಆಗಿದ್ದ ಆರೋಪಿಗಳು, ಸ್ಥಳಕ್ಕೆ ಬಂದು ಕಾರು ಕದ್ದುಕೊಂಡು ಹೋಗಿದ್ದರು. ಖಾಸಿಫ್ ಸ್ಥಳಕ್ಕೆ ಬಂದಾಗ ಕಾರು ಇರಲಿಲ್ಲ. ನಂತರ, ಠಾಣೆಗೆ ಹೋಗಿ ದೂರು ನೀಡಿದ್ದರು’ ಎಂದೂ ತಿಳಿಸಿದರು.

‘ಆರೋಪಿಗಳು ಕಾರು ಚಲಾಯಿಸಿಕೊಂಡು ಕೇರಳಕ್ಕೆ ಹೋಗಿದ್ದರು. ಕಾರಿನಲ್ಲಿದ್ದ ಜಿಪಿಎಸ್ ಉಪಕರಣದಿಂದ ಆರೋಪಿಗಳ ವಿಳಾಸ ಗೊತ್ತಾಗಿತ್ತು. ಕೇರಳಕ್ಕೆ ಹೋದ ಪೊಲೀಸರ ತಂಡ ಆರೋಪಿಗಳನ್ನು ಬಂಧಿಸಿ, ನಗರಕ್ಕೆ ಕರೆತಂದಿದೆ’ ಎಂದೂ ಹೇಳಿದರು.

ನಗರದಲ್ಲಿ ಇಂದು

ಪ್ರೊ.ಎಚ್‌.ಟಿ.ಪೋತೆ ಅವರ ‘ಮಹಾಬಿಂದು’ ಮತ್ತು ಎಂ.ಆರ್. ದತ್ತಾತ್ರಿ ಅವರ ‘ಒಂದೊಂದು ತಲೆಗೂ ಒಂದೊಂದು ಬೆಲೆ’ ಪುಸ್ತಕಗಳ ಬಿಡುಗಡೆ: ಬಿ.ವಿ.ವಸಂತಕುಮಾರ್, ಅತಿಥಿಗಳು–ಮಲ್ಲೇಪುರಂ ಜಿ.ವೆಂಕಟೇಶ, ಎಚ್.ಎಸ್. ಸತ್ಯನಾರಾಯಣ, ಆಯೋಜನೆ–ಅಂಕಿತ ಪುಸ್ತಕ, ಸ್ಥಳ–ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ 3ನೇ ಹಂತ, ಬೆಳಿಗ್ಗೆ 10.30

ಎಸ್‌.ಜಿ.ಸಿದ್ದರಾಮಯ್ಯ ಅವರ ‘ಕನ್ನಡ ಅವಲೋಕನ’ ಪುಸ್ತಕ ಬಿಡುಗಡೆ: ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಅಧ್ಯಕ್ಷತೆ–ವೂಡೇ ಪಿ.ಕೃಷ್ಣ, ಪುಸ್ತಕ ಪರಿಚಯ–ಕುಮಾರಸ್ವಾಮಿ ಬೆಜ್ಜಿಹಳ್ಳಿ, ಅತಿಥಿಗಳು–ಬಿ.ಟಿ.ಲಲಿತಾ ನಾಯಕ್, ರುದ್ರಪ್ಪ ಹನಗವಾಡಿ, ಕೆ.ವೈ.ನಾರಾಯಣಸ್ವಾಮಿ, ಕೆ.ಮುರಳೀಧರ, ಆಯೋಜನೆ–ಅಸ್ಮಿತೆ ಪ್ರಕಾಶನ, ಸ್ಥಳ–ಗಾಂಧಿ ಭವನ, ಬೆಳಿಗ್ಗೆ 10.30

‘ಕ್ಷಮಿಸಿ ಬಿಡು ಬಸವಣ್ಣ’ ವಿಡಿಯೊ ಗೀತೆ ಬಿಡುಗಡೆ: ಉದ್ಘಾಟನೆ–ವಿ.ಸೋಮಣ್ಣ, ಅಧ್ಯಕ್ಷತೆ–ಹಂಸಲೇಖ, ಲೋಕಾರ್ಪಣೆ–ಬಿ.ಶ್ರೀರಾಮುಲು, ಅತಿಥಿಗಳು–ಅರವಿಂದ ಜತ್ತಿ, ಮಾಸ್ಟರ್ ಆನಂದ್, ಗೊ.ರು.ಚನ್ನಬಸಪ್ಪ, ನವೀನ್ ಕೃಷ್ಣ, ರಘು ದೀಕ್ಷಿತ್, ಆಯೋಜನೆ–ಗೀತಾ ಸಂಗೀತಾ ಅಕಾಡೆಮಿ, ಸ್ಥಳ–ರೇಣುಕಾಂಬ ಸ್ಟುಡಿಯೊ, ಮಲ್ಲೇಶ್ವರ, ಬೆಳಿಗ್ಗೆ 11


ಹಂಸಲೇಖ


ವಿಶಾಖ ಹರಿ

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ವಿಶಾಖ ಹರಿ ಅವರಿಗೆ ‘ರಾಮ ಗಾನ ಕಲಾ ಚಾರ್ಯ’ ಪ್ರಶಸ್ತಿ ಪ್ರದಾನ, ಕರ್ನಾಟಕ ಸಂಗೀತ ಕಾರ್ಯಕ್ರಮ –ವಿಶಾಖ ಹರಿ ಮತ್ತು ತಂಡ, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 5.15ರಿಂದ

‘ಯುವ ಸಂಗೀತ ವೈಭವ’: ಕರ್ನಾಟಕ ಸಂಗೀತ ಕಾರ್ಯಕ್ರಮ–ಬೆಂಗಳೂರು ಎಂ.ನಿಶಾಂತ್ ಮತ್ತು ಅದಿತಿ ಬಿ.ಪ್ರಹ್ಲಾದ್, ಮೃದಂಗ–ಫಣೀಂದ್ರ ಭಾಸ್ಕರ, ವಯಲಿನ್–ಜನಾರ್ದನ ಶ್ರೀನಾಥ್, ಆಯೋಜನೆ–ಭಾರತೀಯ ವಿದ್ಯಾಭವನ, ಸ್ಥಳ–ಖಿಂಚಾ ಸಭಾಂಗಣ, ವಿದ್ಯಾಭವನ ಆವರಣ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11

‘ಧಾರ್ಮಿಕ ನಡೆಗಳ ಮತ್ತು ನಂಬಿಕೆಗಳ ಸತ್ಯ ಮತ್ತು ವಿಕಾಸ’ ಉಪನ್ಯಾಸ: ಕೆ.ಎನ್. ಗಣೇಶಯ್ಯ, ಆಯೋಜನೆ–ಶಿವರಾಮ ಕಾರಂತ ವೇದಿಕೆ, ತರಳಬಾಳು ಕೇಂದ್ರ, ಸ್ಥಳ–ತರಳಬಾಳು ಗ್ರಂಥಾಲಯ, ಆರ್. ಟಿ.ನಗರ, ಸಂಜೆ 4

ದೇಸಿ ಆಹಾರ–ಆರೋಗ್ಯಕ್ಕೆ ಆಧಾರ: ಪುಸ್ತಕ ಬಿಡುಗಡೆ ಮತ್ತು ಸಂವಾದ–ಆಹಾರ ತಜ್ಞ ಡಾ.ಖಾದರ್, ಆಯೋಜನೆ ಮತ್ತು ಸ್ಥಳ–ಗ್ರಾಮೀಣ ಅಂಗಡಿ, ಎಚ್‌ಎಸ್‌ಆರ್ ಬಡಾವಣೆ, ಸಂಜೆ 4.30

ಹಂಪನಾ ಅವರ ‘ಚಾರುವಸಂತ’ ಪುಸ್ತಕ ಬಿಡುಗಡೆ: ರವೀಂದ್ರ ಭಟ್ಟ, ಅಧ್ಯಕ್ಷತೆ–ಚನ್ನೇಗೌಡ, ಪುಸ್ತಕ ಪರಿಚಯ–ಪ್ರೊ. ಅಶ್ವತ್ಥನಾರಾಯಣ ಘಟ್ಟಮರಾಜು, ಅತಿಥಿಗಳು–ಜೋಗಿ, ಜಿ.ಎನ್.ಮೋಹನ್, ಕೆ.ಎಸ್.ಗಣೇಶ್, ಎಚ್.ಎನ್.ಆರತಿ, ಆಯೋಜನೆ–ಅಮನ್ ಪ್ರಕಾಶನ, ಸ್ಥಳ–ವುಡ್‌ಲ್ಯಾಂಡ್ ಹೋಟೆಲ್, ರಿಚ್‌ಮಂಡ್ ವೃತ್ತ, ಸಂಜೆ 4.30

ಎಂ.ಎನ್.ಆರ್.ವರ್ಲ್ಡ್ ಸ್ಕೂಲ್ ಮತ್ತು ಪಿ.ಯು ಕಾಲೇಜು ಉದ್ಘಾಟನೆ: ಸಾನ್ನಿಧ್ಯ ಮತ್ತು ಉದ್ಘಾಟನೆ–ತದ್ಯುಕ್ತಾನಂದಜೀ ಮಹಾರಾಜ್, ಅತಿಥಿಗಳು–ಡಿ.ಕೆ.ಸುರೇಶ್, ನಂದೀಶ್ ರೆಡ್ಡಿ, ಎಸ್.ಜಯರಾಮರೆಡ್ಡಿ, ಆಯೋಜನೆ–ಮಂಜುಳಾ ಎಜುಕೇಷನ್ ಟ್ರಸ್ಟ್, ಸ್ಥಳ–ಮೈಲಸಂದ್ರ, ಬೇಗೂರು ಕೊಪ್ಪ ಮುಖ್ಯರಸ್ತೆ, ಸಂಜೆ 5

ಪುಟ್ಟರಾಜ ಗವಾಯಿ ಅವರ ಜಯಂತಿ ಮತ್ತು ವಾರ್ಷಿಕೋತ್ಸವ: ಉದ್ಘಾಟನೆ–ಉದಯ್ ಜಾದೂಗಾರ್, ಅಧ್ಯಕ್ಷತೆ–ಜಯಲಕ್ಷ್ಮಿ ಆನಂದ್, ಅತಿಥಿಗಳು–ವಿ.ಸೋಮಣ್ಣ, ಶೈಲಜಾ ವಿಜಯ್, ಆಯೋಜನೆ–ಗಾನಯೋಗಿ ಮ್ಯೂಸಿಕ್ ಅಕಾಡೆಮಿ, ಸ್ಥಳ–ಜ್ಞಾನಸೌಧ, ಮೂಡಲಪಾಳ್ಯ, ಸಂಜೆ 5.30

ಪಂಡಿತ್ ವಿನಾಯಕ ತೊರವಿ ಅವರಿಗೆ ‘ನಿರ್ಮಾಣ್‌–ಪುರಂದರ ಸಂಗೀತರತ್ನ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ–ವಿದ್ಯಾಶ್ರೀಶತೀರ್ಥ ಶ್ರೀಪಾದಂಗಳವರು, ಅಧ್ಯಕ್ಷತೆ–ಅರಳುಮಲ್ಲಿಗೆ ಪಾರ್ಥಸಾರಥಿ, ಆಯೋಜನೆ–ವಿಎಲ್‌ಎನ್–ನಿರ್ಮಾಣ್–ಪುರಂದರ ಪ್ರತಿಷ್ಠಾನ, ಸ್ಥಳ–ಪುರಂದರ ಮಂಟಪ, ವೆಂಕಟೇಶ್ವರ ದೇವಾಲಯದ ಎದುರು, ನಿಸರ್ಗ ಬಡಾವಣೆ, ಸಂಜೆ 7

ಸಂತ್ರಸ್ತ ಮಕ್ಕಳ ಒಡಲಾಳದ ಮಾತು...

ಆಶ್ರಯ ನೀಡಿದ ದೊಡ್ಡಮ್ಮ

ಪಾಲಕರಿಬ್ಬರೂ ಇಲ್ಲವೆಂದಾಗ ಆಕಾಶ ಕಳಚಿಬಿದ್ದಷ್ಟು ಸಂಕಟವಾಗಿತ್ತು. ಈಗ ಆ ನೋವಿನಿಂದ ಹೊರಬಂದು ಚೆನ್ನಾಗಿ ಓದಿ ಸಾಧನೆ ಮಾಡಬೇಕು ಎಂಬ ಛಲ ಬಂದಿದೆ. ದೊಡ್ಡಮ್ಮನ ಮನೆಯವರೆಲ್ಲರ ಪ್ರೀತಿ, ವಾತ್ಸಲ್ಯ, ಕಾಳಜಿ ನನ್ನನ್ನು ಈ ಮಟ್ಟಕ್ಕೆ ತಂದು ನಿಲ್ಲಿಸಿದೆ. ಸರ್ಕಾರದ ಸೌಲಭ್ಯವೂ ನಿಗದಿತವಾಗಿ ಸಿಗುತ್ತಿದೆ. ಪ್ರಥಮ ಪಿಯುಸಿ ಮುಗಿಸಿದ್ದು, ದ್ವಿತೀಯ ಪಿಯು ಚೆನ್ನಾಗಿ ಮಾಡಬೇಕು.

ಹರ್ಷಿತಾ, ಮಂಗಳೂರು

ಆಸರೆಯಾದ ಅಜ್ಜಿ ಮನೆ

ಕೋವಿಡ್ ನನ್ನ ಅಮ್ಮನನ್ನು ಕಿತ್ತು ಕೊಂಡಿತು. ಆಗ ನನಗೆ ಏನು ಮಾಡಬೇಕೆಂದು ತೋಚಲಿಲ್ಲ. ಬದುಕು ಕಷ್ಟವಾಗಿತ್ತು. ಆದರೆ, ನನ್ನ ಹತ್ತಿರದ ಸಂಬಂಧಿಕರ ಮನೆಯಲ್ಲಿ ಈಗ ಆಶ್ರಯ ಪಡೆದಿದ್ದೇನೆ. ವಸತಿ ಶಾಲೆಯಲ್ಲಿ ಎಲ್ಲ ವ್ಯವಸ್ಥೆ ಕಲ್ಪಿಸುವುದಾಗಿ ಅಧಿಕಾರಿಗಳು ಹೇಳಿದ್ದರು. ಆದರೆ, ನನಗೆ ಅಲ್ಲಿ ಹೋಗಲು ಇಷ್ಟವಿಲ್ಲ. ಅಜ್ಜಿಯ ಮನೆಯಲ್ಲಿ ಎಲ್ಲರೂ ಪ್ರೀತಿಯಿಂದ ಕಾಣುತ್ತಾರೆ. ನೋವನ್ನು ಮರೆತು ಅಭ್ಯಾಸದಲ್ಲಿ ತೊಡಗುತ್ತಿದ್ದೇನೆ.

ಹೆಸರು ಹೇಳಲು ಇಚ್ಛಿಸದ ವಿದ್ಯಾರ್ಥಿನಿ, ಮಂಗಳೂರು

ಅಪ್ಪ ಸತ್ತ ನಂತರ ವಸತಿಶಾಲೆಯೇ ಆಶ್ರಯ

ಕೋವಿಡ್‌ಗೆ ನನ್ನ ಅಪ್ಪ ಬಲಿಯಾದರು. ತಾಯಿ ಮೊದಲೇ ತೀರಿ ಹೋಗಿದ್ದರು. ಸರ್ಕಾರ ₹ 1 ಲಕ್ಷ ಪರಿಹಾರ ನೀಡಿದೆ. ಪ್ರತಿ ತಿಂಗಳು ಆರ್ಥಿಕ ನೆರವು ನೀಡುತ್ತಿದೆ. ವಸತಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದೇನೆ. ವಿದ್ಯಾಭ್ಯಾಸಕ್ಕೆ ವ್ಯವಸ್ಥೆ ಮಾಡಿದ್ದಾರೆ. ಚೆನ್ನಾಗಿ ಓದಿ ಮುಂದೆ ಉದ್ಯೋಗಕ್ಕೆ ಸೇರುವ ಆಸೆ ಇದೆ.

9ನೇ ತರಗತಿ ವಿದ್ಯಾರ್ಥಿ, ಚಿಕ್ಕಮಗಳೂರು

ಸರ್ಕಾರದ ನೆರವು ಕನ್ನಡಿಯೊಳಗಿನ ಗಂಟು • ಅಪ್ಪ, ಅಮ್ಮನ ನೆನಪಿನಿಂದ ಹೊರಬಾರದ ಪುಟಾಣಿಗಳು

ಮಕ್ಕಳನ್ನು ಕಾಡುತ್ತಿದೆ ಅನಾಥಪ್ರಜ್ಞೆ...

• ಬಸವರಾಜ ಹವಾಲ್ದಾರ



ಹುಬ್ಬಳ್ಳಿ: 'ಗಂಡ ಹಾಗೂ ಮೈದುನ ಇಬ್ಬರೂ ಕೋವಿಡ್‌ನಿಂದ ತೀರಿಕೊಂಡಿದ್ದಾರೆ. ನಮಗೆ ನಾಲ್ಕು ಹಾಗೂ ಮೈದುನನಿಗೆ ಇಬ್ಬರು ಮಕ್ಕಳಿದ್ದಾರೆ. ಟೈಲರಿಂಗ್‌ನಿಂದ ಬರುವ ಸಣ್ಣ ಆದಾಯದ ಮೇಲೆಯೇ ಮಕ್ಕಳನ್ನು ನೋಡಿಕೊಳ್ಳಬೇಕಾಗಿದೆ. ಮಕ್ಕಳಿಗೆ ತಂದೆಯ ಅಗಲುವಿಕೆಯ ನೋವು ಕಾಡುತ್ತಲೇ ಇದೆ.....'

ಕೋವಿಡ್‌ನಿಂದ ಪತಿಯನ್ನು ಕಳೆದುಕೊಂಡ ಬೆಳಗಾವಿ ಜಿಲ್ಲೆಯ ರಾಯಭಾಗದ ತ್ರಿವೇಣಿ ಮೇತ್ರಿ ಅವರು ಸಂಕಷ್ಟಗಳ ಸರಮಾಲೆಯನ್ನೇ ಬಿಚ್ಚಿಟ್ಟರು.

'ಎಲ್ಲ ಮಕ್ಕಳೂ 6 ರಿಂದ 14 ವರ್ಷದವರಿದ್ದಾರೆ. ನಾವಿಬ್ಬರೇ ಮಹಿಳೆಯರು ಎಲ್ಲವನ್ನೂ ನೋಡಿಕೊಳ್ಳಬೇಕು. ಹೊಲವಿಲ್ಲ. ಬಾಡಿಗೆ ಮನೆಯಲ್ಲಿದ್ದೇವೆ. ಕುಟುಂಬದ ಎಲ್ಲ ವೆಚ್ಚ ಸರಿದೂಗಿಸುವುದೇ ಸವಾಲಾಗಿದೆ' ಎಂದಾಗ ಅವರ ಮೊಗದಲ್ಲಿ ಚಿಂತೆಯ ಗೆರೆಗಳು ಮೂಡಿದ್ದವು.

'ಗಂಡ ಖಾಸಗಿ ಕಂಪನಿಯಲ್ಲಿ ಕೆಲಸಕ್ಕೆ ಸೇರಿಕೊಂಡು ಮೂರು ತಿಂಗಳಷ್ಟೇ ಆಗಿತ್ತು. ಹಾಗಾಗಿ, ಕಂಪನಿಯಿಂದ ಯಾವುದೇ ನೆರವು ಸಿಗಲಿಲ್ಲ. ಸರ್ಕಾರದಿಂದ ಬರುವ ನೆರವಿಗಾಗಿ ಅಧಿಕಾರಿಗಳಿಗೆ ದಾಖಲೆ ಸಲ್ಲಿಸಿದ್ದೇನೆ. ಇನ್ನೂ ಆರ್ಥಿಕ ನೆರವು ಸಿಕ್ಕಿಲ್ಲ. ಗಂಡನ ಅಗಲುವಿಕೆಯ ಜತೆಗೆ ಆರ್ಥಿಕ ಹೊರೆ, ಮಕ್ಕಳ ಭವಿಷ್ಯದ ಚಿಂತೆ ನಮ್ಮನ್ನು ಕಾಡುತ್ತಿದೆ' ಎನ್ನುತ್ತಾ ಅವರು ಕಣ್ಣೀರಾದರು.

'ತುಮಕೂರಿನಲ್ಲಿ ಎಲೆಕ್ಟ್ರಿಕಲ್ ಗುತ್ತಿಗೆದಾರರಾಗಿದ್ದ ಮಾವ ಮತ್ತು ಅಕ್ಕನಿಗೆ ಕೋವಿಡ್ ಆಗಿತ್ತು. ಅಕ್ಕ, ಮಾವ ಹಾಗೂ ಅವರ ಇಬ್ಬರು ಮಕ್ಕಳನ್ನು ನಮ್ಮೂರು ನರಗುಂದಕ್ಕೆ ಕರೆದುಕೊಂಡು ಬಂದಿದ್ದೆ. ಮೊದಲು ಅಕ್ಕ ತೀರಿಕೊಂಡರು. ನಂತರ ಮಾವ ಅಕ್ಕನ ಹಾದಿ ಹಿಡಿದರು. ಅವರ ಮಕ್ಕಳಿಬ್ಬರ ಜೀವನ ನಮ್ಮೊಂದಿಗೆ ಹೇಗೋ ನಡೆದಿದೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಮಕ್ಕಳ ಸೋದರ ಮಾವ 'ಪ್ರಜಾವಾಣಿ'ಗೆ ತಿಳಿಸಿದರು

'ಸರ್ಕಾರದಿಂದ ಮಕ್ಕಳ ಖಾತೆಗೆ ನೆರವಿನ ಹಣ ಜಮಾ ಆಗಿದೆ. ಆದರೆ, ಅದನ್ನು ಅವರಿಗೆ 18 ವರ್ಷಗಳಾಗುವವರೆಗೂ ಅವರ ಖಾತೆಯಿಂದ ತೆಗೆಯುವಂತಿಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ನನ್ನ ಆದಾಯದಲ್ಲಿಯೇ ಅವರನ್ನೂ ಸಾಕುತ್ತಿದ್ದೇನೆ. ಸರ್ಕಾರ ನನಗೇನೂ ನೆರವು ನೀಡುವುದು ಬೇಡ. ಆದರೆ, ಮಕ್ಕಳಿಗೆ ಅವಶ್ಯವಿರುವ ನೆರವು ನೀಡಲಿ. ಅವರಿಗೆ ದೊರೆಯಬೇಕಾದ ಸೌಲಭ್ಯಗಳನ್ನು ತ್ವರಿತವಾಗಿ ಕಲ್ಪಿಸಲಿ' ಎನ್ನುತ್ತಾರೆ ಅವರು.

ಖಿನ್ನತೆಗೆ ಜಾರುತ್ತಿರುವ ಅನಾಥ ಮಕ್ಕಳು: 'ತಂದೆ-ತಾಯಿಯನ್ನು ಕಳೆದುಕೊಂಡಿರುವ ಮಕ್ಕಳ ಮನಸ್ಸಿನ ಮೇಲೆ ತೀವ್ರವಾದ ಆಘಾತವಾಗುತ್ತದೆ. ಅದರಲ್ಲೂ ಪ್ರೀತಿಪಾತ್ರರಾದ ತಂದೆ, ತಾಯಿ ತೀರಿಕೊಂಡಾಗ ಉಂಟಾಗುವ ಆಘಾತ ಶಾಶ್ವತವಾಗಿರುತ್ತದೆ. ಇದರಿಂದಾಗಿ ಅವರು ಆತಂಕ ಎದುರಿಸುತ್ತಾರೆ. ಖಿನ್ನತೆಗೆ ಒಳಗಾಗುತ್ತಾರೆ. ಅಂತಹ ಹಲವಾರು ಪ್ರಕರಣಗಳಲ್ಲಿ ಚಿಕಿತ್ಸೆ ನೀಡಿದ್ದೇನೆ' ಎನ್ನುತ್ತಾರೆ ಮಾನಸಿಕ ರೋಗ ತಜ್ಞ ಡಾ.ಆನಂದ ಪಾಂಡುರಂಗಿ.

'ಅಪ್ಪ-ಅಮ್ಮನ ನೆನಪಿನಿಂದ ಹೊರಬಾರದ ಮಕ್ಕಳು ಸಹಜವಾಗಿ ಒಂಟಿಯಾಗಿ ಮಂಕಾಗಿ ಒಂದೆಡೆ ಕೂಡುತ್ತಾರೆ. ಅವರ ಊರು, ಶಾಲೆ ಎರಡೂ ಬದಲಾದ ಕಾರಣ ಹೊಸ ವಾತಾವರಣಕ್ಕೆ ಹೊಂದಿಕೊಳ್ಳಲು ಸಮಯ ಬೇಕು. ಹಳೆಯ ಶಾಲೆ, ಮನೆ, ಸ್ನೇಹಿತರ ನೆನಪು ಅವರನ್ನು ಕಾಡುವುದು ಸಹಜ' ಎಂದು ಮಕ್ಕಳ ಮನಸ್ಸಿನಲ್ಲಿ ನಡೆಯುವ ತಳಮಳಗಳನ್ನು ಬಿಚ್ಚಿಟ್ಟರು.

ಹಾಗಾಗಿ ಮಕ್ಕಳು ಪದೇ ಪದೇ ಸಣ್ಣ ವಿಷಯಗಳಿಗೂ ಸಿಟ್ಟು ಮಾಡಿಕೊಳ್ಳುತ್ತಾರೆ. ಅನವಶ್ಯಕವಾಗಿ ಏಕಾಏಕಿ ಅಳುತ್ತಾರೆ. ಅಂತಹವರನ್ನು ನಿರ್ಲಕ್ಷಿಸದೆ ಆಪ್ತ ಸಮಾಲೋಚನೆಗೆ ಒಳಪಡಿಸಬೇಕು. ತಜ್ಞರು ನೀಡುವ ಸಲಹೆಗಳನ್ನು ಮನೆಯಲ್ಲಿರುವವರು ತಪ್ಪದೇ ಪಾಲಿಸಬೇಕು. ಅವರಲ್ಲಿ ಆತ್ಮವಿಶ್ವಾಸ ತುಂಬುವಂತಹ ವಾತಾವರಣ ನಿರ್ಮಿಸಬೇಕು ಎನ್ನುವುದು ಸಂತ್ರಸ್ತ ಮಕ್ಕಳ ಪೋಷಕರಿಗೆ ವೈದ್ಯರು ನೀಡುವ ಸಲಹೆ.

ಅನಾಥ ಮಕ್ಕಳನ್ನು ಒಂಟಿಯಾಗಿ ಬಿಡಬಾರದು. ಅವರಲ್ಲಿ ಅನಾಥಪ್ರಜ್ಞೆ ಜಾಗೃತವಾಗುತ್ತದೆ. ಇತರ ಮಕ್ಕಳೊಂದಿಗೆ ಹೋಲಿಕೆ ಮಾಡಬಾರದು. ಕೀಳರಿಮೆ ಬೆಳೆಯುತ್ತದೆ. ಅವರನ್ನೂ ಎಲ್ಲರಂತೆ ಕಾಣಬೇಕು. ಆಗ ಅವರು ಮುಖ್ಯವಾಹಿನಿಗೆ ಸೇರುತ್ತಾರೆ ಎನ್ನುತ್ತಾರೆ ಡಾ.ಪಾಂಡುರಂಗಿ.

ಸಂತ್ರಸ್ತ ಮಕ್ಕಳಿಗೆ ಮಡಿಲಾದ ಮಠಗಳು

ಸುತ್ತೂರು, ತೋಂಟದಾರ್ಯ ಮಠದಲ್ಲಿ ಉಚಿತ ಶಿಕ್ಷಣ

• ಮೋಹನ್ ಕುಮಾರ ಸಿ.

ಮೈಸೂರು: ವಾತ್ಸಲ್ಯದ ಕರುಳುಬಳ್ಳಿಯನ್ನು ಕೋವಿಡ್ ಕತ್ತರಿಸಿ ಹಾಕಿದ ಬಳಿಕ ಅನಾಥರಾದ ಮಕ್ಕಳನ್ನು ಮೈಸೂರಿನ ಸುತ್ತೂರು ಮಠ ಹಾಗೂ ಗದಗದ ತೋಂಟದಾರ್ಯ ಮಠಗಳು ಅಕ್ಷರಶಃ ತಾಯಿ ಮಡಿಲಿನಂತೆ ಕಾಪಾಡುತ್ತಿವೆ.

ಅನಾಥ ಮಕ್ಕಳಿಗೆ 1ರಿಂದ 10ನೇ ತರಗತಿವರೆಗೆ ಉಚಿತ ಶಿಕ್ಷಣ ನೀಡುವುದಾಗಿ ನೀಡಿದ್ದ ವಚನವನ್ನು ಮಠಗಳು ಪಾಲಿಸುತ್ತಿವೆ. ಸುತ್ತೂರಿನಲ್ಲಿ 10 ಹಾಗೂ ಗದಗನಲ್ಲಿ 32 ಮಕ್ಕಳು ಆಶ್ರಯ ಪಡೆದಿದ್ದಾರೆ.

ಸುತ್ತೂರು ಮಠದಲ್ಲಿ ಮೂವರು ಬಾಲಕಿಯರು, ಏಳು ಬಾಲಕರಿದ್ದಾರೆ. ಅವರಲ್ಲಿ ಇಬ್ಬರು ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದಿದ್ದು, ಕಾಲೇಜು ಶಿಕ್ಷಣವನ್ನೂ ಉಚಿತವಾಗಿ ನೀಡುವುದಾಗಿ ಸಂಸ್ಥೆ ಹೇಳಿದೆ. ಜೆಎಸ್‌ಎಸ್ ವಸತಿ ಶಾಲೆಯಲ್ಲಿ ವಿಜಯಪುರ, ಚಾಮರಾಜನಗರ, ಬೆಂಗಳೂರಿನ ತಲಾ ಇಬ್ಬರು ಹಾಗೂ ರಾಮನಗರ, ದಾವಣಗೆರೆ, ಮೈಸೂರು, ಕಲಬುರಗಿಯ ತಲಾ ಒಬ್ಬರು ಶಿಕ್ಷಣ ಪಡೆಯುತ್ತಿದ್ದಾರೆ.

ತಂದೆಯನ್ನು ಕಳೆದುಕೊಂಡಿರುವ ಅಣ್ಣ-ತಂಗಿ, ಅಕ್ಕ-ತಮ್ಮ ಈ ವಸತಿಶಾಲೆಯಲ್ಲಿ ಓದುತ್ತಿದ್ದಾರೆ. ಚಾಮರಾಜನಗರದ ಬಿಸಲವಾಡಿಯ ಎಸ್.ಯೋಗೇಶ್, ಎಸ್.ದಾಕ್ಷಾಯಿಣಿ ಹಾಗೂ ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಬೆನಕೂಟಗಿ ಗ್ರಾಮದ ಆದಿತ್ಯರಾಜು ರಾಠೋಡ, ಐಶ್ವರ್ಯ ರಾಠೋಡ ಓದು ಮುಂದುವರೆಸಿದ್ದಾರೆ.

'ಸಂತ್ರಸ್ತ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವುದಾಗಿ 2021ರ ಮೇ ತಿಂಗಳಲ್ಲಿ ಘೋಷಿಸಿದ್ದೆವು. ಕಡುಬಡ ಕುಟುಂಬದ 12 ಮಂದಿ ಪ್ರವೇಶ ಪಡೆದಿದ್ದರು. ಇಬ್ಬರಷ್ಟೇ ಶಾಲೆ ಬಿಟ್ಟು ಸಂಬಂಧಿಕರ ಮನೆಗೆ ತೆರಳಿದರು. ಉಳಿದವರು ನೋವು ಮರೆತು ಎಲ್ಲಾ ಮಕ್ಕಳೊಂದಿಗೆ ಬೆರೆತಿದ್ದಾರೆ' ಎಂದು ವಸತಿ ಶಾಲೆಯ ಸಮನ್ವಯಾಧಿಕಾರಿ ಜಿ.ಎಲ್.ತ್ರಿಪುರಾಂತಕ 'ಪ್ರಜಾವಾಣಿ' ಜತೆ ಮಾಹಿತಿ ಹಂಚಿಕೊಂಡರು.



ಗದುಗಿನ ತೋಂಟದಾರ್ಯ ಮಠ

'ಮಕ್ಕಳು ಮನೆಯಲ್ಲೇ ಇದ್ದಿದ್ದರೆ ಪೋಷಕರ ನೆನಪು ಕಾಡುವ ಸಾಧ್ಯತೆ ಇತ್ತು. ಶಾಲೆಯಲ್ಲಿ ಖಿನ್ನತೆಗೆ ಒಳಗಾಗುವ ಸಾಧ್ಯತೆಯೂ ಇತ್ತು. ಅವರೆಲ್ಲ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಯಲ್ಲಿ ಉತ್ಸಾಹದಿಂದ ಪಾಲ್ಗೊಂಡರು. ಈ ಮಕ್ಕಳಲ್ಲಿ ಅನಾಥಪ್ರಜ್ಞೆ ಸುಳಿಯದಂತೆ ಎಚ್ಚರ ವಹಿಸಿದೆವು' ಎಂದರು.

32 ಮಕ್ಕಳಿಗೆ ಆಸರೆ: ತೋಂಟದಾರ್ಯ ಮಠದಲ್ಲಿ ಪ್ರಾಥಮಿಕ ಶಾಲಾ ಹಂತದಿಂದ ಎಂಜಿನಿಯರಿಂಗ್‌ವರೆಗೆ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ.

'ಮಠ ಘೋಷಿಸಿದ್ದಂತೆ ನಡೆದುಕೊಂಡಿದೆ. ಕೋವಿಡ್‌ನಿಂದ ಪೋಷಕರು ಮೃತಪಟ್ಟಿದ್ದಾರೆ ಎಂಬ ಪ್ರಮಾಣಪತ್ರವನ್ನೂ ಮಕ್ಕಳಿಂದ ಪಡೆಯಲಿಲ್ಲ. ನೆರವು ಕೇಳಿ ಬಂದವರೆಲ್ಲರಿಗೂ ಮಾನವೀಯತೆಯ ಆಧಾರದಲ್ಲಿ ಅವಕಾಶ ಕಲ್ಪಿಸಲಾಗಿದೆ' ಎಂದು ಮಠದ ಆಡಳಿತಾಧಿಕಾರಿ ಎಸ್.ಎಸ್.ಪಟ್ಟಣಶೆಟ್ಟಿ ತಿಳಿಸಿದರು.

'ಪ್ರಾಥಮಿಕ, ಪ್ರೌಢಶಾಲಾ ವಿದ್ಯಾರ್ಥಿಗಳ ಜತೆಗೆ ನಾಲ್ವರಿಗೆ ಎಂಜಿನಿಯರಿಂಗ್ ಪದವಿ ಶಿಕ್ಷಣಕ್ಕೂ ಅವಕಾಶ ಮಾಡಿಕೊಟ್ಟಿದ್ದು, ಎಲ್ಲ ಶುಲ್ಕ ಮನ್ನಾ ಮಾಡಲಾಗಿದೆ' ಎಂದರು.

ಪೂರಕ ಮಾಹಿತಿ: ಸತೀಶ್ ಬೆಳ್ಳಕ್ಕಿ, ಗದಗ

ಹೆಣ್ಣುಮಕ್ಕಳ ಕೈಸೇರದ ಸಹಾಯಧನ, ಲ್ಯಾಪ್‌ಟಾಪ್

ಹಿತೈಷಿ ಇಲ್ಲ, ಸಂಬಂಧಿಕರೇ ಎಲ್ಲ!

ದಾವಣಗೆರೆ: ಕೋವಿಡ್‌ನಿಂದ ಪೋಷಕರನ್ನು ಕಳೆದುಕೊಂಡು ಅನಾಥರಾಗಿರುವ ಬಹುತೇಕ ಮಕ್ಕಳಿಗೆ ಸರ್ಕಾರದಿಂದ ಸಹಾಯಧನ ಬರುತ್ತಿದೆ. ಆದರೆ, ಎಸ್ಸೆಸ್ಸೆಲ್ಸಿ ಮುಗಿಸಿದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸುವ ಮತ್ತು 21 ವರ್ಷ ತುಂಬಿದ ಹೆಣ್ಣುಮಕ್ಕಳಿಗೆ ಬದುಕು ಕಟ್ಟಿಕೊಳ್ಳಲು ₹1 ಲಕ್ಷ ಆರ್ಥಿಕ ನೆರವು ನೀಡುವ ಸರ್ಕಾರದ ವಾಗ್ದಾನ ಮಾತ್ರ ಇನ್ನೂ ಈಡೇರಿಲ್ಲ.

ಯಾರ ಆಶ್ರಯವೂ ಇಲ್ಲದ ಅನಾಥ ಮಕ್ಕಳನ್ನು ನೋಡಿಕೊಳ್ಳಲು ಮಾರ್ಗದರ್ಶಿ ಅಥವಾ ಹಿತೈಷಿಗಳ ನೇಮಕ ಮಾಡುವುದಾಗಿ ಸರ್ಕಾರ ಹೇಳಿತ್ತು. ಆದರೆ, ಅದಕ್ಕೆ ಯಾರಿಂದಲೂ ಬೇಡಿಕೆ ಬಂದಿಲ್ಲ. ಅಪ್ಪ, ಅಮ್ಮನನ್ನು ಕಳೆದುಕೊಂಡ ಬಹುತೇಕ ಮಕ್ಕಳು ಹತ್ತಿರದ ಸಂಬಂಧಿಕರ ಆಶ್ರಯದಲ್ಲಿಯೇ ಬೆಳೆಯುತ್ತಿದ್ದಾರೆ.

ದಾವಣಗೆರೆ ಜಿಲ್ಲೆಯಲ್ಲಿ ನಾಲ್ವರು ಮಕ್ಕಳ ಪೈಕಿ ಒಬ್ಬರಿಗೆ ಮಾತ್ರ ಲ್ಯಾಪ್‌ಟಾಪ್ ಬಂದಿದೆ. ನಾಲ್ವರಿಗೂ ಸಹಾಯಧನ ಬರುತ್ತಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಐವರು ಮಕ್ಕಳಿಗೆ ಸಹಾಯಧನ ಸಿಗುತ್ತಿದೆ. ಇಬ್ಬರಿಗೆ ಕೇಂದ್ರೀಯ ವಿದ್ಯಾಲಯದಲ್ಲಿ ಶಿಕ್ಷಣ ಪಡೆಯಲು ವ್ಯವಸ್ಥೆ ಮಾಡಲಾಗಿದೆ.



ಕೊಡಗು, ಮೈಸೂರಿನಲ್ಲಿ 10ನೇ ತರಗತಿ ಪೂರೈಸಿದ ಮೂವರಿಗೆ ಲ್ಯಾಪ್‌ಟಾಪ್ ನೀಡಲಾಗಿದೆ. ಚಾಮರಾಜನಗರದಲ್ಲಿ ಅನಾಥಳಾದ ಐದು ವರ್ಷದ ಹೆಣ್ಣು ಮಗು ಚಿಕ್ಕಪ್ಪ-ಚಿಕ್ಕಮ್ಮನ ಆಶ್ರಯದಲ್ಲಿ ಬೆಳೆಯುತ್ತಿದೆ.

'ಸರ್ಕಾರಿ ವಸತಿಶಾಲೆಗಳಿಗೆ ಸೇರುವುದಕ್ಕೆ ಅವಕಾಶ ಇದ್ದರೂ ಮಕ್ಕಳು ಆಸಕ್ತಿ ತೋರುತ್ತಿಲ್ಲ. ಏಕ ಪೋಷಕರಿರುವ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಕರೇ ನೆರವಾಗುತ್ತಿದ್ದಾರೆ' ಎಂದು ಮೈಸೂರಿನ ಡಿಡಿಪಿಐ ರಾಮಚಂದ್ರರಾಜೇ ಅರಸ್ ಮಾಹಿತಿ ನೀಡಿದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರು ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇಬ್ಬರು ಲ್ಯಾಪ್‌ಟಾಪ್ ಪಡೆಯಲು ಅರ್ಹರಾಗಿದ್ದಾರೆ. ಲ್ಯಾಪ್‌ಟಾಪ್ ಬಂದಿದ್ದರೂ ಇನ್ನೂ ಫಲಾನುಭವಿಗಳ ಕೈ ಸೇರಿಲ್ಲ. ಬೆಂಗಳೂರಿನಲ್ಲಿ ಪದವಿ ಶಿಕ್ಷಣ ಪಡೆಯಲು ನೆರವು ನೀಡಬೇಕು ಎಂದು ಮನವಿ ಮಾಡಿರುವ ಚಿಕ್ಕಮಗಳೂರು ಜಿಲ್ಲೆಯ ವಿದ್ಯಾರ್ಥಿನಿಯೊಬ್ಬರಿಗೆ ಬೆಂಗಳೂರಿನಲ್ಲಿ ಕಾಲೇಜಿಗೆ ಪ್ರವೇಶ ಒದಗಿಸಿ, ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಿಕೊಡಲಾಗಿದೆ.

ಧಾರವಾಡ ಜಿಲ್ಲೆಯಲ್ಲಿ ಐವರು ಮಕ್ಕಳು ಅನಾಥರಾಗಿದ್ದು, ವಸತಿಶಾಲೆಗೆ ಸೇರಿಸಲಾಗಿದೆ. 10ನೇ ತರಗತಿ ಪೂರೈಸಿದ ಒಬ್ಬ ವಿದ್ಯಾರ್ಥಿಗೆ ಲ್ಯಾಪ್‌ಟಾಪ್ ವಿತರಿಸಲಾಗಿದೆ. ಹಾವೇರಿ ಜಿಲ್ಲೆಯಲ್ಲಿ ಒಬ್ಬ ವಿದ್ಯಾರ್ಥಿನಿಗೆ ಲ್ಯಾಪ್‌ಟಾಪ್ ನೀಡಲಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ಕೋವಿಡ್‌ನಿಂದ 17 ಮಕ್ಕಳು ಅನಾಥರಾಗಿದ್ದು, ಅವರನ್ನು ವಸತಿಶಾಲೆಗೆ ಸೇರಿಸುವ ಕೆಲಸ ಆಗಿಲ್ಲ. ಲ್ಯಾಪ್‌ಟಾಪ್ ವಿತರಣೆಯೂ ಆಗಿಲ್ಲ. ಸಮಾಧಾನಕರ ಅಂಶವೆಂದರೆ ಗದಗ ಜಿಲ್ಲೆಯಲ್ಲಿ ಅನಾಥರಾಗಿರುವ ಎಂಟು ಮಕ್ಕಳಿಗೆ ವಸತಿಶಾಲೆಗಳಲ್ಲಿ ಪ್ರವೇಶ ಕಲ್ಪಿಸಲಾಗಿದೆ. ಆದರೆ, ಎಸ್ಸೆಸ್ಸೆಲ್ಸಿ ಪೂರೈಸಿದ ಮಕ್ಕಳ ಕೈಗೆ ಲ್ಯಾಪ್‌ಟಾಪ್ ಸೇರಿಲ್ಲ.

ಅಜ್ಜಿ ಮನೆಯಲ್ಲಿ ಅಕ್ಕ, ಸಂಬಂಧಿ ಬಳಿ ತಂಗಿ

• ಡಿ.ಎಂ. ಕುರ್ಕೆ ಪ್ರಶಾಂತ್

ಚಿಕ್ಕಬಳ್ಳಾಪುರ: 'ನಾನೇ ದೊಡ್ಡ ಮಗಳು. ನನಗೆ ಇಬ್ಬರು ತಂಗಿಯರು. ನಾನು ಚಿಕ್ಕಂದಿನಿಂದಲೂ ಅಜ್ಜಿ ಮನೆ (ತಾಯಿಯ ತವರು)ಯಲ್ಲಿ ಬೆಳೆದೆ. ನನ್ನ ತಂಗಿಯರು ಅಪ್ಪ, ಅಮ್ಮನ ಜತೆ ಇದ್ದರು. ಅಪ್ಪ, ಅಮ್ಮ ಇಲ್ಲದ ಕೊರಗು ಅವರನ್ನು ಹೆಚ್ಚು ಬಾಧಿಸುತ್ತಿದೆ' ಎನ್ನುತ್ತ ಮಾತಿಗಿಳಿದ ಮಂಗಳಾ, ಮಾತು ಮುಗಿಯುವ ಮುನ್ನವೇ ಭಾವುಕರಾದರು.

ಚಿಂತಾಮಣಿ ತಾಲ್ಲೂಕಿನ ಪೆರಮಾಚನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವೆಂಕಟಾಪುರ ಗ್ರಾಮದ ಮಂಗಳಾ ಈಗ ಶಿಡ್ಲಘಟ್ಟ ತಾಲ್ಲೂಕಿನ ಪಿಲ್ಲಗುಂಡ್ಲಹಳ್ಳಿಯಲ್ಲಿರುವ ಅಜ್ಜಿ ಮನೆಯಲ್ಲಿದ್ದಾರೆ. ಮಂಗಳಾಗೆ ಲಲಿತಾ ಮತ್ತು ಭಾಗ್ಯಲಕ್ಷ್ಮಿ ಎಂಬ ಇಬ್ಬರು ತಂಗಿಯರಿದ್ದಾರೆ. ಕೋವಿಡ್ ಮೂವರು ಸಹೋದರಿಯರ ತಂದೆ ಶ್ರೀರಾಮಪ್ಪ ಹಾಗೂ ತಾಯಿ ವಿಜಯಮ್ಮ ಅವರನ್ನು ಬಲಿ ಪಡೆದಿದೆ. ಕೇವಲ ಎರಡು ವಾರದ ಅಂತರದಲ್ಲಿ ತಂದೆ, ತಾಯಿಯ ಅಗಲಿಕೆಯನ್ನು ಈ ಹೆಣ್ಣುಮಕ್ಕಳು ಅನುಭವಿಸಬೇಕಾಯಿತು.

ಈಗ ಮಂಗಳಾ ಮತ್ತು ಲಲಿತಾ ಪಿಲ್ಲಗುಂಡ್ಲಹಳ್ಳಿಯ ಅಜ್ಜಿ ಮನೆಯಲ್ಲಿದ್ದರೆ, ಮತ್ತೊಬ್ಬ ಸಹೋದರಿ ಭಾಗ್ಯಲಕ್ಷ್ಮಿ ವೆಂಕಟಾಪುರದಲ್ಲಿದ್ದಾಳೆ. ಪೋಷಕರನ್ನು ಕಳೆದುಕೊಂಡ ನೋವು ಒಂದೆಡೆಯಾದರೆ, ನೋವು ಹಂಚಿಕೊಳ್ಳಬೇಕಾಗಿದ್ದ ಒಡಹುಟ್ಟಿದ ಸಹೋದರಿಯರು ದೂರವಾದ ನೋವು ಈ ಹೆಣ್ಣು ಮಕ್ಕಳಿಗಿದೆ.

ಮುಖ್ಯಮಂತ್ರಿ ಬಾಲಸೇವಾ ಯೋಜನೆಯಡಿ ಈ ಮೂರು ಮಂದಿ ಹೆಣ್ಣು ಮಕ್ಕಳಿಗೆ ಪ್ರತಿ ತಿಂಗಳು ಆರ್ಥಿಕ ನೆರವು ದೊರೆಯುತ್ತಿದೆ. ಈ ಹಣ ಸದ್ಯ ಅವರ ಶೈಕ್ಷಣಿಕ ವೆಚ್ಚಗಳಿಗೆ ಸಾಕಾಗುತ್ತಿದೆ.



'ನಮ್ಮದು ಸ್ಥಿತಿವಂತರ ಕುಟುಂಬವಲ್ಲ. ಅಂದಿನ ದುಡಿಮೆಯೇ ಜೀವನಕ್ಕೆ ಆಧಾರ. ಅಪ್ಪ, ಅಮ್ಮ ಇದ್ದಾಗ ತುಂಬಾ ಚೆನ್ನಾಗಿ ಇದ್ದೆವು. ಈಗ ಅಜ್ಜಿ ಮನೆಯಲ್ಲಿ ಇದ್ದೇವೆ. ಅವರೂ ಸ್ಥಿತಿವಂತರೇನೂ ಅಲ್ಲ. ನಮ್ಮ ಮಾವ ಆಟೊ ಓಡಿಸಿ ತಂದ ದುಡಿಮೆಯಲ್ಲಿಯೇ ಬದುಕು ನಡೆಯಬೇಕು. ನಾನು ಈಗ ಪಿಯುಸಿ ಓದುತ್ತಿದ್ದೇನೆ. ಲಲಿತಾ ಈಗ 9ನೇ ತರಗತಿ. ಜಯಲಕ್ಷ್ಮಿ 10ನೇ ತರಗತಿ. ನಾನೂ ಓದದಿದ್ದರೂ ಪರವಾಗಿಲ್ಲ, ನನ್ನ ತಂಗಿಯರನ್ನು ಓದಿಸಬೇಕು. ಅದೇ ನನ್ನ ಗುರಿ' ಎನ್ನುತ್ತಾರೆ ಮಂಗಳಾ.

'ರಜೆ ಇದ್ದಾಗ ಭಾಗ್ಯಲಕ್ಷ್ಮಿ ಪಿಲ್ಲಗುಂಡ್ಲಹಳ್ಳಿಗೆ ಬರುತ್ತಾಳೆ. ನನ್ನ ತಂಗಿಯರು ಇನ್ನೂ ಚಿಕ್ಕವರು. ಅಪ್ಪ, ಅಮ್ಮ ಇಲ್ಲ ಎನ್ನುವ ನೋವು ಅವರನ್ನು ಹೆಚ್ಚು ಕಾಡುತ್ತಿದೆ. ಆದರೆ, ಅದನ್ನು ನನ್ನ ಬಳಿಯೂ ಹೆಚ್ಚು ಹೇಳಿಕೊಳ್ಳುವುದಿಲ್ಲ. ಅಪ್ಪ, ಅಮ್ಮ ಇದ್ದಿದ್ದರೆ ಎಲ್ಲ ಭಾವನೆಗಳನ್ನು ಅವರ ಜತೆ ಹಂಚಿಕೊಳ್ಳಬಹುದಿತ್ತು' ಎಂದು ಕಣ್ಣಂಚಿನಲ್ಲಿ ಜಿನುಗಿದ ಹನಿಗಳನ್ನು ಒರೆಸಿಕೊಂಡರು.

ಕೋವಿಡ್‌ನಿಂದ ಅಪ್ಪ, ಅಮ್ಮ ಇಬ್ಬರನ್ನೂ ಕಳೆದುಕೊಂಡ ಮಕ್ಕಳ ಸಂಖ್ಯೆ	
ಬಾಗಲಕೋಟೆ	3
ರಾಯಚೂರು	3
ಬೆಳಗಾವಿ	3
ಬಳ್ಳಾರಿ	3
ಬೆಂಗಳೂರು ನಗರ	2
ಮೈಸೂರು	2
ಬೀದರ್	2
ಬೆಳಗಾವಿ	2
ಕೋಲಾರ	1
ಚಾಮರಾಜನಗರ	1
ದಾವಣಗೆರೆ	1
ಹಾವೇರಿ	1
ಕಲಬುರಗಿ	1
ಕೊಪ್ಪಳ	1
ರಾಯಚೂರು	1

ಕೋವಿಡ್‌ನಿಂದ ಅನಾಥರಾದ (ತಂದೆ ಅಥವಾ ತಾಯಿ ಅಥವಾ ಇಬ್ಬರನ್ನೂ ಕಳೆದುಕೊಂಡ) ಮಕ್ಕಳ ಸಂಖ್ಯೆ	
ಬೆಂಗಳೂರು ನಗರ	12
ಚಿಕ್ಕಬಳ್ಳಾಪುರ	12
ಕೋಲಾರ	7
ಬೀದರ್	6
ಯಾದಗಿರಿ	6
ಹಾಸನ	6
ಬಾಗಲಕೋಟೆ	5
ತುಮಕೂರು	5
ಶಿವಮೊಗ್ಗ	5
ಗದಗ	5
ದಕ್ಷಿಣ ಕನ್ನಡ	5
ಧಾರವಾಡ	4
ಕೊಡಗು	4
ಮೈಸೂರು	4
ರಾಮನಗರ	4
ವಿಜಯಪುರ	2
ದಾವಣಗೆರೆ	2
ಚಿತ್ರದುರ್ಗ	2
ಬೆಂಗಳೂರು ಗ್ರಾ. ಜಿಲ್ಲೆ	0
ಉಡುಪಿ	0
ಉತ್ತರ ಕನ್ನಡ	0

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 17-4-1997

• **ಇಂದು ಸಂಯುಕ್ತ ರಂಗದ ಹೊಸ ನಾಯಕನ ಆಯ್ಕೆ**

ಚೆನ್ನೈ, ಏ.16– ನಾಳೆ ದೆಹಲಿಯಲ್ಲಿ ನಡೆಯಲಿರುವ ಸಂಯುಕ್ತ ರಂಗದ ಸಂಚಾಲನಾ ಸಮಿತಿಯ ಮಹತ್ವದ ಸಭೆಯಲ್ಲಿ ನಾಯಕತ್ವದ ವಿಷಯ ಬಗೆಹರಿಯಲಿದ್ದು, ಕಾಂಗ್ರೆಸ್ ಬೆಂಬಲಿತ ಸಂಯುಕ್ತ ರಂಗ ಸರ್ಕಾರವನ್ನು ಉಳಿಸಿಕೊಳ್ಳುವ ಭರವಸೆಯನ್ನು ಸಂಚಲನಾ ಸಮಿತಿಯ ಸದಸ್ಯ ಹಾಗೂ ತಮಿಳು ಮಾನಿಲ ಕಾಂಗ್ರೆಸ್ ಅಧ್ಯಕ್ಷ ಜಿ.ಕೆ. ಮೂಪನಾರ್ ವ್ಯಕ್ತಪಡಿಸಿದ್ದಾರೆ.

ಸಂಯುಕ್ತ ರಂಗದ ಸಂಸದೀಯ ಪಕ್ಷದ ಹೊಸ ನಾಯಕನನ್ನು ಸಭೆಯಲ್ಲಿ ಒಮ್ಮತದಿಂದ ಚುನಾಯಿಸಲಾಗುವುದು ಎಂದು ಕಳೆದ ರಾತ್ರಿ ದೆಹಲಿಯಿಂದ ಚೆನ್ನೈಗೆ ಆಗಮಿಸಿದ ಮೂಪನಾರ್ ಇಲ್ಲಿನ ಸತ್ಯಮೂರ್ತಿ ಭವನದಲ್ಲಿ ತಿಳಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 17-4-1972

• **ಚಂದ್ರಗ್ರಹಕ್ಕೆ ಅಪೋಲೊ ಹದಿನಾರು**

ಕೇಪ್, ಕೆನಡಿ, ಏ.16 – ಚಂದ್ರಗ್ರಹದತ್ತ ಅಪೋಲೊ–16 ಬಾಹ್ಯಾಕಾಶನೌಕೆಯನ್ನು ಇಂದು ರಾತ್ರಿ ಭಾರತೀಯ ಕಾಲಮಾನ 11.24ಕ್ಕೆ ಸರಿಯಾಗಿ ಹಾರಿಸಲಾಯಿತು.

ಸ್ಯಾಟರ್ನ್–5 ರಾಕೆಟ್ ಬಾಹ್ಯಾಕಾಶ ನೌಕೆಯನ್ನು ಮೇಲಕ್ಕೆ ಒಯ್ದಿತು.

• **'ಪ್ರತಿಜಿಲ್ಲೆಯಲ್ಲೂ ಮಣ್ಣು ಪರೀಕ್ಷೆ ಪ್ರಯೋಗಾಲಯ ಸ್ಥಾಪನೆ'**

ಹುಬ್ಬಳ್ಳಿ, ಏ. 16– ರಾಜ್ಯ ಸರ್ಕಾರವು ಪ್ರತಿ ಜಿಲ್ಲೆಯಲ್ಲೂ ಮಣ್ಣು ಪರೀಕ್ಷೆ ಪ್ರಯೋಗಾಲಯವನ್ನು ಸ್ಥಾಪಿಸುವುದೆಂದು ರಾಜ್ಯ ಕೃಷಿ ಮತ್ತು ಅರಣ್ಯ ಸಚಿವ ಕೆ.ಎಚ್.ಪಾಟೀಲ್ ಅವರು ಇಂದು ಇಲ್ಲಿ ಹೇಳಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಏಪ್ರಿಲ್ 17, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು – ಮೇಷ ಮಾಸದ 03 ನೇ ದಿನ ತಿಥಿ: (ಚೈತ್ರ ಕೃಷ್ಣ) ಪ್ರತಿಪದ್ ಗಂ. 22-02 ನಕ್ಷತ್ರ: ಚಿತ್ತಾ ಗಂ. 07-17, ಸ್ವಾತಿ ಗಂ. 29-34 ಯೋಗ: ವಜ್ರ ಗಂ. 23-40, ಕರಣ: ಬಾಲವ ಗಂ. 11-16.
ರಾಹುಕಾಲ : ಸಾಯಂಕಾಲ 04:30 – 06:00
ಸೂರ್ಯೋದಯ : 06-20 ಸೂರ್ಯಾಸ್ತ : 06-40, ಮುಸ್ಲಿಂ ದಿನಾಂಕ : 15 ರಂಜಾನ್
ದಿನ ವಿಶೇಷ : ಈಸ್ಟರ್ ಭಾನುವಾರ, ಪಾಸೋವರ್ ಮೊದಲ ದಿನ (ಪೀಷ್) ಜ್ಯೂಯಿಷ್
ಅದೃಷ್ಟ ಸಂಖ್ಯೆ: 4, 8

ಮೇಷ: ಸಂತೋಷದ ಸಮಯದ ನಡುವೆಯೂ ಒತ್ತಡದಿಂದಿರುವುದು ನಿಮ್ಮ ಜಾಯಮಾನದಂತಾಗಲಿದೆ. ಕಾರ್ಯರಂಗದಲ್ಲಿ ಅನುಭವಸ್ಥರ ಸಹಯೋಗದಿಂದಾಗಿ ಪ್ರಗತಿಯನ್ನು ನೋಡಬಹುದು.

ವೃಷಭ: ಅಧಿಕಾರದಲ್ಲಿ ಸ್ಥಾನಮಾನ ಪಡೆಯಲು ದೇವರ ಸೇವೆಯಂತಹ ಧಾರ್ಮಿಕ ಕಾರ್ಯಗಳನ್ನು ನಡೆಸುವುದು ಒಳ್ಳೆಯದು. ಸಂಸಾರದಲ್ಲಿ ಅಂತಃಕಲಹಗಳು ನೆಡೆದು, ಅಸಮಾಧಾನಕ್ಕೆ ಕಾರಣವಾಗಲಿದೆ.

ಮಿಥುನ: ಶೀತಬಾಧೆಯಿಂದಾಗಿ ದಿನದ ಚಟುವಟಿಕೆಯಲ್ಲಿ ವ್ಯತ್ಯಾಸಗಳಾಗುತ್ತದೆ. ಸಾಹಸಿ ಕಾರ್ಯವನ್ನು ಮಾಡುವ ಮನಸ್ಥಿತಿ ಹೊಂದಿದವರಿಗೆ ದಾಖಲೆಯನ್ನು ಸೃಷ್ಟಿಸುವ ಅವಕಾಶ ಸಿಗುವುದು.

ಕರ್ಕಾಟಕ: ಹೊಸ ಮನೆಯ ಕೆಲಸಗಳು ಮುಗಿದು ಹಿರಿಯರ ಸಲಹೆಯಂತೆಯೇ ಗೃಹ ಪ್ರವೇಶದ ದಿನ ನಿಗದಿಗೊಳಿಸುವಿರಿ. ಮಗಳ ವಿಚಾರದಲ್ಲಿ ಮಹತ್ವದ ನಿರ್ಧಾರ ಕೈಗೊಳ್ಳಬೇಕಾದ ಅನಿವಾರ್ಯತೆ ಉಂಟಾಗಲಿದೆ.

ಸಿಂಹ: ನಾಟಕ ಕಲಾವಿದವರಿಗೆ ಹೆಚ್ಚಿನ ಮನ್ನಣೆ ಸಿಗುವುದು. ಮಕ್ಕಳ ಜೊತೆ ಸಮಾರಂಭಗಳಲ್ಲಿ ಭಾಗವಹಿಸುವಿರಿ. ಕುಟುಂಬದ ಮಾರ್ಗಸೂಚಕರ ಮಾರ್ಗಸೂಚಿಯಂತೆ ಕಳೆದು ಹೋಗಿದ್ದ ವಸ್ತುಗಳೂ ಸಹ ಪತ್ತೆಯಾಗುವುವು.

ಕನ್ಯಾ: ಪರೋಪಕಾರ ಮತ್ತು ಪಾರಮಾರ್ಥಿಕ ವಿಷಯಗಳತ್ತ ಮನಸ್ಸು ಹರಿಯುವುದು. ಹೆಚ್ಚಿನ ಮನೋಬಲದಿಂದ ಕಾರ್ಯ ಸಾಧಿಸಿಕೊಳ್ಳುವಿರಿ. ನಿಮ್ಮ ಆಹಾರ ಸೇವನೆ ವಿಧಾನ ಬದಲಾಯಿಸಿ ಕೊಳ್ಳಬೇಕಾಗುವುದು.

ತುಲಾ: ವೈದ್ಯರಿಗೆ ತುರ್ತು ಕೆಲಸಗಳಿಂದ ದಿನದ ಅಧಿಕ ಸಮಯ ಬಿಡುವಿಲ್ಲ-ದಂತಾಗುವುದು. ತಾಂತ್ರಿಕ ವಿದ್ಯಾರ್ಥಿಗಳಿಗೆ ಓದಿನಲ್ಲಿ ಪರಿಶ್ರಮದ ಅಗತ್ಯವಿದೆ. ಹೆಂಡತಿ ಮಕ್ಕಳ ಆರೋಗ್ಯ ಉತ್ತಮವಾಗಿರುವುದು. ನೀಲಿ ಬಣ್ಣ ಶುಭ ತರಲಿದೆ.

ವೃಶ್ಚಿಕ: ವೃದ್ಧಾಶ್ರಮ ವಾಸಿಗಳಿಗೆ ಹೆಚ್ಚಿನ ಸಹಾಯ ಮತ್ತು ಸಿಹಿತಿನಿಸುಗಳು ಸಿಗಲಿದೆ. ಮನೆಯಲ್ಲಿ ಧಾರ್ಮಿಕ ಸಮಾರಂಭಗಳ ಸಿದ್ಧತೆ ನೆಡೆಯಲಿದೆ. ಹೊಸ ವ್ಯವಹಾರದಲ್ಲಿ ತಂದೆ-ತಾಯಿಯ ಆಶೀರ್ವಾದ, ಸಹಕಾರ ದೊರೆಯಲಿದೆ.

ಧನು: ಹೊಸ ವ್ಯಾಪಾರ ವ್ಯವಹಾರಗಳಿಂದಾಗಿ ಈ ದಿನ ವೃತ್ತಿಪರ ಸ್ಥಳ ಬದಲಾ-ವಣೆಯಾಗುವ ಸಂಭವವಿದೆ. ನಿಮ್ಮ ಅಧಿಕ ಪ್ರಯತ್ನದಿಂದಾಗಿ ಹಣ ಮತ್ತು ನಿಮ್ಮ ಗ್ರಹಾನುಕೂಲದಿಂದ ಖ್ಯಾತಿಗಳೆರಡನ್ನೂ ಪಡೆದುಕೊಳ್ಳುವಿರಿ.

ಮಕರ: ಈ ದಿನವು ನಿಮಗೆ ವೈಯಕ್ತಿಕ ಅಭಿವೃದ್ಧಿಗೂ ಸಾಮಾಜಿಕ ಏಳಿಗೆಗೂ ಅನುಕೂಲ ಮಾಡಲಿದೆ. ಪತ್ರಿಕಾ ವರದಿಗಾರರಿಗೆ ಈ ದಿನವು ಬಹಳ ವಿಶೇಷ ದಿನವಾಗಿ ಸದಾಕಾಲ ನೆನಪಿರುವಂತೆ ಆಗಬಹುದು.

ಕುಂಭ: ನಿಮ್ಮ ಬಗ್ಗೆ ಕಾಳಜಿ ಹೊಂದಿದವರ ಸಲಹೆಗಳಿಗೆ ಕಿವಿಗೊಡಿ, ಅದರಿಂದಾಗಿ ಅನುಕೂಲವಾಗುವುದು. ಯಾವುದೇ ಕೆಲಸ ಮಾಡುವ ಮುನ್ನ ವಾಸ್ತವಾಂಶಗಳನ್ನು ಅರಿತುಕೊಳ್ಳುವ ಪ್ರಯತ್ನ ಒಳ್ಳೆಯದು.


ಮೀನ: ಇದುವರೆಗೆ ನೀವು ಮಾಡಿ ಮುಗಿಸಬೇಕೆಂದು ಆಲೋಚಿಸಿದ್ದ ಮನೆಯ ಕೆಲಸಗಳನ್ನೆಲ್ಲಾ ಈ ದಿನ ಪೂರ್ಣಗೊಳಿಸುವಿರಿ. ಶ್ರೀಮಂತಿಕೆಯ ಬದುಕಿಗೆ ಮನಸ್ಸು ಹಾತೊರೆಯುವುದು.

ಪದಬಂಧ 4930

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹಿಂದೆ ನಡೆದಿರುವ ಕಥೆ (4)
3.ಕೋಲನ್ನು ಹಿಡಿದು ಮಾಡಿದ ಗದ್ದಲ (4)
5.ಗುಣವಂತ ಹಿಡಿದಿರುವ ದೊಡ್ಡ ಮಡಕೆ (3)
6.ಕನ್ನಡಿಗ ಹಿಡಿದಿರುವ ಸ್ಕ್ರೂ! (3)
8.ವ್ಯಾಕರಣದಲ್ಲಿ ಗಂಡು ಜಾತಿಯನ್ನು ಸೂಚಿಸುವ ಶಬ್ದ (3)
9.ಅಂಕಣದಲ್ಲಿರುವ ಸಂಖ್ಯೆ ಕಾಣುತ್ತಿದೆಯೇ? (2)
10.ಆನೆ ಕುದುರೆಗಳನ್ನು ಕಟ್ಟುವ ಜಾಗ (2)
11.ಈ ರೀತಿ ವಂದಿಸು (3)
12.ತಿರುಗಿದ ಮಗನಿಗೆ ಇದು ಸಲೀಸು! (3)
14.ಸಾರ ತೆಗೆದ ವಸ್ತು ಕೊನೆಗೆ ದೀರ್ಘವಾಗಿದೆ (3)
16.ಚಾರ ಕೊನೆಗಿದ್ದಾಗಲೇ ಈ ದುರದೃಷ್ಟ! (4)
17.ನಾಳದಲ್ಲಿರುವ ತೆಂಗಿನಕಾಯಿ (4)

ಮೇಲಿಂದ ಕೆಳಕ್ಕೆ
1.ಅಭ್ಯುದ್ಯಯ ಇಲ್ಲಿ ಕಾಣುತ್ತಿದೆ (3)
2.ನಡುಗುತ್ತಲೇ ಬೀರಿದ ಮಂದಹಾಸ (2)
3.ಮಹಿಷ ಇಲ್ಲಿಗೆ ಬಂದಿದೆಯಲ್ಲಾ? (2)
4.ವಂಗದೇಶದ ಸಾಂಬಾರ ದ್ರವ್ಯ (3)
7.ಈ ರೀತಿ ಸಮರ್ಥಿಸು (5)
8.ಹೀಗೆ ಮಾತಿನಲ್ಲಿ ನಯವಾಗಿ ಉಬ್ಬಿಸು (5)
11.ಉಗುರಿನ ಮೊನೆ (3)
13. ಮರಳ ಬಳಿಯಿರುವ ಹುಚ್ಚ (3)
14.ಜೀವಂತ ವಸ್ತುವಿದು (2)
15.ಉಲ್ಟಾ ಬಿದ್ದಿರುವ ಮರದ ದಿಮ್ಮಿ (2)



4929 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಧನವಿಹೀನ 3.ಲವಂಗ 5.ನಿರಪರಾಧಿ 7.ವಿಸ್ಮೃತಿ 8.ಹೊಸಜೀವನ 10.ಕರುಳು 11.ಪಾರಿತೋಷಕ 14.ರುಸುಮು 15.ಸಮರಸಿಂಹ
ಮೇಲಿಂದ ಕೆಳಕ್ಕೆ: 1.ಧಮನಿ 2.ವಿಕೋಪ 4.ಗರತಿ 6.ರಾಯಸ 7.ವಿಪಿನ 8.ಹೊಕ್ಕುಳು 9.ವಲ್ಲರಿ 10.ಕದಿರು 12.ತೋಣರ 13.ಕಲಹ

ಸುಡೊಕು 5316

1				2			8	4
	6	7			9		5	2
	8			4				
2							6	
		4		3				1
5								3
		5		9			7	6
7			2		6	8		
9	4			7				5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5315 ಸುಡೊಕು

9	4	1	5	6	7	2	3	8
6	7	8	2	3	9	1	4	5
5	3	2	4	1	8	9	6	7
2	8	5	1	9	6	4	7	3
1	6	4	7	5	3	8	2	9
3	9	7	8	2	4	6	5	1
4	1	3	9	7	2	5	8	6
8	5	6	3	4	1	7	9	2
7	2	9	6	8	5	3	1	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಅಂಜನಾದ್ರಿ: ಜನ್ಮೋತ್ಸವ ಸಂಭ್ರಮ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಹನುಮ ಜಯಂತಿ ಪ್ರಯುಕ್ತ ಶನಿವಾರ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಆನೆಗೊಂದಿ ಸಮೀಪದ ಅಂಜನಾದ್ರಿಗೆ ಸಾವಿರಾರು ಭಕ್ತರು ಭೇಟಿ ನೀಡಿ ದರ್ಶನ ಪಡೆದರು.

'ಆಜಾದಿ ಕಾ ಅಮೃತ್ ಮಹೋತ್ಸವ' ಪ್ರಯುಕ್ತ ಪರ್ವತದಲ್ಲಿ ಯೋಗೋತ್ಸವ ನಡೆಯಿತು. ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಯೋಗಪ್ರದರ್ಶನ ನೀಡಿದರು. ದೇವಸ್ಥಾನದ ಪ್ರಧಾನ ಅರ್ಚಕ ವಿದ್ಯಾದಾಸ ಬಾಬಾ ನೇತೃತ್ವದಲ್ಲಿ ಹೋಮ, ಹವನ, ಹನುಮಾನ್ ಚಾಲೀಸಾ, ಸಾಧು ಸಮಾವೇಶ ಹಾಗೂ ಸಂತ ತುಳಸೀದಾಸರ ರಾಮಚರಿತ ಮಾನಸ ಕಥಾ ವಾಚನ ನಡೆಯಿತು. ಅಂಜನಾದ್ರಿಗೆ 60 ಸಾವಿರಕ್ಕೂ ಅಧಿಕ ಭಕ್ತರು ಭೇಟಿ ನೀಡಿದರು. ಕೇಂದ್ರ ಸಚಿವ ಭಗವಂತ ಖೂಬಾ, ಭವರ್‌ಲಾಲ್ ಆರ್ಯ, ಜಗದೀಶ ಹಿರೇಮನಿ, ಗಂಗಾವತಿ ಶಾಸಕ ಪರಣ್ಣ ಮುನವಳ್ಳಿ ಭಾಗವಹಿಸಿದ್ದರು.

ಅಂಜನಾದ್ರಿಗೆ 60 ಸಾವಿರಕ್ಕೂ ಅಧಿಕ ಭಕ್ತರು ಭೇಟಿ ನೀಡಿದರು. 524 ಮೆಟ್ಟಿಲುಗಳನ್ನು ಏರಿ ದರ್ಶನ ಪಡೆದರು. ಕನಕಗಿರಿ ಶಾಸಕ ಬಸವರಾಜ ಧಡೇಸಗೂರ್, ಕಾಂಗ್ರೆಸ್ ಮುಖಂಡ ಶಿವರಾಜ ತಂಗಡಗಿ ತಮ್ಮ ಸಾವಿರಾರು ಬೆಂಬಲಿಗರೊಂದಿಗೆ ಆನೆಗೊಂದಿಯಿಂದ ಪ್ರತ್ಯೇಕವಾಗಿ ಪಾದಯಾತ್ರೆ ಮೂಲಕ ಬಂದು ಮಾಲೆ ವಿಸರ್ಜನೆ ಮಾಡಿದರು.

ವಿವಿಧ ಜಿಲ್ಲೆಗಳಲ್ಲಿ ಗುಡುಗು ಸಹಿತ ಜೋರು ಮಳೆ

ಸಿಡಿಲು ಬಡಿದು ಐವರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶನಿವಾರ ವಿವಿಧೆಡೆ ಗುಡುಗು ಸಹಿತ ಮಳೆ ಸುರಿದಿದ್ದು, ಸಿಡಿಲಿಗೆ ಐವರು ಮೃತಪಟ್ಟಿದ್ದಾರೆ.

ಶಿರಹಟ್ಟಿ ತಾಲ್ಲೂಕಿನ ಹರಿಪುರ ಹೊರವಲಯದಲ್ಲಿ ಮಾವಿನ ತೋಟ ಕಾಯುತ್ತಿದ್ದ ಮಾಬುಸಾಬ ದೊಡ್ಡಮನಿ (55) ಹಾಗೂ ದನ ಮೇಯಿಸಲು ಹೋಗಿದ್ದ ಹರಿಪುರದ ನಿವಾಸಿ ಮುರಗೇಶ ಹೊಸಮನಿ (40) ಸಿಡಿಲು ಬಡಿದು ಸಾವನ್ನಪ್ಪಿದ್ದಾರೆ. ಮುಂಡರಗಿ ತಾಲ್ಲೂಕಿನ ಡಂಬಳ ಹೋಬಳಿ ಹಳ್ಳಿಕೇರಿ ಗ್ರಾಮದ ಹನುಮಪ್ಪ ಸಿದ್ದಪ್ಪ ಮನ್ನಾಪುರ (22) ವೆಂಕಟಾಪುರದಲ್ಲಿ ಕುರಿ ಮೇಯಿಸುತ್ತಿದ್ದಾಗ ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ಖಾನಾಪುರ ತಾಲ್ಲೂಕಿನ ಬೆಟಗೇರಿ ಗ್ರಾಮದ ತಮ್ಮ ಹೊಲದಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದ ಮನಿಷಾ ದತ್ತು ಗುರವ (40) ಸಾವನ್ನಪ್ಪಿದ್ದಾರೆ.

ತಾಲ್ಲೂಕಿನ ಮಂತುರ್ಗಾ ಗ್ರಾಮದ ರೈತ ವಿಷ್ಣು ಪೆಡಣೇಕರ ಅವರಿಗೆ ಸೇರಿದ ಎರಡು ಎಮ್ಮೆಗಳು ಗ್ರಾಮದ ಹೊರವಲಯದ ಜಮೀನಿನಲ್ಲಿ ಮೇಯುತ್ತಿದ್ದ ಸಂದರ್ಭದಲ್ಲಿ ಸಿಡಿಲಿಗೆ ಬಲಿಯಾಗಿವೆ. ಎರಡೂ ಘಟನೆಗಳ ಕುರಿತು ಖಾನಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಾವೇರಿ ಜಿಲ್ಲೆ ಹಾನಗಲ್ ಪಟ್ಟಣದ ಹೊರಭಾಗದಲ್ಲಿ ಶನಿವಾರ ಸಂಜೆ ಸಿಡಿಲು ಬಡಿದು ಹಾನಗಲ್ ತಾಲ್ಲೂಕಿನ ಹಸನಾಬಾದಿ ಗ್ರಾಮದ ರೈತ ನೀಲಪ್ಪ ಹೊಸಮನಿ (25) ಸಾವನ್ನಪ್ಪಿದ್ದಾರೆ. ಇದೇ ಗ್ರಾಮದ ಶಶಿ ಮಾದೇವಪ್ಪ ಹೊಸಮನಿ ಹಾಗೂ ಹನುಮಂತಪ್ಪ ಹೊಸಮನಿ ಎಂಬುವವರು ಗಾಯಗೊಂಡಿದ್ದು, ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಲಕ್ಷ್ಮೇಶ್ವರ ತಾಲ್ಲೂಕಿನ ಸುತ್ತಮುತ್ತ ಆಲಿಕಲ್ಲು ಮಳೆ ಸುರಿಯಿತು. ಗದಗ ಬೆಟಗೇರಿ ಅವಳಿ ನಗರದಲ್ಲಿ ಗುಡುಗು ಸಹಿತ ತುಂತುರು ಮಳೆ ಸುರಿಯಿತು.

ಬೆಳಗಾವಿ ಸೇರಿದಂತೆ ತಾಲ್ಲೂಕಿನಾದ್ಯಂತ ಶನಿವಾರ ತಾಸಿಗೂ ಹೆಚ್ಚು ಸಮಯ ಜೋರು ಗಾಳಿ, ಗುಡುಗು-ಸಿಡಿಲು ಸಹಿತ ಮಳೆಯಾಯಿತು. ಬೈಲಹೊಂಗಲದಲ್ಲಿ ಆಲಿಕಲ್ಲು ಮಳೆ ಬಿದ್ದಿತು. ಕಿತ್ತೂರು, ಸವದತ್ತಿಯಲ್ಲೂ ಸಾಧಾರಣ ಮಳೆಯಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಜೊಯಿಡಾದಲ್ಲಿ ಅರ್ಧ ಗಂಟೆಗೂ ಹೆಚ್ಚು ಕಾಲ ಮಳೆ ಸುರಿದಿದೆ. ಬನವಾಸಿ ಭಾಗದಲ್ಲಿ ಸಾಧಾರಣ ಮಳೆ ಸುರಿದಿದ್ದರೆ, ನಗರ ಮತ್ತು ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ರಭಸದ ಮಳೆ ಬಿದ್ದಿದೆ.

ಯಾತ್ರಾ ಸ್ಥಳ ಮಂಜುಗುಣಿಯಲ್ಲಿ ವೆಂಕಟರಮಣ ದೇವರ ರಥೋತ್ಸವಕ್ಕೂ ಮಳೆ ಅಡ್ಡಿಪಡಿಸಿತು. ಹಾವೇರಿ ಜಿಲ್ಲೆಯಾದ್ಯಂತ ಭಾರಿ ಗಾಳಿಯಿಂದ ಕೂಡಿದ ಮಳೆ ಸುರಿಯಿತು. ಹಾವೇರಿ-ಸವಣೂರು ಮುಖ್ಯ ರಸ್ತೆಯಲ್ಲಿ ಏಳೆಂಟು ಮರಗಳು ಉರುಳಿ ಬಿದ್ದಿವೆ. ಶಿಗ್ಗಾವಿ, ಬ್ಯಾಡಗಿ, ರಾಣೆಬೆನ್ನೂರು, ರಟ್ಟೀಹಳ್ಳಿಯಲ್ಲಿ ವಿವಿಧ ತಾಲ್ಲೂಕುಗಳಲ್ಲಿ ಉತ್ತಮ ಮಳೆಯಾಗಿದೆ.

ಶಿವಮೊಗ್ಗದಲ್ಲಿ ಜೋರು ಮಳೆ: ನಗರದಲ್ಲಿ ಶನಿವಾರ ಅರ್ಧ ಗಂಟೆ ಕಾಲ ಜೋರು ಗಾಳಿ, ಸಿಡಿಲು, ಗುಡುಗು ಸಹಿತ ಆಲಿಕಲ್ಲು ಮಳೆ ಸುರಿಯಿತು.

ಹೊಳೆಹೊನ್ನೂರು, ಭದ್ರಾವತಿ, ತೀರ್ಥಹಳ್ಳಿ, ರಿಪ್ಪನ್‌ಪೇಟೆ, ಆನವಟ್ಟಿ ಸುತ್ತ ಗುಡುಗು ಸಹಿತ ಮಳೆಯಾಗಿದೆ. ಗುಡುಗು, ಸಿಡಿಲಿಗೆ ಹಲವೆಡೆ ವಿದ್ಯುತ್ ಸ್ಥಗಿತವಾಗಿತ್ತು.

3,000 ಬಾಳೆಗಿಡ ಧರೆಗೆ: ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಚಿಕ್ಕಜಾಜೂರು ಸಮೀಪದ ಅರಸನಘಟ್ಟ ಗ್ರಾಮದಲ್ಲಿ ಶನಿವಾರ ಸುರಿದ ಬಿರುಗಾಳಿ ಸಹಿತ ಮಳೆಗೆ 3,000ಕ್ಕೂ ಹೆಚ್ಚು ಬಾಳೆಗಿಡಗಳು ನೆಲ ಕಚ್ಚಿದ್ದು, ಅಪಾರ ನಷ್ಟ ಉಂಟಾಗಿದೆ.



ಎಚ್.ಡಿ.ಕೋಟೆ ತಾಲ್ಲೂಕಿನ ಹೊನ್ನಮ್ಮನ ಕಟ್ಟೆ ಗ್ರಾಮದ ರಾಜೇಗೌಡರ ಬಾಳೆ ಬೆಳೆಗೆ ಮಳೆಯಿಂದ ಹಾನಿ ಉಂಟಾಗಿದೆ

ಕಾಫಿನಾಡಿನ ವಿವಿಧೆಡೆ ಮಳೆ

ಚಿಕ್ಕಮಗಳೂರು: ಕಾಫಿನಾಡಿನ ವಿವಿಧೆಡೆ ಶನಿವಾರ ಮಳೆಯಾಗಿದೆ. ಆಲ್ದೂರಿನಲ್ಲಿ ಸಂತೆ ಮೈದಾನದಲ್ಲಿ ನೀರು ಆವರಿಸಿದ್ದು, ವ್ಯಾಪಾರಕ್ಕೆ ತೊಂದರೆಯಾಯಿತು ಎಂದು ಸ್ಥಳೀಯರು ಹೇಳಿದರು.

ಆಲ್ದೂರು ಭಾಗದಲ್ಲಿ ಬಿರುಸಾಗಿ ಮಳೆಯಾಗಿದೆ. ಗುಡುಗು ಮಿಂಚಿನ ಆರ್ಭಟವೂ ಜೋರಾಗಿತ್ತು. ಸಂತೆಯಲ್ಲಿನ ಸೊಪ್ಪು, ತರಕಾರಿಗಳು ನೀರಿನಲ್ಲಿ ತೇಲಿ ಹೋಗಿವೆ.

ಚಿಕ್ಕಮಗಳೂರು, ಬೀರೂರು, ಬಾಳೆಹೊನ್ನೂರು, ಕೊಪ್ಪ ಭಾಗದಲ್ಲಿ ಸಾಧಾರಣ ಮಳೆಯಾಗಿದೆ.

ಮೈಸೂರು, ಹಾಸನದಲ್ಲಿ ಮಳೆ

ಮೈಸೂರು/ಹಾಸನ: ಮೈಸೂರು ಹಾಗೂ ಹಾಸನ ಜಿಲ್ಲೆಯ ವಿವಿಧೆಡೆ ಶನಿವಾರ ಮಳೆಯಾಗಿದೆ.

ಹಾಸನ ಜಿಲ್ಲೆಯಲ್ಲಿ ಸಂಜೆ 4.30ಕ್ಕೆ ಆರಂಭವಾದ ಗಾಳಿ ಸಹಿತ ಮಳೆ ಒಂದು ತಾಸು ಸುರಿಯಿತು. ಜಿಲ್ಲಾ ಕೇಂದ್ರ ಹಾಸನ, ಸಕಲೇಶಪುರ, ಹೊಳೆನರಸೀಪುರ, ಅರಕಲಗೂಡು ಭಾಗಗಳಲ್ಲಿ ಮಳೆಯಾಗಿದೆ.ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ, ಎಚ್.ಡಿ.ಕೋಟೆ ತಾಲ್ಲೂಕಿನಲ್ಲಿ ಮಳೆಯಾಗಿದೆ.

ಎಚ್.ಡಿ.ಕೋಟೆ ತಾಲ್ಲೂಕಿನ ಹಂಪಾಪುರದಲ್ಲಿ ಬಾಳೆ ಬೆಳೆಗೆ ಹಾನಿ ಉಂಟಾಗಿದ್ದು, ವಿದ್ಯುತ್ ಕಂಬಗಳು ಧರೆಗುರುಳಿವೆ. ಚಿಟ್ಟದಹುಂಡಿ, ಹೋಬಳಿಯ ಕೋಮಲಾಪುರ ಗ್ರಾಮದಲ್ಲಿ ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ ಕಾರ್ಯಕ್ರಮ ಮಳೆಯಲ್ಲಿಯೇ ನಡೆಯಿತು.

ರಾಷ್ಟ್ರಪತಿ ಚುನಾವಣೆಗೆ ಸ್ಪರ್ಧೆ: 'ಸುಪ್ರೀಂ'ಗೆ ಅರ್ಜಿ

ಪ್ರಜಾವಾಣಿ ವಾರ್ತೆ

ಕಾರವಾರ: ದೇಶದಲ್ಲಿ ಈ ವರ್ಷ ನಡೆಯಲಿರುವ ರಾಷ್ಟ್ರಪತಿ ಚುನಾವಣೆಯಲ್ಲಿ ಸ್ಪರ್ಧಿಸಲು ತಮಗೂ ಅವಕಾಶ ಕೊಡಬೇಕು ಎಂದು ತಾಲ್ಲೂಕಿನ ಸದಾಶಿವಗಡದ ನಿವಾಸಿ ಕಿಶೋರ ಜಗನ್ನಾಥ ಸಾವಂತ್ ಎಂಬುವವರು ಸುಪ್ರೀಂಕೋರ್ಟ್ ಮೊರೆ ಹೋಗಿದ್ದಾರೆ. ಕೇಂದ್ರ ಚುನಾವಣಾ ಆಯೋಗದ ವಿರುದ್ಧದ ಅವರ ರಿಟ್ ಅರ್ಜಿ ಮಾರ್ಚ್ 11ರಂದು ದಾಖಲಾಗಿದೆ.

ಈ ಬಗ್ಗೆ 'ಪ್ರಜಾವಾಣಿ' ಜೊತೆ ಮಾತಾಡಿದ ಅವರು, 'ನನ್ನ ಪ್ರಕರಣದಲ್ಲಿ ನಾನೇ ವಾದ ಮಂಡಿಸುವುದಾಗಿ ನ್ಯಾಯಾಲಯಕ್ಕೆ ತಿಳಿಸಿದ್ದೇನೆ. ವಾದಿಸಲು ನಾನು ಸಮರ್ಥನೇ ಎಂಬುದನ್ನು ಪರಿಶೀಲಿಸಿದ ಬಳಿಕ ವಿಚಾರಣೆಯ ದಿನಾಂಕ ನಿಗದಿಯಾಗಲಿದೆ' ಎಂದು ತಿಳಿಸಿದರು.

ಯಾಕಾಗಿ ಸ್ಪರ್ಧೆ?: 'ತ್ಯಾಜ್ಯ ವಸ್ತುಗಳನ್ನು ಸಂಪೂರ್ಣವಾಗಿ ಮರುಬಳಕೆ ಮಾಡುವಂಥ ಯೋಜನೆಯೊಂದನ್ನು ನಾನು ರೂಪಿಸಿದ್ದೆ. ಅದನ್ನು ವಿವರಿಸಲೆಂದು ರಾಷ್ಟ್ರಪತಿ ಕಚೇರಿಯ ಕಾರ್ಯದರ್ಶಿಯನ್ನು ಭೇಟಿ ಮಾಡಿದ್ದೆ. ಆದರೆ, ಅದಕ್ಕೆ ಅವರು ಸಕಾರಾತ್ಮಕವಾಗಿ ಸ್ಪಂದಿಸಲಿಲ್ಲ. ಅದೇ ಹಿನ್ನೆಲೆಯಲ್ಲಿ ನಾನು ರಾಷ್ಟ್ರಪತಿ ಚುನಾವಣೆಗೆ ಸ್ಪರ್ಧಿಸಲು ನಿರ್ಧರಿಸಿದೆ' ಎಂದು ತಮ್ಮ ಸ್ಪರ್ಧೆಯ ಆಸಕ್ತಿಯ ಹಿನ್ನೆಲೆಯನ್ನು ವಿವರಿಸಿದರು.

ವಿವಾಹಕ್ಕೆ ವಿರೋಧ: ಬಾಲಕಿಗೆ ರಕ್ಷಣೆ

ಕಂಪ್ಲಿ: ಪೋಷಕರು ವಿವಾಹವಾಗುವಂತೆ ಒತ್ತಾಯಿಸಿದ್ದನ್ನು ವಿರೋಧಿಸಿ ಇಲ್ಲಿಯ ಬಾಲಕಿಯೊಬ್ಬಳು ರಕ್ಷಣೆ ಕೋರಿ ಪೊಲೀಸ್ ಠಾಣೆ ಮೆಟ್ಟಿಲೇರಿದ್ದಾಳೆ.

ಪ್ರಾಥಮಿಕ ಶಾಲೆ ಅರ್ಧಕ್ಕೆ ಬಿಟ್ಟಿರುವ ಬಾಲಕಿ ಕಬ್ಬಿನಹಾಲು ಮಾರಾಟ ಮಾಡುವ ಮೂಲಕ ಪೋಷಕರಿಗೆ ಆಸರೆಯಾಗಿದ್ದಳು. ಆದರೆ, ಬಾಲಕಿಯ ವಿರೋಧ ನಡುವೆಯೂ ಪೋಷಕರು ಏ. 15ರಂದು ವಿವಾಹ ನೆರವೇರಿಸಲು ಎಲ್ಲ ಸಿದ್ಧತೆ ಮಾಡಿಕೊಂಡಿದ್ದರು. ಇದನ್ನು ವಿರೋಧಿಸಿದ ಆಕೆ, ಏ.13ರಂದು ನೇರವಾಗಿ ಪೊಲೀಸ್ ಠಾಣೆಗೆ ತೆರಳಿ ರಕ್ಷಣೆ ನೀಡುವಂತೆ ಪಿಎಸ್‌ಐ ವಿರೂಪಾಕ್ಷಪ್ಪ ಅವರಲ್ಲಿ ಮನವಿ ಮಾಡಿಕೊಂಡಿದ್ದಾಳೆ.

ಬಳಿಕ ತಹಶೀಲ್ದಾರ್ ಮಾರ್ಗದರ್ಶನದಲ್ಲಿ ಪಿಎಸ್‌ಐ, ಅಂಗನವಾಡಿ ಮೇಲ್ವಿಚಾರಕಿ ಲತೀಫಾ ಬೇಗಂ, ಮಕ್ಕಳ ಸಹಾಯವಾಣಿ ತಾಲ್ಲೂಕು ಸಂಯೋಜಕಿ ನೇತ್ರಾ ಅವರು ಬಾಲಕಿಯ ಪೋಷಕರಿಗೆ ಬಾಲ್ಯವಿವಾಹ ನಿಷೇಧ ಕಾಯ್ದೆ ಕುರಿತು ಅರಿವು ಮೂಡಿಸಿದ್ದಾರೆ. ಇದಾದ ನಂತರ ಬಾಲಕಿ ತನ್ನ ಮನೆಗೆ ತೆರಳಲು ನಿರಾಕರಿಸಿದ್ದರಿಂದ ಏ.13ರಂದು ಸ್ಥಳೀಯ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ನಿಲಯದಲ್ಲಿ ವಸತಿಗೆ ವ್ಯವಸ್ಥೆ ಮಾಡಲಾಗಿತ್ತು. ಬಳಿಕ ಬಾಲಕಿಯನ್ನು ಏ.15ರಂದು ಬಳ್ಳಾರಿಯ ಸರ್ಕಾರಿ ಬಾಲಕಿಯರ ಪೋಷಣಾ ಕೇಂದ್ರದಲ್ಲಿ ದಾಖಲಿಸಲಾಗಿದೆ ಎಂದು ತಹಶೀಲ್ದಾರ್ ಗೌಸಿಯಾ ಬೇಗಂ ಶನಿವಾರ ತಿಳಿಸಿದರು.

ಸಿ.ಎಂ. ಇಬ್ರಾಹಿಂ ಪದಗ್ರಹಣ ಇಂದು

ಪ್ರಜಾವಾಣಿ ವಾರ್ತೆ


ಬೆಂಗಳೂರು: ವಿಧಾನ ಪರಿಷತ್‌ನ ಮಾಜಿ ಸದಸ್ಯ ಸಿ.ಎಂ. ಇಬ್ರಾಹಿಂ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರಾಗಿ ಭಾನುವಾರ ಅಧಿಕಾರ ಸ್ವೀಕರಿಸಲಿದ್ದಾರೆ.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಕೆ.ಎ. ತಿಪ್ಪೇಸ್ವಾಮಿ, 'ಭಾನುವಾರ ಬೆಳಿಗ್ಗೆ 10.15ಕ್ಕೆ ಪಕ್ಷದ ಪ್ರಧಾನ ಕಚೇರಿಯಲ್ಲಿ ನಡೆಯುವ ಸಮಾರಂಭದಲ್ಲಿ ಇಬ್ರಾಹಿಂ ಅಧಿಕಾರ ಸ್ವೀಕರಿಸುವರು. ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿರುವ ಎಚ್‌.ಕೆ. ಕುಮಾರಸ್ವಾಮಿ ಅವರು ಜೆಡಿಎಸ್ ಸಂಸದೀಯ ಮಂಡಳಿ ಅಧ್ಯಕ್ಷರಾಗಿ ಇದೇ ಸಮಾರಂಭದಲ್ಲಿ ಅಧಿಕಾರ ಸ್ವೀಕರಿಸುವರು' ಎಂದರು.

ನಿಧನ ವಾರ್ತೆ

ಮಾಜಿ ಶಾಸಕ ಈಶಣ್ಣ ಗುಳಗಣ್ಣವರ

ಕುಕನೂರು (ಕೊಪ್ಪಳ ಜಿಲ್ಲೆ): ಯಲಬುರ್ಗಾ ಕ್ಷೇತ್ರದ ಮಾಜಿ ಶಾಸಕ ಈಶಣ್ಣ ಗುಳಗಣ್ಣವರ (69) ಶನಿವಾರ ಅನಾರೋಗ್ಯದಿಂದ ನಿಧನರಾದರು.



ಕುಕನೂರು ತಾಲ್ಲೂಕಿನ ಇಟಗಿ ಗ್ರಾಮದವರಾದ ಈಶಣ್ಣ, 2008ರಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದರು. ಶಾಸಕರಾಗಿದ್ದಾಗಲೇ ಪಾರ್ಶ್ವವಾಯು ಪೀಡಿತರಾಗಿ ಹಾಸಿಗೆ ಹಿಡಿದಿದ್ದರು. ಈಚೆಗೆ ಆರೋಗ್ಯ ಕ್ಷೀಣಿಸಿದ್ದರಿಂದ ಗದುಗಿನ ಜರ್ಮನ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಮಧ್ಯಾಹ್ನ ನಿಧನರಾದರು. ಅವರಿಗೆ ಪತ್ನಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಗಂಗಮ್ಮ ಗುಳಗಣ್ಣವರ ಹಾಗೂ ಇಬ್ಬರು ಪುತ್ರರು ಇದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಇಟಗಿಯಲ್ಲಿ ಭಾನುವಾರ ಮಧ್ಯಾಹ್ನ 3ಕ್ಕೆ ನೆರವೇರಲಿದೆ.

ಕ್ರಸಂ.	ಬ್ಯಾಂಕ್ ಹೆಸರು & ವಿಳಾಸ	ಖಾತೆ ಸಂಖ್ಯೆ	ಐ.ಎಫ್.ಎಸ್.ಸಿ. ಕೋಡ್
1	ಬ್ಯಾಂಕ್ ಆಫ್ ಬರೋಡ, ಪ್ರಾಧಿಕಾರದ ಶಾಖೆ, ಬಿ.ಎಂ.ರಸ್ತೆ, ಹಾಸನ	74730100000866	BARB0VJHUDA
2	ಕೆನರಾ ಬ್ಯಾಂಕ್ ಹಾಸನ, ಕುವೆಂಪುನಗರ, ಹಾಸನ	2438101006537	CNRB0002438
3	ಐ.ಡಿ.ಬಿ.ಐ ಬ್ಯಾಂಕ್, ಹಾಸನ	0365104000211345	IBKL0000365
4	ಹೆಚ್.ಡಿ.ಸಿ.ಸಿ. ಬ್ಯಾಂಕ್, ಬಿ.ಎಂ.ರಸ್ತೆ, ಹಾಸನ	902020242000302	YESB0HDCCB2
5	ಆಕ್ಸಿಸ್ ಬ್ಯಾಂಕ್, ಬಿ.ಎಂ.ರಸ್ತೆ, ಹಾಸನ	909010039129575	UTIB0000203
6	ಬ್ಯಾಂಕ್ ಆಫ್ ಬರೋಡ ಎನ್.ಆರ್.ವೃತ್ತ, ಹಾಸನ	30590100010847	BARB0HASSAN
7	ಹೆಚ್.ಡಿ.ಸಿ.ಸಿ. ಬ್ಯಾಂಕ್, ಡೈರಿ ವೃತ್ತ, ಹಾಸನ	903820272100007	YESB0HDCCB2
8	ಕೊಟ್ಯಾಕ್ ಮಹೀಂದ್ರ ಬ್ಯಾಂಕ್, ಸಾಲಗಾಮೆ ರಸ್ತೆ,ಹಾಸನ	9211784822	KKBK0008217





ಸಮರನೌಕೆ ನಾಶದ ಪ್ರತೀಕಾರಕ್ಕಾಗಿ ಉಕ್ರೇನ್‌ನ ಮತ್ತೆರಡು ಸೇನಾ ಕಾರ್ಖಾನೆ ಧ್ವಂಸಗೊಳಿಸಿದ ರಷ್ಯಾ

ಲುವಿವ್, ಕೀವ್‌ಗೆ ಅಪ್ಪಳಿಸಿದ ಬಾಂಬ್, ಕ್ಷಿಪಣಿ

ಕೀವ್ (ರಾಯಿಟರ್ಸ್): 'ಮಾಸ್ಕವಾ' ಯುದ್ಧನೌಕೆಯನ್ನು ಕಳೆದುಕೊಂಡ ಸಿಟ್ಟಿನಲ್ಲಿರುವ ರಷ್ಯಾ, ಉಕ್ರೇನ್ ಸೇನಾ ನೆಲೆಗಳನ್ನು ಗುರಿಯಾಗಿಸಿ ಶನಿವಾರ ದಾಳಿ ತೀವ್ರಗೊಳಿಸಿದೆ.

ನಸುಕಿನಲ್ಲೇ ಉಕ್ರೇನ್‌ನ ಲುವಿವ್ ಮತ್ತು ಕೀವ್ ನಗರಗಳ ಮೇಲೆ ರಷ್ಯಾದ ಯುದ್ಧ ವಿಮಾನಗಳು ಬಾಂಬ್ ಮತ್ತು ಕ್ಷಿಪಣಿಗಳಿಂದ ದಾಳಿ ನಡೆಸಿದವು.

ಕೀವ್ ಬಳಿ ಇರುವ ಯುದ್ಧ ಟ್ಯಾಂಕ್ ದುರಸ್ತಿ ಘಟಕ, ಸಶಸ್ತ್ರ ವಾಹನ ತಯಾರಿಕೆ ಮತ್ತು ಸೇನಾ ಸಲಕರಣೆಗಳ ಕಾರ್ಖಾನೆಯನ್ನೂ ದೂರಗಾಮಿ ಶ್ರೇಣಿಯ ಕ್ಷಿಪಣಿಗಳಿಂದ ಧ್ವಂಸಗೊಳಿಸಲಾಗಿದೆ. ಮೈಕೊಲೈವ್‌ನಲ್ಲಿರುವ ಸೇನಾ ವಾಹನಗಳ ದುರಸ್ತಿ ಕಾರ್ಖಾನೆಯನ್ನೂ ನಾಶಪಡಿಸಲಾಗಿದೆ ಎಂದು ರಷ್ಯಾ ಹೇಳಿದೆ.

ಹಾರ್ಕಿವ್, ಡೊನೆಟ್‌ಸ್ಕ್, ಲುಹಾನ್‌ಸ್ಕ್ ಪ್ರದೇಶಗಳಲ್ಲಿ ಬಹುಮಹಡಿ ಕಟ್ಟಡಗಳು ಮತ್ತು ಸೇನಾ ನೆಲೆಗಳನ್ನು ಗುರಿಯಾಗಿಸಿಕೊಂಡು ರಷ್ಯಾ ಪಡೆಗಳು ಶೆಲ್ ದಾಳಿ ಮುಂದುವರಿಸಿವೆ.

ಕೀವ್‌ನ ಆಗ್ನೇಯದ ಡಾರ್ನಿಟ್‌ಸ್ಕಿ ಜಿಲ್ಲೆಯಲ್ಲಿ ಕ್ಷಿಪಣಿ ದಾಳಿಯಾಗಿದ್ದು, ಸ್ಥಳದಲ್ಲಿ ದಟ್ಟ ಹೊಗೆ ಆವರಿಸಿದೆ. ಒಬ್ಬ ವ್ಯಕ್ತಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ. ರಾಜಧಾನಿಯ ಪಶ್ಚಿಮದಲ್ಲಿ ದಾಳಿ ತೀವ್ರಗೊಳಿಸಲು ರಷ್ಯಾ ಪಡೆಗಳು ಮರುಒಗ್ಗೂಡಿವೆ ಎಂದು ಕೀವ್ ಮೇಯರ್ ವಿಟಾಲಿ ಕ್ಲಿಟ್‌ಸ್ಕೊ ತಿಳಿಸಿದರು.



ಉಕ್ರೇನಿನ ಹಾರ್ಕಿವ್ ನಗರದಲ್ಲಿ ಶನಿವಾರ ರಷ್ಯಾ ಪಡೆಗಳು ನಡೆಸಿದ ಕ್ಷಿಪಣಿ ಮತ್ತು ಶೆಲ್ ದಾಳಿಯಿಂದ ಕಟ್ಟಡಕ್ಕೆ ಹೊತ್ತಿರುವ ಬೆಂಕಿಯನ್ನು ಅಗ್ನಿಶಾಮಕ ಸಿಬ್ಬಂದಿ ನಂದಿಸಿದರು —ಎಪಿ/ಪಿಟಿಐ ಚಿತ್ರ

ಬೆಲರೂಸ್ ನೆಲದಿಂದ ಕಾರ್ಯಾಚರಿಸಿರುವ ರಷ್ಯಾದ ಯುದ್ಧವಿಮಾನಗಳು, ಪೋಲೆಂಡ್ ಗಡಿ ಸಮೀಪದ ಲುವಿವ್ ನಗರದ ಮೇಲೆ ಕ್ಷಿಪಣಿ ದಾಳಿ ಮಾಡಿವೆ. ವಾಯು ರಕ್ಷಣಾ ವ್ಯವಸ್ಥೆಯಿಂದ ನಾಲ್ಕು ಕ್ರೂಸ್ ಕ್ಷಿಪಣಿಗಳನ್ನು ಹೊಡೆದುರುಳಿಸಲಾಗಿದೆ ಎಂದು ಉಕ್ರೇನ್ ಹೇಳಿದೆ.

'ಮರಿಯುಪೋಲ್‌ನಲ್ಲಿ ಕಷ್ಟದ ಪರಿಸ್ಥಿತಿ ಇದೆ. ಸದ್ಯ ಬೀದಿ ಕಾಳಗ ಮುಂದುವರಿದಿದೆ. ನಗರದ ಮೇಲೆ ದಾಳಿ ತೀವ್ರಗೊಳಿಸಲು ರಷ್ಯಾ ಸೇನಾ ಬಲ ಹೆಚ್ಚಿಸಿಕೊಳ್ಳುತ್ತಿದೆ' ಎಂದು ಉಕ್ರೇನ್ ರಕ್ಷಣಾ ಸಚಿವಾಲಯದ ವಕ್ತಾರ ಒಲೆಕ್ಸಾಂಡರ್ ಮೊಟುಜಿಯಾನಿಕ್ ತಿಳಿಸಿದರು.

ಡಾನ್‌ಬಾಸ್ ಪ್ರಾಂತ್ಯದ ಲುಹಾನ್ಸ್ಕ್‌ನಲ್ಲಿ ರಷ್ಯಾದ ಶೆಲ್ ದಾಳಿಗೆ ಒಬ್ಬರು ಮೃತಪಟ್ಟಿದ್ದು, ಮೂವರು ಗಾಯಗೊಂಡಿದ್ದಾರೆ. ಲಿಸಿಚಾನ್‌ಸ್ಕ್ ಮತ್ತು ಸೆವೆರೊಡೊನೆಟ್‌ಸ್ಕ್‌ನಲ್ಲಿ ರಷ್ಯಾ ಪಡೆಗಳ ದಾಳಿಗೆ ಅನಿಲ ಪೈಪ್ ಹಾನಿಗೀಡಾಗಿದೆ ಎಂದು ಗವರ್ನರ್ ಸೆರಿಹಿ ಐದೈ ತಿಳಿಸಿದ್ದಾರೆ.

ಉಕ್ರೇನಿನ 3 ಸಾವಿರ ಸೈನಿಕರ ಸಾವು: ಏಳು ವಾರಗಳ ಯುದ್ಧದಲ್ಲಿ ಸುಮಾರು 2,500ರಿಂದ 3,000 ಉಕ್ರೇನ್ ಸೈನಿಕರು ಹುತಾತ್ಮರಾಗಿದ್ದಾರೆ. ಸುಮಾರು 10 ಸಾವಿರ ಯೋಧರು ಗಾಯಗೊಂಡಿದ್ದಾರೆ. ಹಾಗೆಯೇ ನಮ್ಮ ಸೇನೆ, ರಷ್ಯಾದ ಸುಮಾರು 20 ಸಾವಿರ ಆಕ್ರಮಣಕಾರರನ್ನು ಕೊಂದಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ಭಯೋತ್ಪಾದನೆ ಪ್ರಾಯೋಜಿತ ರಾಷ್ಟ್ರಗಳಾದ ಉತ್ತರ ಕೊರಿಯಾ, ಕ್ಯೂಬಾ, ಇರಾನ್ ಮತ್ತು ಸಿರಿಯಾ ಪಟ್ಟಿಗೆ ರಷ್ಯಾವನ್ನೂ ಸೇರಿಸಬೇಕೆಂದು ಝೆಲೆನ್‌ಸ್ಕಿ ಅಮೆರಿಕಕ್ಕೆ ಮನವಿ ಮಾಡಿರುವುದಾಗಿ 'ವಾಷಿಂಗ್ಟನ್ ಪೋಸ್ಟ್' ವರದಿ ಮಾಡಿದೆ.

'ಪುಟಿನ್ ಮೇಲೆ ಒತ್ತಡ ಹೆಚ್ಚಿಸಲು ನಾವು ಎಲ್ಲ ಆಯ್ಕೆಗಳನ್ನು ಪರಿಗಣಿಸುವುದನ್ನು ಮುಂದುವರಿಸುತ್ತೇವೆ' ಎಂದು ಶ್ವೇತಭವನದ ವಕ್ತಾರರು ಪ್ರತಿಕ್ರಿಯಿಸಿರುವುದಾಗಿ ಅದು ಹೇಳಿದೆ.

ಬ್ರಿಟನ್ ಪ್ರಧಾನಿಗೆ ರಷ್ಯಾ ಪ್ರವೇಶ ನಿರ್ಬಂಧ

ಮಾಸ್ಕೊ (ಎಎಫ್‌ಪಿ): ಉಕ್ರೇನ್ ಮೇಲೆ ನಡೆಸುತ್ತಿರುವ ವಿಶೇಷ ಸೇನಾ ಕಾರ್ಯಾಚರಣೆ ವಿರೋಧಿಸಿ ರಷ್ಯಾದ ಮೇಲೆ ಬ್ರಿಟನ್ ಕೂಡ ನಿರ್ಬಂಧಗಳನ್ನು ಹೇರಿದ ನಂತರ, ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಮತ್ತು ಹಲವು ನಾಯಕರಿಗೆ ರಷ್ಯಾ ಕೂಡ ಪ್ರವೇಶ ನಿರ್ಬಂಧ ವಿಧಿಸಿದೆ.

'ರಷ್ಯಾವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತ್ಯೇಕಿಸಲು, ದೇಶದ ಆರ್ಥಿಕತೆಯ ಕತ್ತು ಹಿಸುಕುವ ಗುರಿ ಹೊಂದಿರುವ ಬ್ರಿಟನ್ ಮಿತಿಇಲ್ಲದ ಅಪಪ್ರಚಾರದಲ್ಲಿ ತೊಡಗಿರುವುದಕ್ಕೆ ಪ್ರತಿಯಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆ' ಎಂದು ವಿದೇಶಾಂಗ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಮರಿಯುಪೋಲ್ ನಗರ ಮರು ನಿರ್ಮಾಣಕ್ಕೆ ಕೈಜೋಡಿಸುವೆ. ಇದು ನನ್ನ ಹೃದಯಕ್ಕೆ ಹತ್ತಿರದ ನಗರ. ಇಲ್ಲಿ ನಾಶವಾಗಿರುವ 2 ಉಕ್ಕಿನ ಕಾರ್ಖಾನೆಗಳು ಮತ್ತೆ ಶುರುವಾಗಲಿವೆ

ರಿನಾತ್ ಅಖ್ಮೆಟೋವ್, ಉಕ್ರೇನ್‌ನ ಸಿರಿವಂತ, ಮೆಟ್‌ಇನ್‌ವೆಸ್ಟ್ ಮಾಲೀಕ

ಮರಿಯುಪೋಲ್, ಲುಹಾನ್‌ಸ್ಕ್ ಸೇರಿ ಯುದ್ಧಪೀಡಿತ ಸ್ಥಳಗಳಿಂದ ನಾಗರಿಕರ ಸ್ಥಳಾಂತರಕ್ಕೆ 9 ಮಾನವೀಯ ಕಾರಿಡಾರ್ ತೆರೆಯಲು ಶನಿವಾರ ಉಭಯ ರಾಷ್ಟ್ರಗಳು ಒಪ್ಪಿವೆ

ಇರಿನಾ ವೆರೆಶ್‌ಚುಕ್, ಉಕ್ರೇನ್ ಉಪ ಪ್ರಧಾನಿ

52ನೇ ದಿನದ ಬೆಳವಣಿಗೆಗಳು

- ದಕ್ಷಿಣ ಸ್ಪೇನ್‌ನ ಫ್ಯುಯೆಂಟಸ್ ಡಿ ಆ್ಯಂಡಲೂಸಿಯಾ ನಗರವು ತನ್ನ ಹೆಸರನ್ನು 'ಉಕ್ರೇನ್' ಎಂದು ಮರುನಾಮಕರಣ ಮಾಡಿಕೊಂಡಿದೆ. ನಗರದ ರಸ್ತೆಗಳಿಗೆ ಕೀವ್, ಒಡೆಸಾ, ಮರಿಯುಪೋಲ್ ಹೆಸರಿಟ್ಟಿದೆ
- ರಷ್ಯಾದ ಮೇಲೆ ಹೇರಿರುವ ನಿರ್ಬಂಧಗಳು ಸಾಕಾಗುತ್ತಿಲ್ಲ. ವಿಶ್ವದ ಪ್ರಜಾಪ್ರಭುತ್ವ ರಾಷ್ಟ್ರಗಳೆಲ್ಲವೂ ರಷ್ಯಾದಿಂದ ತೈಲ ಖರೀದಿ ಸ್ಥಗಿತಗೊಳಿಸಬೇಕು– ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಆಗ್ರಹ
- ರಷ್ಯಾದ ಆಕ್ರಮಣದ ವಿರುದ್ಧ ನ್ಯಾಟೊ ಸದಸ್ಯ ರಾಷ್ಟ್ರ ಟರ್ಕಿಯಿಂದ ಎಲ್ಲ ರೀತಿಯ ಬೆಂಬಲ ಪಡೆಯಲು ಪ್ರಯತ್ನ ನಡೆಸುತ್ತಿದ್ದೇವೆ– ಉಕ್ರೇನ್ ರಾಜತಾಂತ್ರಿಕರ ಹೇಳಿಕೆ
- ಮರಿಯುಪೋಲ್ ನಗರ ರಕ್ಷಣೆ ಮಾಡುತ್ತಿರುವ ರಕ್ಷಕರ ನಾಶ, ರಷ್ಯಾದ ಜತೆಗಿನ ಶಾಂತಿ ಮಾತುಕತೆಯನ್ನು ಕೊನೆಗೊಳಿಸಲಿದೆ– ಝೆಲೆನ್‌ಸ್ಕಿ ಎಚ್ಚರಿಕೆ
- ರಷ್ಯಾ ವಿಶೇಷ ಸೇನಾ ಕಾರ್ಯಾಚರಣೆ ಆರಂಭಿಸುವುದಕ್ಕೂ ಮೊದಲೇ ಜರ್ಮನಿ ಮತ್ತು ಅಮೆರಿಕ ಜತೆಗೂಡಿ ಉಕ್ರೇನ್‌ನಲ್ಲಿ ಹಲವು ವರ್ಷಗಳಿಂದ ಸೇನಾ ಜೈವಿಕ ಅಸ್ತ್ರಗಳ ಚಟುವಟಿಕೆಗಳನ್ನು ನಡೆಸುತ್ತಿವೆ. ಅದೂ ಈಗಲೂ ಮುಂದುವರಿದಿರುವ ಸಾಧ್ಯತೆ ಇದೆ– ರಷ್ಯಾದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರೆ ಮರಿಯಾ ಝುಕಾರೊವಾ

ಭಾರತಕ್ಕೆ ಬಂದ ರಷ್ಯಾದ ಎಸ್–400 ಕ್ಷಿಪಣಿ ಹೊಸ ಬ್ಯಾಚ್

ನವದೆಹಲಿ: ಉಕ್ರೇನ್‌ನಲ್ಲಿ ನಡೆಸುತ್ತಿರುವ ಸೇನಾ ಕಾರ್ಯಾಚರಣೆಯ ಹೊರತಾಗಿಯೂ ರಷ್ಯಾ ಎಸ್-400 ವಾಯು ರಕ್ಷಣಾ ಕ್ಷಿಪಣಿ ವ್ಯವಸ್ಥೆಗಳ ಹೊಸ ಬ್ಯಾಚ್ ಅನ್ನು ವಿಳಂಬವಿಲ್ಲದೆ ಭಾರತಕ್ಕೆ ಪೂರೈಸಿದೆ.

ಕೇಂದ್ರದ ಉನ್ನತ ಅಧಿಕಾರಿಗಳ ಮಾಹಿತಿ ಉಲ್ಲೇಖಿಸಿ ಶುಕ್ರವಾರ ರಷ್ಯಾದ 'ಟಾಸ್' ಸುದ್ದಿ ಸಂಸ್ಥೆ ವರದಿ ಮಾಡಿದೆ.

'ಎಸ್-400 ಕ್ಷಿಪಣಿಗಳ ಹೊಸ ಬ್ಯಾಚ್ ಹಡಗಿನಲ್ಲಿ ಭಾರತಕ್ಕೆ ಬಂದಿವೆ. ಅವುಗಳನ್ನು ಗೊತ್ತುಪಡಿಸಿದ ಸ್ಥಳಗಳಲ್ಲಿ ತ್ವರಿತವಾಗಿ ನಿಯೋಜಿಸಿದ್ದು, ಈಗ ಅವು ಕಾರ್ಯನಿರತವಾಗಿವೆ' ಎಂದು ವರದಿ ಹೇಳಿದೆ.

ಭಾರತ 2015ರಲ್ಲಿ ಎಸ್–400 ಕ್ಷಿಪಣಿ ವಾಯು ರಕ್ಷಣಾ ವ್ಯವಸ್ಥೆ ಖರೀದಿಸುವುದಾಗಿ ಪ್ರಕಟಿಸಿತ್ತು. ರಷ್ಯಾ ಅಧ್ಯಕ್ಷ ಪುಟಿನ್ 2018ರ ಅಕ್ಟೋಬರ್‌ನಲ್ಲಿ ಭಾರತಕ್ಕೆ ಭೇಟಿ ನೀಡಿದಾಗ, ಐದು ಎಸ್–400 ರೆಜಿಮೆಂಟ್ ಕಿಟ್‌ಗಳನ್ನು ಭಾರತಕ್ಕೆ ಪೂರೈಸುವ ಅಂದಾಜು ₹37 ಸಾವಿರ ಕೋಟಿ ಮೊತ್ತದ ಯೋಜನೆಯ ಒಪ್ಪಂದ ನಡೆದಿತ್ತು.

ಮೂವರು ಸದಸ್ಯರ ಸಮಿತಿ ವರದಿ ಆಧರಿಸಿ ಒಂದು ವಾರದೊಳಗೆ ನಿರ್ಧಾರ

ಕಾಂಗ್ರೆಸ್‌ಗೆ ಪಿಕೆ ಕಾರ್ಯತಂತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆಗೆ 2024ರಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಯಾವ ಕಾರ್ಯತಂತ್ರ ಅನುಸರಿಸಬಹುದು ಎಂಬ ಬಗ್ಗೆ ತಾವು ರೂಪಿಸಿರುವ ಯೋಜನೆಯನ್ನು ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ (ಪಿಕೆ) ಅವರು ಕಾಂಗ್ರೆಸ್ ಮುಖ್ಯಸ್ಥೆ ಸೋನಿಯಾ ಗಾಂಧಿ ಮತ್ತು ಇತರ ಮುಖಂಡರ ಮುಂದೆ ಶನಿವಾರ ಮಂಡಿಸಿದ್ದಾರೆ.

ಸೋನಿಯಾ ಗಾಂಧಿ ಅವರು ರಚಿಸಿರುವ ಮೂವರು ಸದಸ್ಯರ ಸಮಿತಿಯು ಈ ಕಾರ್ಯತಂತ್ರ ಯೋಜನೆಯನ್ನು ಪರಿಶೀಲನೆಗೆ ಒಳಪಡಿಸಲಿದೆ. ವಾರದೊಳಗೆ ಸಮಿತಿಯು ವರದಿ ನೀಡಲಿದೆ. ಅದರ ಆಧಾರದಲ್ಲಿ ಪಕ್ಷವು ನಿರ್ಧಾರ ಕೈಗೊಳ್ಳಲಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ತಿಳಿಸಿದ್ದಾರೆ.

ಕಾಂಗ್ರೆಸ್ ಮುಖಂಡರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ, ಎ.ಕೆ. ಆ್ಯಂಟನಿ, ಮಲ್ಲಿಕಾರ್ಜುನ ಖರ್ಗೆ, ಕೆ.ಸಿ. ವೇಣುಗೋಪಾಲ್, ಅಂಬಿಕಾ ಸೋನಿ, ದಿಗ್ವಿಜಯ್ ಸಿಂಗ್ ಮತ್ತು ಅಜಯ್ ಮಾಕನ್ ಅವರು ಸಭೆಯಲ್ಲಿ ಹಾಜರಿದ್ದರು.

ಕಾಂಗ್ರೆಸ್ ಪಕ್ಷವು ಮುಂದಿನ ತಿಂಗಳು ರಾಜಸ್ಥಾನದಲ್ಲಿ ಚಿಂತನ ಶಿಬಿರವೊಂದನ್ನು ಆಯೋಜಿಸಿದೆ. ಗುಜರಾತ್ ಮತ್ತು ಹಿಮಾಚಲ ಪ್ರದೇಶ ವಿಧಾನ ಸಭೆಗೆ ಈ ವರ್ಷದ ಕೊನೆಯಲ್ಲಿ ಚುನಾವಣೆ ನಡೆಯಲಿದೆ. ಈ ಸಂದರ್ಭದಲ್ಲಿ ಕಾರ್ಯತಂತ್ರ ಸಭೆಯು ನಡೆದಿದೆ.

2024ರ ಲೋಕಸಭಾ ಚುನಾವಣೆಯನ್ನು ಕೇಂದ್ರೀಕರಿಸಿಕೊಂಡೇ ಕಾರ್ಯತಂತ್ರ ಸಿದ್ಧಪಡಿಸಲಾಗಿದೆ. ಹಾಗಿದ್ದರೂ ಈ ವರ್ಷದಲ್ಲಿ ಬರುವ ವಿಧಾನ ಸಭಾ ಚುನಾವಣೆಯನ್ನೂ ಗಮನದಲ್ಲಿ ಇರಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಪ್ರಶಾಂತ್ ಕಾರ್ಯತಂತ್ರವೇನು?

ಬಿಜೆಪಿ ಜತೆಗೆ ನೇರ ಸ್ಪರ್ಧೆ ಇರುವ ಸುಮಾರು 350 ಲೋಕಸಭಾ ಕ್ಷೇತ್ರಗಳ ಮೇಲೆ ಗಮನ ಕೇಂದ್ರೀಕರಿಸಬೇಕು. ಉಳಿದ ಕ್ಷೇತ್ರಗಳಲ್ಲಿ ಇತರ ಪಕ್ಷಗಳ ಜತೆಗೆ ಮೈತ್ರಿ ಮಾಡಿಕೊಳ್ಳಬೇಕು. ಮಿತ್ರ ಪಕ್ಷಗಳ ವಿರುದ್ಧವೇ ವಿವೇಕರಹಿತವಾಗಿ ಸ್ಪರ್ಧೆಗೆ ಇಳಿಯಬಾರದು ಎಂದು ಪ್ರಶಾಂತ್ ಸಲಹೆ ಕೊಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ.

ಪಕ್ಷದ ಧೋರಣೆಯು ಬದಲಾಗಬೇಕು. ಹೊಸ ಮತ್ತು ಎಲ್ಲರನ್ನೂ ಒಳಗೊಳ್ಳುವಂತಹ ತಂಡ ಕಟ್ಟಬೇಕು. ಚುನಾವಣೆಯ ಸಂದರ್ಭದಲ್ಲಿ ಮಾತ್ರವೇ ಕೆಲಸ ಮಾಡುವುದರಿಂದ ಯಾವ ಪ್ರಯೋಜನವೂ ಆಗದು ಎಂದು ಕೂಡ ಪ್ರಶಾಂತ್ ಹೇಳಿದ್ದಾರೆ.

ಪ್ರಬಲವಾಗಿರುವ, ಮೊದಲ ಅಥವಾ ಎರಡನೇ ಸ್ಥಾನದಲ್ಲಿರುವ ರಾಜ್ಯಗಳಲ್ಲಿ ಮಾತ್ರ ಕಾಂಗ್ರೆಸ್ ಏಕಾಂಗಿಯಾಗಿ ಸ್ಪರ್ಧಿಸಬೇಕು. ಉಳಿದ ರಾಜ್ಯಗಳಲ್ಲಿ ಮೈತ್ರಿ ಮಾಡಿಕೊಳ್ಳಬೇಕು. ಉತ್ತರ ಪ್ರದೇಶ, ಬಿಹಾರ ಮತ್ತು ಒಡಿಶಾದಂತಹ ರಾಜ್ಯಗಳಲ್ಲಿ ತಳಮಟ್ಟದಿಂದಲೇ ಹೊಸ ಸಂಘಟನೆ ಕಟ್ಟುವ ಕೆಲಸ ಮಾಡಬೇಕು ಎಂದು ಪ್ರಶಾಂತ್ ವಿವರಿಸಿದ್ದಾರೆ.

ಹನುಮ ಜಯಂತಿ ಮೆರವಣಿಗೆಯಲ್ಲಿ ಕಲ್ಲು ತೂರಾಟ

ನವದೆಹಲಿ(ಪಿಟಿಐ): ದೆಹಲಿಯ ವಾಯುವ್ಯ ಭಾಗದ ಜಹಾಂಗೀರ್‌ಪುರಿ ಪ್ರದೇಶದಲ್ಲಿ ಶನಿವಾರ ನಡೆದ 'ಹನುಮಾನ್' ಜಯಂತಿಯ ಮೆರವಣಿಗೆಯ ಮೇಲೆ ಕಲ್ಲು ತೂರಾಟ ನಡೆದಿದ್ದು, ಹಿಂಸಾಚಾರ ಭುಗಿಲೆದ್ದಿದೆ.

ಉದ್ರಿಕ್ತರು ಕೆಲವು ವಾಹನಗಳಿಗೆ ಬೆಂಕಿ ಹಚ್ಚಿದ್ದಾರೆ. ಹಲವು ಪೊಲೀಸರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು, 'ಮೆರವಣಿಗೆ ನಡೆಯುವ ವೇಳೆ ಎರಡು ಸಮುದಾಯಗಳ ಮಧ್ಯೆ ಗಲಾಟೆ ನಡೆದಿದೆ. ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಭದ್ರತೆ ಕೈಗೊಳ್ಳಲಾಗಿದ್ದು, ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿದೆ'ಎಂದರು.

ರಾಷ್ಟ್ರ ರಾಜಧಾನಿಯಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವುದು ಕೇಂದ್ರದ ಜವಾಬ್ದಾರಿ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಹೇಳಿದ್ದಾರೆ.

ಶ್ರೀಲಂಕಾ: ಪ್ರತಿಭಟನಕಾರರ ಪರ ಮಾಜಿ ಕ್ರಿಕೆಟಿಗರ ಬ್ಯಾಟಿಂಗ್

ರಣತುಂಗ, ಜಯಸೂರ್ಯ ಪ್ರತಿಭಟನೆ

ಕೊಲಂಬೊ (ಎಎಫ್‌ಪಿ): ದೇಶದ ಆರ್ಥಿಕ ಬಿಕ್ಕಟ್ಟು ವಿಚಾರಕ್ಕೆ ಸಂಬಂಧಿಸಿ ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರ ರಾಜೀನಾಮೆಗೆ ಒತ್ತಾಯಿಸಿ ನಡೆಯುತ್ತಿರುವ ಪ್ರತಿಭಟನೆಗಳಲ್ಲಿ ಲಂಕಾದ ಮಾಜಿ ಕ್ರಿಕೆಟ್ ಆಟಗಾರರಾದ ಅರ್ಜುನ ರಣತುಂಗ ಮತ್ತು ಸನತ್ ಜಯಸೂರ್ಯ ಅವರು ಪಾಲ್ಗೊಂಡಿದ್ದಾರೆ.

ಅಧ್ಯಕ್ಷ ಗೊಟಬಯ ರಾಜಪಕ್ಸ ನಿವಾಸದ ಎದುರು ನಡೆದ ಪ್ರತಿಭಟನೆಯಲ್ಲಿ ಭಾಗಿಯಾಗಿ ರಣತುಂಗ ಮಾತನಾಡಿ, ಸಂಕಷ್ಟಕ್ಕೆ ಸಿಲುಕಿದ ನಮ್ಮ ಅಭಿಮಾನಿಗಳು ಇಂದು ಬೀದಿಯಲ್ಲಿದ್ದಾರೆ. ಅವರ ಸಂಕಷ್ಟದ ಈ ಅವಧಿಯಲ್ಲಿ ನಾವು ಅವರ ಜೊತೆಗಿರಬೇಕು. ಕ್ರೀಡಾ ತಾರೆಗಳು ಪ್ರತಿಭಟನೆಯಲ್ಲಿ ಸಕ್ರಿಯವಾಗಿ ಭಾಗಿಯಾಗಬೇಕು ಎಂದು ಅವರು ಹೇಳಿದ್ದಾರೆ.

ಸನತ್ ಜಯಸೂರ್ಯ ಅವರು ರಾಜಪಕ್ಸ ಅವರ ನಿವಾಸದ ಎದುರಿಗಿದ್ದ ಬ್ಯಾರಿಕೇಡ್‌ಗಳನ್ನು ಹತ್ತಿ ಪ್ರತಿಭಟನಕಾರರ ಜೊತೆಗಿರುವುದಾಗಿ ಭರವಸೆ ನೀಡಿದರು.

ಕೊಲಂಬೊ ಷೇರು ವಿನಿಮಯ ಕೇಂದ್ರ ಐದು ದಿನ ಬಂದ್

ಕೊಲಂಬೊ (ಎಎಫ್‌ಪಿ): ಆರ್ಥಿಕ ಬಿಕ್ಕಟ್ಟಿನಿಂದ ಬಳಲುತ್ತಿರುವ ಶ್ರೀಲಂಕಾದ ಕೊಲಂಬೊ ಷೇರು ವಿನಿಮಯ ಕೇಂದ್ರದಲ್ಲಿ (ಸಿಎಸ್‌ಇ) ಸೋಮವಾರದಿಂದ ಐದು ದಿನ ವಹಿವಾಟು ಸ್ಥಗಿತಗೊಳಿಸಲಾಗುವುದು ಎಂದು ಶನಿವಾರ ಪ್ರಕಟಿಸಿದೆ.

ಸಾಂಪ್ರದಾಯಿಕ ಹೊಸ ವರ್ಷದ ದಿನದಂದು ಬಡ್ಡಿ ದರದ ಏರಿಕೆ ಮತ್ತು ವಿದೇಶಿ ಸಾಲವನ್ನು ತೀರಿಸಲಾಗದು ಎಂಬ ತೀರ್ಮಾನವನ್ನು ಸರ್ಕಾರ ಪ್ರಕಟಿಸಿತ್ತು. ಅದರ ಹಿಂದೆಯೇ ಈ ತೀರ್ಮಾನ ಹೊರಬಿದ್ದಿದೆ.

ಒಂದು ವಾರದ ರಜೆಯ ಬಳಿಕ ಷೇರು ವಿನಿಮಯ ಕೇಂದ್ರ ಸೋಮವಾರ ವಹಿವಾಟು ಪುನರಾರಂಭ ಮಾಡಬೇಕಿತ್ತು. ಆದರೆ, ದೇಶದ ಪ್ರಸ್ತುತ ಸ್ಥಿತಿಯ ಹಿನ್ನೆಲೆಯಲ್ಲಿ ಶುಕ್ರವಾರದವರೆಗೂ ವಹಿವಾಟು ಇರುವುದಿಲ್ಲ ಎಂದು ಸಿಎಸ್‌ಇ ತಿಳಿಸಿದೆ.

ಬಡ್ಡಿ ದರ ಪ್ರಮಾಣವನ್ನು ದೇಶದ ಸೆಂಟ್ರಲ್ ಬ್ಯಾಂಕ್ ಶೇ 14.5ಕ್ಕೆ ಏರಿಸಿದ ನಂತರ ಷೇರು ವಹಿವಾಟಿನ ಮೇಲೆ ಪ್ರತಿಕೂಲ ಪರಿಣಾಮ ಆಗಬಹುದು ಎಂಬ ಆತಂಕವನ್ನು ಬ್ರೋಕರ್‌ಗಳು ವ್ಯಕ್ತಪಡಿಸಿದ್ದರು.

ವಿಧಾನಸಭೆಯ ನಾಲ್ಕು, ಲೋಕಸಭೆಯ ಒಂದು ಕ್ಷೇತ್ರದ ಉಪಚುನಾವಣೆ ಫಲಿತಾಂಶ

ಬಿಜೆಪಿ ವಿರೋಧಿ ಪಕ್ಷಗಳಲ್ಲಿ ಹುರುಪು

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಧಾನಸಭೆಯ ನಾಲ್ಕು ಮತ್ತು ಲೋಕಸಭೆಯ ಒಂದು ಕ್ಷೇತ್ರದ ಉಪಚುನಾವಣೆ ಫಲಿತಾಂಶವು ವಿರೋಧ ಪಕ್ಷಗಳಲ್ಲಿ ಹುರುಪು ಮೂಡಿಸಿದೆ. ಎಲ್ಲ ಐದು ಕ್ಷೇತ್ರಗಳಲ್ಲಿಯೂ ಎನ್‌ಡಿಎಯೇತರ ಪಕ್ಷಗಳು ಗೆದ್ದಿವೆ. ಕಾಂಗ್ರೆಸ್ ಮತ್ತು ಆರ್‌ಜೆಡಿ, ಪ್ರತಿಸ್ಪರ್ಧಿಗಳಿಂದ ತಲಾ ಒಂದೊಂದು ವಿಧಾನಸಭಾ ಕ್ಷೇತ್ರಗಳನ್ನು ಕಸಿದುಕೊಂಡಿವೆ.

ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷವು ಅಸನ್‌ಸೋಲ್ ಲೋಕಸಭಾ ಕ್ಷೇತ್ರದಲ್ಲಿ ಇದೇ ಮೊದಲ ಬಾರಿಗೆ ಗೆದ್ದಿದೆ. ಹಿಂದಿನ ಎರಡು ಚುನಾವಣೆಗಳಲ್ಲಿ ಇಲ್ಲಿ ಬಿಜೆಪಿ ಗೆದ್ದಿತ್ತು. ಬಾಬುಲ್ ಸುಪ್ರಿಯೊ ಬಿಜೆಪಿಯಿಂದ ಗೆದ್ದಿದ್ದರು. ಅವರು ಬಿಜೆಪಿ ತೊರೆದು ಟಿಎಂಸಿ ಸೇರ್ಪಡೆಯಾದ ಕಾರಣಕ್ಕೆ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಹೀಗಾಗಿ ಇಲ್ಲಿ ಉಪಚುನಾವಣೆ ನಡೆದಿತ್ತು. ಈ ಬಾರಿ, ಟಿಎಂಸಿಯಿಂದ ಬಾಲಿವುಡ್ ನಟ ಶತ್ರುಘ್ನ ಸಿನ್ಹಾ ಗೆದ್ದಿದ್ದಾರೆ. ಪಶ್ಚಿಮ ಬಂಗಾಳದ ಬಾಲಿಗಂಜ್ ವಿಧಾನಸಭಾ ಕ್ಷೇತ್ರದಿಂದ ಬಾಬುಲ್‌ಸುಪ್ರಿಯೊಆಯ್ಕೆಯಾಗಿದ್ದಾರೆ.



ಕಾಂಗ್ರೆಸ್ ಕಾರ್ಯಕರ್ತರು ಕೊಲ್ಹಾಪುರದಲ್ಲಿ ವಿಜಯೋತ್ಸವ ನಡೆಸಿದರು —ಪಿಟಿಐ ಚಿತ್ರ

ಮಹಾರಾಷ್ಟ್ರದ ಕೊಲ್ಹಾಪುರ ಉತ್ತರ ವಿಧಾನಸಭಾ ಕ್ಷೇತ್ರವನ್ನು ಕಾಂಗ್ರೆಸ್ ಉಳಿಸಿಕೊಂಡಿದೆ. ಛತ್ತೀಸಗಡದ ಖೈರಗಡ ವಿಧಾನಸಭಾ ಕ್ಷೇತ್ರವನ್ನು ಜನತಾ ಕಾಂಗ್ರೆಸ್ ಛತ್ತೀಸಗಡ (ಜೆ) ಪಕ್ಷದಿಂದ ಕಾಂಗ್ರೆಸ್ ಕಸಿದುಕೊಂಡಿದೆ. ಬಿಹಾರದ ಬೊಚಹಾಂ ಕ್ಷೇತ್ರವನ್ನು ವಿಕಾಸಶೀಲ ಇನ್ಸಾನ್ ಪಕ್ಷದಿಂದ ಆರ್‌ಜೆಡಿ ಕಸಿದುಕೊಂಡಿದೆ.

ಶತ್ರುಘ್ನ ಸಿನ್ಹಾ ಅವರು ಬಿಜೆಪಿಯ ಅಗ್ನಿಮಿತ್ರಾ ಪಾಲ್ ಅವರನ್ನು 3.03 ಲಕ್ಷ ಮತಗಳ ಅಂತರದಿಂದ ಸೋಲಿಸಿದ್ದಾರೆ. ಬಾಲಿಗಂಜ್‌ನಲ್ಲಿ ಬಾಬುಲ್ ಸುಪ್ರಿಯೊ ಅವರು ಸಿಪಿಎಂನ ಸಾಯಿರಾ ಶಾ ಹಲೀಂ ಅವರನ್ನು 20,228 ಮತಗಳಿಂದ ಸೋಲಿಸಿದ್ದಾರೆ. ಸಾಯಿರಾ ಅವರು ಬಾಲಿವುಡ್ ನಟ ನಾಸಿರುದ್ದೀನ್ ಶಾ ಅವರ ಸೋದರ ಸೊಸೆ.

ಪಶ್ಚಿಮ ಬಂಗಾಳದ ಸಚಿವರಾಗಿದ್ದ ಸುಬ್ರತಾ ಮುಖರ್ಜಿ ಅವರ ನಿಧನದಿಂದಾಗಿ ಬಾಲಿಗಂಜ್ ಕ್ಷೇತ್ರ ತೆರವಾಗಿತ್ತು. ಬಾಬುಲ್ ಅವರನ್ನು ಪಶ್ಚಿಮ ಬಂಗಾಳ ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಲಾಗುವುದು ಎಂದು ಹೇಳಲಾಗುತ್ತಿದೆ. ಈಗಿನ ಫಲಿತಾಂಶವು ಸಿಪಿಎಂಗೂ ಚೈತನ್ಯ ತುಂಬಿದೆ. ಶೇ 36ರಷ್ಟು ಮತ ಪಡೆದ ಸಿಪಿಎಂ, ಬಾಲಿಗಂಜ್‌ನಲ್ಲಿ ಟಿಎಂಸಿಯ ನೇರ ಎದುರಾಳಿಯಾಗಿ ಹೊರಹೊಮ್ಮಿದೆ.

ಬಿಹಾರದ ಬೊಚಹಾಂ ಕ್ಷೇತ್ರದ ಗೆಲುವು ಆರ್‌ಜೆಡಿಯಲ್ಲಿ ಸಂಭ್ರಮ ಮೂಡಿಸಿದೆ. ಆರ್‌ಜೆಡಿ ಅಭ್ಯರ್ಥಿ ಅಮರ್ ಕುಮಾರ್ ಪಾಸ್ವಾನ್ ಅವರು ಬಿಜೆಪಿಯ ಬೇಬಿ ಕುಮಾರಿ ಅವರನ್ನು 36,653 ಮತಗಳ ಅಂತರದಲ್ಲಿ ಸೋಲಿಸಿದ್ದಾರೆ. ಮಹಾರಾಷ್ಟ್ರದ ಕೊಲ್ಹಾಪುರ ಉತ್ತರ ಕ್ಷೇತ್ರದಲ್ಲಿ ಕಠಿಣ ಸ್ಪರ್ಧೆ ಒಡ್ಡುವ ಸುಳಿವನ್ನು ಬಿಜೆಪಿ ನೀಡಿತ್ತು. ಕೋಮು ನೆಲೆಯಲ್ಲಿ ಧ್ರುವೀಕರಣದ ಯತ್ನಗಳು ನಡೆದಿದ್ದವು. ಮಸೀದಿಗಳಲ್ಲಿ ಧ್ವನಿವರ್ಧಕ ಬಳಕೆಗೆ ಅವಕಾಶ ಕೊಡಬಾರದು ಎಂದು ಎಂಎನ್‌ಎಸ್ ಮುಖ್ಯಸ್ಥ ರಾಜ್ ಠಾಕ್ರೆ ಚುನಾವಣಾ ಪ್ರಚಾರ ಸಂದರ್ಭದಲ್ಲಿ ಹೇಳಿದ್ದರು. ಇದು ಭಾರಿ ಚರ್ಚೆಗೆ ಕಾರಣವಾಗಿತ್ತು. ಮಹಾರಾಷ್ಟ್ರದ ಆಡಳಿತಾರೂಢ ಮಹಾ ವಿಕಾಸ ಆಘಾಡಿಯ ಆತ್ಮವಿಶ್ವಾಸವನ್ನು ಕೊಲ್ಹಾಪುರದ ಗೆಲುವು ಹೆಚ್ಚಿಸಿದೆ. ಕಾಂಗ್ರೆಸ್‌ನ ಜಯಶ್ರೀ ಜಾಧವ್ ಅವರು ಬಿಜೆಪಿಯ ಸತ್ಯಜಿತ್ ಕದಂ ಅವರನ್ನು 19,307 ಮತಗಳಿಂದ ಸೋಲಿಸಿದ್ದಾರೆ.

ಛತ್ತೀಸಗಡ ವಿಧಾನಸಭೆಗೆ ಮುಂದಿನ ವರ್ಷ ಚುನಾವಣೆ ನಡೆಯಲಿದೆ. ಇಲ್ಲಿನ ಖೈರಗಡ ಕ್ಷೇತ್ರದಲ್ಲಿನ ಗೆಲುವು ಕಾಂಗ್ರೆಸ್‌ನ ಆತ್ಮಸ್ಥೈರ್ಯ ಹೆಚ್ಚಿಸಬಹುದು. ಹಾಗೆಯೇ, ಮುಖ್ಯಮಂತ್ರಿ ಭೂಪೇಶ್ ಬಘೆಲ್ ಅವರ ಕೈ ಬಲಪಡಿಸಬಹುದು.

ಬಿಜೆಪಿಯಲ್ಲಿ ಅತೃಪ್ತಿ

ಕೋಲ್ಕತ್ತ (ಪಿಟಿಐ): ಬಿಜೆಪಿ ಸಂಸದೆ ಸೌಮಿತ್ರಾ ಖಾನ್ ಅವರು ಪಕ್ಷದ ಪಶ್ಚಿಮ ಬಂಗಾಳ ರಾಜ್ಯ ಘಟಕದ ನಾಯಕತ್ವವನ್ನು ಟೀಕಿಸಿದ್ದಾರೆ. 'ಈ ಫಲಿತಾಂಶವು ನಿರೀಕ್ಷಿತವೇ ಆಗಿತ್ತು. ರಾಜಕೀಯ ಪಕ್ವತೆ ಇಲ್ಲದ ಅನನುಭವಿ ನಾಯಕರು ನಿರ್ಧಾರ ಕೈಗೊಂಡರೆ ಇಂತಹ ಫಲಿತಾಂಶ ದೊರೆಯುತ್ತದೆ. ಪಕ್ಷದಿಂದ ಅಮಾನತಾಗಿರುವ ಮುಖಂಡರನ್ನು ವಾಪಸ್ ಕರೆಸಿಕೊಳ್ಳಬೇಕು. ಚುನಾವಣೆ ಗೆಲ್ಲುವುದು ಹೇಗೆ ಎಂಬುದನ್ನು ಟಿಎಂಸಿಯಿಂದ ಬಿಜೆಪಿ ಕಲಿಯಬೇಕು' ಎಂದು ಖಾನ್ ಹೇಳಿದ್ದಾರೆ.

ಟಿಎಂಸಿಯಲ್ಲಿದ್ದ ಖಾನ್ ಅವರು 2019ರ ಲೋಕಸಭಾ ಚುನಾವಣೆಗೆ ಮುನ್ನ ಬಿಜೆಪಿ ಸೇರಿದ್ದರು.

'ತಾಪಮಾನ ಸಹಿಷ್ಣು' ಸಂಭಾವ್ಯ ಲಸಿಕೆ

ಕೋವಿಡ್ ವಿರುದ್ಧ ಪರಿಣಾಮಕಾರಿ

ನವದೆಹಲಿ (ಪಿಟಿಐ): ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಹಾಗೂ ಸ್ಟಾರ್ಟಪ್ 'ಮಿನ್‌ವ್ಯಾಕ್ಸ್' ಅಭಿವೃದ್ಧಿಪಡಿಸುತ್ತಿರುವ ಕೋವಿಡ್‌ನ 'ಸಂಭಾವ್ಯ ಲಸಿಕೆ'ಯ ಶೇಖರಣೆಗೆ ಶೀತಲೀಕರಣ ವ್ಯವಸ್ಥೆಯ ಅಗತ್ಯವಿಲ್ಲ. 'ತಾಪಮಾನ ಸಹಿಷ್ಣು' ಆಗಿರುವ ಈ 'ಸಂಭಾವ್ಯ ಲಸಿಕೆ'ಯು ಕೊರೊನಾ ವೈರಸ್‌ನ ರೂಪಾಂತರ ತಳಿಗಳ ವಿರುದ್ಧ ಪರಿಣಾಮಕಾರಿ ಎಂಬುದು ಅಧ್ಯಯನದಿಂದ ತಿಳಿದು ಬಂದಿದೆ.

ಇಲಿಗಳ ಮೇಲೆ ಈ 'ಸಂಭಾವ್ಯ ಲಸಿಕೆ'ಯ ಪರಿಣಾಮವನ್ನು ಅಧ್ಯಯನ ಮಾಡಲಾಗಿದೆ. ಈ 'ಸಂಭಾವ್ಯ ಲಸಿಕೆ'ಯು ಡೆಲ್ಟಾ, ಓಮೈಕ್ರಾನ್ ಸೇರಿ ಕೊರೊನಾ ವೈರಸ್‌ನ ಎಲ್ಲ ರೂಪಾಂತರ ತಳಿಗಳ ವಿರುದ್ಧ ಇಲಿಗಳಲ್ಲಿ ಪ್ರಬಲ ಪ್ರತಿಕಾಯಗಳನ್ನು ಸೃಷ್ಟಿಸಿರುವುದು ಅಧ್ಯಯನದಿಂದ ತಿಳಿದುಬಂದಿದೆ.

ಈ ಅಧ್ಯಯನ ವರದಿ 'ವೈರಸಸ್' ಎಂಬ ನಿಯತಕಾಲಿಕದಲ್ಲಿ ಪ್ರಕಟವಾಗಿದೆ. ಕೊರೊನಾವೈರಸ್ ಹೊರ ಕವಚದ ಮೇಲಿರುವ ಮುಳ್ಳು ಚಾಚಿಕೆಗಳನ್ನು (ಸ್ಪೈಕ್ ಪ್ರೊಟೀನ್) ಬಳಸಿಕೊಂಡು ಈ 'ಸಂಭಾವ್ಯ ಲಸಿಕೆ'ಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಸದ್ಯ ಬಳಕೆಯಲ್ಲಿರುವ ಕೋವಿಡ್ ಲಸಿಕೆಗಳನ್ನು ಕಡಿಮೆ ತಾಪಮಾನದಲ್ಲಿ ಶೇಖರಣೆ ಮಾಡಬೇಕು. ಕೋವಿಶೀಲ್ಡ್ ಲಸಿಕೆ ಶೇಖರಣೆಗೆ 2 ರಿಂದ 8 ಡಿಗ್ರಿ ಸೆಲ್ಸಿಯಸ್ ತಾಪಮಾನದ ಅಗತ್ಯ ಇದೆ. ಫೈಜರ್‌ನ ಲಸಿಕೆಯನ್ನು ವಿಶೇಷ ವ್ಯವಸ್ಥೆಯಲ್ಲಿ ಮೈನಸ್ 70 ಡಿಗ್ರಿ ಸೆಲ್ಸಿಯಸ್‌ನಲ್ಲಿ ಶೇಖರಣೆ ಮಾಡಬೇಕು.

ಆದರೆ, ಐಐಎಸ್‌ಸಿ ಹಾಗೂ ಮಿನ್‌ವ್ಯಾಕ್ಸ್ ಜಂಟಿಯಾಗಿ ಅಭಿವೃದ್ಧಿಪಡಿಸುತ್ತಿರುವ ಸಂಭಾವ್ಯ ಲಸಿಕೆಯನ್ನು 37 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ ನಾಲ್ಕು ವಾರಗಳ ಕಾಲ ಶೇಖರಿಸಿಡಬಹುದು. 100 ಡಿಗ್ರಿ ಸೆಲ್ಸಿಯಸ್ ತಾಪಮಾನದಪರಿಸರದಲ್ಲಿಈಸಂಭಾವ್ಯಲಸಿಕೆಯನ್ನು 90 ನಿಮಿಷಗಳ ಕಾಲ ಶೇಖರಣೆ ಮಾಡಬಹುದು ಎಂದು ಈ ಸಂಶೋಧಕರು ಹೇಳಿದ್ದಾರೆ.

ಆಸ್ಟ್ರೇಲಿಯಾದ ಕಾಮನ್‌ವೆಲ್ತ್ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಸಂಸ್ಥೆ (ಸಿಎಸ್‌ಐಆರ್‌ಒ) ಸಹ ಈ ಸಂಶೋಧನೆಗೆ ಕೈಜೋಡಿಸಿದೆ.

ಚೀನಾ: ಇನ್ನಷ್ಟು ಪ್ರದೇಶಗಳು ಲಾಕ್

ಶಾಂಘೈ (ಎಪಿ): ಚೀನಾದ ವಾಣಿಜ್ಯ ನಗರಿ ಶಾಂಘೈನಲ್ಲಿ ಶನಿವಾರವೂ ಅತಿಹೆಚ್ಚು ಕೋವಿಡ್ ಪ್ರಕರಣಗಳು ದಾಖಲಾಗಿವೆ. ಓಮೈಕ್ರಾನ್ ನಿಯಂತ್ರಣಕ್ಕಾಗಿ ಚೀನಾದ ಹಲವು ಕಡೆಗಳಲ್ಲಿ ಕೋವಿಡ್ ನಿರ್ಬಂಧಗಳನ್ನು ಜಾರಿ ಮಾಡಲಾಗಿದೆ. ಶಾಂಘೈನಲ್ಲಿ ಶುಕ್ರವಾರ ಒಂದೇ ದಿನ 3,590 ಕೊರೊನಾ ಲಕ್ಷಣಗಳಿರುವ ಪ್ರಕರಣಗಳು ಪತ್ತೆಯಾದರೆ, 19,923 ಮಂದಿ ಕೋವಿಡ್ ಲಕ್ಷಣ ರಹಿತ ಸೋಂಕಿತರಾಗಿದ್ದಾರೆ. ಜುಝುವಾ ನಗರದಲ್ಲಿ ನಾಗರಿಕರಿಗೆ ಮನೆಗಳಿಂದ ಹೊರಗೆ ಬರದಂತೆ ಸೂಚಿಸಲಾಗಿದೆ.

ಝೆಂಗ್‌ಝುವಾ ವಿಮಾನ ನಿಲ್ದಾಣ, ಆರ್ಥಿಕ ವಲಯ ಪ್ರದೇಶಗಳಲ್ಲಿ 14 ದಿನಗಳ ಲಾಕ್‌ಡೌನ್ ಹೇರಲಾಗಿದೆ.

ಕೋವಿಡ್: 975 ಹೊಸ ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ ಕಳೆದ 24 ಗಂಟೆಗಳಲ್ಲಿ 975 ಹೊಸ ಕೋವಿಡ್ ಪ್ರಕರಣಗಳು ಮತ್ತು ನಾಲ್ಕು ಸಾವುಗಳು ವರದಿಯಾಗಿವೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ತಿಳಿಸಿದೆ.

796 ಮಂದಿ ಚೇತರಿಕೆ ಕಂಡಿದ್ದಾರೆ. ಸದ್ಯ ಸಕ್ರಿಯ ಪ್ರಕರಣಗಳ ಸಂಖ್ಯೆ 11,366ರಷ್ಟಿದೆ. ಕೋವಿಡ್‌ನಿಂದ 5,21,747 ಮಂದಿ ಮೃತಪಟ್ಟಿದ್ದಾರೆ. ದೆಹಲಿಯಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಶೇ 2ಕ್ಕಿಂತ ಹೆಚ್ಚಾಗಿದೆ.

'ಗೃಹ ಬಳಕೆಗೆ ತಿಂಗಳಿಗೆ 300 ಯೂನಿಟ್ ಉಚಿತ ವಿದ್ಯುತ್'

ಚಂಡೀಗಡ (ಪಿಟಿಐ): ರಾಜ್ಯದಲ್ಲಿ ಜುಲೈ 1 ರಿಂದ ಪ್ರತಿ ತಿಂಗಳು ಗೃಹ ಬಳಕೆಗಾಗಿ 300 ಯೂನಿಟ್ ವಿದ್ಯುತ್ ಪೂರೈಕೆ ಮಾಡಲಾಗುವುದು ಎಂದು ಪಂಜಾಬ್‌ನ ನೂತನ ಮುಖ್ಯಮಂತ್ರಿ ಭಗವಂತ್ ಮಾನ್ ಶನಿವಾರ ಪ್ರಕಟಿಸಿದ್ದಾರೆ.

ಆದರೆ ಜನರು ಬಳಸುವ ವಿದ್ಯುತ್ ಎರಡು ತಿಂಗಳಲ್ಲಿ 600 ಯೂನಿಟ್ ಮೀರಿದರೆ ಅವರು ಸಂಪೂರ್ಣ ಶುಲ್ಕವನ್ನು ಪಾವತಿಸಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನೂ ನೀಡಿದ್ದಾರೆ.

ಪಂಜಾಬ್‌ನಲ್ಲಿ ಎಎಪಿ ನೇತೃತ್ವದ ಸರ್ಕಾರ ಒಂದು ತಿಂಗಳು ಪೂರೈಸಿರುವ ಸಂದರ್ಭದಲ್ಲಿ ಅವರು ಈ ಘೋಷಣೆ ಮಾಡಿದ್ದಾರೆ.

ರಾಜ್ಯದಲ್ಲಿ ಪಕ್ಷ ಅಧಿಕಾರಕ್ಕೆ ಬಂದರೆ ರಾಜ್ಯದಲ್ಲಿ 300 ಯೂನಿಟ್ ಉಚಿತ ವಿದ್ಯುತ್ ಪೂರೈಸುವುದಾಗಿ ಎಎಪಿಯ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಭರವಸೆ ನೀಡಿದ್ದರು.

ಪ್ರಧಾನಿ ಮೌನದಿಂದ ಗಾಬರಿ ಹುಟ್ಟಿದೆ ಎಂದ ನಾಯಕರು

ಕೋಮು ಗಲಭೆ: 13 ಪಕ್ಷಗಳಿಂದ ಕಳವಳ

ನವದೆಹಲಿ (ಪಿಟಿಐ): ಇತ್ತೀಚಿನ ದ್ವೇಷ ಭಾಷಣ ಮತ್ತು ಕೋಮು ಗಲಭೆ ಪ್ರಕರಣಗಳ ಕುರಿತು ತೀವ್ರವಾಗಿ ಕಳವಳ ವ್ಯಕ್ತಪಡಿಸಿರುವ 13 ವಿರೋಧ ಪಕ್ಷಗಳು ಜಂಟಿ ಹೇಳಿಕೆ ಹೊರಡಿಸಿವೆ. ಶಾಂತಿ ಮತ್ತು ಸೌಹಾರ್ದವನ್ನು ಕಾಪಾಡುವಂತೆ ಜನರಿಗೆ ಮನವಿ ಮಾಡಿವೆ.

ಆಹಾರ, ವಸ್ತ್ರ, ನಂಬಿಕೆ, ಹಬ್ಬ ಮತ್ತು ಭಾಷೆ ಮುಂತಾದ ವಿಚಾರಗಳನ್ನು ಸಮಾಜವನ್ನು ಧ್ರುವೀಕರಿಸಲು ಸರ್ಕಾರಗಳು ಬಳಸುತ್ತಿರುವುದರ ಕುರಿತು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮತ್ತು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಆತಂಕ ವ್ಯಕ್ತಪಡಿಸಿದ್ದಾರೆ. ಜೊತೆಗೆ, ಕೋಮು ಗಲಭೆ ಹುಟ್ಟುಹಾಕುವವರಿಗೆ ಕಠಿಣ ಶಿಕ್ಷೆ ನೀಡಬೇಕು ಎಂದು ಕೂಡಾ ಅವರು ಒತ್ತಾಯಿಸಿದ್ದಾರೆ.

'ಧರ್ಮಾಂಧತೆ ಹುಟ್ಟುಹಾಕುತ್ತಿರುವವರು ಮತ್ತು ತಮ್ಮ ಮಾತು ಮತ್ತು ನಡವಳಿಕೆಗಳಿಂದ ನಮ್ಮ ಸಮಾಜದಲ್ಲಿ ಕೋಮು ಪ್ರಚೋದನೆ ಮಾಡುತ್ತಿರುವವರ ವಿರುದ್ಧ ಪ್ರಧಾನಿ ಮೌನ ಕಾಯ್ದುಕೊಂಡಿರುವುದು ನಮ್ಮನ್ನು ಗಾಬರಿಗೊಳಿಸಿದೆ. ದ್ವೇಷ ಬಿತ್ತುತ್ತಿರುವ ಸಂಸ್ಥೆಗಳಿಗೆ ಸರ್ಕಾರವೇ ಆಶ್ರಯ ನೀಡುತ್ತಿದೆ ಎಂಬುದಕ್ಕೆ ಈ ಮೌನವೇ ಸಾಕ್ಷಿ ಆಗಿದೆ.' ಎಂದು ಜಂಟಿ ಹೇಳಿಕೆಯಲ್ಲಿ ಹೇಳಲಾಗಿದೆ.

'ಶಾಂತಿ ಕಾಪಾಡಬೇಕು ಎಂದು ಸಮಾಜದ ಎಲ್ಲಾ ವರ್ಗಗಳ ಜನರಿಗೆ ನಾವು ಮನವಿ ಮಾಡುತ್ತೇವೆ. ಕೋಮು ಧ್ರುವೀಕರಣ ಮಾಡಲು ಪ್ರಯತ್ನಿಸುತ್ತಿರುವವರ ದುಷ್ಟ ಉದ್ದೇಶವನ್ನು ವಿಫಲಗೊಳಿಸಬೇಕು. ಸಮಾಜದಲ್ಲಿ ಸೌಹಾರ್ದತೆ ಕಾಪಾಡಲು ಸ್ವತಂತ್ರವಾಗಿ ಮತ್ತು ಜಂಟಿಯಾಗಿ ಕೆಲಸ ಮಾಡಲು ದೇಶದಾದ್ಯಂತ ಇರುವ ನಮ್ಮೆಲ್ಲಾ ಪಕ್ಷಗಳ ಘಟಕಗಳಿಗೆ ಕರೆ ನೀಡಲಾಗುವುದು' ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸಾಮಾಜಿಕ ಜಾಲತಾಣಗಳು ಮತ್ತು ಆಡಿಯೊ–ವಿಡಿಯೊ ವೇದಿಕೆಗಳನ್ನು ದ್ವೇಷ ಹರಡಲು ಬಳಸಿಕೊಳ್ಳುತ್ತಿರುವ ಕುರಿತು ವಿರೋಧಪಕ್ಷಗಳು ಬೇಸರ ವ್ಯಕ್ತಪಡಿಸಿವೆ.

ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ, ಎನ್‌ಸಿಪಿ ಅಧ್ಯಕ್ಷ ಫಾರೂಕ್ ಅಬ್ದುಲ್ಲ, ಆರ್‌ಜೆಡಿ ನಾಯಕ ತೇಜಸ್ವಿ ಯಾದವ್, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ ಮುಂತಾದವರು ಜಂಟಿ ಹೇಳಿಕೆಗೆ ಸಹಿ ಮಾಡಿದ್ದಾರೆ.

ಏಪ್ರಿಲ್ 10ರಂದು ರಾಮ ನವಮಿ ದಿವಸ ದೇಶದ ಹಲವೆಡೆ ಕೋಮು ಗಲಭೆಗಳು ನಡೆದಿವೆ. ವಸ್ತ್ರ, ಆಹಾರದ ವಿಚಾರಕ್ಕೂ ಸಂಘರ್ಷಗಳು ನಡೆದಿವೆ. ಈ ಹಿನ್ನೆಲೆಯಲ್ಲಿ ವಿರೋಧ ಪಕ್ಷಗಳು ಈ ಹೇಳಿಕೆ ಹೊರಡಿಸಿವೆ.

ಲುಕ್ ಔಟ್ ನೋಟಿಸ್ ವಾಪಸ್: ಆದೇಶ ಎತ್ತಿಹಿಡಿದ ಕೋರ್ಟ್

ನವದೆಹಲಿ (ಪಿಟಿಐ): ಆಮ್ನೆಸ್ಟಿ ಇಂಟರ್‌ನ್ಯಾಷನಲ್ ಇಂಡಿಯಾದ ಮಾಜಿ ಅಧ್ಯಕ್ಷ ಆಕಾರ್ ಪಟೇಲ್ ವಿರುದ್ಧ ಹೊರಡಿಸಿದ್ದ ಲುಕ್‌ಔಟ್ ನೋಟಿಸ್ ಹಿಂಪಡೆಯುವಂತೆ ಸಿಬಿಐಗೆ ನಿರ್ದೇಶಿಸಿ ಹೊರಡಿಸಿದ್ದ ಆದೇಶವನ್ನು ದೆಹಲಿ ಕೋರ್ಟ್ ಎತ್ತಿಹಿಡಿದಿದೆ.

ಪಟೇಲ್ ಅವರಲ್ಲಿ ಲಿಖಿತವಾಗಿ ಕ್ಷಮೆ ಕೋರುವಂತೆ ಸಿಬಿಐ ನಿರ್ದೇಶಕರಿಗೆ ನೀಡಿದ್ದ ನಿರ್ದೇಶನದ ಆದೇಶವನ್ನು ವಿಶೇಷ ನ್ಯಾಯಾಧೀಶ ಸಂತೋಷ್ ಸ್ನೇಹಿ ಮಾನ್ ಎತ್ತಿ ಹಿಡಿದರು. ನೋಟಿಸ್ ಹಿಂಪಡೆಯಲು ಸೂಚಿಸಿ ಮ್ಯಾಜಿಸ್ಟ್ರೀರಿಯಲ್ ಕೋರ್ಟ್ ಏಪ್ರಿಲ್ 7ರಂದು ನಿರ್ದೇಶನ ನೀಡಿದ್ದು, ಕೈಗೊಂಡ ಕ್ರಮ ಕುರಿತು ಏ.30ರಂದು ವರದಿ ಸಲ್ಲಿಸಬೇಕು ಎಂದು ಸಿಬಿಐಗೆ ಸೂಚಿಸಿತ್ತು.

ವಿದೇಶಕ್ಕೆ ತೆರಳಲು ಗುಜರಾತ್‌ನ ಕೋರ್ಟ್ ಅನುಮತಿ ನೀಡಿದ ನಂತರವೂ ಸಿಬಿಐ ಈ ಕ್ರಮ ಕೈಗೊಂಡಿದೆ ಎಂದು ಪಟೇಲ್ ಕೋರ್ಟ್ ಮೆಟ್ಟಿಲೇರಿದ್ದರು.

ಹಿಂದೂ ಯುವತಿ ವರಿಸಿದ ಮುಸ್ಲಿಂ ವ್ಯಕ್ತಿ ಮನೆಗೆ ಬೆಂಕಿ ಹಚ್ಚಿದ ಗುಂಪು

ಲಖನೌ: ಉತ್ತರ ಪ್ರದೇಶದ ಆಗ್ರಾ ಪಟ್ಟಣದಲ್ಲಿ ಹಿಂದೂ ಯುವತಿಯನ್ನು ಮತಾಂತರಗೊಳಿಸಿ ಮದುವೆಯಾಗಿದ್ದಾನೆ ಎಂದು ಆರೋಪಿಸಿ, ಧರಂ ಜಾಗರಣ ಸಮನ್ವಯ ಸಂಘದ ಸದಸ್ಯರ ಗುಂಪೊಂದು ಮುಸ್ಲಿಂ ವ್ಯಕ್ತಿಯೊಬ್ಬನ ಮನೆಗೆ ಬೆಂಕಿ ಹಚ್ಚಿದೆ.

ಜಿಮ್ ಮಾಲೀಕ ಸಾಜಿದ್ ಜತೆಗೆ ಹಿಂದೂ ಹುಡುಗಿಯೊಬ್ಬಳು ಕೆಲವು ದಿನಗಳ ಹಿಂದೆ ಓಡಿ ಹೋಗಿದ್ದಳು. ಆತ ನಂತರಹಿಂದೂಧರ್ಮಸ್ವೀಕರಿಸಿ, ದೆಹಲಿಯಲ್ಲಿ ಯುವತಿಯನ್ನು ಮದುವೆಯಾಗಿದ್ದ. ದಂಪತಿ ಮದುವೆಯ ಚಿತ್ರಗಳು ಮತ್ತು ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ.

'ನಾನು ವಯಸ್ಕಳಾಗಿದ್ದು, ಸಾಜಿದ್ ಮತಾಂತರವಾಗಿ ಸಹಿಲ್ ಎಂದು ಹೆಸರು ಬದಲಿಸಿಕೊಂಡ ನಂತರ ಸ್ವಇಚ್ಛೆಯಿಂದ ಆತನನ್ನು ಮದುವೆಯಾಗಿದ್ದೇನೆ' ಎಂದು ಹೇಳಿರುವ ಪ್ರತ್ಯೇಕ ವಿಡಿಯೊವೊಂದನ್ನು ಯುವತಿ ಬಿಡುಗಡೆ ಮಾಡಿದ್ದಾಳೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹಿಂದೂ ಯುವತಿಯನ್ನು ವರಿಸಿರುವುದಕ್ಕೆ ಕ್ರೋಧಗೊಂಡ ಧರಂ ಜಾಗರಣ ಸಮನ್ವಯ ಸಂಘದ ಸದಸ್ಯರು, ಶುಕ್ರವಾರ ಸಾಜಿದ್ ಮತ್ತು ಅವರ ಇಬ್ಬರು ಸಂಬಂಧಿಕರ ಮನೆಗಳ ಮೇಲೆ ದಾಳಿ ನಡೆಸಿ, ಬೆಂಕಿ ಹಚ್ಚಿದ್ದಾರೆ.

ಕೇಸರಿ ಉಡುಪಿನಲ್ಲಿದ್ದ ವ್ಯಕ್ತಿಗಳ ಗುಂಪು, ರುನಕತಾದಲ್ಲಿ ಅಂಗಡಿಗಳ ಮೇಲೂ ದಾಳಿ ನಡೆಸಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಯುವತಿಯ ಪೋಷಕರು ನಾಪತ್ತೆ ಪ್ರಕರಣ ದಾಖಲಿಸಿದ ನಂತರ ಪೊಲೀಸರು ದೆಹಲಿಯಲ್ಲಿ ಯುವತಿಯನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ಘಟನೆಗೆ ಸಂಬಂಧಿಸಿ ಎಂಟು ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಪಾಕಿಸ್ತಾನದ ನೂತನ ಸ್ಪೀಕರ್ ಆಗಿ ರಾಜಾ ಪರ್ವೈಜ್ ನೇಮಕ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಸಂಸತ್ತಿನ 22ನೇ ಸ್ಪೀಕರ್ ಆಗಿ ಮಾಜಿ ಪ್ರಧಾನಿ ರಾಜಾ ಪರ್ವೈಜ್ ಅಶ್ರಫ್ ಅವರನ್ನು ಶನಿವಾರ ನೇಮಕ ಮಾಡಲಾಗಿದೆ.

ಸ್ಪೀಕರ್ ಹುದ್ದೆಗೆ ಪಾಕಿಸ್ತಾನ ಪೀಪಲ್ಸ್ ಪಾರ್ಟಿಯ (ಪಿಪಿಪಿ) ಅಶ್ರಫ್ (71) ಅವರ ವಿರುದ್ಧ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅಶ್ರಫ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಮಧ್ಯೆ, ಉಪ ಸ್ಪೀಕರ್ ಹುದ್ದೆಗೆ ಖಾಸಿಮ್ ಖಾನ್ ಸೂರಿ ಶನಿವಾರ ರಾಜೀನಾಮೆ ಸಲ್ಲಿಸಿದ್ದಾರೆ. ಇಮ್ರಾನ್ ಖಾನ್ ವಿರುದ್ಧ ಅವಿಶ್ವಾಸ ನಿರ್ಣಯ ಮತ ಹಾಕಲು ನಿರಾಕರಿಸಿ ಏಪ್ರಿಲ್ 9ರಂದು ಅಸದ್ ಕೈಸರ್ ಸ್ಪೀಕರ್ ಹುದ್ದೆ ತೊರೆದ ನಂತರ ಇಮ್ರಾನ್ ನೇತೃತ್ವದ ತೆಹ್ರೀಕ್–ಇ–ಇನ್ಸಾಫ್ ಪಕ್ಷದ ಖಾಸಿಮ್ ಹಂಗಾಮಿ ಸ್ಪೀಕರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		**ಸಿದ್ದಾಪುರ**		ಚಾಲಿ	38099-41191
ಬಂಟ್ವಾಳ		ಬಿಳಿಗೋಟು	23999-30912	ರಾಶಿ	23529-48699
ಕೋಕ	12500-25000	ಕೋಕ	22699-31022	**ಕೊಬ್ಬರಿ**	
ಹೊಸತು	27500-45000	ಚಾಲಿ	38469-41099	ಪುತ್ತೂರು	4000-10500
ಹಳತು	46000-53000	ಕೆಂಪುಗೋಟು	26699-31899	ತುರುವೇಕೆರೆ	16900-17000
ಕಾರ್ಕಳ		ರಾಶಿ	46339-49419	**ರಾಮನಗರ ರೇಷ್ಮೆಗೂಡು**	
ಹೊಸತು	38000-45000	ತಟ್ಟಿಬೆಟ್ಟೆ	38289-48289	ಮಿಶ್ರ ತಳಿ	280-838
ಪುತ್ತೂರು		**ಶಿರಸಿ**		ದ್ವಿತಳಿ	366-726

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹435

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1630 (1620)
ಸೋಯಾ (ರಿಫೈನ್ಡ್)	₹1555 (1510)
ಸೂರ್ಯಕಾಂತಿ (ರಿಫೈನ್ಡ್)	₹1790 (1740)
ಪಾಮೋಲಿನ್	₹1502 (1495)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹168
ಆರ್‌ಎಸ್‌ಎಸ್-5	₹162.50
ಗುಡ್ ಲಾಟ್	₹158.50

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹900-1100
ಮಧ್ಯಮ	₹600-900
ಸಣ್ಣ	₹300-600

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹10000-15000

ಚಿನ್ನ, ಬೆಳ್ಳಿ

ಬೆಂಗಳೂರು	
ಸ್ಟ್ಯಾಂಡರ್ಡ್ ಚಿನ್ನ (10ಗ್ರಾಂ)	₹54900
ಆಭರಣ ಚಿನ್ನ (1 ಗ್ರಾಂ)	₹5,120
ಬೆಳ್ಳಿ (ಕೆ.ಜಿಗೆ)	₹71600



ಬಿಳಿಗಿರಿ ರಂಗಪ್ಪನ ತೇರು ...

ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ಬಿಳಿಗಿರಿ ರಂಗನಬೆಟ್ಟದಲ್ಲಿ ರಂಗನಾಥಸ್ವಾಮಿಯ ಬ್ರಹ್ಮರಥೋತ್ಸವ ಶನಿವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವೈಭವದಿಂದ ನಡೆಯಿತು. ಆರು ವರ್ಷಗಳ ನಂತರ ಬೆಟ್ಟದಲ್ಲಿ ರಥೋತ್ಸವ ನಡೆದಿದೆ

– ಪ್ರಜಾವಾಣಿ ಚಿತ್ರ/ ಸಿ.ಆರ್.ವೆಂಕಟರಾಮು

‘ಶಿವಮೊಗ್ಗದಲ್ಲಿ ಕೋಮು ಗಲಭೆಗೆ ಪ್ರಭಾವಿಗಳ ಸಂಚು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದಿಂದ ಜನರ ಗಮನವನ್ನು ಬೇರೆಡೆ ಸೆಳೆಯಲು ಶಿವಮೊಗ್ಗ ನಗರದಲ್ಲಿ ಕೋಮು ಗಲಭೆ ಸೃಷ್ಟಿಸಲು ಪ್ರಭಾವಿ ವ್ಯಕ್ತಿಗಳು ಸಂಚು ನಡೆಸಿದ್ದಾರೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಆರೋಪಿಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ‘ಶಿವಮೊಗ್ಗದಲ್ಲಿ ಮುಸ್ಲಿಂ ಯುವಕನ ಹತ್ಯೆಗೆ ಸಂಚು ನಡೆಸಿದ್ದ ಪ್ರಕರಣವನ್ನು ಪೊಲೀಸರು ಬಯಲಿಗೆ ತಂದಿದ್ದಾರೆ. ಅದೇ ಗುಂಪು ಕೋಮು ಗಲಭೆ ನಡೆಸಲು ಸಂಚು ನಡೆಸಿರುವ ಮಾಹಿತಿ ಇದೆ’ ಎಂದರು.

‘ಶಿವಮೊಗ್ಗದಲ್ಲಿ ದೊಡ್ಡವರು ಸದಸ್ಯರಾಗಿರುವ ಒಂದು ಟ್ರಸ್ಟ್ ಇದೆ. ಆ ಟ್ರಸ್ಟ್ ಸದಸ್ಯರು ಹಾಗೂ ಇತರರು ಸೇರಿ ಕೊಲೆಗೆ ತಯಾರಿ ಮಾಡಿದ್ದಾರೆ. ಶಿವಮೊಗ್ಗ ಪೊಲೀಸರು ಆರೋಪಿಗಳನ್ನು ಬಂಧಿಸದೇ ಇದ್ದರೆ ಕೋಮು ಗಲಭೆ ನಡೆಯುವ ಸಂಭವವಿತ್ತು. ಈ ಪ್ರಕರಣದ ಎಫ್‌ಐಆರ್ ನನ್ನ ಬಳಿ ಇದೆ. ಟ್ರಸ್ಟ್ ಸದಸ್ಯನೂ ಆಗಿರುವ ಪ್ರಮುಖ ಆರೋಪಿಯೊಬ್ಬ ತಲೆಮರೆಸಿಕೊಂಡಿದ್ದಾನೆ’ ಎಂದು ಹೇಳಿದರು.

ಈ ಪ್ರಕರಣದ ಕುರಿತು ತನಿಖೆ ನಡೆಸಿದರೆ ಆರೋಪಿಗಳು ಸದಸ್ಯರಾಗಿರುವ ಟ್ರಸ್ಟ್ ಯಾವುದು, ಅದರಲ್ಲಿ ಯಾರೆಲ್ಲಾ ಪ್ರಭಾವಿಗಳು ಇದ್ದಾರೆ, ಕೊಲೆ ಸಂಚಿನಲ್ಲಿ ಅವರ ಪಾತ್ರ ಏನಿದೆ ಎಂಬುದು ಬಹಿರಂಗವಾಗಲಿದೆ ಎಂದರು.

ರಕ್ಷಣೆಗೆ ಯತ್ನ: ‘ಈಶ್ವರಪ್ಪ ವಿರುದ್ಧ ಎಫ್‌ಐಆರ್ ದಾಖಲಿಸುವಾಗಲೇ ಅವರ ರಕ್ಷಣೆಗೆ ಪ್ರಯತ್ನ ನಡೆದಿದೆ. ದೂರಿನಲ್ಲಿ ಶೇಕಡ 40ರಷ್ಟು ಲಂಚಕ್ಕೆ ಬೇಡಿಕೆ ಇಟ್ಟ ಆರೋಪವಿದ್ದರೂ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿಲ್ಲ’ ಎಂದರು.

‘ತನಿಖೆ ಇನ್ನೂ ನಡೆಯುತ್ತಿದೆ. ಆದರೆ, ಈಶ್ವರಪ್ಪ ನಿರ್ದೋಷಿಯಾಗಿ ಬರುತ್ತಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈಗಲೇ ಹೇಳುತ್ತಿದ್ದಾರೆ. ಬೊಮ್ಮಾಯಿ ಅವರು ನ್ಯಾಯಾಧೀಶರೆ? ಅವರ ಈ ಹೇಳಿಕೆಯಿಂದ ತನಿಖೆಯ ಮೇಲೆ ಪ್ರಭಾವ ಬೀರಿದಂತಾಗುವುದಿಲ್ಲವೆ? ಮುಖ್ಯಮಂತ್ರಿಯೇ ಈ ರೀತಿ ಹೇಳಿದರೆ ಪೊಲೀಸರು ಹೇಗೆ ತನಿಖೆ ನಡೆಸುತ್ತಾರೆ’ ಎಂದು ಪ್ರಶ್ನಿಸಿದರು.

ಪಾಲಕ್ಕಾಡ್: ಆರೆಸ್ಸೆಸ್ ಕಾರ್ಯಕರ್ತನ ಹತ್ಯೆ

ಪಾಲಕ್ಕಾಡ್ (ಪಿಟಿಐ): ಪಟ್ಟಣದ ನಿವಾಸಿ, ಆರ್‌ಎಸ್‌ಎಸ್ ಕಾರ್ಯಕರ್ತ ಶ್ರೀನಿವಾಸನ್ (45) ಎಂಬುವವರನ್ನು ಗುಂಪೊಂದು ಶನಿವಾರ ಹತ್ಯೆ ಮಾಡಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಿಎಫ್‌ಐ ನಾಯಕ ಸುಬೇರ್ (43) ಎಂಬುವವರ ಹತ್ಯೆ ನಡೆದ 24 ಗಂಟೆಗಳ ಒಳಗಾಗಿ ಈ ಘಟನೆ ನಡೆದಿದೆ. ಪಾಲಕ್ಕಾಡ್ ಜಿಲ್ಲೆಯ ಎಲಪ್ಪುಳ್ಳಿ ಗ್ರಾಮದಲ್ಲಿ ಶುಕ್ರವಾರ ಸುಬೇರ್ ಅವರ ಹತ್ಯೆಯಾಗಿತ್ತು. ಮಸೀದಿಯಲ್ಲಿ ಪ್ರಾರ್ಥನೆ ಮುಗಿಸಿ ಮನೆಗೆ ಮರಳುತ್ತಿದ್ದಾಗ ಅವರನ್ನು ಕೊಲೆ ಮಾಡಲಾಗಿದೆ ಎಂದು ಆರೋಪಿಸಲಾಗಿದೆ.

‘ಪಟ್ಟಣದ ಹೃದಯಭಾಗದಲ್ಲಿ ಶ್ರೀನಿವಾಸನ್ ಅವರ ಅಂಗಡಿ ಇದೆ. ಬೈಕ್‌ಗಳಲ್ಲಿ ಬಂದ ದುಷ್ಕರ್ಮಿಗಳು, ಅಂಗಡಿಯಲ್ಲಿದ್ದ ಶ್ರೀನಿವಾಸನ್ ಅವರ ಮೇಲೆ ದಾಳಿ ನಡೆಸಿದರು. ಕೂಡಲೇ ಅವರನ್ನು ಹತ್ತಿರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಚಿಕಿತ್ಸೆಗೆ ಸ್ಪಂದಿಸದೇ ಅವರು ಮೃತಪಟ್ಟರು’ ಎಂದು ಪೊಲೀಸರು ತಿಳಿಸಿದ್ದಾರೆ.

ಪೆಟ್ರೋಲ್, ಡೀಸೆಲ್ ಮಾರಾಟ ಇಳಿಕೆ



ನವದೆಹಲಿ (ಪಿಟಿಐ): ದೇಶದಲ್ಲಿ ಏಪ್ರಿಲ್ 1 ರಿಂದ 16ರ ಅವಧಿಯಲ್ಲಿ ಪೆಟ್ರೋಲ್, ಡೀಸೆಲ್ ಮಾರಾಟದಲ್ಲಿ ಇಳಿಕೆ ಆಗಿದೆ. ಪೆಟ್ರೋಲ್, ಡೀಸೆಲ್ ದರ ಹೆಚ್ಚಾಗಿರುವುದರಿಂದ ಬೇಡಿಕೆ ಕಡಿಮೆ ಆಗಿದೆ. ಹೀಗಾಗಿ ಮಾರಾಟದಲ್ಲಿ ಇಳಿಕೆ ಕಂಡುಬಂದಿದೆ ಎಂದು ಉದ್ಯಮ ವಲಯದ ಮೂಲಗಳು ಹೇಳಿವೆ.

ಮಾರ್ಚ್ 1-15ರವರೆಗೆ ಆಗಿರುವ ಮಾರಾಟಕ್ಕೆ ಹೋಲಿಸಿದರೆ ಏಪ್ರಿಲ್ 1-15ರವರೆಗೆ ಪೆಟ್ರೋಲ್ ಮಾರಾಟ ಶೇ 10ರಷ್ಟು ಇಳಿಕೆ ಆಗಿದೆ. ಡೀಸೆಲ್ ಮಾರಾಟ ಶೇ 15.6ರಷ್ಟು ಕಡಿಮೆ ಆಗಿದೆ ಎಂದು ಉದ್ಯಮ ವಲಯ ಮಾಹಿತಿ ನೀಡಿದೆ.

ಏಪ್ರಿಲ್ 1-15ರವರೆಗಿನ ಅವಧಿಯಲ್ಲಿ 11.2 ಲಕ್ಷ ಟನ್ ಪೆಟ್ರೋಲ್ ಮಾರಾಟ ಆಗಿದೆ. ಕಳೆದ ವರ್ಷ ಇದೇ ಅವಧಿಗೆ ಹೋಲಿಸಿದರೆ ಮಾರಟವು ಶೇ 12.1ರಷ್ಟು ಹೆಚ್ಚಾಗಿದೆ. ಡೀಸೆಲ್ ಮಾರಾಟ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 7.4ರಷ್ಟು ಹೆಚ್ಚಾಗಿದ್ದು 30 ಲಕ್ಷ ಟನ್‌ಗಳಿಗೆ ತಲುಪಿದೆ. ಅಡುಗೆ ಅನಿಲ ಸಿಲಿಂಡರ್ ಮಾರಾಟವೂ ಶೇ 1.7ರಷ್ಟು ಇಳಿಕೆ ಕಂಡಿದೆ. ವಿಮಾನ ಇಂಧನ ಮಾರಾಟ ಶೇ 9.8ರಷ್ಟು ಹೆಚ್ಚಾಗಿದೆ.

ಮುಂಬೈ ಧಾರಣೆ

ಶೇಂಗಾ

16-4-2022

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	9750-9800
ದಪ್ಪ ಮಧ್ಯಪ್ರದೇಶ(ಹೊಸ)	11050-11100
ದಪ್ಪ ಗುಜರಾತ್(ಹೊಸ)	9950-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1640 (1630)
ಒಂದು ವಾರದ ಡೆಲಿವರಿ	1635 (1625)
ಸೋಯಾ ಕಚ್ಚಾ	1520 (1510)
ಪಾಮ್ ವಾರದ ಡೆಲಿವರಿ	1500 (1493)
ಸೂರ್ಯಕಾಂತಿ ಎಣ್ಣೆ ಕಚ್ಚಾ	1740 (1670)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,800 (52,850)
ಬೆಳ್ಳಿ ಕೆ.ಜಿ 69,350 (69,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

2022ರಲ್ಲಿ ಈವರೆಗೆ ಒಟ್ಟಾರೆ ಎಂಟು ಬಾರಿ ದರ ಏರಿಕೆ
ವಿಮಾನ ಇಂಧನ ದುಬಾರಿ

ನವದೆಹಲಿ (ಪಿಟಿಐ): ವಿಮಾನ ಇಂಧನ (ಜೆಟ್ ಇಂಧನ) ದರವನ್ನು ಪ್ರತಿ ಕಿಲೋ ಲೀಟರಿಗೆ ₹ 277.5ರಷ್ಟು (ಶೇ 0.2) ಏರಿಕೆ ಮಾಡಲಾಗಿದೆ.

ಶನಿವಾರದ ದರ ಏರಿಕೆಯನ್ನೂ ಒಳಗೊಂಡು ಈ ವರ್ಷದಲ್ಲಿ ಈವರೆಗೆ ಒಟ್ಟಾರೆ ಎಂಟು ಬಾರಿ ದರ ಹೆಚ್ಚಳ ಮಾಡಿದಂತಾಗಿದೆ. ಇದರಿಂದಾಗಿ ಪ್ರತಿ ಕಿಲೋ ಲೀಟರಿಗೆ ಒಟ್ಟಾರೆ ₹ 39,180ರಷ್ಟು ಏರಿಕೆ ಆಗಿದೆ. (ಒಂದು ಕಿಲೋ ಲೀಟರ್ ಎಂದರೆ ಒಂದು ಸಾವಿರ ಲೀಟರ್).

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇಂಧನ ದರ ಏರಿಕೆಗೆ ಅನುಗುಣವಾಗಿ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಈ ಪರಿಷ್ಕರಣೆ ಮಾಡಿವೆ.



ದೆಹಲಿಯಲ್ಲಿ ಶನಿವಾರ ಇಂಧನ ದರ ಪ್ರತಿ ಕಿಲೋ ಲೀಟರಿಗೆ ₹ 1.13 ಲಕ್ಷಕ್ಕೆ ಏರಿಕೆ ಆಗಿದೆ. ಮುಂಬೈನಲ್ಲಿ ₹ 1.11 ಲಕ್ಷಕ್ಕೆ ತಲುಪಿದೆ.

ಈ ಹಿಂದೆ ಮಾರ್ಚ್ 16ರಂದು ವಿಮಾನ ಇಂಧನ ದರವನ್ನು ಪ್ರತಿ ಕಿಲೋ ಲೀಟರಿಗೆ ಶೇ 18.3 ರಷ್ಟು (₹ 17,135.63) ಗರಿಷ್ಠ ಏರಿಕೆ ಮಾಡಲಾಗಿತ್ತು.

ವಿಮಾನವೊಂದರ ಒಟ್ಟಾರೆ ವೆಚ್ಚದಲ್ಲಿ ಇಂಧನದ ವೆಚ್ಚವೇ ಬಹುತೇಕ ಶೇ 40ರಷ್ಟು ಆಗುತ್ತದೆ.

ಪೆಟ್ರೋಲ್, ಡೀಸೆಲ್ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಸತತ 10ನೇ ದಿನವೂ ಯಥಾಸ್ಥಿತಿ ಕಾಯ್ದುಕೊಳ್ಳಲಾಗಿದೆ.

ಮುಖ್ಯಾಂಶಗಳು

- ಅಂತರರಾಷ್ಟ್ರೀಯ ದರಕ್ಕೆ ಅನುಗುಣವಾಗಿ ಪರಿಷ್ಕರಣೆ
- ಕಿಲೋ ಲೀಟರಿಗೆ ಒಟ್ಟಾರೆ ₹ 39,180 ರಷ್ಟು ಏರಿಕೆ

2021–22ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕ
ಎಚ್‌ಡಿಎಫ್‌ಸಿ ಬ್ಯಾಂಕ್ ಲಾಭ ಶೇ 23ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಖಾಸಗಿ ವಲಯದ ಎಚ್‌ಡಿಎಫ್‌ಸಿ ಬ್ಯಾಂಕ್, 2021–22ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ₹ 10,052 ಕೋಟಿ ನಿವ್ವಳ ಲಾಭ ಗಳಿಸಿದೆ.

2020–21ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ₹ 8,186.50 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭದಲ್ಲಿ ಶೇ 22.8ರಷ್ಟು ಏರಿಕೆ ಕಂಡುಬಂದಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಸಾಲದ ಬೇಡಿಕೆ ಹೆಚ್ಚಳ ಮತ್ತು ಭವಿಷ್ಯದಲ್ಲಿ ಎದುರಾಗಬಹುದಾದ ನಷ್ಟಕ್ಕೆ ತೆಗೆದಿರಿಸುವ ಮೊತ್ತವು ಕಡಿಮೆ ಆಗಿರುವುದರಿಂದ ಈ ಪ್ರಮಾಣದ ಬೆಳವಣಿಗೆ ಸಾಧ್ಯವಾಗಿದೆ ಎಂದು ಹೇಳಿದೆ.

ಬ್ಯಾಂಕ್‌ನ ಒಟ್ಟಾರೆ ವರಮಾನ ₹ 38,017 ಕೋಟಿಗಳಿಂದ ₹ 41,086 ಕೋಟಿಗಳಿಗೆ ಏರಿಕೆ ಆಗಿದೆ. ನಿವ್ವಳ ಬಡ್ಡಿ ವರಮಾನವು ಶೇ 10.2ರಷ್ಟು ಹೆಚ್ಚಾಗಿ ₹18,873 ಕೋಟಿಗಳಿಗೆ ತಲುಪಿದೆ. ಬಡ್ಡಿಯೇತರ ವರಮಾನ ಶೇ 29ರಷ್ಟು



ಹೆಚ್ಚಾಗಿದ್ದು, ₹ 7,637 ಕೋಟಿಗಳಷ್ಟಾಗಿದೆ.

ವಸೂಲಾಗದ ಸರಾಸರಿ ಸಾಲದ ಪ್ರಮಾಣವು (ಎನ್‌ಪಿಎ) ಶೇ 1.26 ರಿಂದ ಶೇ 1.17ಕ್ಕೆ ಇಳಿಕೆ ಆಗಿದೆ. ನಿವ್ವಳ ಎನ್‌ಪಿಎ ಶೇ 0.40 ರಿಂದ ಶೇ 0.32ಕ್ಕೆ ಇಳಿಕೆ ಕಂಡಿದೆ ಎಂದು ಬ್ಯಾಂಕ್ ಮಾಹಿತಿ ನೀಡಿದೆ.

ಒಟ್ಟಾರೆ ಮುಂಗಡವು ಮಾರ್ಚ್ 31ರ ಅಂತ್ಯಕ್ಕೆ ಶೇ 20.8ರಷ್ಟು ಹೆಚ್ಚಾಗಿದ್ದು ₹ 13.68 ಲಕ್ಷ ಕೋಟಿಗಳಿಗೆ ಏರಿಕೆ ಆಗಿದೆ. ರಿಟೇಲ್ ಸಾಲ ನೀಡಿಕೆಯು ಶೇ 15.2ರಷ್ಟು ಬೆಳವಣಿಗೆ ಕಂಡಿದೆ. ವಾಣಿಜ್ಯ ಮತ್ತು ಗ್ರಾಮೀಣ ಸಾಲ ನೀಡಿಕೆ ಶೇ 30.4ರಷ್ಟು ಹೆಚ್ಚಾಗಿದೆ ಎಂದು ತಿಳಿಸಿದೆ.

ನಾಲ್ಕನೇ ತ್ರೈಮಾಸಿಕದಲ್ಲಿ 563 ಶಾಖೆಗಳನ್ನು ತೆರೆಯಲಾಗಿದ್ದು, 7,167 ಮಂದಿಗೆ ಉದ್ಯೋಗ ನೀಡಲಾಗಿದೆ.

ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತವು ₹ 4,693 ಕೋಟಿಗಳಿಂದ ₹ 3,312 ಕೋಟಿಗಳಿಗೆ ಇಳಿಕೆ ಆಗಿದೆ.

2021–22ನೇ ಹಣಕಾಸು ವರ್ಷಕ್ಕೆ ಬ್ಯಾಂಕ್‌ನ ನಿವ್ವಳ ಲಾಭ ಶೇ 18.8ರಷ್ಟು ಹೆಚ್ಚಾಗಿ ₹ 36,961 ಕೋಟಿಗಳಷ್ಟಾಗಿದೆ. ಒಟ್ಟು ವರಮಾನವು ₹ 1.46 ಲಕ್ಷ ಕೋಟಿಗಳಿಂದ ₹ 1.57 ಲಕ್ಷ ಕೋಟಿಗಳಿಗೆ ಏರಿಕೆ ಆಗಿದೆ.

ಮುಖ್ಯಾಂಶಗಳು

- ವಸೂಲಾಗದ ಸಾಲದ ಪ್ರಮಾಣ ಇಳಿಕೆ
- 2021–22ನೇ ಹಣಕಾಸು ವರ್ಷಕ್ಕೆ ಬ್ಯಾಂಕ್ ಲಾಭ ಶೇ 18.8ರಷ್ಟು ಹೆಚ್ಚಳ

ಹತ್ಯೆಗೆ ಸಂಚು ರೂಪಿಸಿದ್ದವ ಹರ್ಷ ಚಾರಿಟಬಲ್ ಟ್ರಸ್ಟ್ ಕಾರ್ಯದರ್ಶಿ!

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಮುಸ್ಲಿಂ ಯುವಕನ ಕೊಲೆಗೆ ಸಂಚು ರೂಪಿಸಿದ್ದ 13 ಆರೋಪಿಗಳಲ್ಲಿ ಒಬ್ಬನಾದ ಸಚಿನ್ ರಾಯ್ಕರ್ ಈಚೆಗೆ ಹತ್ಯೆಯಾದ ಬಜರಂಗದಳದ ಕಾರ್ಯಕರ್ತ ಹರ್ಷನ ಹೆಸರಲ್ಲಿ ಅಸ್ತಿತ್ವಕ್ಕೆ ಬಂದಿರುವ ‘ಹರ್ಷ ಚಾರಿಟೆಬಲ್ ಟ್ರಸ್ಟ್’ನ ಕಾರ್ಯದರ್ಶಿ.

ಪೊಲೀಸರು ದಾಖಲಿಸಿರುವ ಎಫ್‌ಐಆರ್‌ನಲ್ಲಿ ಸಚಿನ್ ರಾಯ್ಕರ್ 9ನೇ ಆರೋಪಿ. ಪ್ರಕರಣ ದಾಖಲಾಗುತ್ತಿದ್ದಂತೆ ಆತ ನಾಪತ್ತೆಯಾಗಿದ್ದಾನೆ. ಉಳಿದ ಕೆಲ ಆರೋಪಿಗಳು ಬಿಜೆಪಿ ನಾಯಕರು ಅಧ್ಯಕ್ಷರಾಗಿರುವ ವಿವಿಧ ಸಂಘಟನೆಗಳಲ್ಲಿ ಗುರುತಿಸಿಕೊಂಡಿರುವುದು ಪ್ರಾಥಮಿಕ ತನಿಖೆಯಲ್ಲಿ ಬೆಳಕಿಗೆ ಬಂದಿದೆ ಎಂದು ಮೂಲಗಳು ತಿಳಿಸಿವೆ.

‘ಹತ್ಯೆಗೆ ಸಂಚು ರೂಪಿಸಿದ್ದ ಆರೋಪಿಗಳು ರಾಜಕೀಯ ಮುಖಂಡರ ಸಂಸ್ಥೆಗಳಲ್ಲಿ ಇರುವ ಬಗ್ಗೆ ಮಾಹಿತಿ ಇಲ್ಲ. ಅವರೆಲ್ಲ ಸಿಗೇಹಟ್ಟಿಯ ಹರ್ಷ ಮನೆಯ ಹತ್ತಿರದವರು. ಆತನ ಆಪ್ತರು. 13 ಆರೋಪಿಗಳಲ್ಲಿ ಪ್ರವೀಣ್ ವಿರುದ್ಧ ಮಾತ್ರ ಹಳೆಯ ಪ್ರಕರಣಗಳು ಇವೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಂ. ಲಕ್ಷ್ಮೀ ಪ್ರಸಾದ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಹರ್ಷ ಹತ್ಯೆ ಪ್ರಕರಣದ 10 ಆರೋಪಿಗಳು ಈಗಾಗಲೇ ಬಂಧನಕ್ಕೆ ಒಳಗಾಗಿ ಕಾರಾಗೃಹದಲ್ಲಿದ್ದಾರೆ.

ರಾಜ್ಯದಲ್ಲಿ ಕಲ್ಲಿದ್ದಲು ಕೊರತೆ ನೀಗಿಸಿದ ‘ಹಸಿರು ಇಂಧನ’

ಒಂದನೇ ಪುಟದಿಂದ

ಹೀಗಾಗಿ, ಆಮದು ಮಾಡಿಕೊಳ್ಳಲು ಸರ್ಕಾರ ಹಿಂದೇಟು ಹಾಕುತ್ತಿವೆ ಎಂದು ಅಭಿಪ್ರಾಯಪಡುತ್ತಾರೆ.

ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ಕಲ್ಲಿದ್ದಲು ಮೇಲೆ ಅವಲಂಬನೆಯಾಗಿರುವುದು ಕಡಿಮೆ. ಒಟ್ಟು 30,506 ಮೆಗಾವಾಟ್ ಸ್ಥಾಪಿತ ವಿದ್ಯುತ್ ಸಾಮರ್ಥ್ಯದಲ್ಲಿ, ಕಲ್ಲಿದ್ದಲು ಮೂಲಕ 10,343 ಮೆಗಾವಾಟ್ (ಶೇ34) ಮಾತ್ರ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಉತ್ಪಾದನೆಯ ಸಾಮರ್ಥ್ಯದಲ್ಲಿ ಕೆಲವು ಬಾರಿ ವ್ಯತ್ಯಾಸಗಳಾಗುತ್ತವೆ.

ಸೌರ ಮತ್ತು ಪವನ ವಿದ್ಯುತ್ ಸೇರಿದಂತೆ ವಿವಿಧ ಮೂಲಗಳ ಮೂಲಕ ವಿದ್ಯುತ್ ಉತ್ಪಾದನೆಗೆ ಆದ್ಯತೆ ನೀಡಿರುವುದರಿಂದ ರಾಜ್ಯದಲ್ಲಿ ಕಲ್ಲಿದ್ದಲು ಕೊರತೆ ಮೇಲಿನ ಅವಲಂಬನೆಯನ್ನು ತಪ್ಪಿಸಿದೆ ಎಂದು ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ.ಕುಮಾರ ನಾಯಕ್ ಅಭಿಪ್ರಾಯಪಟ್ಟರು.

15,833 ಮೆಗಾವಾಟ್ (ಶೇ 51) ವಿದ್ಯುತ್ ಅನ್ನು ನವೀಕರಿಸಬಹುದಾದ ಇಂಧನಗಳ ಮೂಲಕ ಲಭ್ಯವಾಗುತ್ತಿದೆ. ಇದರಲ್ಲಿ 7501 ಮೆಗಾ ವಾಟ್ ಸೌರ ವಿದ್ಯುತ್ ಮತ್ತು 5,095 ಮೆಗಾವಾಟ್ ಪವನ ವಿದ್ಯುತ್ ಹಾಗೂ 2,774 ಮೆಗಾ ವಾಟ್ ಇತರ ಮೂಲಗಳಿಂದ ಪಡೆಯಲಾಗುತ್ತಿದೆ.

ರಾಜ್ಯದಲ್ಲಿ ವಿವಿಧ ರೀತಿಯ ಜಲ ವಿದ್ಯುತ್ ಘಟಕಗಳ ಮೂಲಕ 4,500 ಮೆಗಾವಾಟ್ ಉತ್ಪಾದಿಸಲಾಗುತ್ತಿದೆ. ಇಲ್ಲಿ ಬೇಡಿಕೆಗೆ ತಕ್ಕಂತೆ ಉತ್ಪಾದನೆಯಲ್ಲೂ ಏರಿಳಿಕೆ ಮಾಡುವ ಅವಕಾಶವಿದೆ. ಕರ್ನಾಟಕ ಈ ಅವಕಾಶವನ್ನು ಉತ್ತಮವಾಗಿ ಬಳಸಿಕೊಂಡಿದೆ. ಹೀಗಾಗಿಯೇ ಕಲ್ಲಿದ್ದಲು ಮೇಲಿನ ಅವಲಂಬನೆಯನ್ನು ತಪ್ಪಿಸುವ ಕ್ರಮಗಳನ್ನು ಕೈಗೊಂಡಿದೆ ಎಂದು ಅಧಿಕಾರಿಗಳು ಹೇಳುತ್ತಾರೆ.

ವಿದ್ಯುತ್ ಕ್ಷೇತ್ರದಲ್ಲಿ ಸಾಧನೆ: ಕರ್ನಾಟಕ ವಿದ್ಯುತ್ ನಿಗಮವು 2021–22ನೇ ಹಣಕಾಸು ವರ್ಷದಲ್ಲಿ ಗರಿಷ್ಠ 32,503 ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದನೆ ಮಾಡಿದೆ. ಈ ಹಿಂದೆ, 2014–15ನೇ ಹಣಕಾಸು ವರ್ಷದಲ್ಲಿ 29,784.72 ಮಿಲಿಯನ್ ಯೂನಿಟ್ ಉತ್ಪಾದನೆ ಮಾಡಿದ್ದು ದಾಖಲೆಯಾಗಿತ್ತು.

ರಾಜ್ಯದಲ್ಲಿ ಬೇಡಿಕೆಗಿಂತ ಹೆಚ್ಚು ವಿದ್ಯುತ್ ಉತ್ಪಾದನೆಯಾಗಿದೆ. 6,578 ಮಿಲಿಯನ್ ಯೂನಿಟ್ ವಿದ್ಯುತ್ ಮಾರಾಟ ಮಾಡಿ ₹ 2,836 ಕೋಟಿ ಆದಾಯ ಗಳಿಸಿದೆ. ಈ ಮೂಲಕ ದೇಶದಲ್ಲಿ ಅತಿ ಹೆಚ್ಚು ವಿದ್ಯುತ್ ಮಾರಾಟ ಮಾಡಿದ ಖ್ಯಾತಿಗೆ ಕರ್ನಾಟಕ ಪಾತ್ರವಾಗಿದೆ.

ರಾಜ್ಯವಾರು ಸ್ಥಾಪಿತ ವಿದ್ಯುತ್ ಸಾಮರ್ಥ್ಯ ಮತ್ತು ಕಲ್ಲಿದ್ದಲು ಅವಲಂಬನೆ (ಮೆಗಾ ವಾಟ್)

ರಾಜ್ಯ	ಒಟ್ಟು ವಿದ್ಯುತ್ ಉತ್ಪಾದನೆ	ಕಲ್ಲಿದ್ದಲು ಅವಲಂಬನೆ	ಶೇಕಡವಾರು
ಮಹಾರಾಷ್ಟ್ರ	43,421	28,767	66
ಗುಜರಾತ್	41,236	24,289	59
ತಮಿಳುನಾಡು	34,955	15,364	44
ಕರ್ನಾಟಕ	30,506	10,343	34
ಉತ್ತರ ಪ್ರದೇಶ	29,130	20,963	72
ಆಂಧ್ರಪ್ರದೇಶ	25,727	14,714	57
ತೆಲಂಗಾಣ	17,988	10,481	58

ಇತರ ರಾಜ್ಯಗಳ ವಿದ್ಯುತ್ ಪೂರೈಕೆ ವಿವರ

ರಾಜ್ಯ	ಬೇಡಿಕೆ	ಕೊರತೆ (ಮೆಗಾವಾಟ್)
ಮಹಾರಾಷ್ಟ್ರ	28,914	2,200
ಗುಜರಾತ್	20,197	1,000
ತಮಿಳುನಾಡು	17,196	2,000
ತೆಲಂಗಾಣ	14,160	800
ಮಧ್ಯಪ್ರದೇಶ	12,409	1,500
ಆಂಧ್ರಪ್ರದೇಶ	12,293	3,000
ಪಶ್ಚಿಮ ಬಂಗಾಳ	9,681	500
ಛತ್ತೀಸಗಢ	5,229	500

‘ಹೆಚ್ಚುವರಿ ವಿದ್ಯುತ್ ಇದ್ದರೂ ಲೋಡ್‌ಶೆಡ್ಡಿಂಗ್?’

ಕಗ್ಗತ್ತಲು ರಾಜ್ಯ ಎನ್ನುವ ಟೀಕೆಗಳಿಂದ ಕರ್ನಾಟಕ ಮುಕ್ತವಾಗುತ್ತಿದ್ದರೂ ಅನಿಯಮಿತ ವಿದ್ಯುತ್ ವ್ಯತ್ಯಯ ಮಾತ್ರ ತಪ್ಪುತ್ತಿಲ್ಲ. ಕೃಷಿ ಪಂಪ್‌ಸೆಟ್‌ಗಳಿಗೆ ರಾತ್ರಿ ವೇಳೆಯಲ್ಲಿಯೇ ವಿದ್ಯುತ್ ಪೂರೈಸಲಾಗುತ್ತಿದೆ ಎನ್ನುವುದು ರೈತ ಸಂಘಟನೆಗಳ ದೂರು.

‘ರಾಜ್ಯದಲ್ಲಿ ಅಧಿಕೃತವಾಗಿ ಲೋಡ್‌ಶೆಡ್ಡಿಂಗ್ ಜಾರಿಗೊಳಿಸಿಲ್ಲ. ವಿದ್ಯುತ್ ಕೊರತೆಯ ಕಾರಣಕ್ಕೆ ವ್ಯತ್ಯಯವಾಗುತ್ತಿಲ್ಲ. ಕಾಮಗಾರಿಗಳು, ಗ್ರಿಡ್ ನಿರ್ವಹಣೆ, ಸ್ಥಳೀಯ ಸಮಸ್ಯೆಗಳು ಸೇರಿದಂತೆ ವಿವಿಧ ಕಾರಣಗಳಿಂದ ವಿದ್ಯುತ್ ಕಡಿತಗೊಳಿಸಲಾಗುತ್ತಿದೆ. ಜತೆಗೆ, ವಿದ್ಯುತ್ ಉತ್ಪಾದನೆ ಮತ್ತು ಪೂರೈಕೆಯನ್ನು ತಾಂತ್ರಿಕವಾಗಿ ಸಮತೋಲನ ಮಾಡುವುದು ಸಹ ಮುಖ್ಯವಾಗುತ್ತದೆ’ ಎನ್ನುವುದು ಅಧಿಕಾರಿಗಳ ಪ್ರತಿಪಾದನೆ.

ಕಳೆದ ಆರ್ಥಿಕ ವರ್ಷದಲ್ಲಿ ಅತಿ ಹೆಚ್ಚು ವಿದ್ಯುತ್ ಖರೀದಿಸಿರುವ ರಾಜ್ಯಗಳು (ಮಿಲಿಯನ್ ಯೂನಿಟ್‌ಗಳಲ್ಲಿ)

ಗುಜರಾತ್	14,630
ಆಂಧ್ರಪ್ರದೇಶ	9,830
ಪಂಜಾಬ್	5,940
ತೆಲಂಗಾಣ	5,210
ತಮಿಳುನಾಡು	4,400





ಸತತ ಸೋಲಿನ ಹೊಣೆ ಹೊತ್ತ ರೋಹಿತ್

ಮುಂಬೈ (ಪಿಟಿಐ): ಮುಂಬೈ ಇಂಡಿಯನ್ಸ್ ತಂಡದ ಸೋಲಿನ ಸಂಪೂರ್ಣ ಹೊಣೆಯನ್ನು ತಾವೇ ಹೊರುವುದಾಗಿ ನಾಯಕ ರೋಹಿತ್ ಶರ್ಮಾ ಹೇಳಿದ್ದಾರೆ.

15ನೇ ಆವೃತ್ತಿಯ ಐಪಿಎಲ್ ಟೂರ್ನಿಯಲ್ಲಿ ರೋಹಿತ್ ಬಳಗವು ಇದುವರೆಗೆ ಆಡಿರುವ ಎಲ್ಲ ಆರು ಪಂದ್ಯಗಳಲ್ಲಿ ಸೋತಿದೆ. ಶನಿವಾರ ಲಖನೌ ತಂಡದ ವಿರುದ್ಧದ ಪಂದ್ಯದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ರಾಹುಲ್ ನೂರಕ್ಕೆ ನೂರು

ಮುಂಬೈಗೆ ಆರನೇ ಸೋಲು; ಐಪಿಎಲ್‌ನಲ್ಲಿ 3ನೇ ಶತಕ ಬಾರಿಸಿದ ಕನ್ನಡಿಗ

ಮುಂಬೈ(ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ತಮ್ಮ ನೂರನೇ ಪಂದ್ಯಕ್ಕೆ ಶತಕದ ಮೆರಗು ತುಂಬಿದರು. ಅವರ ನಾಯಕತ್ವದ ಲಖನೌ ಸೂಪರ್ ಜೈಂಟ್ಸ್ ಜಯಭೇರಿ ಬಾರಿಸಿತು. ಮುಂಬೈ ಇಂಡಿಯನ್ಸ್ ಸತತ ಆರನೇ ಸೋಲುಂಡಿತು.


ಐಪಿಎಲ್‌ನಲ್ಲಿ ಇದೇ ಮೊದಲ ಬಾರಿ ಆಡುತ್ತಿರುವ ಲಖನೌ ತಂಡವು 18 ರನ್‌ಗಳಿಂದ ಮುಂಬೈ ವಿರುದ್ಧ ಗೆದ್ದಿತು. ಇದರೊಂದಿಗೆ ರಾಹುಲ್ ಬಳಗವು ನಾಲ್ಕನೇ ಜಯ ಸಾಧಿಸಿತು. ಟಾಸ್ ಗೆದ್ದ ಮುಂಬೈ ತಂಡದ ನಾಯಕ ರೋಹಿತ್ ಶರ್ಮಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಇನಿಂಗ್ಸ್ ಆರಂಭಿಸಿದ ರಾಹುಲ್ (ಅಜೇಯ 103; 60ಎ, 4X9, 6X5) ಶತಕ ಬಾರಿಸಿದ ಫಲವಾಗಿ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 199 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಮುಂಬೈ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 181 ರನ್ ಗಳಿಸಲಷ್ಟೇ ಶಕ್ತವಾಯಿತು. 2013ರಲ್ಲಿ ಡೆಲ್ಲಿ ಡೇರ್‌ಡೆವಿಲ್ಸ್, 2019ರಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಇದೇ ರೀತಿ ಸತತ ಆರು ಪಂದ್ಯಗಳಲ್ಲಿ ಸೋತಿದ್ದವು.

ರಾಹುಲ್ ಅಬ್ಬರದ ಶತಕ: ಕ್ವಿಂಟನ್ ಡಿಕಾಕ್ ಜೊತೆಗೆ ಮೊದಲ ವಿಕೆಟ್ ಜೊತೆಯಾಟದಲ್ಲಿ 52 ರನ್ ಸೇರಿಸಿದ ರಾಹುಲ್ ಉತ್ತಮ ಅಡಿಪಾಯ ಹಾಕಿದರು. ತಮ್ಮ ರಾಜ್ಯ ತಂಡದ ಗೆಳೆಯ ಮನೀಷ್ ಪಾಂಡೆಯೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 72 ರನ್ ಸೇರಿಸಿದರು. ಇದರಿಂದಾಗಿ ತಂಡವು 13 ಓವರ್‌ಗಳಲ್ಲಿ 124 ರನ್‌ಗಳು ಹರಿದುಬಂದವು. ಮುರುಗನ್ ಅಶ್ವಿನ್ ಬೌಲಿಂಗ್‌ನಲ್ಲಿ ಪಾಂಡೆ ಔಟಾದರು. ಆದರೆ ರಾಹುಲ್ ಆರ್ಭಟ ಮತ್ತಷ್ಟು ತೀವ್ರಗೊಂಡಿತು.

ಕೊನೆಯ ಆರು ಓವರ್‌ಗಳಲ್ಲಿ 74 ರನ್‌ಗಳು ತಂಡದ ಮೊತ್ತ ಸೇರಲು ರಾಹುಲ್ ಆಟ ಕಾರಣವಾಯಿತು. 33 ಎಸೆತಗಳಲ್ಲಿ ಅರ್ಧಶತಕ ಪೂರೈಸಿದ್ದ ರಾಹುಲ್, ನಂತರದ 23 ಎಸೆತಗಳಲ್ಲಿ ಶತಕದ ಗಡಿ ದಾಟಿದರು. ಅವರು ಈ ಹಿಂದಿನ ಆವೃತ್ತಿಗಳಲ್ಲಿ ಪಂಜಾಬ್ ಕಿಂಗ್ಸ್ ತಂಡದಲ್ಲಿ ಆಡುವಾಗ ಎರಡು ಶತಕಗಳನ್ನು ಗಳಿಸಿದ್ದರು.

ರಾಹುಲ್ ಚೆಂದದ ಆಟವನ್ನು ವ್ಯರ್ಥವಾಗದಂತೆ ಮಧ್ಯಮವೇಗಿ ಆವೇಶ್ ಖಾನ್ (30ಕ್ಕೆ3) ತಡೆದರು. ಮುಂಬೈ ತಂಡದ ಬ್ಯಾಟಿಂಗ್ ಬಲಕ್ಕೆ ಪೆಟ್ಟು ನೀಡಿದರು. ಆರಂಭಿಕ ಜೋಡಿ ರೋಹಿತ್ ಮತ್ತು ಇಶಾನ್ ಕಿಶನ್ ಮತ್ತೊಮ್ಮೆ ವೈಫಲ್ಯ ಅನುಭವಿಸಿತು. ಸೂರ್ಯಕುಮಾರ್ ಯಾದವ್, ಬೇಬಿ ಡಿವಿಲಿಯರ್ಸ್ ಖ್ಯಾತಿಯ ಡೇವಿಡ್ ಬ್ರೆವಿಸ್ ಮತ್ತು ಕೀರನ್ ಪೊಲಾರ್ಡ್ ಅವರ ಪ್ರಯತ್ನ ಸಾಕಾಗಲಿಲ್ಲ. ಆದರೆ ಪೊಲಾರ್ಡ್ ಬೀಸಾಟದಿಂದಾಗಿ ಮುಂಬೈಗೆ ಗೆಲುವಿನ ಆಸೆ ಚಿಗುರಿತ್ತು. ಕೊನೆಯ ಓವರ್‌ನಲ್ಲಿ 26 ರನ್‌ಗಳ ಅಗತ್ಯವಿದ್ದಾಗ, ಲಂಕಾದ ಬೌಲರ್ ದುಷ್ಮಂತ ಚಾಮೀರ ಚಾಣಾಕ್ಷ ಬೌಲಿಂಗ್‌ನಿಂದಾಗಿ ಆತಂಕ ತಪ್ಪಿತು.

ಸಂಕ್ಷಿಪ್ತ ಸ್ಕೋರು: ಲಖನೌ ಸೂಪರ್ ಜೈಂಟ್ಸ್: 20 ಓವರ್‌ಗಳಲ್ಲಿ 4ಕ್ಕೆ199 (ಕೆ.ಎಲ್. ರಾಹುಲ್ ಔಟಾಗದೆ 103, ಕ್ವಿಂಟನ್ ಡಿಕಾಕ್ 24, ಮನೀಷ್ ಪಾಂಡೆ 38, ಜಯದೇವ್ ಉನದ್ಕತ್ 32ಕ್ಕೆ2), ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 9ಕ್ಕೆ181 (ಡೇವಿಡ್ ಬ್ರೆವಿಸ್ 31, ಸೂರ್ಯಕುಮಾರ್ ಯಾದವ್ 37, ತಿಲಕ್ ವರ್ಮಾ 26, ಕೀರನ್ ಪೊಲಾರ್ಡ್ 25, ಆವೇಶ್ ಖಾನ್ 30ಕ್ಕೆ3) ಫಲಿತಾಂಶ: ಲಖನೌಗೆ 18 ರನ್‌ಗಳ ಜಯ.



ಶತಕ ಪೂರೈಸಿದ ನಂತರ ಕೆ.ಎಲ್‌ ರಾಹುಲ್ ಸಂಭ್ರಮದ ಪರಿ –ಪಿಟಿಐ ಚಿತ್ರ

ಆರ್‌ಸಿಬಿಗೆ ಜಯ: ಮ್ಯಾಕ್ಸ್‌ವೆಲ್ ಅರ್ಧಶತಕ; ಹ್ಯಾಜಲ್‌ವುಡ್, ಸಿರಾಜ್ ಮಿಂಚು

ದಿನೇಶ್ ಆರ್ಭಟಕ್ಕೆ ಶರಣಾದ ಡೆಲ್ಲಿ


ಮುಂಬೈ: ದಿನೇಶ್ ಕಾರ್ತಿಕ್ ಮತ್ತೊಮ್ಮೆ ಮಿಂಚಿದರು. ಶನಿವಾರ ರಾತ್ರಿ ವಾಂಖೆಡೆ ಕ್ರೀಡಾಂಗಣದಲ್ಲಿ ಮಿಂಚಿನ ಅರ್ಧಶತಕ ಬಾರಿಸಿದ ಅವರು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಜಯದ ಹಾದಿ ತೋರಿಸಿದರು.

ಟಾಸ್ ಗೆದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ದಿನೇಶ್ ಕಾರ್ತಿಕ್ (ಅಜೇಯ 66; 34ಎಸೆತ) ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ (55; 34ಎ) ಅವರಿಬ್ಬರ ಅರ್ಧಶತಕಗಳ ಬಲದಿಂದ ಬೆಂಗಳೂರು ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 189 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಡೆಲ್ಲಿ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 173 ರನ್ ಗಳಿಸಲು ಮಾತ್ರ ಶಕ್ತವಾಯಿತು. ಆರ್‌ಸಿಬಿಯ ಮೊಹಮ್ಮದ್ ಸಿರಾಜ್ (31ಕ್ಕೆ2) ಮತ್ತು ಜೋಶ್ ಹ್ಯಾಜಲ್‌ವುಡ್ (28ಕ್ಕೆ3) ಸ್ವಿಂಗ್ ಮೋಡಿಗೆ ರಿಷಭ್ ಪಂತ್ ಬಳಗ ಶರಣಾಯಿತು. ಡೇವಿಡ್ ವಾರ್ನರ್ (66ರನ್) ಅರ್ಧಶತಕ ವ್ಯರ್ಥವಾಯಿತು.

ಜಯದ ಹಾದಿ ತೋರಿದ ದಿನೇಶ್: ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು 40 ರನ್‌ಗಳಾಗುವಷ್ಟರಲ್ಲಿ ಮೂರು ವಿಕೆಟ್‌ಗಳನ್ನು ಕಳೆದುಕೊಂಡಿತು. ನಾಯಕ ಡುಪ್ಲೆಸಿ, ಅನುಜ್ ರಾವತ್ ಮತ್ತು ವಿರಾಟ್ ಕೊಹ್ಲಿ ಪೆವಿಲಿಯನ್ ಸೇರಿದರು. ಡೆಲ್ಲಿ ಫೀಲ್ಡರ್ ಲಲಿತ್ ಯಾದವ್ ಮಾಡಿದ ಚುರುಕಿನ ಫೀಲ್ಡಿಂಗ್ ಮತ್ತು ಮಿಂಚಿನ ವೇಗದ ಥ್ರೋನಿಂದಾಗಿ ಕೊಹ್ಲಿ ರನ್‌ಔಟ್ ಆದರು. ಈ ಹಂತದಲ್ಲಿ ಕ್ರೀಸ್‌ಗೆ ಬಂದ ಮ್ಯಾಕ್ಸ್‌ವೆಲ್ ಎಚ್ಚರಿಕೆಯ ಆಟವಾಡಿದರು. ಇನ್ನೊಂದೆಡೆ ಪ್ರಭುದೇಸಾಯಿ (6 ರನ್) ಕೂಡ ಬೇಗನೆ ಔಟಾದರು. ಮ್ಯಾಕ್ಸ್ ಜೊತೆಗೂಡಿದ ಶಾಬಾಜ್ ಅಹಮದ್ ಇನಿಂಗ್ಸ್ ಕಟ್ಟುವ ಪ್ರಯತ್ನ ಮಾಡಿದರು.

ಆದರೆ ತಂಡವು ನೂರರ ಗಡಿ ದಾಟುವ ಮುನ್ನ ಮ್ಯಾಕ್ಸ್‌ವೆಲ್ ವಿಕೆಟ್ ಗಳಿಸಿದ ಸ್ಪಿನ್ನರ್ ಕುಲದೀಪ್ ಯಾದವ್ ಸಂಭ್ರಮಿಸಿದರು. ಅದರ ನಂತರ ಡೆಲ್ಲಿ ತಂಡಕ್ಕೆ ಸಡಗರ ಪಡುವ ಅವಕಾಶವೇ ಸಿಗಲಿಲ್ಲ. 14ನೇ ಓವರ್‌ನಲ್ಲಿ ಕುಲದೀಪ್ ಯಾದವ್ ಎಸೆತದಲ್ಲಿ ದಿನೇಶ್ ಕ್ಯಾಚ್ ಕೈಚೆಲ್ಲಿದ ವಿಕೆಟ್‌ಕೀಪರ್ ಪಂತ್ ಪಂದ್ಯವನ್ನೇ ಕೈಚೆಲ್ಲಿದರು!

ಆಗ ಕೇವಲ 5 ರನ್ ಗಳಿಸಿದ್ದ ದಿನೇಶ್ ತಮಗೆ ಲಭಿಸಿದ ವರದಾನವನ್ನು ಸಮರ್ಥವಾಗಿ ಬಳಸಿಕೊಂಡರು. ಶಾಬಾಜ್ ಅವರೊಂದಿಗೆ ಮುರಿಯದ ಆರನೇ ವಿಕೆಟ್ ಜೊತೆಯಾಟದಲ್ಲಿ 97 ರನ್‌ಗಳನ್ನು ಸೇರಿಸಿದರು. ಕೇವಲ ಎಂಟು ಓವರ್‌ಗಳಲ್ಲಿ ಈ ರನ್‌ಗಳು ತಂಡದ ಖಾತೆಗೆ ಸೇರಿದವು. ಅದರಲ್ಲಿ ದಿನೇಶ್ ಅವರದ್ದೇ ಸಿಂಹಪಾಲು. ಐದು ಸಿಕ್ಸರ್ ಮತ್ತು ಐದು ಬೌಂಡರಿ ಗಳನ್ನು ಹೊಡೆದರು. 194.12ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು. ಮುಸ್ತಫಿಜುರ್ ಹಾಕಿದ 18ನೇ ಓವರ್‌ನಲ್ಲಿ ದಿನೇಶ್ ನಾಲ್ಕು ಬೌಂಡರಿ ಮತ್ತು ಎರಡು ಸಿಕ್ಸರ್ ಸಿಡಿಸಿದರು. ದಿನೇಶ್ ಭುಜಬಲ ಪರಾಕ್ರಮಕ್ಕೆ ಡೆಲ್ಲಿ ತಂಡದ ಆಟಗಾರರು ಬಸವಳಿದರು.


ದಿನೇಶ್ ಕಾರ್ತಿಕ್ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 5ಕ್ಕೆ 189 (20 ಓವರ್))
ಡುಪ್ಲೆಸಿ ಸಿ ಅಕ್ಷರ್ ಬಿ ಖಲೀಲ್ 8 (11ಎ, 4X2), ಅನುಜ್ ಎಲ್‌ಬಿಡಬ್ಲ್ಯು ಶಾರ್ದೂಲ್ 0 (1ಎ), ವಿರಾಟ್ ರನೌಟ್ (ಲಲಿತ್ ಯಾದವ್) 12 (14ಎ, 4X1), ಮ್ಯಾಕ್ಸ್‌ವೆಲ್ ಸಿ ಲಲಿತ್ ಬಿ ಕುಲದೀಪ್ 55 (34ಎ, 4X7, 6X2), ಸುಯಶ್ ಸಿ ಕುಲದೀಪ್ ಬಿ ಅಕ್ಷರ್ 6 (5ಎ, 4X1), ಶಾಬಾಜ್ ಔಟಾಗದೆ 32 (21ಎ, 4X3, 6X1), ಕಾರ್ತಿಕ್ ಔಟಾಗದೆ 66 (34ಎ, 4X5, 6X5)
ಇತರೆ (ಲೆಗ್‌ಬೈ 3, ವೈಡ್ 7) 10
ವಿಕೆಟ್ ಪತನ: 1-5 (ಅನುಜ್ ರಾವತ್, 1.1), 2-13 (ಫಫ್ ಡುಪ್ಲೆಸಿ, 2.3), 3-40 (ವಿರಾಟ್ ಕೊಹ್ಲಿ, 6.2), 4-75 (ಸುಯಶ್ ಪ್ರಭುದೇಸಾಯಿ, 9.3), 5-92 (ಗ್ಲೆನ್ ಮ್ಯಾಕ್ಸ್‌ವೆಲ್, 11.2)
ಬೌಲಿಂಗ್: ಮುಸ್ತಫಿಜುರ್ ರೆಹಮಾನ್ 4-0-48-0, ಶಾರ್ದೂಲ್ ಠಾಕೂರ್ 4-0-27-1, ಖಲೀಲ್ ಅಹಮದ್ 4-0-36-1, ಅಕ್ಷರ್ ಪಟೇಲ್ 4-0-29-1, ಕುಲದೀಪ್ ಯಾದವ್ 4-0-46-1

ಡೆಲ್ಲಿ ಕ್ಯಾಪಿಟಲ್ಸ್ 7ಕ್ಕೆ 173 (20 ಓವರ್)
ಪೃಥ್ವಿ ಶಾ ಸಿ ಅನುಜ್ ಬಿ ಸಿರಾಜ್ 16 (13ಎ, 4X1, 6X1), ವಾರ್ನರ್ ಎಲ್‌ಬಿಡಬ್ಲ್ಯು ಬಿ ಹಸರಂಗ 66 (38ಎ, 4X4, 6X5), ಮಾರ್ಷ್ ರನೌಟ್ ಹಸರಂಗ 14 (24ಎ), ರಿಷಭ್ ಸಿ ಕೊಹ್ಲಿ ಬಿ ಸಿರಾಜ್ 34 (17ಎ, 4X3, 6X2), ರೋವ್ಮನ್ ಸಿ ಕಾರ್ತಿಕ್ ಬಿ ಹ್ಯಾಜಲ್‌ವುಡ್ 0 (1ಎ), ಲಲಿತ್ ಸಿ ಸುಯಶ್ ಬಿ ಹ್ಯಾಜಲ್‌ವುಡ್ 1 (4ಎ), ಶಾರ್ದೂಲ್ ಸಿ ಕಾರ್ತಿಕ್ ಬಿ ಹ್ಯಾಜಲ್‌ವುಡ್ 17 (9ಎ, 6X2), ಅಕ್ಷರ್ ಔಟಾಗದೆ 10 (7ಎ, 4X1), ಕುಲದೀಪ್ ಔಟಾಗದೆ 10 (7ಎ, 4X2)
ಇತರೆ (ಲೆಗ್‌ಬೈ 1, ವೈಡ್ 4) 5
ವಿಕೆಟ್ ಪತನ: 1-50 (ಪೃಥ್ವಿ ಶಾ, 4.4), 2-94 (ಡೇವಿಡ್ ವಾರ್ನರ್, 11.3), 3-112 (ಮಿಚೆಲ್ ಮಾರ್ಷ್, 13.6), 4-112 (ರೋವ್ಮನ್ ಪೊವೆಲ್, 14.1), 5-115 (ಲಲಿತ್ ಯಾದವ್, 14.6), 6-142 (ರಿಷಭ್ ಪಂತ್, 16.3), 7-156 (ಶಾರ್ದೂಲ್ ಠಾಕೂರ್, 18.1)
ಬೌಲಿಂಗ್: ಗ್ಲೆನ್ ಮ್ಯಾಕ್ಸ್‌ವೆಲ್ 2-0-14-0, ಮೊಹಮ್ಮದ್ ಸಿರಾಜ್ 4-0-31-2, ಜೋಶ್ ಹ್ಯಾಜಲ್‌ವುಡ್ 4-0-28-3, ಶಾಬಾಜ್ ಅಹಮ್ಮದ್ 2-0-19-0, ಹರ್ಷಲ್ ಪಟೇಲ್ 4-0-40-0, ವನಿಂದು ಹಸರಂಗ 4-0-40-1

ಫಲಿತಾಂಶ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ 16 ರನ್‌ಗಳ ಜಯ

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	5	4	1	0	0	8	0.450
ಲಖನೌ	6	4	2	0	0	8	0.296
ಬೆಂಗಳೂರು	6	4	2	0	0	8	0.142
ರಾಜಸ್ಥಾನ	5	3	2	0	0	6	0.389
ಪಂಜಾಬ್	5	3	2	0	0	6	0.239
ಕೋಲ್ಕತ್ತ	6	3	3	0	0	6	0.223
ಹೈದರಾಬಾದ್	5	3	2	0	0	6	-0.196
ಡೆಲ್ಲಿ	5	2	3	0	0	4	0.219
ಚೆನ್ನೈ	5	1	4	0	0	2	-0.745
ಮುಂಬೈ	6	0	6	0	0	0	-1.048

*ಶನಿವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	12
ಕುಲದೀಪ್	ಡೆಲ್ಲಿ	11
ಆವೇಶ್ ಖಾನ್	ಗುಜರಾತ್	11

ಆರೆಂಜ್ ಕ್ಯಾಪ್
(ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	272
ರಾಹುಲ್	ಲಖನೌ	235
ಹಾರ್ದಿಕ್	ಗುಜರಾತ್	228

ಸಮಬಲಶಾಲಿಗಳ ಹಣಾಹಣಿ ಇಂದು

ಪಂಜಾಬ್ ಕಿಂಗ್ಸ್–ಸನ್‌ರೈಸರ್ಸ್ ಹೈದರಾಬಾದ್ ತಂಡಗಳ ಮುಖಾಮುಖಿ

ನವಿ ಮುಂಬೈ(ಪಿಟಿಐ): ತಲಾ ಮೂರು ಪಂದ್ಯಗಳನ್ನು ಗೆದ್ದು ಆತ್ಮವಿಶ್ವಾಸದಲ್ಲಿರುವ ಕನ್ನಡಿಗ ಮಯಂಕ್ ಅಗರವಾಲ್ ನಾಯಕತ್ವದ ಪಂಜಾಬ್ ಕಿಂಗ್ಸ್ ಮತ್ತು ಕೇನ್ ವಿಲಿಯಮ್ಸನ್ ಮುಂದಾಳತ್ವದ ಸನ್‌ರೈಸರ್ಸ್ ಹೈದರಾಬಾದ್ ಭಾನುವಾರ ಮುಖಾಮುಖಿಯಾಗಲಿವೆ.

ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯವು ರೋಚಕ ಹಣಾಹಣಿಯಾಗುವ ಎಲ್ಲ ಸಾಧ್ಯತೆಗಳೂ ಇವೆ. ಏಕೆಂದರೆ, ಎರಡೂ ತಂಡಗಳೂ ಈ ಟೂರ್ನಿಯಲ್ಲಿ ಸಿಹಿ, ಕಹಿಯನ್ನು ಸಮನಾಗಿ ಅನುಭವಿಸಿವೆ.

ಮೊದಲೆರಡು ಪಂದ್ಯಗಳಲ್ಲಿ ಸೋತ ನಂತರ ಹೈದರಾಬಾದ್ ತಂಡವು ಸತತ ಮೂರು ಜಯ ಸಾಧಿಸಿತು. ಜೇಸನ್ ರಾಯ್ ಮತ್ತು ಕೇನ್ ಉತ್ತಮ ಲಯದಲ್ಲಿದ್ದಾರೆ. ಜೇಸನ್ ಹೋಲ್ಡರ್, ಭುವನೇಶ್ವರ್ ಕುಮಾರ್ ಮತ್ತು ಅಫ್ಗನ್ ಸ್ಪಿನ್ನರ್ ರಶೀದ್ ಖಾನ್ ಕೊನೆಯ ಎಸೆತದವರೆಗೂ ಛಲದ ಹೋರಾಟ ಮಾಡುವ ನುರಿತ ಬೌಲರ್‌ಗಳು.

ಪಂಜಾಬ್ ತಂಡವು ಆರ್‌ಸಿಬಿ, ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಮುಂಬೈ ಇಂಡಿಯನ್ಸ್ ತಂಡಗಳನ್ನು ಸೋಲಿಸಿದೆ. ತಾನು ಸೋತ ಪಂದ್ಯಗಳಲ್ಲಿಯೂ ವಿರೋಚಿತ ಹೋರಾಟ ಮಾಡಿತ್ತು. ಮಯಂಕ್, ಶಿಖರ್ ಧವನ್, ಹೊಸಪ್ರತಿಭೆ ಜಿತೇಶ್ ಶರ್ಮಾ ಉತ್ತಮ ಲಯದಲ್ಲಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್

ಹಾರ್ದಿಕ್ ಬಳಗಕ್ಕೆ ಜಡೇಜ ಪಡೆ ಸವಾಲು

ಮುಂಬೈ: ಮೊದಲ ಬಾರಿ ನಾಯಕತ್ವದ ಹೊಣೆ ನಿರ್ವಹಿಸುತ್ತಿರುವ ಭಾರತ ಕ್ರಿಕೆಟ್ ತಂಡದ ಇಬ್ಬರು ಆಲ್‌ರೌಂಡರ್‌ಗಳಾದ ರವೀಂದ್ರ ಜಡೇಜ ಮತ್ತು ಹಾರ್ದಿಕ್ ಪಾಂಡ್ಯ ಭಾನುವಾರ ಮುಖಾಮುಖಿಯಾಗಲಿದ್ದಾರೆ.

ಹಾರ್ದಿಕ್ ನಾಯಕತ್ವದ ಗುಜರಾತ್ ಟೈಟನ್ಸ್ ಮತ್ತು ಜಡೇಜ ಮುಂದಾಳತ್ವದ ಚೆನ್ನೈ ಸೂಪರ್ ಕಿಂಗ್ಸ್ ಸೆಣಸಲಿವೆ.

ಪಂದ್ಯ ಆರಂಭ: ರಾತ್ರಿ 7.30

ಅಂಧರ ಚೆಸ್: ಯಂಕಪ್ಪ ಮುನ್ನಡೆ

ಪ್ರಜಾವಾಣಿ ವಾರ್ತೆ

ರಾಯಚೂರು: ಸ್ಥಳೀಯ ಪ್ರತಿಭೆ ಯಂಕಪ್ಪ ನಾಯಕ ಮತ್ತು ಬೆಂಗಳೂರಿನ ರಮೇಶ್ ಇಲ್ಲಿನ ಮಾಣಿಕಪ್ರಭು ಅಂಧರ ಶಾಲೆಯಲ್ಲಿ ಆಯೋಜಿಸಿರುವ ಅಂಧರ ರಾಜ್ಯಮಟ್ಟದ ಮುಕ್ತ ರ್‍ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಮುನ್ನಡೆ ಸಾಧಿಸಿದ್ದಾರೆ.

ಶನಿವಾರ ನಡೆದ ನಾಲ್ಕನೆ ಸುತ್ತಿನಲ್ಲಿ ಯಂಕಪ್ಪ ಅವರು ಬೆಂಗಳೂರಿನ ಕೆ.ಎಸ್. ಶೀಲಾವತಿ ಅವರ ವಿರುದ್ಧ ಗೆದ್ದರು. ರಮೇಶ, ಮೈಸೂರಿನ ಕೇಶವ ಮೂರ್ತಿ ಹಾಗೂ ಇ. ವಿಜಯ ಅವರು ಬೆಂಗಳೂರಿನ ರವೀಂದ್ರಗೌಡರ ವಿರುದ್ಧ ಜಯ ಸಾಧಿಸಿದರು. ಇದರೊಂದಿಗೆ ತಲಾ ನಾಲ್ಕು ಅಂಕ ಗಳಿಸಿದರು.

ಇನ್ನುಳಿದ ಪಂದ್ಯಗಳಲ್ಲಿ ಬಸಲಿಂಗಪ್ಪ ಮರಡ್ಡಿ ಅವರು ಬೆಂಗಳೂರಿನ ಪ್ರವೀಣ ಡಿ., ಹಾಗೂ ನಾಗರಾಜ ಕೆ.ಎಸ್., ಅವರು ಬೆಂಗಳೂರಿನ ಜ್ಯೋತಿ ಬಿ. ವಿರುದ್ಧ ಜಯ ಗಳಿಸಿದರು.

ರಾಜ್ಯದ 18 ಜಿಲ್ಲೆಗಳಿಂದ 108 ಸ್ಪರ್ಧಿಗಳು ಭಾಗವಹಿಸಿದ್ದಾರೆ. ಇಲ್ಲಿ ಪ್ರಥಮ ಸ್ಥಾನ ಗಳಿಸಿದವರು ಮುಂದಿನ ತಿಂಗಳು ಹೊನ್ನಾವರದಲ್ಲಿ ನಡೆಯುವ ರಾಷ್ಟ್ರಮಟ್ಟದ ಚೆಸ್ ಸ್ಪರ್ಧೆಗೆ ಅರ್ಹತೆ ಪಡೆಯಲಿದ್ದಾರೆ.



ರಾಯಚೂರಿನ ಮಾಣಿಕಪ್ರಭು ಅಂಧರ ಶಾಲೆಯಲ್ಲಿ ಶನಿವಾರದಿಂದ ಆರಂಭವಾದ ರಾಜ್ಯಮಟ್ಟದ ಅಂಧರ ಚೆಸ್ ಸ್ಪರ್ಧೆಯಲ್ಲಿ ವಿವಿಧ ಜಿಲ್ಲೆಗಳಿಂದ ಅಂಧ ಸ್ಪರ್ಧಾಳುಗಳು ಭಾಗವಹಿಸಿರುವುದು

ರಾಷ್ಟ್ರೀಯ ಹಾಕಿ: ಕರ್ನಾಟಕಕ್ಕೆ ನಿರಾಸೆ

ಭೋಪಾಲ್: ತಮಿಳುನಾಡು ಮತ್ತು ಹರಿಯಾಣ ತಂಡಗಳು ರಾಷ್ಟ್ರೀಯ ಪುರುಷರ ಸೀನಿಯರ್ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿಗಾಗಿ ಸೆಣಸಲಿವೆ.ಇಲ್ಲಿ ಶನಿವಾರ ನಡೆದ ಸೆಮಿಫೈನಲ್ ಹಣಾಹಣಿಯಲ್ಲಿ ತಮಿಳುನಾಡು ತಂಡವು 3–0ಯಿಂದ ಕರ್ನಾಟಕ ತಂಡಕ್ಕೆ ಸೋಲುಣಿಸಿತು.

ಜೆ. ಜೋಷುವಾ ಬೆನೆಡಿಕ್ಟ್ ವೇಸ್ಲಿ (44ನೇ ನಿಮಿಷ), ಸುಂದರಪಾಂಡಿ (50ನೇ ನಿ.) ಮತ್ತು ಶ್ರವಣಕುಮಾರ್ (54ನೇ ನಿ.) ತಮಿಳುನಾಡು ಗೆಲುವಿಗೆ ಕಾರಣ ರಾದರು.

ನಾಲ್ಕರ ಘಟ್ಟದ ಮತ್ತೊಂದು ಹಣಾಹಣಿಯಲ್ಲಿ ಹರಿಯಾಣ 5–2ರಿಂದ ಮಹಾರಾಷ್ಟ್ರ ತಂಡದ ಸವಾಲು ಮೀರಿತು.

ಕರ್ನಾಟಕ ಟಿಟಿ ತಂಡಗಳಿಗೆ ರಕ್ಷಿತ್, ಖುಷಿ ನಾಯಕತ್ವ

ಬೆಂಗಳೂರು: ರಕ್ಷಿತ್ ಆರ್ ಬಾರಿಗಿಡದ ಮತ್ತು ವಿ. ಖುಷಿ ಅವರನ್ನು ಕ್ರಮವಾಗಿ ಮೇಘಾಲಯದಲ್ಲಿ ನಡೆಯಲಿರುವ 83ನೇ ರಾಷ್ಟ್ರೀಯ ಸೀನಿಯರ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸುವ ಕರ್ನಾಟಕ ಪುರುಷ ಮತ್ತು ಮಹಿಳೆಯರ ತಂಡಗಳ ನಾಯಕತ್ವದ ಹೊಣೆ ವಹಿಸಲಾಗಿದೆ.

ಇದೇ 18 ರಿಂದ 25ರವರೆಗೆ ಟೂರ್ನಿ ಆಯೋಜನೆಗೊಂಡಿದೆ. ಕಂಠೀರವ ಕ್ರೀಡಾಂಗಣದಲ್ಲಿ ಏಪ್ರಿಲ್ 5 ರಿಂದ 16ರವರೆಗೆ ಪೂರ್ವಭಾವಿ ತರಬೇತಿ ಶಿಬಿರ ನಡೆಸಲಾಗಿತ್ತು. ಸೀನಿಯರ್ ಕೋಚ್ ಕಾಶಿನಾಥ್ ಕೇದಾರಿ ಮತ್ತು ಕೃಣಾಲ್ ತೆಲಂಗ್ ಮಾರ್ಗದರ್ಶನ ನೀಡಿದ್ದರು. ಕೆಟಿಟಿಎ ಕಾರ್ಯದರ್ಶಿ ಟಿ.ಜಿ. ಉಪಾಧ್ಯೆ ಪ್ರಕಟಿಸಿರುವ ತಂಡಗಳು ಇಂತಿವೆ.

ಪುರುಷರು: ರಕ್ಷಿತ್ ಆರ್ ಬಾರಿಗಿಡದ (ನಾಯಕ), ಎಂ ಕಲೈವಣನ್, ಕೆ.ಜೆ. ಆಕಾಶ್, ಸಮರ್ಥ್ ಕುರಡಿಕೇರಿ, ಪಿ.ವಿ. ಶ್ರೀಕಾಂತ್ ಕಶ್ಯಪ್.

ಮಹಿಳೆಯರು: ವಿ. ಖುಷಿ (ನಾಯಕಿ), ಮರಿಯಾ ರೋನಿ, ಎ. ಸಂಯುಕ್ತಾ, ಅದಿತಿ ಪಿ ಜೋಶಿ, ಪ್ರೇಕ್ಷಾ ಕರ್ಕೆರಾ.

ಮ್ಯಾನೇಜರ್–ಕೋಚ್: ಸಿ ಗುಣಲನ್.



ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಲಖನೌನಲ್ಲಿ ಶನಿವಾರ ಬಾಲಕಿ ಕಾಜಲ್‌ಗೆ ಕಿಟ್ ನೀಡಿ ಶುಭ ಹಾರೈಸಿದರು– ಪಿಟಿಐ ಚಿತ್ರ

200 ಕಿ.ಮೀ. ಓಡಿದ 10ರ ಬಾಲೆ

ಲಖನೌ (ಪಿಟಿಐ): ಅಥ್ಲೀಟ್ ಆಗುವ ಕನಸು ಹೊತ್ತ 10 ವರ್ಷದ ಬಾಲಕಿಯೊಬ್ಬಳು ಪ್ರಯಾಗ್‌ರಾಜ್‌ನಿಂದ ಲಖನೌಗೆ ಸುಮಾರು 200 ಕಿಲೋ ಮೀಟರ್ ಓಡಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಭೇಟಿ ಮಾಡಿದ್ದಾಳೆ.

ಮಂಡಾ ಪೊಲೀಸ್ ಠಾಣೆಯ ವ್ಯಾಪ್ತಿಯ ನಿವಾಸಿಯಾಗಿರುವ, ನಾಲ್ಕನೇ ತರಗತಿಯಲ್ಲಿ ಓದುತ್ತಿರುವ ಕಾಜಲ್, ಶನಿವಾರ ಮುಖ್ಯಮಂತ್ರಿ ಅವರನ್ನು ಅವರ ಅಧಿಕೃತ ನಿವಾಸದಲ್ಲಿ ಭೇಟಿಯಾಗಿದ್ದಾಳೆ. ಈ ವೇಳೆ ಮುಖ್ಯಮಂತ್ರಿ ಬಾಲಕಿಗೆ ಬೂಟು, ಟ್ರ್ಯಾಕ್‌ಸೂಟ್ ಮತ್ತು ಕಿಟ್ ಕೊಡುಗೆಯಾಗಿ ನೀಡಿ ಶುಭ ಹಾರೈಸಿದರು.

ಏಪ್ರಿಲ್ 10ರಂದು ಓಟ ಆರಂಭಿಸಿದ್ದ ಕಾಜಲ್, ಶುಕ್ರವಾರ ಲಖನೌ ತಲುಪಿದ್ದಳು ಎಂದು ಸರ್ಕಾರದ ವಕ್ತಾರರು ತಿಳಿಸಿದ್ದಾರೆ.

ಹೋದ ವರ್ಷ ಕಾಜಲ್, ಇಂದಿರಾ ಮ್ಯಾರಥಾನ್‌ನಲ್ಲಿ ಭಾಗವಹಿಸಿದ್ದಳು. ಆಕೆಯ ಪ್ರಯತ್ನವನ್ನು ಶಾಲೆಯಾಗಲಿ ಅಥವಾ ಜಿಲ್ಲಾಡಳಿತವಾಗಲಿ ಶ್ಲಾಘಿಸದ ಹಿನ್ನೆಲೆಯಲ್ಲಿ ನಿರಾಶೆಯಾಗಿತ್ತು. ಮ್ಯಾರಥಾನ್ ನಂತರ ಮುಖ್ಯಮಂತ್ರಿ ಅವರಿಗೆ ಪತ್ರ ಬರೆದು ಭೇಟಿ ಮಾಡುವ ಬಯಕೆ ವ್ಯಕ್ತಪಡಿಸಿದ್ದಳು.

ಲಖನೌನ ಬಾಬು ಬನಾರಸಿ ದಾಸ್ ಕ್ರೀಡಾ ಅಕಾಡೆಮಿ ಕೂಡ ಕಾಜಲ್ ಪ್ರತಿಭೆಯನ್ನು ಗೌರವಿಸಿದ್ದು, ಜೀವನದುದ್ದಕ್ಕೂ ಅವಳ ಕ್ರೀಡಾ ಕಿಟ್ ಮತ್ತು ಶೂಗಳನ್ನು ಒದಗಿಸುವ ಜವಾಬ್ದಾರಿಯನ್ನು ಹೊತ್ತುಕೊಂಡಿದೆ.

ಸಂಕ್ಷಿಪ್ತ ಸುದ್ದಿ

ಫುಟ್‌ಬಾಲ್: ಪಶ್ಚಿಮ ಬಂಗಾಳ ಶುಭಾರಂಭ

ಮಲಪ್ಪುರಂ: ಪಶ್ಚಿಮ ಬಂಗಾಳ ತಂಡವು ಸಂತೋಷ್ ಟ್ರೋಫಿ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದೆ.

ಶನಿವಾರ ಇಲ್ಲಿ ಆರಂಭಗೊಂಡ ಚಾಂಪಿಯನ್‌ಷಿಪ್‌ನಲ್ಲಿ ಪಶ್ಚಿಮ ಬಂಗಾಳ 1–0ಯಿಂದ ಪಂಜಾಬ್ ತಂಡಕ್ಕೆ ಸೋಲುಣಿಸಿತು.

ಎ ಗುಂಪಿನ ಪಂದ್ಯದಲ್ಲಿ ಉಭಯ ತಂಡಗಳು ಸಂಪೂರ್ಣ ಮೂರು ಪಾಯಿಂಟ್ಸ್ ಗಳಿಸಲು ಜಿದ್ದಾಜಿದ್ದಿ ಪೈಪೋಟಿ ನಡೆಸಿದವು.

61ನೇ ನಿಮಿಷದಲ್ಲಿ ಯುವ ಆಟಗಾರ ಸಜಲ್ ಬಾಗ್ ಬಂಗಾಳ ತಂಡಕ್ಕೆ ಗೋಲು ಗಳಿಸಿಕೊಟ್ಟರು.

23ರಿಂದ ರಾಜ್ಯ ರ‍್ಯಾಂಕಿಂಗ್ ಟೆನಿಸ್ ಟೂರ್ನಿ

ಬೆಂಗಳೂರು: ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆ (ಕೆಎಸ್‌ಎಲ್‌ಟಿಎ) ಇದೇ 23ರಿಂದ ರಾಜ್ಯ ರ‍್ಯಾಂಕಿಂಗ್ ಟೂರ್ನಿಗಳನ್ನು ಆಯೋಜಿಸಲಿದೆ.ಏಪ್ರಿಲ್ 23ರಂದು 10 ವರ್ಷದೊಳಗಿನವರ ವಿಭಾಗದ ಟೂರ್ನಿಯು ಅಮೋಘ ಸ್ಪೋರ್ಟ್ಸ್ ಟೆನಿಸ್ ಅಕಾಡೆಮಿ ಕ್ರೀಡಾಂಗಣದಲ್ಲಿ ನಡೆಯಲಿದೆ. ಏಪ್ರಿಲ್ 24ರಂದು 12 ವರ್ಷದೊಳಗಿನವರ ಟೂರ್ನಿಯು ಫಾರ್ಚೂನ್ ಸ್ಪೋರ್ಟ್ಸ್ ಅಕಾಡೆಮಿ ಕ್ರೀಡಾಂಗಣದಲ್ಲಿ ನಡೆಯಲಿದೆ.

ಹೆಚ್ಚಿನ ಮಾಹಿತಿಗಾಗಿ www.kslta.com ವೆಬ್‌ಸೈಟ್ ಸಂಪರ್ಕಿಸಲು ಕೆಎಸ್‌ಎಲ್‌ಟಿಎ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪ್ರಜಾವಾಣಿ ಭಾನುವಾರದ
ಪುರವಣಿ

ಭಾನುವಾರ, 17 ಏಪ್ರಿಲ್ 2022



ಒಪ್ಪೊತ್ತಿನಲ್ಲಿ 20ರ ಪ್ರಯೋಗಗಳು 15


ತಂದೂರಿ ಚಾಯ್

ಕನ್ನಡದ ಕ್ರಿಯಾಶೀಲತೆ

ದೇಶದಲ್ಲಿ ಹಿಂದಿ ಸಂಪರ್ಕ ಭಾಷೆಯಾಗಬೇಕೆಂಬ ಕೇಂದ್ರ ಗೃಹ ಸಚಿವರ ಹೇಳಿಕೆ ಈಗ ವಿವಾದದ ಕಿಡಿಯನ್ನು ಹೊತ್ತಿಸಿದೆ. 'ಕನ್ನಡಮ್ಮನ ಕುಡಿ'ಗಳು ಮತ್ತೆ ಪ್ರತಿಕ್ರಿಯಾಶೀಲತೆಯನ್ನು ಮೆರೆದಿದ್ದಾರೆ. ಇಂತಹ ಭಾವುಕ ನಿಲುವುಗಳ ಮೂಲಕ ಭಾಷೆ ಭಾಷೆಗಳನ್ನು ಪರಸ್ಪರ ಎದುರಾಳಿಗಳಾಗಿ ಹೂಡುವ ರಾಜಕೀಯ ಚದುರಂಗದಾಟ ಲಾಗಾಯ್ತಿನಿಂದಲೂ ನಡೆಯುತ್ತಲೇ ಇದೆ. ಇಷ್ಟಕ್ಕೂ ಬರಿ ಪ್ರತಿಕ್ರಿಯಾಶೀಲತೆಯಿಂದ ಕನ್ನಡ ಕಟ್ಟಲು ಸಾಧ್ಯವೇ? ಹಾಗಾದರೆ ನಿಜಕ್ಕೂ ಕನ್ನಡವನ್ನು ಕಟ್ಟುವ ಕ್ರಿಯಾಶೀಲ ಹಾದಿ ಯಾವುದು?


ಕಲಾಕೃತಿ: ಅಶೋಕ ಶೆಟ್ಟರ

ಅಕ್ಷರ ಕೆ.ವಿ.

ಇವತ್ತಿನ ಕಾಲದಲ್ಲಿ ಕ್ರಮೇಣ, ನಾವೆಲ್ಲರೂ ಕ್ರಿಯಾಶೀಲರಾಗಿ ಇರುವುದಕ್ಕಿಂತ ಹೆಚ್ಚಾಗಿ 'ಪ್ರತಿಕ್ರಿಯಾಶೀಲ'ರಾಗುತ್ತಿದ್ದೇವೋ ಎಂಬೊಂದು ಅನುಮಾನ ನನ್ನನ್ನು ತೀವ್ರವಾಗಿ ಕಾಡುತ್ತಿದೆ. ಕ್ರಿಯಾಶೀಲತೆಯೆಂಬುದು ನಮ್ಮ ಸುತ್ತಲಿನ ಸಮಾಜಕ್ಕೆ ಮಾನಸಿಕವಾಗಿ ಸ್ಪಂದಿಸುತ್ತ, ಹೊಸ ಆಲೋಚನೆಗಳನ್ನು ರೂಪಿಸಿಕೊಳ್ಳುವ ಮತ್ತು ಅಂಥ ಆಲೋಚನೆಗಳ ಫಲವಾಗಿ ಬೇರೆಬೇರೆ ರೀತಿಯ ಕೆಲಸಗಳಲ್ಲಿ ತೊಡಗಿಕೊಳ್ಳುವ ವಿಧಾನ. ಆದರೆ, 'ಪ್ರತಿಕ್ರಿಯಾಶೀಲತೆ' ಎಂಬುದು ಅದಕ್ಕೆ ವಿರುದ್ಧವಾದದ್ದು. ಅದು, ಸದಾ ಬೇರೊಬ್ಬರ ಆಲೋಚನೆಗಳಿಗೂ ಅವರು ಮಾಡುತ್ತಿರುವ ಕೆಲಸಗಳಿಗೂ ಪ್ರತಿಕ್ರಿಯೆ ಮಾತ್ರ ಕೊಡುತ್ತ ಹೋಗುವ ಕೆಲಸ. ಇಂಥ ಪ್ರತಿಕ್ರಿಯಾ ಮಾರ್ಗದಿಂದ ಹೆಚ್ಚಾಗಿ ಬೆಂಕಿ ಹೊತ್ತುತ್ತದೆಯೇ ಹೊರತು ಬೆಳಕು ಹುಟ್ಟುವುದಿಲ್ಲ.

ನಿಜ, ಪ್ರಜಾಸತ್ತೆಯು ಆರೋಗ್ಯಕರವಾಗಿರಬೇಕೆಂದಾದರೆ, ಪ್ರಜ್ಞಾವಂತ ನಾಗರಿಕರೆಲ್ಲರೂ ಸುತ್ತಮುತ್ತ ನಡೆಯುವ ವಿದ್ಯಮಾನಗಳಿಗೆ ಸ್ಪಂದಿಸುತ್ತ ನಿಷ್ಕ್ರಿಯರಾಗದೆ ವರ್ತಮಾನದಲ್ಲಿ ಪಾಲ್ಗೊಳ್ಳಬೇಕು. ಆದರೆ, ಅಂಥ ಸ್ಪಂದನೆಯೆಂಬುದು ಕೇವಲ ಪ್ರತಿಸ್ಪಂದನೆಗೂ ಮತ್ತು ಆಲೋಚನೆ ಹಾಗೂ ಕ್ರಿಯೆಗಳು ಪ್ರತ್ಯಾಲೋಚನೆ-ಪ್ರತಿಕ್ರಿಯೆಗಳಿಗೂ ಮಾತ್ರ ಸೀಮಿತವಾಗತೊಡಗಿದಾಗ, ಸ್ವತಃ ಕ್ರಿಯಾಶೀಲತೆಗೆ ಅಪಾಯ ಒದಗುತ್ತದೆ. ಅಂಥ ಕಾಲದಲ್ಲಿ ಜನರು ಸದಾ ಬೇರೆಯವರ ಆಲೋಚನೆಗಳಿಗೂ ಮಾತುಗಳಿಗೂ ನಿಲುವುಗಳಿಗೂ ಪ್ರತ್ಯುತ್ತರವನ್ನು ಮಾತ್ರ ಕೊಡುತ್ತ ತಾವು ಮಾಡಲೇಬೇಕಾದ ಕೆಲಸಗಳನ್ನು ನಿರ್ಲಕ್ಷಿಸುತ್ತಾರೆ. ಮಾತ್ರವಲ್ಲ, ಇಂಥ ಕಾಲದಲ್ಲಿ ಪ್ರಬಲಿಸುವ ಖೂಳರು ತಮ್ಮ ವಿರೋಧಿಗಳ ಪ್ರತಿಯೊಂದು ಕ್ರಿಯೆಯೂ ತಮ್ಮ ಕ್ರಿಯೆಗೆ ಪ್ರತಿಕ್ರಿಯೆ ಮಾತ್ರವೇ ಆಗಿ ಉಳಿದಿರುವಂತೆ ಉಪಾಯ ಮಾಡುವ ಮೂಲಕ ಅಗೋಚರ ಕ್ರಮದಲ್ಲಿ ವಿರೋಧಿಗಳನ್ನೂ ನಿಯಂತ್ರಿಸಿಬಿಡುತ್ತಾರೆ. ಇದರಿಂದಾಗಿ ಒಂದೆಡೆ, ಪ್ರತಿಕ್ರಿಯಾಶೀಲರು ಪ್ರತಿಕ್ರಿಯೆ ಕೊಡುವುದರಲ್ಲೇ ತಮ್ಮ ಶಕ್ತಿಯೆಲ್ಲವನ್ನೂ ವ್ಯಯಿಸಿ ಕ್ರಿಯೆಗೆ ಪುರಸೊತ್ತು ಇಲ್ಲದವರಾಗುತ್ತಾರೆ; ಇನ್ನೊಂದೆಡೆ, ಕ್ರಿಯೆಯಿಲ್ಲದ ಹೊಟ್ಟು ಮಾತುಗಳ ಕಾರಣದಿಂದ ಖೂಳ ಕೆಲಸಗಳಿಗೆ ಯಾವುದೇ ತಡೆಯಾಗುವ ಬದಲು ಇನ್ನಷ್ಟು ಪ್ರಚಾರವೇ ಸಿಕ್ಕು ಅಂಥವರಿಗೆ ಅನುಕೂಲವೇ ಆಗುತ್ತದೆ.

ಭಾರತದ ಗೃಹ ಸಚಿವರು ಹಿಂದಿ ಭಾಷೆಯ ಸ್ಥಾನಮಾನಗಳನ್ನು ಕುರಿತಂತೆ ಮೊನ್ನೆ ಆಡಿದ ಮಾತು ಮತ್ತು ಆಮೇಲೆ ಅದಕ್ಕೆ ಬಂದ ಪ್ರತಿಕ್ರಿಯೆಗಳು - ಈ ವಿದ್ಯಮಾನದಲ್ಲೂ ಇಂಥದೇ ಸಮಸ್ಯೆ ಉಂಟಾಗಿದೆಯೆಂಬ ಸಂಶಯದೊಂದಿಗೆ ನಾನು ಈ ಪ್ರಸ್ತಾಪ ಎತ್ತಿದ್ದೇನೆ. ಈ ದೇಶದಲ್ಲಿ ಹಿಂದಿ ಭಾಷೆಯು ರಾಜ್ಯಗಳ ನಡುವಿನ ಸಂಪರ್ಕದ ವಾಹಕವಾಗಬೇಕು ಎಂಬ ಗೃಹ ಸಚಿವರ ಮಾತು ಹಲವು ಕಾರಣಗಳಿಗಾಗಿ ತಪ್ಪು ಎಂಬುದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ. ಮೊದಲನೆಯದಾಗಿ, ಎಲ್ಲ ಭಾಷೆಗಳೂ ಸಂಪರ್ಕದ ಸಾಧನಗಳೇ ಆಗಿರುವಾಗ, ಅದರಲ್ಲಿ ಒಂದಕ್ಕೆ ಮಾತ್ರ ಸಂಪರ್ಕದ ಭಾಷೆಯೆಂದು ಪಟ್ಟಗಟ್ಟುವುದು ಅತಾರ್ಕಿಕ. ಮಾತ್ರವಲ್ಲ, ಭಾರತದ ಎಲ್ಲ ಭಾಷೆಗಳೂ ರಾಷ್ಟ್ರೀಯ ಭಾಷೆಗಳೆಂದು ನಂಬುವ ಬದಲು ಒಂದು ಭಾಷೆಯನ್ನು ಪ್ರಧಾನವೆಂದು ಕರೆದರೆ ಅದರ ಹಿಂದೆ ಅಧಿಕಾರದ ಮೇಲಾಟ ಇದೆಯೆಂದೇ ಅರ್ಥ. ಇಷ್ಟರಮೇಲೆ, ಭಾರತದಂಥ ದೇಶದಲ್ಲಿ ಒಂದೇ ಸಂಪರ್ಕ ಭಾಷೆ ಇರಬೇಕೆಂಬುದೇ ಕೇಂದ್ರೀಕೃತ ಸಂರಚನೆಗಳನ್ನು ನೆಚ್ಚುವ ಒಂದು ಮನೋವ್ಯಾಧಿ. ಆಯಾ ಸನ್ನಿವೇಶ-ಸಂದರ್ಭಗಳಲ್ಲಿ ಆಯಾ ಸಂಪರ್ಕವು ತನ್ನ ವಾಹಕವಾಗಿ ಯಾವ ಭಾಷೆಯು ಹೆಚ್ಚು ಉಪಯುಕ್ತವೆಂದು ಭಾವಿಸುತ್ತದೋ ಅದನ್ನೇ ಬಳಸುವುದು ಉಪಯುಕ್ತ. ಅಂಥ ಸಂಪರ್ಕ ಭಾಷೆಯು ಸಾಂದರ್ಭಿಕವಾಗಿ ಹಿಂದಿ ಇಂಗ್ಲಿಷುಗಳೇ ಆಗಿರಲಿ ಅಥವಾ ಇನ್ನಾವುದೇ ಭಾಷೆಯೂ ಆಗಿರಲಿ, ಸಂಪರ್ಕವು ಸರಿಯಾಗಿ ನಡೆಯುವುದಷ್ಟೇ ಮುಖ್ಯ ಎಂಬ ನಿಲುವು ಪ್ರಾಯೋಗಿಕ ಮಾತ್ರವಲ್ಲ ಪ್ರಜಾಸತ್ತಾತ್ಮಕವೂ ಹೌದು. ಬದಲಿಗೆ ಇಂಥ ಭಾಷೆಯನ್ನೇ ಬಳಸಿ ಎಂದು ಒತ್ತಾಯ ಮಾಡುವುದು ಭಾಷೆಯ ಜಾಯಮಾನಕ್ಕೂ ಒಕ್ಕೂಟ ವ್ಯವಸ್ಥೆಯ ಪ್ರಜಾಸತ್ತೆಗೂ ವಿರುದ್ಧವಾದ ಕೆಲಸ. ಆದ್ದರಿಂದ ಇದನ್ನು ಖಂಡಿಸುವುದು ಸರಿಯೇ.

ಆದರೆ, ಈ ಖಂಡನೆಯ ಮುಂದುವರಿಕೆಯಾಗಿ ಕಳೆದ ಕೆಲವು ದಿನಗಳಲ್ಲಿ ನಮ್ಮ ಸುತ್ತಮುತ್ತ ಕೇಳಿಸುತ್ತಿರುವ ಅನೇಕ ಪ್ರತಿಕ್ರಿಯಾತ್ಮಕ ಧೋರಣೆಗಳನ್ನು ನಾನು ತೀವ್ರ ಸಂಶಯದಿಂದ ನೋಡುತ್ತೇನೆ. ಉದಾಹರಣೆಗೆ, ಹಿಂದಿಯನ್ನು ಪ್ರಧಾನ ಸಂಪರ್ಕದ ಭಾಷೆಯಾಗಿಸುವುದೇನಿದೆ, ಅದು ಕನ್ನಡವನ್ನು ದಮನಿಸುವ ಕೆಲಸ ಎಂದು ಚಿತ್ರಿಸುವುದು ಅನುಪಯುಕ್ತ ಮತ್ತು ಅನಗತ್ಯ ಭಾವುಕತೆ ಎಂದು ನನಗೆ ತೋರುತ್ತದೆ. ಇಂಥ ನಿಲುವಿನ ಮೂಲಕ ಕಲ್ಪಿತ ಶತ್ರುವೊಂದನ್ನು ನಮ್ಮೆದುರಿಗೆ ಹೂಡಿಕೊಂಡು ಈ ಕಲ್ಪಿತ ಹೋರಾಟವನ್ನು ಆಕರ್ಷಕ ಮತ್ತು ರೋಚಕಗೊಳಿಸಬಹುದೆ ಹೊರತು ಅದರಿಂದ ನಮ್ಮ ಭಾಷೆಗೇನೂ ಪ್ರಯೋಜನವಾಗದು. ಅಲ್ಲದೆ, ಇಂಥ ಭಾವುಕ ನಿಲುವುಗಳ ಮೂಲಕ ನಾವು ಭಾಷೆಭಾಷೆಗಳನ್ನು ಪರಸ್ಪರ ಎದುರಾಳಿಗಳಾಗಿ ಹೂಡಿ ರಾಜಕೀಯದ ಚದುರಂಗದ ಆಟ ಕಟ್ಟುತ್ತೇವೆ; ಮತ್ತು ಈ ಪರ-ವಿರೋಧದ ವ್ಯರ್ಥ ಕಸರತ್ತಿನಲ್ಲಿ ಮಾಡಬೇಕಾದ ಕೆಲಸ ಮರೆಯುತ್ತೇವೆ. ಉದಾಹರಣೆಗೆ, ಹಿಂದಿನ ದಿನಮಾನಗಳಲ್ಲಿ ನಡೆದ ಕನ್ನಡ ವರ್ಸಸ್ ಹಿಂದಿ, ಕನ್ನಡ ವರ್ಸಸ್ ತಮಿಳು ಮತ್ತು ಕನ್ನಡ ವರ್ಸಸ್ ಸಂಸ್ಕೃತ - ಮೊದಲಾದ ಇಂಥ ಹಲವು ರೀತಿಯ ಜಿದ್ದಾಜಿದ್ದಿಗಳನ್ನೇ ನೆನಪಿಸಿಕೊಳ್ಳಬಹುದು. ತಾತ್ಕಾಲಿಕ ರಾಜಕೀಯ ಲಾಭದಿಂದ ಪ್ರೇರಿತವಾಗುವ ಇಂಥ ತಿಕ್ಕಾಟಗಳ ಫಲವಾಗಿ ಬರಿಯ ಸಂಘರ್ಷ ಹುಟ್ಟಿದ್ದು ಕಾಣಿಸಿತೆ ಹೊರತು ಸಮಾನತೆ ಸಾಧಿತವಾಗಿದ್ದು ಕಾಣುವುದಿಲ್ಲ.

13ನೇ ಪುಟಕ್ಕೆ...

ಪ್ರವಾಸದಲ್ಲಿ ತಿಂಡಿ-ತೀರ್ಥ

ಡಾ. ಕೆ.ಎಸ್. ಪವಿತ್ರ

ಪ್ರವಾಸ ಎಂದಾಕ್ಷಣ ನನ್ನ ತಲೆಯಲ್ಲಿ ಮೂಡುವುದು ಬರೀ ನೋಡುವ ಸ್ಥಳಗಳು ಎಂದುಕೊಂಡಿರಾ? 'ಊಹೂಂ'! 'Live to eat' - ಜೀವಿಸುವುದೇ ತಿನ್ನಲಿಕ್ಕೆ ಎಂಬ ಗುಂಪಿಗೇ ಸೇರಿದವಳು ನಾನು. ಹಾಗಾಗಿ ಪ್ರವಾಸ ಎಂದರೆ ಬಾಯಿ ರುಚಿಗೆ ಅಲ್ಲಿಯ ವಿಶೇಷ ಖಾದ್ಯ, ಹೊಟ್ಟೆ ತುಂಬಿಸಿಕೊಳ್ಳಲು ಇಡ್ಲಿ-ಸಾಂಬಾರ್-ಚಟ್ನಿ-ದೋಸೆ-ಅನ್ನ-ಮೊಸರು ಸಿಗಬಹುದೇ ಎಂದು ಗೂಗ್ಲಿಸಿಯೇ ಪ್ರವಾಸದ ಪ್ಲಾನ್ ತಯಾರಿಸುವುದು ಸೂಕ್ತ ಎಂದು ದೃಢವಾಗಿ ನಂಬಿದವಳು. ಸರಿಯಾದ ಆಹಾರ, ಕಣ್ಣು ತುಂಬುವಷ್ಟು ನಿದ್ರೆ ಇಲ್ಲದೆ ಜಗತ್ತಿನ ಎಂಥ ಅದ್ಭುತವನ್ನೇ ಎದುರಿಗಿಟ್ಟರೂ ಆನಂದಿಸಲು ಸಾಧ್ಯವಿಲ್ಲ ಎಂಬುದು ನನ್ನ ಪ್ರವಾಸ ಪರಿಣತಿಯಿಂದ ಕಂಡುಕೊಂಡ ಸತ್ಯ. ಇವೆರಡೂ ಹೆಚ್ಚಾಗಿ ಸಾಧ್ಯವಾಗದ ಜೊತೆಗೆ ಪ್ರಯಾಣದ ಆಯಾಸವೂ ಜೊತೆಗೂಡುವ ಪ್ರವಾಸದ ಮೊದಲ ದಿನ ಹೆಚ್ಚಾಗಿ ಕಿರಿಕಿರಿ-ಜಗಳಗಳಿಗೆ ಸಾಮಾನ್ಯ ಸಂದರ್ಭ ಎಂಬುದು ನನಗೆ ಗೊತ್ತು.

ಕರ್ನಾಟಕದ ಬೇರೆ ಬೇರೆ ಊರಿನಿಂದ ಬರುತ್ತಿದ್ದ ಸಂಬಂಧಿಕರು ಧಾರವಾಡದಿಂದ ಧಾರವಾಡ ಪೇಢಾ, ಬೆಳಗಾವಿಯಿಂದ ಕುಂದ, ಮೈಸೂರಿನಿಂದ ಸ್ಪೆಷಲ್ ಮೈಸೂರು ಪಾಕ್ ಇತ್ಯಾದಿ ಇತ್ಯಾದಿ ತರುತ್ತಿದ್ದ ತಿಂಡಿಗಳ ನೆನಪು ಇಂದಿಗೂ ಹಸಿರಾಗಿದೆ. ಆದರೆ ಈಗ ಎಲ್ಲಿಯೂ ಯಾವುದೂ ಸಿಗುವ ಕಾಲ. ಬೆಂಗಳೂರಿನ ಬೀದಿ ಬೀದಿಯಲ್ಲಿ ಮಂಗಳೂರು ಸ್ಟೋರ್‌ಗಳಿವೆ. ಪುಣೆಯಿಂದ ಜತನದಿಂದ ನಾನು ಮಕ್ಕಳಿಗೆಂದು ತರುತ್ತಿದ್ದ ಮಹಾಲಕ್ಷ್ಮೀ ಚೂಡಾ, ಈಗ ನಮ್ಮ ಮನೆಯ ಪಕ್ಕದ ಕಾಂಡಿಮೆಂಟ್ ಸ್ಟೋರ್ಸ್‌ನಲ್ಲಿಯೂ ಲಭ್ಯ. ಆದರೂ ಪ್ರವಾಸಕ್ಕೆ ಹೋದಾಗ ಮಾತ್ರ ಆ ಊರಿನ ಸ್ಪೆಷಲ್ ಖಾದ್ಯ, ಅದನ್ನು ತಯಾರಿಸುವ ವಿಶೇಷ ತಾಣಕ್ಕೆ ಹೋಗಿ ಬರುವ ಚಟ ನನಗಿನ್ನೂ ಹಿಡಿದೇ ಇದೆ. ನನ್ನ ಮಟ್ಟಿಗೆ ಅಂಥ ಚಿಕ್ಕ ಹೋಟೆಲ್ಲೂ ಪ್ರವಾಸದ ಅವಿಭಾಜ್ಯ ಅಂಗ, ಪ್ರವಾಸಿ ಭೇಟಿ ನೀಡಲೇ ಬೇಕಾದ ತಾಣ.

ಮೊದ ಮೊದಲು ಹೋಟೆಲ್‌ಗಳಲ್ಲಿ ಉಳಿಯುತ್ತಿದ್ದಾಗ 'ಕ್ವಾಲಿಟಿ'ಗಾಗಿ, ರುಚಿ ಮಾತ್ರಕ್ಕಾಗಿ ಸಂಗ್ರಹಾಲಯ-ಇತರ ಪ್ರೇಕ್ಷಣೀಯ ಸ್ಥಳಗಳ ಜೊತೆಗೆ ಇಂಥ ಚಿಕ್ಕ ಫುಡ್‌ಜಾಯಿಂಟ್‌ಗೂ ಭೇಟಿ ನೀಡುವುದು, ದಕ್ಷಿಣ ಭಾರತೀಯ ಸಸ್ಯಾಹಾರ ಅದರಲ್ಲಿಯೂ ಇಡ್ಲಿ-ಅನ್ನ-ಸಾಂಬಾರ್‌ಅನ್ನು ಹೊಟ್ಟೆ ತುಂಬಿಸಿಕೊಳ್ಳುವ 'ಕ್ವಾಂಟಿಟಿ'ಗಾಗಿ ಹುಡುಕುತ್ತ ಮೈಲಿಗಟ್ಟಲೆ ಅಲೆಯುವುದು ಇವು ನನ್ನ ಪ್ರವಾಸದ ದಿನಚರಿಯ ಭಾಗವೇ ಆಗಿಹೋಗಿದ್ದವು. ಕ್ರಮೇಣ ಜಗತ್ತು ಬದಲಾದಂತೆ, ನಾವು 'ಬೆಳೆದಂತೆ', ನಾನು ಹುಡುಕಿಕೊಂಡ ಉಪಾಯ ಸರ್ವೀಸ್ ಅಪಾರ್ಟ್‌ಮೆಂಟ್‌ಗಳು. ಇವು ತಿಂಡಿ ತೀರ್ಥ ಪುರಾಣಕ್ಕೆ ಮತ್ತೊಂದು ಆಯಾಮವನ್ನೇ ಸೇರಿಸಿಬಿಟ್ಟವು. ಪ್ರವಾಸದಲ್ಲಿ ತರಕಾರಿ ತರುವ, ಅಡುಗೆ ಮಾಡುವ ಮಜಾ-ಸಜಾ! ಎಂ.ಟಿ.ಆರ್. -ಮಯ್ಯ-ಅಡುಕಲೆ- ಆಶೀರ್ವಾದ್-ಖಜಾನಾ ಹೀಗೆ ವಿವಿಧ ಹಂತಗಳ ಸಿದ್ಧ ಆಹಾರಗಳ ರುಚಿಯೆಲ್ಲವನ್ನೂ ಅನುಭವಾತ್ಮಕವಾಗಿ ವಿಮರ್ಶಿಸುವಷ್ಟು ಅಗಾಧ ಜ್ಞಾನ! ಹಸಿ ತರಕಾರಿ-ಹಣ್ಣು-ಮೊಸರು ಆರಾಮವಾಗಿ ಹೊಟ್ಟೆ ತುಂಬಿಸುವಷ್ಟು ಇವುಗಳಿಗೆ ಜೊತೆ. ಹೀಗೆ ನನ್ನ ಆಹಾರ ಸಂಸ್ಕೃತಿಗೆ ಬಲವಾಗಿ ಅಂಟಿಕೊಂಡರೂ ಸ್ಥಳೀಯವಾದ ಆಹಾರ ಖಾದ್ಯಗಳ ಬಗೆಗೆ, ಅವುಗಳ ಹಿಂದಿನ ಕಥೆಗಳ ಬಗೆಗೆ ನನಗಿರುವ ಕುತೂಹಲ ತಣಿಯದಿರುವಂಥದ್ದು.

> ಸರಿಯಾದ ಆಹಾರ, ಕಣ್ಣು ತುಂಬುವಷ್ಟು ನಿದ್ರೆ ಇಲ್ಲದೆ ಜಗತ್ತಿನ ಎಂಥ ಅದ್ಭುತವನ್ನೇ ಎದುರಿಗಿಟ್ಟರೂ ಆನಂದಿಸಲು ಸಾಧ್ಯವಿಲ್ಲ. ಆದ್ದರಿಂದಲೇ ಯಾವ ವಿಶೇಷ ತಿಂಡಿ, ಎಲ್ಲಿ ಸಿಗುತ್ತದೆ ಎಂಬುದನ್ನು ಸಂಶೋಧಿಸಿ ನೋಡಿದ ಮೇಲೆಯೇ ಪ್ರವಾಸದ ಪ್ಲಾನ್ ಮಾಡುವುದು ಸೂಕ್ತ!


ಕಲ್ಕತ್ತೆಯ ಕಾಳೀಘಾಟ್‌ನಲ್ಲಿ ನಡೆಯುವಾಗ, ಬೀದಿ ಬದಿಯಲ್ಲಿ ಮಾರುವ 'ಕುಡ್‌ಕೇ ಚಾಯ್' ಅಥವಾ ಹೂಗ್ಲಿ ನದಿಯ ಮೇಲೆ ಲಾಂಚ್‌ನಲ್ಲಿ ಸಂಚರಿಸುವಾಗ ಹುಡುಗನೊಬ್ಬ ಚಕಚಕನೆ ಚಾಟ್ ಮಸಾಲಾ ಬೆರೆಸಿ, ನಿಂಬೆ ಹುಳಿ ಹಿಂಡಿ ಹಿಡಿಯುವ 'ಲೆಮನ್ ಟೀ', ಎರಡು ಲೋಟಗಳನ್ನು ಹಿಡಿದು ಕೈಯ್ಯಿಂದ ಕೈಯ್ಯಿಗೆ ಉದ್ದ ದಾರದಂತೆ ತೋರಿ ಬೆರೆಸುವ ಭೋಪಾಲದ ಗಟ್ಟಿ ಚಾಯ್ ಹೀಗೆ ದಣಿವು ಆರಿಸಲೆಂದು ಎಲ್ಲೂ ಕುಡಿಯಬಹುದಾದ ಚಹಾದಲ್ಲೂ ಅದೆಷ್ಟು ವಿಧ. ಉತ್ತರ ಪ್ರದೇಶದ ತುಂಬ ದೊರಕುವ ದಪ್ಪನೆಯ, ತಣ್ಣಗಿನ ಲಸ್ಸಿಗೆ ಬಿಸಿಲಿನ ತಾಪವನ್ನು ತಣಿಸುವ ಶಕ್ತಿಯಿದೆ. ಎಷ್ಟೋ ಬಾರಿ ಜೊತೆಯವರು 'ಅಯ್ಯೋ ಇಲ್ಲಿ ಕುಡಿಯೋದಾ, ಬೇಡ, ಹೇಗಿರುತ್ತೋ ಏನೋ ಭೇದಿ ಹತ್ತಿಕೊಂಡರೆ, ಪ್ರವಾಸದಲ್ಲಿ ಮಲಗಬೇಕಾಗಿ ಬಂದರೆ!' ಎಂದು ಹೆದರಿದವರಿದ್ದಾರೆ. ಆದರೆ ನನಗೆ ಮಾತ್ರ ಈ ವಿಷಯದಲ್ಲಿ ಬಲು ಧೈರ್ಯ. 'ಭೇದಿಯಾದರೆ ಮಾತ್ರೆ ಇಟ್ಟು ಕೊಂಡಿದ್ದೇನೆ, ಎದುರಿಸಿದರಾಯ್ತು' ಎಂಬ ವೀರಾವೇಶದಿಂದ ಆಯಾ ಪ್ರದೇಶದ ಖಾದ್ಯದ ರುಚಿಯನ್ನು ನೋಡುವುದೇ.

ಹೈದರಾಬಾದಿಗೆ ಹೋದಾಗ ಮಾತ್ರ ನನ್ನ ಡ್ರೈವರ್ ಹಬೀಬ್ ಹೇಳಿದ್ದ: 'ಮೇಮ್‌ಸಾಬ್, ನಿಮಗೆ ಕೊನೇ ದಿನ ಹೈದರಾಬಾದ್ ಬಿರಿಯಾನಿ ಕೊಡಿಸ್ತೀನಿ; ಅದು ನಮ್ಮ ಹೈದರಾಬಾದಿನ ಸ್ಪೆಷಲ್. 'ನಾನು ಸಸ್ಯಾಹಾರಿಯಪ್ಪಾ ಸಾರಿ' ಎಂದಾಗ ಅವನಿಗಾದ ಬೇಸರ ನೋಡಿ, ನನಗೂ ಬೇಸರವಾಗಿತ್ತು. ಬಿಡದೇ ನಾನೇ ಆಂಧ್ರದ 'ಪೂತರೇಬುಲು' ಬಗ್ಗೆ ಅವನಿಗೆ ಹೇಳಿ, ಅದರ ಒಂದು ಬಾಕ್ಸ್ ಅವನಿಗೂ ಕೊಡಿಸಿ,'ಇದೂ ಹೈದರಾಬಾದ್ ಸ್ಪೆಷಲ್ಲೇ' ಎಂದು ನಕ್ಕಿದ್ದೆ. ಕರ್ನಾಟಕದ ತುಂಬಾ, ಭಾರತದ ಎಲ್ಲೆಡೆ ಇಷ್ಟೆಲ್ಲಾ ಖಾದ್ಯ ವೈವಿಧ್ಯವಿದ್ದರೂ ಅದನ್ನು ಸಂಸ್ಕೃತಿಯ ಭಾಗವಾಗಿ, ಗಂಭೀರವಾಗಿ ಪರಿಗಣಿಸುವ ಪ್ರಯತ್ನವನ್ನು, ಮಕ್ಕಳಿಗೆ ಅದನ್ನು ಶಿಕ್ಷಣವಾಗಿ ತೆರೆದಿಡುವ ಪ್ರಯತ್ನವನ್ನು ನಾವು ಮಾಡುವುದಿಲ್ಲ ಎಂಬುದು ಅಚ್ಚರಿ.

15ನೇ ಪುಟಕ್ಕೆ...

ಕರಡಿ ಕೊಳ್ಳಕ್ಕೆ ರಕ್ಷಣೆ

ಅಬ್ಬಬ್ಬಾ, ಗುಡ್ಡದ ಮಾದಾಪುರ ಕಾಡು ಈಗ ಎಷ್ಟೊಂದು ನಳನಳಿಸುತ್ತಿದೆ. ಕಾಡಿನ ರಕ್ಷಣೆಗೆ ಇಲ್ಲಿರುವಂತಹ ಸಮಿತಿ ಬೇರೆಡೆಯೂ ಇರಬೇಕಲ್ಲವೇ?


ಕರಡಿಕೊಳ್ಳದಲ್ಲೀಗ ಸಮೃದ್ಧ ನೀರು

ಮಲ್ಲಿಕಾರ್ಜುನ ಹೊಸಪಾಳ್ಯ

'2000ನೇ ಇಸವಿಗೆ ಮುಂಚೆ ಈ ಕಾಡಿನಿಂದ ಪ್ರತಿದಿನ ಹತ್ತಾರು ಗಾಡಿ ಸೌದೆ ಸಾಗಿಸುತ್ತಿದ್ದರು. ತಲೆಯ ಮೇಲೆ ಸೌದೆ ಹೊರುವವರು ಲೆಕ್ಕಕ್ಕೇ ಇರಲಿಲ್ಲ. ದೊಡ್ಡ ಮರಗಳನ್ನು ಸಾಗಿಸುವವರು, ಬೇಟೆ ಆಡುವವರು ರಾತ್ರಿಹೊತ್ತು ಸಕ್ರಿಯರಾಗುತ್ತಿದ್ದರು' ಎಂದು ಹೇಳುತ್ತಾ ನಡೆಯುತ್ತಿದ್ದರು ಗುಡ್ಡದ ಮಾದಾಪುರ ನಿವಾಸಿ ಸಿದ್ದಪ್ಪ ದಂಡಿನ. ಹಾವೇರಿ ಜಿಲ್ಲೆ ರಟ್ಟಿಹಳ್ಳಿ ತಾಲ್ಲೂಕಿನ ಕರಡಿ ಕೊಳ್ಳ ಅರಣ್ಯ ಪ್ರದೇಶದ ಬಗ್ಗೆ ಸಾಗಿತ್ತು ಅವರ ಮಾತು. ಪ್ರತಿವರ್ಷ ಆ ಕಾಡಿಗೆ ಬೆಂಕಿ ಬೀಳುವುದು ಸಾಮಾನ್ಯವಾಗಿತ್ತು ಎಂದು ಹಲವು ಸಲ ಹೇಳಿದರು.

ಆದರೆ ಈಗ ಪರಿಸ್ಥಿತಿ ಹಾಗಿಲ್ಲ. ಕಾಡಿಗೆ ಬೆಂಕಿ ಬೀಳುವುದು ಅಪರೂಪ. ಒಂದು ವೇಳೆ ಬಿದ್ದರೂ ಹಳ್ಳಿಯವರೇ ಬೆಂಕಿ ನಂದಿಸಲು ಕೈಜೋಡಿಸುತ್ತಾರೆ. ಆಳೆತ್ತರಕ್ಕೆ ಹುಲ್ಲು ಬೆಳೆದಿದೆ, ಪೊದೆಗಳು ಹಬ್ಬಿಕೊಂಡಿವೆ. ಕಾಡೊಳಗೆ ಸುಲಭವಾಗಿ ಹೋಗುವುದು ಅಸಾಧ್ಯ. ಇನ್ನು ಸೌದೆಗಾಗಿ ಅಥವಾ ಮರಮಟ್ಟುಗಳಿಗಾಗಿ ಅರಣ್ಯಕ್ಕೆ ಯಾರೂ ಕಾಲಿಡುವುದಿಲ್ಲ. ಒಂದುವೇಳೆ ಮರ ಕಡಿದರೆ ದಂಡ ಹಾಕಲಾಗುತ್ತದೆ.

ಈ ಬದಲಾವಣೆ ಸಾಧ್ಯವಾಗಿರುವುದಕ್ಕೆ ಮುಖ್ಯ ಕಾರಣ ಗ್ರಾಮ ಅರಣ್ಯ ಸಮಿತಿ ಸಕ್ರಿಯವಾಗಿರುವುದು. ಮುಖ್ಯವಾಗಿ ಸಮಿತಿ ಅಧ್ಯಕ್ಷ ಕರಿಬಸಪ್ಪ ಕಾಗಿನೆಲ್ಲಿ ಅವರ ಪಾತ್ರ ಈ ಕಾಡು ರಕ್ಷಣೆಯಲ್ಲಿ ಮಹತ್ವದ್ದಾಗಿದೆ. ಅರಣ್ಯ ಇಲಾಖೆಯೊಂದಿಗೆ ಸಮಿತಿ ಹಾಗೂ ಗುಡ್ಡದ ಮಾದಾಪುರ ಗ್ರಾಮದವರ ಸಹಕಾರ ಉತ್ತಮವಾಗಿದೆ. ಅರಣ್ಯ ಇಲಾಖೆ, ಗ್ರಾಮ ಅರಣ್ಯ ಸಮಿತಿ ಹಾಗೂ ಸಮುದಾಯದ ಕೈಜೋಡಿಸುವಿಕೆಯಿಂದ 1,019 ಹೆಕ್ಟೇರ್ ವ್ಯಾಪ್ತಿಯ ಈ ಕರಡಿ ಕೊಳ್ಳ ಕಾಯ್ದಿಟ್ಟ ಅರಣ್ಯ ಪ್ರದೇಶ ತನ್ನ ಮೂಲ ಸ್ವರೂಪವನ್ನು ಉಳಿಸಿಕೊಂಡಿದೆ. ಜೊತೆಗೆ ವರ್ಷದಿಂದ ವರ್ಷಕ್ಕೆ ವೃದ್ಧಿಯಾಗುತ್ತಿದೆ.


ಗ್ರಾಮ ಅರಣ್ಯ ಸಮಿತಿಯ ಸಭೆಯಲ್ಲಿ ಚರ್ಚೆ


ಕರಿಬಸಪ್ಪ ಕಾಗಿನೆಲ್ಲಿ

'ಹಿರೇಕೆರೂರು ವಲಯ ವ್ಯಾಪ್ತಿಯ, ಗುಡ್ಡದ ಮಾದಾಪುರ ಗಸ್ತಿಗೆ ಬರುವ ಈ ಕಾಡಿನಲ್ಲಿ ಮತ್ತಿ, ದಿಂಡಿಲು, ಶ್ರೀಗಂಧ, ಬೂರುಗ ಇತ್ಯಾದಿ ಮರಗಳ ಸಂಖ್ಯೆ ಹೆಚ್ಚಿದೆ. ಜನರ ಸಹಕಾರದಿಂದ ಒತ್ತುವರಿಯ ಸಮಸ್ಯೆಯೂ ಇಲ್ಲ, ಪ್ರಸ್ತುತ ಸುತ್ತಲೂ ತಂತಿ ಬೇಲಿ ಅಳವಡಿಸುವ ಕೆಲಸ ಆರಂಭವಾಗಿದೆ' ಎನ್ನುತ್ತಾರೆ ಇಲ್ಲಿನ ಅರಣ್ಯ ರಕ್ಷಕ ಅಶೋಕ್.

ರಾಜ್ಯದ ಗ್ರಾಮ ಅರಣ್ಯ ಸಮಿತಿಗಳಲ್ಲಿ ಬೆರಳೆಣಿಕೆಯಷ್ಟು ಮಾತ್ರ ಸಕ್ರಿಯವಾಗಿವೆ ಹಾಗೂ ತಮ್ಮ ಮೂಲ ಉದ್ದೇಶಕ್ಕೆ ತಕ್ಕಂತೆ ಕಾರ್ಯನಿರ್ವಹಿಸುತ್ತಿವೆ.

13ನೇ ಪುಟಕ್ಕೆ...

ಸೌಹಾರ್ದವೆಂಬುದು ಬರಿ ಪದವಲ್ಲ!



ರಶ್ಮಿ ಎಸ್.

ಭಾವಸೇತು

ಕಲ್ಲಂಗಡಿ ನೆಲಕ್ಕ ಎಸೆದ್ರಲ್ಲ... ಆಗ ಅದೇತಾನೆ ತೆಲಿ ಒಡದು ರಕ್ತ ಸುರಿದ್ಹಂಗ, ರಕ್ತದ ಕಣ ಸಿಡಿದ್ಹಂಗ ಹಣ್ಣಿನ ಚೂರು ಬಿದ್ದಿದ್ವು. ನನಗ ನಬೀಸಾಬರ ಕಣ್ಣಾಗ ಅದೆಂಥ ಅಸಹಾಯಕತನ ಕಂಡಿತ್ತಂದ್ರ... ನಿನಗೂ ಆಣೆ ರಂಗಾ, ನನಗೂ ಆಣೆ ಅಂತ ಕೇಳಿದ್ಹಂಗ.

ನಾವು ಸಣ್ಣೋರಿದ್ದಾಗ ನಮ್ಮನಿಗೆ ಒಬ್ರು ಸೇಬು ಮಾರಾಕ ಬರ್ತಿದ್ರು. ಅವರ ಹೆಸರು ಏನಂತ ಗೊತ್ತಿಲ್ಲ. ನಾವೆಲ್ಲ ಅವರಿಗೆ ಕರೀತಿದ್ದುದ್ದೇ ಚಾಚಾ ಅಂತ. ಅವರು ಬಂದ ಕೂಡಲೇ ಮುನ್ನಿ ಕೊ ಕೌನ್‌ಸಾ ಸೇಬ್ ದೂಂ (ಮುನ್ನಿಗೆ ಯಾವ ಸೇಬು ಕೊಡಲಿ) ಅಂತ ಕೇಳೋರು.

ಅಗ್ದಿ ಕಾಶ್ಮೀರಿಯ ಸಣ್ಣ ಸೇಬಿನಿಂದ ಹಿಡಿದು, ಕೆಂಬಣ್ಣದ ದೊಡ್ಡ ಸೇಬಿನವರೆಗೂ ಹಲವಾರು ಬಗೆಯ ಸೇಬು ತರಿಸೋರು ಅವರು. ತಳ್ಳುಗಾಡಿಯೊಳಗ ಕಟ್ಟಗಿ ಪೆಟ್ಗಿಯೊಳಗ ಭತ್ತದ ಹುಲ್ಲಿನಾಗ ಈ ಸೇಬು ಭದ್ರ ಇರ್ತಿದ್ವು. ಒಂದು ಸಣ್ಣ ಚಾಕು ಜೊತಿಗೆ ಇರ್ತಿತ್ತು. ಸಣ್ಣ ಬಕೀಟಿನಾಗ ನೀರು, ಒಂದು ಕೆಂಬಣ್ಣದ ಅಂಗವಸ್ತ್ರ ಸದಾ ಅವರ ಜೊತಿಗೆ ಇರ್ತಿದ್ವು. ಹುಡುಗರಿಗೆ ನೋಡಿದ ಕೂಡಲೇ ಒಂದು ಸೇಬು ಆ ನೀರಾಗ ಅದ್ದಿ, ಅಂಗವಸ್ತ್ರದಿಂದ ಸ್ವಚ್ಛ ವರಸಿ, ಆ ಚಾಕುದಿಂದ ಹೆಚ್ಚಿ ಕೊಟ್ರ ನಮಗ ಅದೇನೋ ಖುಷಿ ಆಗ್ತಿತ್ತು.

ನಮ್ಮೊಳಗೆ ಸಣ್ಣದೊಂದು ಪೈಪೋಟಿನೂ ಇರ್ತಿತ್ತು. ಚಾಚಾ... ಉಸೆ ಬಡಾ ಪೀಸ್ ಕ್ಯೂಂ ದಿಯಾ? ಮುಝೆ ತೊ ಬಿಲ್ಕುಲ್ ಛೋಟಾ ದಿಯಾ ಹೈ ಅಂತ. ಯಾರಿಗೆ ಸಣ್ಣ ಪಾಲು ಸಿಗ್ತಿತ್ತೋ ಅವರಿಗೆ, ಎಲ್ಲಾರಿಗೂ ಕೊಟ್ಮೇಲೆ ಉಳಿದ ಹಣ್ಣು ಕೊಡ್ತಿದ್ರು. ನಮ್ಮ ಕೂಡ ನಕ್ಕೊಂತ ಇರ್ತಿದ್ದ ಚಾಚಾ, ಯಾವಾಗಲೂ ಮೂರು ಪ್ರಶ್ನೆ ಕೇಳೋರು.

ಖೂನ್ ಬನಾನೆವಾಲಾ ಸೇಬ್ ದೂಂ? ಹಡ್ಡಿ ಬನಾನೆವಾಲಾ? ಜೋ ಸಚ್ ಬೋಲೆಗಾ ವೋ ಬಲವಾನ್ ಬನೇಗಾ... ಕೌನ್ ಹೈ ವೊ... ಅನ್ನೂತ್ಲೆ ನಾವು ಕೈ ಎತ್ತತಿದ್ವಿ. ಒಂದ್ಸಲೆ ನಾನು.. ಯಾವಾಗೂ ನನಗ ಚಿಯಾ ಅಂತ ಕರೀತಿದ್ರು. ಇಲ್ಲಾ ಗುಡಿಯಾ ಅಂತಿದ್ರು. ಒಂದಿನ ಚಾಚಾ ಮುಝೆ ನಾ ಆಪ್ ಗೋಷ್ ಬನ್‌ನೆವಾಲಾ ಸೇಬ್ ದೊ ಅಂತ ಕೇಳಿದ್ದೆ.

ಅದಕ್ಕ ಅವರು ಜೋರೆ ನಕ್ಕು ಒಂದು ಹಣ್ಣು ಕೊಟ್ಟಿದ್ರು. ಆಲುಭುಕಾರಾ ಮಾರಾಕ ಬರ್ತಿದ್ರು. ಹುಳಿಮಧುರ ಇರುವ ಆ ಹಣ್ಣು ನನಗ ಸೇರತಿರಲಿಲ್ಲ. ಆಲೂ ಕೊ ಬುಖಾರ್ ಆಕೆ ಖಟ್ಟಾ ಹೋಗಯಾ ಅಂತಿದ್ದೆ (ಆಲುಗಡ್ಡೆಗೆ ಜ್ವರ ಬಂದು ಹುಳಿ ಆಯ್ತಾ ಅಂತ ಕೇಳ್ತಿದ್ದೆ). ಅರೆ... ಹಂಗಲ್ಲ ಮುನ್ನಿ, ಸವಿಯ ಜೊತಿಗೆ ಹುಳಿನೂ ತಿಂದ್ರ ಸಿಹಿಯ ಸವಿ ಗೊತ್ತಾಗೂದು ಅಂತ್ಹೇಳೋರು.

ಕುಂಕುಮ ಮಾರುವ ಅಂಗಡಿಯೂ ಮುಸ್ಲಿಂ ಬಾಂಧವರಿಗೇ ಸೇರಿತ್ತು. ಅವರ ಹೆಸರೂ ಗೊತ್ತಿಲ್ಲ ನನಗ. ನಾವೆಲ್ಲ ಅವರಿಗೆ ಮಾಮು ಅಂತಿದ್ವಿ (ಅರಿಷಿಣ ಕುಂಕುಮ ತವರಿನ ಭಾಗ್ಯ ಹಂಗಾಗಿ ಅಲ್ಲಿರೋರೆಲ್ಲ ಸೋದರ ಮಾವಂದಿರೇ ಆಗಿರ್ತಿದ್ರು). ಯಾವಾಗಲೂ ಅಮ್ಮ ಹೋದಾಗ ಅವರ ಜೊತಿಗೆ ಹೋಗ್ತಿದ್ದೆ. ನನಗರೇ ಬಣ್ಣಬಣ್ಣದ ಆ ಗುಡ್ಡೆ ನೋಡಿ ಖುಷಿ ಆಗ್ತಿತ್ತು. ಆ ಹಸಿರು, ನೀಲಿ, ಕಿತ್ತಲೆ ಬಣ್ಣದ್ದೆಲ್ಲ ಯಾಕ ಹಣೀಗೆ ಇಟ್ಕೊಳ್ಳೂದಿಲ್ಲ ಅಂತ ಪ್ರಶ್ನೆ. ಇಲ್ಲವಾ ಅವೆಲ್ಲ ಬರೇ ಬಣ್ಣಗಳು. ಹಣೆಗೆ ಕುಂಕುಮಾನ ಇಡಬೇಕು. ಅರಿಶಿಣದಿಂದಲೇ ಮಾಡಿದ ಕುಂಕುಮ ಇಡಬೇಕು ಅನ್ನೋರು. ಹಣೆಗೊಂದು ಚುಕ್ಕಿ ಇಟ್ಕೊಳ್ಳಾಕೂ ನನಗ ಬ್ಯಾಸರಿತ್ತು. ಖರೇಯಂದ್ರ ಬರೇಹಣೆ ಏನೇನೂ ಛೊಲೊ ಕಾಣೂದಿಲ್ಲ. ಸಣ್ಣದೊಂದು ಟೀಕಾ ಇಟ್ಕೊ ಅಂತ ಹೇಳಿದ್ದು ಅವರೇನೆ.

ನಮ್ಮೂರಾಗ ಕ್ವಾಲಿಟಿ ಬೇಕ್ರಿ ಅಂದ್ರ ಸಾಕು, ಅಲ್ಲಿದ್ದದ್ದೆಲ್ಲ ಬೇಕ್ರಿ ಅನ್ನೂದೆ ನಮ್ಮ ಕೆಲಸ ಆಗ್ತಿತ್ತು. ಅವರೂ ಹಂಗೇ ಕಾಕಾರ ಪ್ರೀತಿನೇ ತೋರಿದವರು. ಅಲ್ಲಿಯ ಬಿಸಿ ಬ್ರೆಡ್, ರಸ್ಕ್ ಮತ್ತು ಖಾರಿ ತಿಂಗಳ ಮೊದಲ ವಾರದ ಖರೀದಿ ಆಗಿರ್ತಿತ್ತು. ಅಕಸ್ಮಾತ್ ಬರೇ ಬ್ರೆಡ್ ಖರೀದಿ ಮಾಡಿದ್ರ, ಮನ್ಯಾಗ ಎಲ್ಲಾ ಅರಾಮದಾರಲ್ಲ, ಸಬ್ ಖೈರಿಯತ್ ಅಂತ ಕೇಳೋರು.

ಈಗ ಆರಿಫ್ ಭಾಯ್ ಅದಾರ. ಅವರದ್ದು ಶಾಲಿಮಾರ್ ಪಾನ್ ಅಂಗಡಿ. ಒಂದು ನೂರು ಬಗೆಯ ಬೀಡಾ ಮಾಡಿಕೊಡ್ತಾರ. ಅಗ್ದಿ ಮಧುರ ರಸ ಬಾಯ್ತುಂಬ. ಹಂಗೇ ಮಾತುನೂ. ಪ್ರತಿ ರಮ್‌ಜಾನ್‌ನಾಗೂ ದೀದಿ, ಹಬ್ಬಕ್ಕ ಬಾ ಅಂತ ಕರೀತಾರ. ಯಾವಾಗ ಹೋದ್ರೂ ಹಬ್ಬದಡಗಿ ಇದ್ದೇ ಇರ್ತದ. ಹಬ್ಬ ಆಗಿ ಯಾವ ಕಾಲ ಆಯ್ತು. ಯಾಕೀಗ ಅಂದ್ರ... ನೀವು ಬರೂದೆ ಹಬ್ಬ. ಹಬ್ಬ ಇದ್ದಾಗ ನಿಮಗ ಆಗೂದಿಲ್ಲಲ್ಲ ಅಂತ ಬಾಯ್ತುಂಬ ನಗ್ತಾರ. ದೀದಿ... ನೀವೆಲ್ಲ ಬೆನ್ನಿಂದ ಅದೀರಲ್ಲ, ಅದೇ ಧೈರ್ಯ ನಮಗ ಅಂತಾರ.

ನಂಗ ಖಾತ್ರಿಯದ ನಮ್ಮ ನಬೀಸಾಬ್‌ರ ಹಿಂದುನೂ ಇಂಥ ಹಲವಾರು ಕುಟುಂಬಗಳಿರಬಹುದು. ಇಲ್ಲಾಂದ್ರ ಹನುಮಪ್ಪಗ ನೋಡಾಕ ಬಿಡ್ರಿ ಅಂತ ಕೇಳ್ತಿರಲಿಲ್ಲ. ಪ್ರಾಣವಾಯುವಿನ ಗುಡಿಮುಂದ ಹಿಂಗ ಉಸಿರುಕಟ್ಟಿಸುವ ಕೆಲಸ ಆಗಬಾರದಿತ್ತು.

ನಮಗ, ಹೆಸರು, ಧರ್ಮ, ಜಾತಿ ಮುಖ್ಯ ಅಂತನಿಸಲೇ ಇಲ್ಲ. ಬೆಳದಿದ್ದೇ ಬೀದರ್‌ನ ಕೆಂಬಣ್ಣದ ಮಣ್ಣಿನಾಗ. ಅಲ್ಲಿಯ ಮಣ್ಣಿನ ಗುಣವೇ ಸೌಹಾರ್ದ. ಸಂಯಮ ಮತ್ತು ಅಂತಃಕರಣ. ಧಾರವಾಡದ ಮಣ್ಣಿನಾಗೂ ಇಂಥದ್ದೇ ಅರಿವು ಅದ. ಯಾಕಂದ್ರ ಇಲ್ಲಿಯ ಗಾಳಿಯೊಳಗ ವೆಂಕಟೇಶ್ ಕುಮಾರ್ ಅವರ ಧ್ವನಿಯಷ್ಟೇ ಮಾಧುರ್ಯ ಬಾಲೇಖಾನ್ ಕುಟುಂಬದ ಸಿತಾರಿನ ನಾದದ್ದೂ ಅದ. ಮತ್ತದು ಹುಸಿ ಹೋಗೂದಿಲ್ಲ.





ಯಾಕಿಷ್ಟೆಲ್ಲ ನೆನಪಾಗ್ತಾವ ನನಗ ಅಂದ್ರ ಯಾವತ್ತಿದ್ದರೂ ನನಗ ಇವರೆಲ್ಲ ಮೊಮ್ಮಾ, ಫೈಜಾ ಅಮ್ಮಿ, ಚಿಚ್ಚಾ, ತಾಯಾ, ಅಮೀರಣ್ಣ, ಅಜ್ಮತ್, ಚಾಚಾ... ಹಿಂಗ ಸಂಬಂಧ ಸೂಚಕಗಳು, ಬಾಂಧವ್ಯ, ಆ ಬಾಂಧವ್ಯದ ಸವಿ, ಇವಷ್ಟೇ ನೆನಪಾಗ್ತಾವ. ಎಂದಿಗೂ ಧರ್ಮ, ಜಾತಿಗಳು ನೆನಪಾಗೂದೆ ಇಲ್ಲ.

ಯಾಕಂದ್ರ ನಾನು ತಿಂದುಂಡ ಅನ್ನದ ಅಗುಳಿಗೆ ಜಾತಿ, ಧರ್ಮ ಇರಲಿಲ್ಲ. ಶೀರ್‌ಖುರ್ಮಾಕ್ಕ ಬೆಳೆದ ಒಣಹಣ್ಣು, ಸಕ್ಕರೆಗೂ ಯಾವುದೇ ಜಾತಿ ಧರ್ಮಗಳಿರಲಿಲ್ಲ. ನಾ ಕೇಳಿದ ನುಸ್ರತ್ ಫತೇ ಅಲಿಖಾನ್, ಮೆಹ್ದಿ ಹಸನ್ ಇವರ ಧ್ವನಿಗೆ ಧರ್ಮದ ಲೇಪನ ಇರಲಿಲ್ಲ. ಕೈಫಿ ಆಜ್ಮಿ, ಮಿರ್ಜಾ ಗಾಲಿಬ್, ಅಮೀರ್ ಖುಸ್ರೊ ಅವರ ಪದಗಳಿಗೂ ಜಾತಿ ಧರ್ಮದ ಮೆಹಕು ಇರಲಿಲ್ಲ. ನಮ್ಮನಿಗೆ ಬೀಸಿದ ಗಾಳಿಗೆ, ನಮ್ಮನಿಯಂಗಳದೊಳಗ ಇಣುಕಿದ ಚಂದ್ರನ ತಿಂಗಳ ಬೆಳಕಿಗೆ, ಸೂರ್ಯನ ಬೆಳಕಿನ ರೇಕುವಿಗೂ ಧರ್ಮ, ಜಾತಿ ಇರಲಿಲ್ಲ.. ಇನ್ನ ಈ ಜೀವಕ್ಕ ಜಾತಿ, ಧರ್ಮ ಅನ್ನೂದು ಬದುಕಿನಾಗ ಜೀವ ಅಗ್ಗ ಆಗುವಷ್ಟು ನುಸುಳ್ತದ ಅಂದ್ರ ನಾ ಹೆಂಗ ನಂಬಲಿ? ಯಾಕ ನಂಬಲಿ?

ಮಾತಾಡೋರು ನೂರೆಂಟು ಮಾತಾಡಲಿ. ಸೌಹಾರ್ದ ಮತ್ತೊಮ್ಮೆ ಬದುಕಿ ತೋರಿಸುವ ಅಂತಃಕರಣ ಇಲ್ಲಿಯೋರಿಗೂ ಅದ.

ಕನ್ನಡದ ಕ್ರಿಯಾಶೀಲತೆ

12ನೇ ಪುಟದಿಂದ...

ಎರಡನೆಯದಾಗಿ, ಇಂಥ ಹಿಂದಿ ವಿರೋಧಿ ನಿಲುವು ನಮ್ಮನ್ನು ಅವ್ಯಕ್ತವಾಗಿ ಇಂಗ್ಲಿಷ್ ಪರ ಧೋರಣೆಯತ್ತ ಕೊಂಡೊಯ್ಯುತ್ತದೆ. ಕಳೆದ ಕೆಲವು ದಿನಗಳಿಂದ ಕೇಳಿಬರುತ್ತಿರುವ ಪ್ರತಿಕ್ರಿಯೆಗಳನ್ನೇ ನೋಡಿದರೆ, ಹಿಂದಿಯನ್ನು ಸಂಪರ್ಕ ಭಾಷೆಯಾಗಿ ಹೇರಬಾರದು ಎನ್ನುವ ಬಹುತೇಕರು ಸದ್ಯಕ್ಕೆ ಇಂಗ್ಲಿಷ್ ಭಾಷೆಯೇ ಅಂಥ ಕೆಲಸ ಮಾಡಲಿ ಎಂದು ಸೂಚಿಸುತ್ತಿರುವುದು ಕಾಣಸಿಗುತ್ತದೆ. ಇದು ರಾಷ್ಟ್ರೀಯ ಸಾಂಸ್ಕೃತಿಕ ರಾಜಕಾರಣದ ಬಾಣಲೆಯಿಂದ ಅಂತರರಾಷ್ಟ್ರೀಯ ಆರ್ಥಿಕ ಹುನ್ನಾರಗಳ ಬೆಂಕಿಗೆ ನಮ್ಮನ್ನು ಹಾರಿಸುವ ತಂತ್ರವೆಂದು ನಾನು ಭಾವಿಸುತ್ತೇನೆ. ಎರಡು ಅಪಾಯಗಳಲ್ಲಿ ಯಾವುದು ಉತ್ತಮ ಎಂದು ಆಯ್ಕೆ ಮಾಡುವಂತೆ ನಮ್ಮನ್ನು ಒತ್ತಾಯಿಸುವ ಈ ಹಾದಿಯು ಖಂಡಿತವಾಗಿಯೂ ನಮ್ಮನ್ನು ಕ್ರಿಯಾಶೀಲತೆಯ ಹಾದಿಗೆ ಹಚ್ಚುವುದಿಲ್ಲ. ಬದಲು, 'ಒಂದು ಭಾಷೆ, ಒಂದು ದೇಶ' ಎಂಬ ಸಾಂಸ್ಕೃತಿಕ ರಾಜಕಾರಣದಿಂದ ಪಾರಾಗುವ ಭರಾಟೆಯಲ್ಲಿ ನಾವು ಒಂದೇ ಭಾಷೆ, ಒಂದೇ ಜಗತ್ತು ಎಂಬ ಮಾತುಗಳ ಮೂಲಕ ಜಗತ್ತನ್ನೇ ನಿಯಂತ್ರಣಕ್ಕೆ ಒಳಪಡಿಸುವ ವಸಾಹತುಶಾಹಿ ಬಂಡವಾಳದ ತೆಕ್ಕೆಗೆ ಪಕ್ಕಾಗುತ್ತೇವೆ, ಅದು ಮೊದಲನೆಯ ಅಪಾಯಕ್ಕಿಂತ ಹೆಚ್ಚು ವಿನಾಶಕಾರಿ.

ಈ 'ಪ್ರತಿಕ್ರಿಯಾಶೀಲತೆ'ಯ ಹಿಂದಿರುವ ಇನ್ನೂ ಹಲವು ಕಣ್ಕಟ್ಟುಗಳನ್ನು ನಾವು ಎಚ್ಚರದಿಂದ ಗಮನಿಸಬೇಕು. ಉದಾಹರಣೆಗೆ, ಇವತ್ತು ಹಿಂದಿಯನ್ನು ಸಂಪರ್ಕ ಭಾಷೆಯನ್ನಾಗಿ ಘೋಷಿಸುವ ಕೇಂದ್ರ ಸರ್ಕಾರದ ಪ್ರಯತ್ನವನ್ನು ಗಟ್ಟಿದನಿಯಲ್ಲಿ ವಿರೋಧಿಸುವ ನಮ್ಮ ನಾಡಿನ ಪ್ರತಿಕ್ರಿಯಾಶೂರ ರಾಜಕಾರಣಿಗಳು, ಕೆಲವೇ ವರ್ಷಗಳ ಮೊದಲು, ಪಕ್ಷ ಮತ್ತು ಸಿದ್ಧಾಂತಗಳೆಲ್ಲವನ್ನೂ ಮೀರಿ ಒಗ್ಗಟ್ಟಿನಲ್ಲಿ ಕನ್ನಡ ಶಾಲೆಗಳನ್ನು ಮುಚ್ಚಿಸುವ ಕೆಲಸ ಮಾಡಿದ್ದನ್ನು ನಾವು ಮರೆಯಬಾರದು. ಮತ್ತು, ಕನ್ನಡ ನಾಡಿನಲ್ಲಿ ದುಬಾರಿ ಇಂಗ್ಲಿಷ್ ಶಾಲೆಗಳನ್ನು ಸ್ಥಾಪಿಸಿ, ಪ್ರಾಥಮಿಕ ಶಿಕ್ಷಣವನ್ನು ವಾಣಿಜ್ಯಗೊಳಿಸುವ ಪಾಪದಲ್ಲಿ ಅವರೆಲ್ಲ ಪಾಲುದಾರರಾಗಿರುವುದು ಆಕಸ್ಮಿಕವಲ್ಲ. ಆ ಪುಢಾರಿಗಳೀಗ ತಾನೇತಾನಾಗಿ ಒದಗಿಬಂದ ಕನ್ನಡ ಪರ ಭಂಗಿಯನ್ನು ಪ್ರದರ್ಶಿಸುವ ಅವಕಾಶವನ್ನು ಬಳಸಿಕೊಳ್ಳುತ್ತಿದ್ದಾರೆ; ಆ ಮೂಲಕ ತಮ್ಮದೇ ಹಳೆಯ ಪಾಪಗಳನ್ನು ತೊಳೆದುಕೊಂಡು ಸಜ್ಜನರಾಗಲಿಕ್ಕೆ ಹೊರಟಿದ್ದಾರೆ. ಅವರ ಪ್ರತಿಕ್ರಿಯೆಗಳಿಗೆ ನಾವಿವತ್ತು ಬೆಂಬಲಿಸುತ್ತೇವಾದರೆ, ಆ ಮೂಲಕ ನಾವು ಇಂಗ್ಲಿಷಿನ ದಾಸ್ಯಕ್ಕೆ ಅಧಿಕೃತತೆಯ ಮುದ್ರೆ ಹಾಕುತ್ತೇವೆ; ಶಿಕ್ಷಣವನ್ನು ಕೊಳ್ಳುಮಾರುವ ಉದ್ಯೋಗವಾಗಿ ಮಾಡುವ ಲಾಭಕೋರತನಕ್ಕೆ ಕುಮ್ಮಕ್ಕು ಕೊಡುತ್ತೇವೆ; ಹಾಗೂ, ಪರೋಕ್ಷವಾಗಿ ಕನ್ನಡದೊಳಗೆ ಆಗಬೇಕಿರುವ ಕ್ರಿಯಾಶೀಲ ಕೆಲಸಗಳನ್ನು ಇನ್ನಷ್ಟು ಮುಂದಕ್ಕೆ ಹಾಕುತ್ತೇವೆ.

ಹಾಗಾದರೆ, ಕನ್ನಡದ ಕ್ರಿಯಾಶೀಲತೆಯ ದಾರಿ ಯಾವುದು? ಇದಕ್ಕೆ ಉತ್ತರವಾಗಿ ಬಹಳಷ್ಟನ್ನು ಉಲ್ಲೇಖಿಸಬಹುದು. ತಕ್ಷಣಕ್ಕೆ ನೆನಪಾಗುವ ಒಂದೆರಡು ಸಂಗತಿಗಳನ್ನು ಮಾತ್ರ ಹೇಳುತ್ತೇನೆ. ಮೊದಲನೆಯದಾಗಿ, ಹಿಂದಿಯ ಹೇರಿಕೆ ಇರಲೋ ಅಥವಾ ಇಂಗ್ಲಿಷಿನ ದಾಸ್ಯ ಮುಂದುವರೆಯಲೋ ಎಂಬ ಎರಡೂ ಕಡೆಯಿಂದ ಸೋಲುವ ಆಯ್ಕೆಗೆ ಕೈಹಚ್ಚುವ ಬದಲು, ಕನ್ನಡವನ್ನೇ ಇನ್ನಷ್ಟು ಸಮರ್ಥಗೊಳಿಸುವ ಸಂಕಲ್ಪವನ್ನು ನಾವು ಮಾಡಬೇಕಾಗಿದೆ. ಹಾಗೆ ಮಾಡುವುದು ಸಾಧ್ಯವಾದರೆ ಈ ದೇಶದ ಸಂಪರ್ಕ ಭಾಷೆ ಯಾವುದೇ ಆದರೂ ಅದರಿಂದ ಕನ್ನಡದ ಅಸ್ತಿತ್ವಕ್ಕೆ ಧಕ್ಕೆಯಾಗದು. ಇದನ್ನೇ ಉತ್ಪ್ರೇಕ್ಷಿಸಿ ಹೇಳುವುದಾದರೆ, ಕನ್ನಡವನ್ನು ಕೇವಲ ಭಾರತದ ರಾಜ್ಯರಾಜ್ಯಗಳ ಸಂಪರ್ಕಭಾಷೆಯಾಗಿ ಮಾತ್ರವಲ್ಲ, ಜಾಗತಿಕ ಮಟ್ಟದ ಒಂದು ಸಂಪನ್ಮೂಲ ಭಾಷೆಯಾಗಿಯೂ ಬೆಳೆಸುವ ಕೆಲಸಕ್ಕೆ ನಾವು ಸಂಕಲ್ಪಿಸುವ ಅಗತ್ಯವಿದೆ.

ಇದು ಅಸಾಧ್ಯವಾದ ಹಗಲುಗನಸು ಖಂಡಿತಾ ಅಲ್ಲ. ಕನ್ನಡ ಭಾಷೆಗೆ ಅಂಥ ಸಾಮರ್ಥ್ಯವಿದೆ ಎಂಬುದನ್ನು ಈ ನಾಡಿನ ಸಾಹಿತ್ಯ ಕಲೆಗಳ ಪರಿಚಯವಿರುವ ಯಾರೂ ಹೇಳಬಲ್ಲರು. ಅಷ್ಟೇ ಅಲ್ಲ, ಕನ್ನಡ ನಾಡಿಗಿಂತಲೂ ಕಿರಿದಾದ ಐರೋಪ್ಯ ಪ್ರಾಂತ್ಯದ ಹಲವು ದೇಶಗಳು –ತಮ್ಮ ನಡುವೆ ಇಂಗ್ಲಿಷಿನಂಥ ಒಂದು ಜಾಗತಿಕ ದೈತ್ಯನನ್ನು ಇಟ್ಟುಕೊಂಡೂ- ತಮ್ಮ ಭಾಷೆಗಳನ್ನು ಇಂಗ್ಲಿಷಿಗೆ ಸರಿಸಾಟಿಯಾಗುವಂತೆ ಬೆಳೆಸಿಕೊಂಡಿರುವ ಪರಿಯನ್ನು ನಾವು ಗಮನಿಸಬಹುದು. ಕೆಲವು ವರ್ಷಗಳ ಹಿಂದೆ ಇಸ್ರೇಲಿನ ಜೆರುಸಲೇಮ್ ವಿಶ್ವವಿದ್ಯಾಲಯಕ್ಕೆ ಪ್ರಾಧ್ಯಾಪಕರಾಗಿ ಹೋಗಿಬಂದ ಹಿರಿಯರೊಬ್ಬರು ಹಂಚಿಕೊಂಡ ಅನುಭವ ನನಗಿಲ್ಲಿ ನೆನಪಾಗುತ್ತದೆ. ಹೊಸತಾಗಿ ಸ್ಥಾಪಿತವಾದ ಆ ವಿಶ್ವವಿದ್ಯಾಲಯವು, ತನ್ನ ನಾಡಿನ ಗಡಿಗಳಲ್ಲಿ ಸತತವಾಗಿ ಸಂಘರ್ಷ ನಡೆಯುತ್ತಿದ್ದರೂ, ಬೆರಳೆಣಿಕೆಯ ವರ್ಷಗಳಲ್ಲೇ ಹೇಗೆ ಜಾಗತಿಕ ಗುಣಮಟ್ಟದ ಒಂದು ಅಧ್ಯಯನ ಕೇಂದ್ರವಾಗಿದೆ ಎಂಬುದನ್ನು ನನ್ನ ಮಿತ್ರರು ಅಲ್ಲಿಯ ಗ್ರಂಥಾಲಯ, ಅಧ್ಯಾಪಕರು, ತರಗತಿಗಳು ಮೊದಲಾದ ಉದಾಹರಣೆಗಳ ಸಮೇತ ವಿವರಿಸಿದರು. ಕೇರಳದ ಕೂಡಿಯಾಟ್ಟಂ ರಂಗಪ್ರಕಾರವನ್ನು ಕುರಿತು ಭಾರತದಲ್ಲಿ ಎಲ್ಲೂ ನಡೆಯದಿರುವಂಥ ಅಭ್ಯಾಸ ಮತ್ತು ಸಂಶೋಧನೆಗಳನ್ನು ಆ ವಿವಿಯಲ್ಲಿ ವಿಖ್ಯಾತ ವಿದ್ವಾಂಸರಾದ ಡೇವಿಡ್ ಷುಲ್ಮನ್ ಅವರ ನೇತೃತ್ವದಲ್ಲಿ ಮಾಡಲಾಗುತ್ತಿರುವ ಪರಿಯನ್ನು ನನ್ನ ರಂಗಭೂಮಿಯ ಮಿತ್ರರ ಬಾಯಲ್ಲಿ ಕೇಳಿದ್ದೇನೆ. ಕೆಲವೇ ದಶಕಗಳಷ್ಟು ಹಳೆಯದಾದ ಇಸ್ರೇಲಿನಂಥ ಒಂದು ಸಣ್ಣ ದೇಶಕ್ಕೆ ಸಾಧ್ಯವಾಗಿರುವ ಈ ಕೆಲಸವು ಒಂದು ಸಹಸ್ರಮಾನಕ್ಕೂ ಮಿಕ್ಕು ಇತಿಹಾಸವಿರುವ ಕನ್ನಡನಾಡಿಗೆ ಅದೇಕೆ ಸಾಧ್ಯವಿಲ್ಲ?

ಕನ್ನಡದ ಇಂಥ ದುಸ್ಥಿತಿಗೆ ಕಾರಣ, ನನ್ನ ಪ್ರಕಾರ, ನಮ್ಮ ಕ್ರಿಯಾಶೀಲತೆಯ ಕೊರತೆಯೇ ಹೊರತು, ಅನ್ಯ ಭಾಷೆಗಳ ಆಕ್ರಮಣವಲ್ಲ. ನಮ್ಮ ಸುತ್ತಮುತ್ತಲಿನ ಸಂಗತಿಗಳನ್ನು ಮೇಲುಮೇಲಕ್ಕೆ ನೋಡಿದರೂ ಇದಕ್ಕೆ ಸಾಕ್ಷ್ಯಗಳು ಸಿಗುತ್ತವೆ. ಕೆಲವು ದಿನಗಳ ಹಿಂದೆ ನಮ್ಮ ನಾಡಿನ ಪತ್ರಿಕೆಯೊಂದು ಪಿಯುಸಿ ವಿದ್ಯಾರ್ಥಿಗಳಿಗಾಗಿ ಪ್ರಕಟಿಸುತ್ತಿರುವ ಶಿಕ್ಷಣ ಮಾರ್ಗದರ್ಶಿ ಅಂಕಣದ ಮೇಲೆ ನನ್ನ ಕಣ್ಣು ಹರಿಯಿತು. ಲೋಕಾಭಿರಾಮವಾಗಿ ಓದುತ್ತ ಹೋದಾಗ, ನಡುವೆ, ಈ ವಾಕ್ಯವು ನನಗೆ ಎದುರಾಗಿ ಗಾಬರಿ ಹುಟ್ಟಿಸಿತು -

'ವಾಹಕದ ಒಳಗೆ ಇ = 0 ಮತ್ತು ಅದರ ಮೇಲ್ಮೈ ಮೇಲೆ ಯಾವುದೇ ಸ್ಪರ್ಶರೇಖೆಯ ಘಟಕವಿರುವುದಿಲ್ಲ. ಆದ್ದರಿಂದ ಇದರ ಒಳಗೆ ಮತ್ತು ಮೇಲ್ಮೈ ಮೇಲೆ ಯಾವುದೇ ಸಣ್ಣ ಆವೇಶವನ್ನು ಚಲಿಸುವಂತೆ ಮಾಡಲು ಯಾವುದೇ ಕೆಲಸವಾಗುವುದಿಲ್ಲ. ವಾಹಕದ ಒಳಗೆ ಅಥವಾ ಅದರ ಮೇಲ್ಮೈ ಮೇಲಿನ ಎರಡು ಬಿಂದುಗಳ ಮಧ್ಯೆ ಯಾವುದೇ ವಿಭವಾಂತರವಿರುವುದಿಲ್ಲ. ಇದೇ ಇಚ್ಛಿತ ಪರಿಣಾಮ.'

ಹತ್ತಾರು ಬಾರಿ ಇದನ್ನೋದಿದರೂ ನನ್ನ ಗಾಬರಿ ಕಡಿಮೆಯಾಗಲಿಲ್ಲ. ನಾನೂ ಪಿಯುಸಿಯವರೆಗೆ ವಿಜ್ಞಾನವನ್ನು ಓದಿದವನೇ. ಆದರೆ ಮೇಲ್ಕಂಡ ವಾಕ್ಯವನ್ನು ಮಾತ್ರ ತಿಪ್ಪರಲಾಗ ಹಾಕಿದರೂ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಕನ್ನಡದಲ್ಲೇ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಇಂಥ ವಾಕ್ಯಗಳನ್ನು ಉರು ಹೊಡೆದು ಪರೀಕ್ಷೆಯಲ್ಲಿ ಮಕ್ಕಿಕಾಮಕ್ಕಿ ಬರೆದು ಬಿಸಾಡುವುದು ಬಿಟ್ಟು ಬೇರೇನು ಮಾಡಲು ಸಾಧ್ಯ? ಪಿಯುಸಿಯ ಕನ್ನಡ ಪಠ್ಯಪುಸ್ತಕಗಳೂ ಹೀಗೆ ಇವೆಯಾದರೆ, ಕನ್ನಡ ಭಾಷೆ, ಕನ್ನಡದ ವಿಜ್ಞಾನ ಮತ್ತು ಕನ್ನಡ ನಾಡಿನ ಶಿಕ್ಷಣ – ಇವೆಲ್ಲವನ್ನೂ ದೇವರೇ ಕಾಪಾಡಬೇಕು. ಜಾಗತಿಕ ಖ್ಯಾತಿಯ ವಿಜ್ಞಾನಿಗಳನ್ನು ಪಡೆದಿರುವ ಕನ್ನಡ ನಾಡಿನಲ್ಲಿ ಹೀಗೆ, ಪಿಯುಸಿ ವಿಜ್ಞಾನದ ಪಠ್ಯದಲ್ಲೇ ಕನ್ನಡಕ್ಕೆ ಸಂಪರ್ಕ ಭಾಷೆಯಾಗುವ ಯೋಗ್ಯತೆ ಬಂದಿಲ್ಲವೆಂದಾದರೆ, ಇಂಗ್ಲಿಷೋ ಹಿಂದಿಯೋ ರಾಷ್ಟ್ರದ ಸಂಪರ್ಕ ಭಾಷೆಯಾಗಬಾರದು ಎಂದು ಪ್ರತಿಭಟಿಸುವ ಹಕ್ಕು ನಮಗೆಲ್ಲಿದೆ?

ಕೊರೊನಾ ಕಾಲದಲ್ಲಿ ಕಲಿತಿರುವ ಒಂದು ಪಾಠವನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು. ರೋಗವೊಂದು ನಮ್ಮನ್ನು ಆಕ್ರಮಿಸುವುದು ವೈರಾಣುವಿನ ಸಾಮರ್ಥ್ಯದಿಂದಲ್ಲ, ನಮ್ಮದೇ ನಿರೋಧ ಶಕ್ತಿಯ ಕೊರತೆಯಿಂದ – ಎಂಬ ಆ ಪಾಠ ನಿಜವೇ ಆಗಿದ್ದರೆ, ಕನ್ನಡ ಭಾಷೆಯ ಮೇಲೆ -ಅಥವಾ ಇನ್ನಾವುದೇ ಕ್ಷೇತ್ರದ ಮೇಲೆ- ಎರಗಬಹುದಾದ ಅಪಾಯಗಳನ್ನು ಎದುರಿಸಲಿಕ್ಕೂ ಸಮರ್ಥವಾದ ನಿರೋಧ ಶಕ್ತಿಯನ್ನು ವರ್ಧಿಸಿಕೊಳ್ಳದೆ ಬೇರೆ ಯಾವ ಸುಲಭದ ದಾರಿಗಳಿಲ್ಲ. ಕ್ರಿಯಾಶೀಲತೆಯೊಂದೇ ಅದಕ್ಕಿರುವ ದಾರಿ, 'ಪ್ರತಿಕ್ರಿಯಾಶೀಲತೆ'ಯಲ್ಲ.

ಕರಡಿ ಕೊಳ್ಳಕ್ಕೆ ರಕ್ಷಣೆ

12ನೇ ಪುಟದಿಂದ...

ಅವುಗಳಲ್ಲಿ ಇಲ್ಲಿನ ಸಿದ್ದೇಶ್ವರ ಗ್ರಾಮ ಅರಣ್ಯ ಸಮಿತಿಯೂ ಒಂದು. 2002ರಲ್ಲಿ ರಚನೆಯಾಗಿದ್ದು 11 ಜನರ ಕಾರ್ಯಕಾರಿ ಸಮಿತಿ ಇದೆ. ಸಮಿತಿಯು ನಿಯಮಿತವಾಗಿ ಸಭೆ ಸೇರುವುದು, ದಾಖಲಾತಿ ನಿರ್ವಹಿಸುವುದು ಮೊದಲಾದ ಕಾರ್ಯಗಳಲ್ಲಿ ನಿರತವಾಗಿದೆ. ಕಾಡಿನಲ್ಲಿ ಯಾರಾದರೂ ಮರ ಕಡಿದರೆ, ಬೇಟೆ ಆಡುತ್ತಿದ್ದಾರೆಂದು ಕಂಡು ಬಂದರೆ ತಕ್ಷಣ ಸಕ್ರಿಯವಾಗುತ್ತದೆ. ಅವರನ್ನು ಹಿಡಿದು ಕಾಡಂಚಿನಲ್ಲಿರುವ ಶ್ರೀ ಸಿದ್ದೇಶ್ವರ ದೇವಸ್ಥಾನದಲ್ಲಿ ಗ್ರಾಮದ ಮುಖ್ಯಸ್ಥರ ಸಮ್ಮುಖದಲ್ಲಿ ದಂಡ ಹಾಕಲಾಗುತ್ತದೆ, ಇಲ್ಲವೇ ಇಲಾಖೆಗೆ ಒಪ್ಪಿಸಲಾಗುತ್ತದೆ.

ಸಮಿತಿಯು ಹೀಗೆ ಸಕ್ರಿಯವಾಗಿರುವುದಕ್ಕೆ ಕರಿಬಸಪ್ಪ ಅವರ ಬದ್ಧತೆ ಮತ್ತು ನಿಷ್ಠುರತೆಯೇ ಕಾರಣ ಎಂದು ಎಲ್ಲರೂ ಹೇಳುತ್ತಾರೆ. ಇಲಾಖೆಯೊಂದಿಗೆ ಕಾಲ್ನಡಿಗೆಯಲ್ಲಿ, ಜೀಪುಗಳಲ್ಲಿ ಕಾಡಿನ ಗಸ್ತು ಹಾಕುವುದು, ಕಾಡಿನಲ್ಲಿ ಪ್ರಾಣಿಗಳಿಗಾಗಿ ಕುಡಿಯುವ ನೀರಿನ ತೊಟ್ಟಿಗಳನ್ನು ನಿರ್ಮಿಸುವುದು, ಗಿಡ-ಮರಗಳ ದಾಖಲಾತಿಯಲ್ಲಿ ಕೈಜೋಡಿಸುವುದು ಮುಂತಾದ ಅನೇಕ ಕೆಲಸಗಳಲ್ಲಿ ಕರಿಬಸಪ್ಪ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ. 'ಗಿಡ ಕಡ್ಯಾವ್ರು ಇಲಾಖೆಗಿಂತಲೂ ನಮ್ ಕರಿಬಸಣ್ಣನಿಗೇ ಜಾಸ್ತಿ ಹೆದರಿತಾರ್ರಿ' ಎನ್ನುತ್ತಾರೆ ಸಿದ್ದೇಶ್ವರ ದೇವಾಲಯದ ಅರ್ಚಕರು.

ಈ ನಡೆ ಅಧ್ಯಕ್ಷರಿಗೆ ಕೆಲವೊಮ್ಮೆ ಅಪಾಯವನ್ನೂ ತಂದಿದೆ. ಅವರೇ ನೆನಪಿಸಿಕೊಳ್ಳುವಂತೆ. ಕಾಡಿನ ಮತ್ತೊಂದು ಭಾಗದಲ್ಲಿರುವ ಶಿಕಾರಿಪುರದಲ್ಲಿ ಒಮ್ಮೆ ನೆಂಟರ ಮದುವೆಗೆಂದು ಹೋಗಿದ್ದಾಗ ಜನರ ಗುಂಪೊಂದು ಇವರನ್ನು ಹೊಡೆಯಲು ಮುಂದಾಗಿತ್ತಂತೆ. ಕಾರಣ ಮರ ಕಡಿಯುವವರನ್ನು ತಡೆದು ಇಲಾಖೆಗೆ ಹಿಡಿದುಕೊಡುತ್ತಾರೆಂದು ಅವರಿಗೆ ಸಿಟ್ಟು. ಆಗ ಅಲ್ಲಿನ ಹಿರಿಯರೊಬ್ಬರು ಆ ಗುಂಪಿಗೆ ಛೀಮಾರಿ ಹಾಕಿ 'ನಾಕ್ ಜನಕ್ಕ ಉಪಯೋಗ ಆಗೋ ಕೆಲಸ ಮಾಡ್ತಾ ಇದಾನೆ, ಅವನ ಮನೀಗೆ ಏನೂ ಕೊಂಡೊಯ್ತಿಲ್ಲ' ಅಂತ ಗದರಿಸಿ ಕಳಿಸಿದರಂತೆ.

'ಮನೆ ಬಳಕೆಗೆ ಗ್ಯಾಸ್ ಸಿಲಿಂಡರ್ ಬಂದ ಬಳಿಕ ಉರುವಲಿಗಾಗಿ ಯಾರೂ ಕಾಡಿಗೆ ಹೋಗುತ್ತಿಲ್ಲ. ಗ್ಯಾಸ್ ಸಂಪರ್ಕ ಇಲ್ಲದ ಕೆಲವೇ ಮನೆಗಳು ತಮ್ಮ ಹೊಲದಲ್ಲಿ ದೊರೆಯುವ ಸೌದೆಯನ್ನೇ ಬಳಸುತ್ತಿವೆ. ಆದರೆ ಮರಮಟ್ಟುಗಳಿಗೆ ದೊಡ್ಡ ಮರಗಳನ್ನು ಕಡಿಯುವವರು, ಅರಣ್ಯ ಒತ್ತುವರಿ, ಗಣಿಗಾರಿಕೆ ಮಾಡುವವರು ಹಾಗೂ ಪ್ರಾಣಿ ಬೇಟೆ ಆಡುವವರನ್ನು ತಡೆಯುವುದೇ ಸವಾಲಿನ ಕೆಲಸವಾಗಿತ್ತು' ಎನ್ನುತ್ತಾರೆ ಕರಿಬಸಪ್ಪ.

ಈ ಭಾಗದ ಅರಣ್ಯ ಉಳಿದಿರುವುದರಿಂದ ಕೆಳಭಾಗದ ಕೃಷಿ ಭೂಮಿಗಳಲ್ಲಿ ಅಂತರ್ಜಲ ಮಟ್ಟ ಉತ್ತಮವಾಗಿದೆ ಎನ್ನುತ್ತಾರೆ ಗ್ರಾಮಸ್ಥರು. ಅಲ್ಲದೆ ದೇವಸ್ಥಾನಕ್ಕೆ ಬರುವವರು ಇಲ್ಲಿನ ವಾತಾವರಣ ತಂಪಾಗಿರುವುದನ್ನು ಗಮನಿಸಿದ್ದಾರೆ. ಸುತ್ತ-ಮುತ್ತಲ ಕಾಡು ಸಮೃದ್ಧವಾಗಿರುವುದೇ ಇದಕ್ಕೆ ಕಾರಣ ಎಂಬುದು ಅವರ ಅನಿಸಿಕೆ.

2002ರಲ್ಲಿ ಈ ಗ್ರಾಮ ಅರಣ್ಯ ಸಮಿತಿ ರಚನೆಯಾಗಲು ಮುತುವರ್ಜಿ ವಹಿಸಿದ್ದು ರಾಣೆಬೆನ್ನೂರಿನ ವನಸಿರಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ. ಈ ಭಾಗದ ಜನರ ಮನವೊಲಿಸಿ ಹಲವು ಗ್ರಾಮ ಅರಣ್ಯ ಸಮಿತಿಗಳ ರಚನೆಯಾಗಲು ಪ್ರೇರೇಪಿಸಿತು. 'ನಾವು ಹಾಕಿದ ಶ್ರಮಕ್ಕೆ ಈ ಒಂದು ಸಮಿತಿಯಾದರೂ ಕ್ರಿಯಾಶೀಲವಾಗಿರುವುದು ಸಂತೋಷ, ಆದರೆ ಇವರೂ ಮತ್ತಷ್ಟು ಚುರುಕಾಗಿ ಕೆಲಸ ಮಾಡಬೇಕು, ಈ ಭಾಗದ ಜೀವ ವೈವಿಧ್ಯ ದಾಖಲಾಗಬೇಕು' ಎನ್ನುತ್ತಾರೆ ಸಂಸ್ಥೆಯ ಎಸ್.ಡಿ. ಬಳಿಗಾರ್.

1988ರ ನೂತನ ಅರಣ್ಯ ನೀತಿ ಮತ್ತು ಅದರ ಫಲಶ್ರುತಿಯಾಗಿ 90ರ ದಶಕದಲ್ಲಿ ಜಾರಿಗೆ ಬಂದ ಸಮುದಾಯ ಸಹಭಾಗಿತ್ವದ ಮಾದರಿಯೇ ಗ್ರಾಮ ಅರಣ್ಯ ಸಮಿತಿ. ಅರಣ್ಯ ಅಭಿವೃದ್ಧಿ ಯೋಜನೆಗಳಲ್ಲಿ ಜನರ ಸಕ್ರಿಯ ಸಹಭಾಗಿತ್ವಕ್ಕೆ ಅವಕಾಶ ಮಾಡಿಕೊಡುವುದು ಇದರ ಉದ್ದೇಶ. 'ಅಧಿಕಾರದಲ್ಲಿ ಸಮಪಾಲು, ಜವಾಬ್ದಾರಿಯಲ್ಲಿ ಸಮಪಾಲು, ಫಲಾನುಭವದಲ್ಲೂ ಸಮಪಾಲು- ಇದು ಈ ಯೋಜನೆಯ ಮೂಲತತ್ವ. ಈ ಯೋಜನೆಯಲ್ಲಿ ಅರಣ್ಯಕ್ಕೆ ಅಥವಾ ಅವನತಿ ಹೊಂದಿದ ಅರಣ್ಯ ಭೂಮಿಗೆ ಸಮೀಪವಾಗಿ ವಾಸಿಸುವ ಜನಸಮುದಾಯ ಅರಣ್ಯ ಸಂರಕ್ಷಣೆಯಲ್ಲಿ, ಮರಗಿಡಗಳನ್ನು ಬೆಳೆಸುವುದರಲ್ಲಿ ಜವಾಬ್ದಾರಿಯುತವಾಗಿ ಭಾಗವಹಿಸಬೇಕು. ಈ ಕೆಲಸದ ಒಟ್ಟಾರೆ ಜವಾಬ್ದಾರಿಯನ್ನು ಗ್ರಾಮ ಅರಣ್ಯ ಸಮಿತಿ ಹೊರುತ್ತದೆ.



ಕರಡಿ ಕೊಳ್ಳ ಅರಣ್ಯದಲ್ಲಿ ಗ್ರಾಮ ಅರಣ್ಯ ಸಮಿತಿಯ ಕಾರ್ಯಕರ್ತರು

1990ರ ಜೂನ್ 1ರಂದು ಭಾರತ ಸರ್ಕಾರ ಜಂಟಿ ಅರಣ್ಯ ಯೋಜನೆ ಕುರಿತು ಆದೇಶ ಹೊರಡಿಸಿತು. ಇದರ ಫಲಶ್ರುತಿಯಾಗಿ ಇಂದು ನಮ್ಮ ದೇಶದ 27 ರಾಜ್ಯಗಳಲ್ಲಿ 65,000 ಗ್ರಾಮ ಅರಣ್ಯ ಸಮಿತಿಗಳು ರಚನೆಯಾಗಿವೆ. ಇವು ಒಟ್ಟು 1,50,000 ಚದರ ಕಿ.ಮೀಗಳಷ್ಟು ಅರಣ್ಯ ಪ್ರದೇಶವನ್ನು ಆಯಾ ರಾಜ್ಯದ ಅರಣ್ಯ ಇಲಾಖೆಗಳ ಜೊತೆಗೂಡಿ ಸಂರಕ್ಷಿಸಿ ನಿರ್ವಹಿಸುತ್ತಿವೆ.

ಅಂಕಿ-ಅಂಶಗಳ ದೃಷ್ಟಿಯಿಂದ ಇದು ನಿಜಕ್ಕೂ ಉತ್ತಮ ಸಾಧನೆ. ಆದರೆ ವಾಸ್ತವವಾಗಿ ಈ ಜಂಟಿ ಅರಣ್ಯ ಯೋಜನೆ ಅಲ್ಲಲ್ಲಿ ಮಾತ್ರ ಯಶಸ್ವಿಯಾಗಿರುವ ಉದಾಹರಣೆಗಳು ದೊರೆಯುತ್ತವೆ. ಆದರೆ ಗ್ರಾಮದಲ್ಲಿ ಒಬ್ಬರು ಅಥವಾ ಕೆಲವೇ ಆಸಕ್ತರು ಮನಸ್ಸು ಮಾಡಿದರೆ ಕರಡಿ ಕೊಳ್ಳದಂತಹ ಮತ್ತಷ್ಟು ಅರಣ್ಯಗಳು ಉಳಿಯುತ್ತವೆ. ಸರ್ಕಾರ ಗುಡ್ಡದ ಮಾದಾಪುರದಂತಹ ಅತ್ಯುತ್ತಮ ಗ್ರಾಮ ಅರಣ್ಯ ಸಮಿತಿಗಳನ್ನು ಗುರುತಿಸಿ ಪ್ರೋತ್ಸಾಹಿಸಬೇಕು. ಆಗ ಉಳಿದ ಸಮಿತಿಗಳಿಗೂ ಪ್ರೇರಣೆಯಾಗಬಹುದು.

ಮುನ್ನೋಟ 17-04-2022 ರಿಂದ 23-04-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಕೆಲವರೊಂದಿಗೆ ಅತಿಯಾಗಿ ಸ್ನೇಹ ಸಂಬಂಧ ವೃದ್ಧಿಸುವ ಸಾಧ್ಯತೆ ಇದೆ. ವ್ಯವಹಾರಗಳಲ್ಲಿ ಸಂಬಂಧ ಹಳಸದಂತೆ ಎಚ್ಚರವಹಿಸಿರಿ. ವಾಹನ ಚಾಲನೆ ವೇಳೆ ಎಚ್ಚರ ಇರಲಿ. ಕೆಲವರು ಪಿತ್ರಾರ್ಜಿತ ಆಸ್ತಿಗಾಗಿ ನ್ಯಾಯಾಂಗದ ಮೊರೆ ಹೋಗಬೇಕಾಗಬಹುದು. ನಿರುದ್ಯೋಗಿಗಳಿಗೆ ಉದ್ಯೋಗದ ಅವಕಾಶಗಳು ತೆರೆದುಕೊಳ್ಳುತ್ತವೆ. ಕುಟುಂಬದಲ್ಲಿ ಕೆಲವೊಂದು ಸಮಸ್ಯೆಗಳು ಉಲ್ಬಣಗೊಳ್ಳಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ನಿಮ್ಮ ಹೆಸರನ್ನು ದುರ್ಬಳಕೆ ಮಾಡಿಕೊಂಡು ಹಣ ಸಂಪಾದಿಸುವವರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳಿರಿ. ರಾಜಕಾರಣಿಗಳು ಅವರ ಬಾಲ ಬುಡುಕರನ್ನು ದೂರವಿಡುವುದು ಬಹಳ ಉತ್ತಮ. ಕಳೆದುಹೋದ ದಿನಗಳ ಬಗ್ಗೆ ಬಹಳ ಚಿಂತಿಸುವುದು ಅಷ್ಟು ಸರಿಯಲ್ಲ. ಯಾವುದೇ ಕೆಲಸಗಳಲ್ಲಿ ಅತಿ ಆತುರ ತೋರಿ ಗಂಡಾಂತರಕ್ಕೆ ಸಿಲುಕಿಕೊಳ್ಳಬೇಡಿರಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಅನಿವಾರ್ಯವಲ್ಲದ ಕೆಲಸಗಳನ್ನು ಸ್ವಲ್ಪಮಟ್ಟಿಗೆ ಮುಂದೂಡುವುದು ಉತ್ತಮ. ವ್ಯಾಪಾರ ವ್ಯವಹಾರಗಳಲ್ಲಿನ ಆಗುಹೋಗುಗಳ ಬಗ್ಗೆ ಸರಿಯಾಗಿ ವಿಚಾರಣೆ ಮಾಡಿರಿ. ಅಧ್ಯಯನಕ್ಕೆ ಉತ್ತೇಜನ ಸಿಕ್ಕು ಉತ್ತಮ ವಿದ್ಯಾಲಯಗಳಲ್ಲಿ ಪ್ರವೇಶ ದೊರೆಯುತ್ತದೆ. ನಿಮ್ಮ ಸಂಗಾತಿಯ ಸಲಹೆಗಳು ನಿಮಗೆ ಬಹಳ ಪ್ರಯೋಜನಕಾರಿಯಾಗುತ್ತದೆ. ಆದಾಯಕ್ಕಿಂತ ಖರ್ಚು ಹೆಚ್ಚಾಗುವ ಸಾಧ್ಯತೆಗಳಿವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ನಿಮ್ಮ ವಿರುದ್ಧ ನಿಮ್ಮ ಸಹೋದ್ಯೋಗಿಗಳಿಂದ ಸಣ್ಣ ಪಿತೂರಿಯೊಂದು ರೂಪುಗೊಳ್ಳುವ ಸಾಧ್ಯತೆ ಇದೆ. ಆ ಬಗ್ಗೆ ಉದಾಸೀನದಿಂದ ಇರುವುದು ಬಹಳ ಒಳ್ಳೆಯದು. ಮಿತ್ರರೊಡನೆ ಕೂಡಿ ಮಾಡುವ ಹಣಕಾಸಿನ ವ್ಯವಹಾರಗಳಲ್ಲಿ ಹೆಚ್ಚು ಜಾಗೃತರಾಗಿರುವುದು ಒಳ್ಳೆಯದು. ಅನಿರೀಕ್ಷಿತವಾಗಿ ಪರಿಚಯವಾದ ವ್ಯಕ್ತಿಯೊಬ್ಬರಿಂದ ಆಧ್ಯಾತ್ಮಿಕ ಸಲಹೆಗಳನ್ನು ಪಡೆಯುವಿರಿ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ದೀರ್ಘಕಾಲೀನ ಅನಾರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರಿಗೆ ಹೊಸ ಆಶಾಕಿರಣವೊಂದು ಗೋಚರಿಸುತ್ತದೆ. ಕೃಷಿಕರ ಆದಾಯ ಹೆಚ್ಚಾಗುವ ಸಾಧ್ಯತೆ ಇದೆ. ಸಂಗಾತಿಯ ಆದಾಯದಲ್ಲಿ ಸ್ವಲ್ಪಮಟ್ಟಿನ ಏರಿಕೆಯನ್ನು ಕಾಣಬಹುದು. ಕೆಲವರಿಗೆ ಬಿಡುವಿಲ್ಲದ ಕೆಲಸಗಳಿಂದ ಆಕ್ರೋಶ ಹೆಚ್ಚಾಗುವ ಸಾಧ್ಯತೆ ಇದೆ. ಸ್ತ್ರೀಯರಿಂದ ಹಣದ ವಿಚಾರದಲ್ಲಿ ಮೋಸವಾಗುವ ಸಾಧ್ಯತೆಗಳಿವೆ, ಎಚ್ಚರವಹಿಸಿರಿ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ರಾಜಕೀಯ ನಾಯಕರುಗಳಿಗೆ ಅವರ ವಿಷಯದಲ್ಲಿ ಬದಲಾವಣೆಯೊಂದನ್ನು ಕಾಣಬಹುದು. ನೆರೆಹೊರೆಯವರಿಗೆ ನೀತಿ ಹೇಳಲು ಹೋಗಿ ಗೌರವಕ್ಕೆ ಧಕ್ಕೆ ತಂದುಕೊಳ್ಳುವಿರಿ. ಆದಾಯ ಕೊಡುವ ಹೊಸ ಮಾರ್ಗವೊಂದನ್ನು ಹುಡುಕಲು ಪ್ರಯತ್ನ ಪಡುವಿರಿ. ವ್ಯವಹಾರಗಳಲ್ಲಿ ಅತಿಯಾದ ಮಾತುಗಳ ಮೇಲೆ ಹಿಡಿತವಿರಲಿ. ಇಲ್ಲವಾದಲ್ಲಿ ವ್ಯವಹಾರದಿಂದ ಹೊರ ಬರುವ ಸಾಧ್ಯತೆಗಳಿವೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3

ವೃತ್ತಿ ನೈಪುಣ್ಯತೆಯಿಂದ ಕೆಲವು ನೌಕರರಿಗೆ ವಿಶೇಷ ಸ್ಥಾನಮಾನ ದೊರೆಯುವ ಸಾಧ್ಯತೆ ಇದೆ. ಸಾಲ ಕೊಟ್ಟವರು ಮರುಪಾವತಿಗಾಗಿ ಎಡಬಿಡದೆ ತಗಾದೆಯನ್ನು ಮಾಡುವರು. ಹೂಡಿಕೆ ವ್ಯವಹಾರಗಳಲ್ಲಿ ಹೆಚ್ಚಿನ ಎಚ್ಚರಿಕೆ ಇರಲಿ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ರಾಜಕೀಯ ವ್ಯಕ್ತಿಗಳ ವಶೀಲಿಯನ್ನು ಬಳಸಿಕೊಂಡು ನಿಮ್ಮ ಕಾರ್ಯಸಾಧನೆ ಮಾಡಿಕೊಳ್ಳುವಿರಿ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ

ಕೆಲಸಕಾರ್ಯಗಳಲ್ಲಿ ನಿಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವಿರಿ. ಮನೆಯ ಜವಾಬ್ದಾರಿಗಳ ಬಗ್ಗೆ ಹೆಚ್ಚಿನ ಗಮನ ಕೊಡುವುದು ಅಗತ್ಯ. ಪ್ರಯತ್ನಪಡುತ್ತಿದ್ದ ಸ್ಥಿರಾಸ್ತಿಯನ್ನು ಹೊಂದುವ ಅವಕಾಶವಿದೆ. ಸೂಕ್ಷ್ಮ ಕೆಲಸಕಾರ್ಯಗಳಲ್ಲಿ ನಿಮ್ಮ ಜಾಣ್ಮೆಯನ್ನು ಯಾರೊಡನೆಯೂ ಹಂಚಿಕೊಳ್ಳದಿರುವುದು ಬಹಳ ಉತ್ತಮ. ಆರ್ಥಿಕತೆಯಲ್ಲಿ ಅಲ್ಪಮಟ್ಟಿನ ಚೇತರಿಕೆಯನ್ನು ಕಾಣಬಹುದು.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1

ಅಲಂಕಾರಿಕ ವಸ್ತುಗಳನ್ನು ತಯಾರು ಮಾಡುವವರಿಗೆ ವ್ಯವಹಾರ ಚೆನ್ನಾಗಿ ನಡೆದು ಆದಾಯ ಹೆಚ್ಚುತ್ತದೆ. ಮಹಿಳೆಯರಿಗೆ ಸಂಗಾತಿಯಿಂದ ವಿಶೇಷ ಉಡುಗೊರೆಗಳು ದೊರೆಯಬಹುದು. ಕೃಷಿಕ್ಷೇತ್ರದಲ್ಲಿ ಬಿಡುವಿಲ್ಲದ ಕೆಲಸಗಳು ನಡೆಯುತ್ತವೆ. ಯಂತ್ರಗಳ ಮೇಲೆ ಕೆಲಸ ಮಾಡುವವರು ಎಚ್ಚರಿಕೆಯಿಂದ ಕೆಲಸ ಮಾಡಿರಿ. ಆರ್ಥಿಕ ಸ್ಥಿತಿಯು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಇರುವ ಸಂಸ್ಥೆಯನ್ನು ಬಿಟ್ಟು ಹೊಸ ಸಂಸ್ಥೆ ಅಥವಾ ಉದ್ಯೋಗಕ್ಕೆ ಸೇರುವ ಅವಕಾಶವಿದೆ. ನಿಮ್ಮ ಕಾರ್ಯಸೂಚಿಯಲ್ಲಿ ತುರ್ತು ವಿಷಯಗಳ ಬಗ್ಗೆ ಹೆಚ್ಚಿನ ಗಮನವನ್ನು ಕೊಡಿರಿ. ಆರ್ಥಿಕವಾಗಿ ಸಾಕಷ್ಟು ಚೇತರಿಕೆಯನ್ನು ಕಂಡು ಹೊಸ ರೀತಿಯ ವ್ಯವಹಾರಗಳ ಆರಂಭದ ಬಗ್ಗೆ ಗಮನಹರಿಸುವಿರಿ. ಪಾಲುದಾರಿಕೆ ವ್ಯವಹಾರದಲ್ಲಿ ಇದ್ದ ಮನಸ್ತಾಪಗಳು ದೂರವಾಗಿ ವ್ಯವಹಾರ ಮುಂದುವರೆಯುತ್ತದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ವೈಯಕ್ತಿಕ ವ್ಯವಹಾರದ ನಿಮಿತ್ತ ದೂರ ಪ್ರಯಾಣವನ್ನು ಮಾಡಬೇಕಾಗಬಹುದು. ಯುವಕರು ವೃತ್ತಿಯಲ್ಲಿ ಗುಂಪುಗಾರಿಕೆಯನ್ನು ಮಾಡಲು ಹೋಗಿ ಸಾಕಷ್ಟು ಹಿನ್ನಡೆ ಅನುಭವಿಸುವರು. ದೈನಂದಿನ ಕೆಲಸ ಕಾರ್ಯಗಳು ಯಶಸ್ವಿಯಾಗಿ ನಡೆಯುತ್ತದೆ. ಹಿತಶತ್ರುಗಳ ವಿಚಾರದಲ್ಲಿ ಸಾಕಷ್ಟು ಎಚ್ಚರಿಕೆ ಇರಲಿ. ನಿಮ್ಮ ಒಳ್ಳೆಯತನ ದುರುಪಯೋಗವಾಗದಂತೆ ಎಚ್ಚರವಹಿಸಿರಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ನಿಮ್ಮ ಗುಪ್ತ ಹಣ ಅಥವಾ ಗುಪ್ತ ಆಸ್ತಿಯ ವಿವರಗಳು ಹೊರಬರುತ್ತವೆ. ಬೇರೆಯವರ ಮಾತು ಕೇಳಿ ಕೆಲವು ಸಂಬಂಧಗಳನ್ನು ಕಳೆದುಕೊಳ್ಳುವ ಸಾಧ್ಯತೆಗಳಿವೆ, ಎಚ್ಚರವಹಿಸಿ. ಕೃಷಿ ಭೂಮಿಯನ್ನು ಕೊಳ್ಳುವ ಯೋಗವಿದೆ. ತಾಯಿ ಆರೋಗ್ಯದ ಬಗ್ಗೆ ವಿಶೇಷ ಗಮನ ಅಗತ್ಯ. ಉದ್ಯೋಗ ಕ್ಷೇತ್ರದಲ್ಲಿ ಹಿತಶತ್ರುಗಳು ಹೆಚ್ಚಾಗುವ ಸಾಧ್ಯತೆ ಇದೆ. ಹಣದ ಒಳಹರಿವು ನಿರೀಕ್ಷಿತ ಮಟ್ಟದಲ್ಲಿ ಇರುತ್ತದೆ.

ಪದಬಂಧ 2734



ಮೇಲಿನಿಂದ ಕೆಳಕ್ಕೆ

1. ತೆರೆಯಲ್ಲಿ ಮಿಂಚುವ ನಟನಟಿಯರ ಭೋಗ ಮೋಜುಗಳ ವೈಭವ 5
2. ಕುಲ ಪಂಗಡಗಳಿಂದ ನಿರ್ಮಿತವಾದ ಜನಾಂಗ ವ್ಯವಸ್ಥೆ 5
3. ಶ್ರೇಷ್ಠವಾದ ಹೆಸರಿನ ಹಣೆಯ ಮೇಲಿನ ಮುದ್ರೆ 4
4. ಹೊಗಳಿಕೆಯ ಹಾಡಿಗೆ ಪಾತ್ರನಾದವ 4
7. ಸಂಕಟ ಸ್ಥಿತಿ ಬಂದಾಗ ಅಥವಾ ಸಾಕೆನಿಸಿದಾಗ ನೀಡುವ ಪದತ್ಯಾಗ ಪತ್ರ 4
8. ಶತ್ರುವಶದಲ್ಲಿರುವ ಖನಿಜ ಭಂಡಾರ 4
10. ಮರ್ಯಾದೆಯ ಅಳತೆಗೋಲು 4
11. ನಸುಕಿನಲ್ಲಿ ಅಲ್ಪಸ್ವಲ್ಪ ಕಾಣಿಸುವ ಮುಖದ ಹಾಸ 4
14. ಸವಿಯಾದ ದ್ರವದಿಂದ ತುಂಬಿದ್ದು 5
15. ಸ್ನೇಹಿತೆಯ ಪ್ರೇಮಿ 5
16. ಹಿಂದೆ ಕೆಂಚು ಮುಖದ ಆಂಗ್ಲರನ್ನು ತಿರಸ್ಕಾರದಿಂದ ಹೋಲಿಸುತ್ತಿದ್ದ ವಾನರ 4
17. ಆತ್ಮ ಪಯಣಿಸಬಹುದಾದ ತಂದೆ ಪ್ರಪಂಚ 4

ಎಡದಿಂದ ಬಲಕ್ಕೆ

1. ಬಿಸಿ ಬಿಸಿ ಸುದ್ದಿ ಹೀಗೆ ಹೊಸ ಹೊಸದಾಗಿರುತ್ತದೆ 4
3. ಮೋಡ ಕರಗಿ ಮಳೆಯಾದ ನಂತರ ಕಾಣುವ ನೀಲ ಸ್ವಚ್ಛ ಆಗಸ 4
5. ಎಲ್ಲವನ್ನೂ ಬಲ್ಲವರು 5
6. ಅಂದುಕೊಂಡಿದ್ದು ನಡೆದದ್ದು ವ್ಯತ್ಯಾಸವಾದ ವಿಪರೀತ ಸ್ಥಿತಿ ಭ್ರಮೆಗೀಡು ಮಾಡಿದೆ 4
7. ಮಾನಸದಲ್ಲಿ ತುಲಸೀದಾಸರಿಗೆ ಹೊಳೆದ ರಘುವಂಶಜನ ಇತಿಹಾಸ 5
9. ಯಾವ ವ್ಯತ್ಯಾಸವೂ ಇಲ್ಲದ ಏಕರೂಪದ ಮಂದಿ 5
12. ನಿರಂತರ ಒಳ್ಳೆಯ ಮನಸ್ಸಿನ ಹುಡುಗಿ 3
13. ಬೀದಿಯಲ್ಲಿ ಸಂಭ್ರಮದ ಪ್ರದರ್ಶನ 5
16. ಬೆಂಕಿಯ ಉಂಡೆಯಂತೆ ಕಂಗೊಳಿಸುವ ಸುವಾಸಿತ ಹೂವು 5
18. ಲೌಕಿಕದ ದೊಡ್ಡ ಭಯ 4
19. ಇಡೀ ವಿಶ್ವದಲ್ಲಿ ಅಲೆದಾಡುವವ 5
20. ಗಟ್ಟಿ ಸ್ವರೂಪ ಪಡೆಯದ ಬೆಲ್ಲದ ಹದ 4
21. ಅನಂತರ ಮರದಿಂದ ಮೂಡುತ್ತೆ 4

ಪದಬಂಧ ಉತ್ತರ -2733

ಮೇಲಿಂದ ಕೆಳಕ್ಕೆ

1.ಉಲ್ಲಾಸ 2.ನವಕುಸುಮ 3.ಆರಾಮಾಸನ 4.ವಸನ 7.ಪರಮ 8.ಭಾರತಿ 12.ರಮಿಸು 14.ನಸುಕು 16.ಜೋಗುಳ 18.ರಭಸ 19.ಅಂತರಗಾಮಿ 20.ರಸಪಾನಕ 21.ಜಲಜ 24.ವಿರಾಮ 26.ಕಾಲುವೆ

ಎಡದಿಂದ ಬಲಕ್ಕೆ

1. ಉದ್ಯಾನವನ 3.ಅತ್ಮಗೌರವ 5.ವಫರಾ 6.ಸಲ್ಲಾಪ 8.ಭಾವನ 9.ರಕ್ಷಿಸು 10.ಸರ್ಕಾರ 11.ಕರಮ 13.ಮನನ 15.ತಿಜೋರಿ 17.ಭೂಸುರ 19.ಅಂಕುರ 21.ಜಳಕ 22.ಭರತ 23.ಸಲಿಲ 24.ವಿಲಾಸ 25.ಜಟಕಾ 27.ಗಾಯನ 28.ಮಹಾನವಮಿ 29.ಕಲ್ಯಾಣಸೇವೆ

ಇದು ಬರಿ ಬೆಳಗಲ್ಲೋ ಅಣ್ಣಾ...


ಮಹತಿ

ಕಂಗಳ ಬೆಳಗು ತಿಂಗಳ ಬೆಳಕಿದ್ದಂತೆ. ಅದು ಅಂತರಂಗವನ್ನು ಕಾಣಿಸುವ, ಬದುಕಿನ ಚೆಲುವನ್ನು ಕಾಣಿಸುವ ಬೆಳಕಿನ ಬೆಳಗು.

ಒಳಗನ್ನು ಸೂಚಿಸುವ ಕಂಗಳ ಬೆಳಗು, ಬದುಕನ್ನು ಮಾಗಿಸಲು ಅಗತ್ಯವಾದ ಅಧ್ಯಾತ್ಮವನ್ನೂ ಸೂಚಿಸುವಂತಹದ್ದು. ಈ ಸಾಧ್ಯತೆಯ ಮಾರ್ಗದಲ್ಲಿ ಬೇಂದ್ರೆ ಮತ್ತು ಮಧುರಚೆನ್ನರನ್ನು ಕೈದೀವಿಗೆಯಾಗಿಸಿಕೊಂಡು ನಡೆದಿರುವ ಕವಿ ಸತ್ಯಮಂಗಲ ಮಹಾದೇವ, ತಮ್ಮ ಕಂಗಳಿಗೆ ಕಂಡ ಬೆಳಗನ್ನು ಕೃತಿಯ ರೂಪದಲ್ಲಿ ಸಹೃದಯರ ಮುಂದಿರಿಸಿದ್ದಾರೆ.

‘ಕಂಗಳ ಬೆಳಗು’ ಬೇಂದ್ರೆ ಮತ್ತು ಮಧುರಚೆನ್ನರ ಕಾವ್ಯಗಳಲ್ಲಿನ ಅನುಭಾವದ ತೌಲನಿಕ ಅಧ್ಯಯನ. ಕನ್ನಡ ಜಗತ್ತಿನ ಉನ್ನತಿಗೆ ಕಾರಣವಾದ ಎರಡು ಚೇತನಗಳನ್ನು ಜೊತೆಗಿಟ್ಟು ನೋಡಿರುವ ಪ್ರೌಢ ಪ್ರಬಂಧ. ಬೇಂದ್ರೆ ಮತ್ತು ಮಧುರಚೆನ್ನರಿಬ್ಬರೂ ಅರವಿಂದರ ಪ್ರಭಾವಲಯಕ್ಕೆ ಆಕರ್ಷಿತರಾದವರು. ಕಾವ್ಯಮಾರ್ಗವನ್ನು ಲೌಕಿಕಕ್ಕೂ ಪಾರಮಾರ್ಥಕ್ಕೂ ಸಾಧನವೆಂದು ನಂಬಿದವರು. ಗೆಳೆಯರಾಗಿದ್ದುಕೊಂಡೂ ಕಾವ್ಯದಲ್ಲಿ ಚಿಂತನೆಯಲ್ಲಿ ಸ್ವಂತಿಕೆಯನ್ನು ಉಳಿಸಿಕೊಂಡವರು. ಈ ಇಬ್ಬರನ್ನು ಕನ್ನಡ ಸಾರಸ್ವತಲೋಕದ ಅನುಭಾವ ಪರಂಪರೆಯ ಎರಡು ಕಂಗಳೆಂದು ಭಾವಿಸುವುದಾದರೆ, ಆ ಕಣ್ಣುಗಳು ಸಹೃದಯರಿಗೆ ಕೊಟ್ಟ ಕಾಣ್ಕೆ ಯಾವ ಬಗೆಯದೆನ್ನುವ ಕುತೂಹಲದ ಶೋಧ ಇಲ್ಲಿದೆ.

ಈ ಅಧ್ಯಯನದ ಚೌಕಟ್ಟು ಕನ್ನಡದ ಇಬ್ಬರು ಮಹತ್ವದ ಕವಿಗಳಿಗಷ್ಟೇ ಸೀಮಿತವಾಗಿಲ್ಲ. ಬೇಂದ್ರೆ ಮತ್ತು ಮಧುರಚೆನ್ನ ಕೇಂದ್ರದಲ್ಲಿದ್ದರೂ ಮಹಾದೇವರ ಅಧ್ಯಯನ ವಚನಕಾರರು, ಹರಿಹರ, ರತ್ನಾಕರವರ್ಣಿಯಂಥ ಭಕ್ತಿಯನ್ನೇ ಶಕ್ತಿಯನ್ನಾಗಿಸಿಕೊಂಡ ಕವಿಗಳು, ಜನಮಾನಸವನ್ನು ಮುಟ್ಟಿದ ತತ್ವಪದಕಾರರು ಹಾಗೂ ಅವಧೂತರು ಸೇರಿದಂತೆ ಕನ್ನಡ ಕಾವ್ಯಪರಂಪರೆ ಅನುಭಾವದೊಂದಿಗೆ ನಡೆಸಿದ ಅನುಸಂಧಾನ ಯಾವ ಬಗೆಯದೆನ್ನುವುದರ ಕುರಿತೂ ಗಮನಹರಿಸಿದೆ. ಕಂಗಳ ಬೆಳಗಿನ ವ್ಯಾಪ್ತಿಯಲ್ಲಿ ಭಾರತೀಯ ಅಧ್ಯಾತ್ಮ ಚಿಂತಕರಾದ ಅರವಿಂದ, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ರಮಣ ಮಹರ್ಷಿ, ರವೀಂದ್ರನಾಥ ಟ್ಯಾಗೋರರು ಹಾಗೂ ಯೇಟ್ಸ್, ಖಲೀಲ್ ಗಿಬ್ರಾನ್‌ರಂಥ ಇಂಗ್ಲಿಷ್ ಕವಿಗಳ ಚಿಂತನೆಗಳೂ ಇವೆ. ಕನ್ನಡ ಕಾವ್ಯದ ಅನುಭಾವ ಪರಂಪರೆಯಲ್ಲಿನ ಕುವೆಂಪು ಮಾರ್ಗದ ನೋಟವೂ ಇದೆ.



ಕಂಗಳ ಬೆಳಗು
ಲೇ: ಡಾ. ಸತ್ಯಮಂಗಲ ಮಹಾದೇವ
ಪ್ರ: ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಬೆಂಗಳೂರು.
ಸಂ: 9740941126
ಪು: 292 ₹300

ಬೇಂದ್ರೆ ಮತ್ತು ಮಧುರಚೆನ್ನರ ಅನುಭಾವ ಕಾವ್ಯರಚನೆಗೆ ಒದಗಿದ ಪ್ರೇರಣೆ ಮತ್ತು ಪ್ರಭಾವಗಳನ್ನು ಚರ್ಚಿಸುವ ಕೃತಿ, ಇಬ್ಬರು ಕವಿಗಳ ನಡುವಿನ ಸಾದೃಶ್ಯ ಮತ್ತು ವೈದೃಶ್ಯಗಳನ್ನು ಚಿತ್ರಿಸಲೂ ಪ್ರಯತ್ನಿಸಿದೆ. ಕನ್ನಡ ಕಾವ್ಯ ಪರಂಪರೆಯ ಮೇಲೆ ಈ ಇಬ್ಬರು ಕವಿಗಳು ಬೀರಿರುವ ಪ್ರಭಾವದ ಚರ್ಚೆಯೂ ಇದೆ.

ಇಲ್ಲಿನ ಅಧ್ಯಾತ್ಮ, ಬದುಕನ್ನು ಲೋಕದಿಂದ ವಿಮುಖಗೊಳಿಸುವಂತಹದ್ದು ಅಲ್ಲ. ಬದುಕಿನ ಕುರಿತು ಪ್ರೀತಿಯನ್ನು ಹೆಚ್ಚಿಸುವಂತಹದ್ದು, ಸಮೂಹದ ಒಳಿತನ್ನು ಚಿಂತಿಸುವಂತಹದ್ದು. ಅಪಾರ ಜೀವನಪ್ರೀತಿಯನ್ನು ಒಳಗೊಂಡ ಕಾರಣದಿಂದಾಗಿಯೇ ಬೇಂದ್ರೆ–ಮಧುರಚೆನ್ನರ ಅಧ್ಯಾತ್ಮವನ್ನು ‘ಜನಪರ ಅಧ್ಯಾತ್ಮ’ ಎಂದು ಕರೆಯಬಹುದು.

ವಿಮರ್ಶೆ

ಅಧ್ಯಾತ್ಮವನ್ನು ಹೊರತುಪಡಿಸಿ, ಕೇವಲ ಕಾವ್ಯಕುತೂಹಲದ ದೃಷ್ಟಿಯಿಂದಲೂ ‘ಕಂಗಳ ಬೆಳಗು’ ಕೃತಿಯನ್ನು ಗಮನಿಸಬಹುದು. ಸಾಹಿತ್ಯದ ವಿದ್ಯಾರ್ಥಿಗಳಿಗೆ ಬೇಂದ್ರೆ ಮತ್ತು ಮಧುರಚೆನ್ನರ ಕಾವ್ಯಲೋಕದ ಹಲವು ರಸಘಟ್ಟಗಳ ಪರಿಚಯ ಕಂಗಳ ಬೆಳಗಿನ ಮೂಲಕ ಸಾಧ್ಯ. ಕಾವ್ಯದ ಕುರಿತ ಚರ್ಚೆ–ವಿಶ್ಲೇಷಣೆ ರೂಪದಲ್ಲೂ ಓದಬಹುದಾದ ಸಾಧ್ಯತೆ ಈ ಕೃತಿಯ ವಿಶೇಷವಾಗಿದೆ.

ಕಾವ್ಯ ಕುತೂಹಲಕ್ಕಷ್ಟೇ ಈ ಅಧ್ಯಯನ ಸೀಮಿತಗೊಂಡಿಲ್ಲ; ಕಾವ್ಯದ ಹಿಂದಿನ ಕವಿಗಳ ಬದುಕಿನ ಬಗ್ಗೆಯೂ ಗಮನಹರಿಸಿದೆ; ಬೇಂದ್ರೆ ಮತ್ತು ಮಧುರಚೆನ್ನರ ಬದುಕು, ವ್ಯಕ್ತಿತ್ವ, ಗೆಳೆತನಗಳ ಬಗ್ಗೆ ಅನೇಕ ವಿವರಗಳನ್ನು ದಾಖಲಿಸಿದೆ.

ಸತ್ಯಮಂಗಲ ಮಹಾದೇವ ಅವರು ಮುಟ್ಟಿದರೆ ಮಿಡಿಯುವ ಕವಿತೆಗಳಿಂದ ಸಹೃದಯರ ಗಮನಸೆಳೆದಿರುವ ಕವಿ. ಅವರ ಕವಿಮನಸ್ಸು ವಿಮರ್ಶೆಯಲ್ಲೂ ಇದೆ. ಕವಿಯೊಬ್ಬ ತನ್ನ ಪರಂಪರೆಯೊಂದಿಗೆ ನಡೆಸಿದ ಅನುಸಂಧಾನದಂತೆ, ವಿಹಾರದಂತೆ ಅವರ ಅಧ್ಯಯನವಿದೆ. ಬಹುತೇಕ ಪ್ರೌಢ ಪ್ರಬಂಧಗಳು ತಮ್ಮ ಗಾಂಭೀರ್ಯದಿಂದ ಹಾಗೂ ಅಕಡೆಮಿಕ್ ಚೌಕಟ್ಟಿನಿಂದ ಓದುಗರನ್ನು ದಣಿಸುತ್ತವೆ. ಕೆಲವೊಮ್ಮೆ ಹುಸಿ ಗಾಂಭೀರ್ಯ ಹಾಗೂ ಹೇಳಿಕೆಗಳ ಜೋಡಣೆಯಲ್ಲೇ ಮುಗಿದುಹೋಗುತ್ತವೆ. ಮಹಾದೇವ ಅವರ ಕಥನವೂ ಅಕಡೆಮಿಕ್ ಚೌಕಟ್ಟಿನಿಂದ ಹೊರತಾಗಿಲ್ಲ. ಆದರೆ, ಹುಸಿ ಗಾಂಭೀರ್ಯ ಇಲ್ಲಿಲ್ಲ. ಕಾವ್ಯದ ಕುರಿತ ವಿಶ್ಲೇಷಣೆಯ ಸಂದರ್ಭದಲ್ಲಿ ಲೇಖಕನೊಳಗಿನ ಕವಿ ಮುನ್ನೆಲೆಗೆ ಬರುವುದು ಕೃತಿಯ ಹೊಳಪನ್ನು ಹೆಚ್ಚಿಸಿರುವ ಸಂಗತಿಯಾಗಿದೆ.

‘ಬೆಳಕಿನ ಸಾಂಗತ್ಯದಿಂದ ತಾಯ ಸೆರಗ ಹಿಡಿದೆವು / ಬೆಳಕಿನಿಂದ ಬಂದೆವಣ್ಣ ಬೆಳಕಿನತ್ತ ನಡೆದೆವು’ ಎನ್ನುವ ಬೇಂದ್ರೆಯವರ ಸಾಲುಗಳನ್ನೇ ಅವರು ಮತ್ತು ಮಧುರಚೆನ್ನರ ಬದುಕು, ದರ್ಶನಕ್ಕೆ ಉದಾಹರಿಸಬಹುದು. ಬೆಳಕಿನಿಂದ ಬಂದವರು ಬೆಳಕಿನತ್ತ ನಡೆದುದಷ್ಟೇ ಅಲ್ಲದೆ, ಬೆಳಕೇ ಆಗಿಹೋದ ‘ಸಾರಸ್ವತ ಜಾದೂ’ವನ್ನು ಚಿತ್ರಿಸುವ ಹಂಬಲದ ಪ್ರಯತ್ನದ ರೂಪದಲ್ಲಿ ‘ಕಂಗಳ ಬೆಳಗು’ ಮುಖ್ಯವೆನ್ನಿಸುತ್ತದೆ.

‘ಕೆಂಪು’ ಬಣ್ಣವೊಂದು ಕಂಡ ಬದುಕು ಹಲವು

ಅಭಿಲಾಷ್ ಪಿ.ಎಸ್

‘ಕೆಂಪು ಮತ್ತು ಇತರ ಬಹುಮಾನಿತ ಕತೆಗಳು’ ಅರ್ಪಣ ಎಚ್.ಎಸ್. ಅವರ ಮೊದಲ ಕೃತಿ. ವಿವಿಧ ಪತ್ರಿಕೆಗಳ ಕಥಾಸ್ಪರ್ಧೆಯಲ್ಲಿ ಬಹುಮಾನ, ಮೆಚ್ಚುಗೆ ಪಡೆದ ಕಥೆಗಳ ಸಂಕಲನವಿದು. ಇಲ್ಲಿನ ದಶ ಕಥೆಗಳಲ್ಲಿ ಹರಡಿಕೊಂಡಿರುವ ಕಥಾಹಂದರ ದಶದಿಕ್ಕುಗಳಿಗೂ ಚಾಚುವಂಥದ್ದು.

‘ಧರ್ಮ’, ‘ಭಾಷೆ’ ಪ್ರಸ್ತುತ ಹೆಚ್ಚು ಚರ್ಚೆಯಲ್ಲಿರುವ, ವಿವಾದಕ್ಕೆ ಒಳಗಾಗುತ್ತಿರುವ ಪದಗಳು. ಸಾಂಸ್ಕೃತಿಕ ಅಂಗಳಕ್ಕೂ ಧರ್ಮದ ವಿವಾದ ಕಾಲಿಟ್ಟಿರುವ ಈ ಸಂದರ್ಭದಲ್ಲಿ ಉದ್ಭವಿಸಿರುವ ಸನ್ನಿವೇಶವನ್ನು ಕಥೆಗಾರ್ತಿ ಅರ್ಪಣ ಅವರು ಮೊದಲೇ ಊಹಿಸಿದಂತಿದೆ. ‘ಕೆಂಪು’ ಕಥಾಸಂಕಲನದಲ್ಲಿನ ‘ಜಬ್ಬಾರ್’ ಕಥೆಯು ಈಗಿನ ಸಂದರ್ಭಕ್ಕೆ ಯಾಕೋ ತುಂಬಾ ಹತ್ತಿರದಲ್ಲಿ ಹೋಲಿಕೆಯಾಗುತ್ತದೆ. ಮತಾಂತರ, ಧರ್ಮ ದ್ವೇಷ, ಅಂತರಧರ್ಮೀಯ ವಿವಾಹದ ಘಟನಾವಳಿಗಳು ಸುರುಳಿಯಾಗಿ ಬಿಚ್ಚಿಕೊಳ್ಳುತ್ತವೆ. ಹವ್ಯಕ ಹುಡುಗ ಹಾಗೂ ಬ್ಯಾರಿ ಹುಡುಗಿಯ ನಡುವೆ ಚಿಗುರೊಡೆದ ಪ್ರೀತಿ, ‘ಜಬ್ಬಾರ್–ಗಣಪತಿ ಹೆಗಡೆ’ಯ ಒಳಗಿನ ಸಂಘರ್ಷವನ್ನು ಎಳೆಎಳೆಯಾಗಿ ಹರಡಿದೆ. ಒಡೆದ ಚಿಗುರೊಂದು ಕಥೆ ಅಂತ್ಯವಾಗುತ್ತಾ ಬೋಧಿವೃಕ್ಷವಾಗಿ ಬೆಳೆಯುತ್ತದೆ. ‘ಕೆಂಪು’ ಬೆಳಕೊಂದು ಕಥೆಗೆ ತಿರುವು ನೀಡುತ್ತದೆ.

ಮೌನವೂ ಮಾತಿಗೆ ಜನ್ಮನೀಡಿದಾಗ ‘ಪುನರಾರಂಭ’ವಾಗುತ್ತದೆ. ಈ ಕಥೆಯಲ್ಲಿ ‘ಅವಳು’ ಮತ್ತು ‘ಅವನು’ ಎಂಬೆರಡು ಪಾತ್ರ ಚಿರತೆಯಂತೆ ಓಡುವ ನಗರ ಜೀವನ, ಅಲ್ಲಿನ ತಳಮಳವನ್ನು ಪ್ರತಿನಿಧಿಸುತ್ತವೆ. ಮೌನವೆಂಬ ಅಸ್ತ್ರ ಅದೆಷ್ಟೋ ವಿಚ್ಛೇದನಗಳಿಗೆ ಕಾರಣವಾಗಿದೆ. ಈ ಕಥೆಯಲ್ಲೂ ಕಾಲ ಚಕ್ರದಲ್ಲಿ ಸಿಲುಕಿದ ಯುವಜೋಡಿಯ ನಡುವೆ ಮಾತು ಹೆಪ್ಪುಗಟ್ಟಿತ್ತು. ಮಾತಿನ ದಾಹ ತೀರಿಸಲು ‘ಕೆಂಪು’ ದೀಪದ ಸಿಗ್ನಲ್ ಬಿದ್ದಿತ್ತು! ಬಹಳ ವರ್ಷಗಳ ನಂತರ ಮೌನ ಮುರಿದಿತ್ತು ಮಾತು ಶುರುವಾಗಿತ್ತು. ‘ಅವಳು’ ಮತ್ತು ‘ಅವನು’ ಒಬ್ಬರಿಗೊಬ್ಬರು ಕಿವಿಯಾಗಿದ್ದರು. ‘ಫೀನಿಕ್ಸ್’ ಕಥೆಯಲ್ಲೂ ಇಂಥ ಜೋಡಿಯೊಂದು ‘ಕೆಂಪು’ ಯೋಚನೆಗಳ ಪ್ರವಾಹಕ್ಕೆ ಸಿಲುಕಿ ಒದ್ದಾಡಿ, ಇನ್ನೇನು ಮುಳುಗುತ್ತೇವೆ ಎನ್ನುವ ಸಂದರ್ಭದಲ್ಲಿ ಅರ್ಥಗಳನ್ನು ಯೋಚಿಸದೆ ಮತ್ತೆ ಬಿಸಿಯುಸಿರಾದ ಬಗೆಯು, ಕಥೆಯ ಕಟ್ಟುವಿಕೆಯನ್ನು ಗಾಢವಾಗಿಸಿದೆ. ‘ಅವನು’, ‘ಅವಳು’ ಇಲ್ಲೂ ಪಾತ್ರಗಳಿಗೆ ಜೀವತುಂಬುವವರು.



ಕೆಂಪು ಹಾಗೂ ಇತರ ಬಹುಮಾನಿತ ಕತೆಗಳು
ಲೇ: ಅರ್ಪಣ ಎಚ್.ಎಸ್
ಪ್ರ: ಟೆಕ್ ಫಿಜ್ ಇಂಕ್, ಬೆಂಗಳೂರು
ಸಂ: 9480035877
ಪು: 118 ₹120


ಅವಲೋಕನ

ಇನ್ನು ಕೃತಿ ಶೀರ್ಷಿಕೆಯಲ್ಲಿ ಬರುವ ‘ಕೆಂಪು’. ಈ ಕಥೆಯಲ್ಲಿ ಮುಟ್ಟಿನ ಅನುಭವ, ಯಾತನೆಯನ್ನು ‘ಲಕ್ಷ್ಮಿ’ ಎಂಬ ಪಾತ್ರದ ಮುಖೇನ ಲೇಖಕಿ ಕಟ್ಟಿದ್ದಾರೆ. ಹದಿಹರೆಯದ ಹುಡುಗಿಯ ಹೆಣ್ತನದ ಅರಿವು, ಆ ಕ್ಷಣದಲ್ಲಿನ ಆತಂಕ, ‘ಕೆಂಪು’ ಕನಸು, ಮುಜುಗರವನ್ನು ಗೆಳತಿಯರ ಅನುಭವದೊಂದಿಗೆ ಬೆರೆಸಿ ಕಟ್ಟಿಕೊಡಲಾಗಿದೆ. ಮುಗ್ಧತೆಯ ಸ್ಪರ್ಶವೂ ಇಲ್ಲಿದೆ. ಜೊತೆಗೆ ವಾಸ್ತವವೆಂಬಂತೆ ಈಗಲೂ ಹಲವು ಸರ್ಕಾರಿ ಶಾಲೆಗಳಲ್ಲಿ ಇರುವ ಮೂಲಸೌಕರ್ಯದ ಕೊರತೆಯನ್ನೂ ಕಥೆ ಉಲ್ಲೇಖಿಸಿದೆ.

ಹೀಗೆ ಇಲ್ಲಿನ ಹತ್ತೂ ಕಥೆಗಳು ವಿಭಿನ್ನ ಆಯಾಮದಲ್ಲಿ ಸಾಗುತ್ತವೆ. ಬಳಸಿದ ಭಾಷೆ, ಕಥೆ ಕಟ್ಟುವಿಕೆ, ಬದುಕಿಗೆ ಹತ್ತಿರವಾಗುವ ಪಾತ್ರಗಳು, ಅವುಗಳ ನಡುವೆ ನಡೆಯುವ ಸಂಭಾಷಣೆ, ಅದು ಹೊರಸೂಸುವ ಅರ್ಥ, ಕಥೆಯ ಓಟಕ್ಕೆ ಪೂರಕವಾಗಿ ಒದಗಿಬಂದಿವೆ.

ಕಥೆ

ಮುನವ್ವರ್ ಜೋಗಿಬೆಟ್ಟು ಅವರ



ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ಶಂಕರ್ ಸಿಹಿಮೊಗೆ ಅವರ

‘ಕೊಳ ಮತ್ತು ಕಲ್ಲು’

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry


ತುಳುನಾಡಿನ ಮೂರಿಗಳ ಜಗತ್ತು

ಪುರುಷೋತ್ತಮ ಬಿಳಿಮಲೆ

ಕಳೆದ ಸುಮಾರು 150 ವರ್ಷಗಳಿಂದ ತುಳು ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಕುರಿತು ಮಹತ್ವದ ಸಂಶೋಧನೆಗಳು ನಡೆದಿವೆ. ಸಂಗ್ರಹ ಮತ್ತು ವಿಶ್ಲೇಷಣೆಗಳು ಜೊತೆ ಜೊತೆಯಾಗಿ ಸಾಗಿವೆ. ಇದರಲ್ಲಿ ಹೆಚ್ಚಿನ ಕೆಲಸಗಳು ತುಳುನಾಡಿನ ಭೂತಾರಾಧನೆ ಮತ್ತು ಯಕ್ಷಗಾನಗಳ ಕುರಿತೇ ನಡೆದಿವೆ. ಇದರಿಂದಾಗಿ ಇತರ ಜನಪದ ಪ್ರಕಾರಗಳು ಗಂಭೀರವಾದ ಅಧ್ಯಯನ ಮತ್ತು ವೈಜ್ಞಾನಿಕ ಸಂಗ್ರಹಗಳ ವ್ಯಾಪ್ತಿಯಿಂದ ಹೊರಗುಳಿದುವು. ತುಳುವ ಅಧ್ಯಯನಗಳ ಈ ಮಿತಿಯನ್ನು ಮೀರುವ ಪ್ರಯತ್ನವೊಂದನ್ನು ರಾಜಶ್ರೀ ಟಿ. ರೈ ಅವರು ಈ ಪುಸ್ತಕದ ಮೂಲಕ ಮಾಡಿದ್ದಾರೆ.

‘ಮೂರಿ’ ಪದವು ಸ್ಥೂಲವಾಗಿ ತುಳುವಿನಲ್ಲಿ ‘ವಾಸನೆ’ ಎಂಬರ್ಥದಲ್ಲಿ ಪ್ರಚಲಿತದಲ್ಲಿರುವುದು ಹೌದಾದರೂ ಅದಕ್ಕೊಂದು ಧಾರ್ಮಿಕ ಆಯಾಮ ಇರುವುದು ಬಹಳ ಜನಕ್ಕೆ ಗೊತ್ತಿರಲಿಲ್ಲ. ರಾಜಶ್ರೀ ಅವರು ಮಂಗಳೂರು ಮತ್ತು ಕಾಸರಗೋಡು ಪರಿಸರಗಳಲ್ಲಿ ವ್ಯಾಪಕವಾಗಿ ಕ್ಷೇತ್ರಕಾರ್ಯ ನಡೆಸಿ, ಅತ್ಯಮೂಲ್ಯ ಮಾಹಿತಿಗಳನ್ನು ಸಂಗ್ರಹಿಸಿ, ‘ಮೂರಿ ಎನ್ನುವುದು ದ್ರಾವಿಡ ಮೂಲದ ಶಬ್ದ. ಮಣ್ಣು ಮತ್ತು ಮಣ್ಣಿಂದ ಮಾಡಿದ ಮಡಕೆಗಳು ತಮ್ಮ ವಿಶಿಷ್ಟ ಆಕೃತಿ ಮತ್ತು ಕಾರಣಗಳಿಂದ ದೈವಗಳಾಗಿ ಆರಾಧನೆಗೊಳ್ಳುತ್ತವೆ’ ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

1992ರಷ್ಟು ಹಿಂದೆ ಪ್ರಕಟವಾದ ಎ.ವಿ. ನಾವಡ ಮತ್ತು ಗಾಯತ್ರಿ ನಾವಡ ಸಂಪಾದನೆಯ ‘ಕಾಡ್ಯನಾಟ’ ಪುಸ್ತಕದಲ್ಲಿಯೂ ಮೇರ ಸಮುದಾಯದವರ ಮಡಕೆಗಳ ಆರಾಧನೆಯ ಕುರಿತು ಸಾಕಷ್ಟು ಮಾಹಿತಿಗಳಿದ್ದುವು. ಆದರೆ ಆ ಸಂಶೋಧನೆ ಯಾಕೋ ಮತ್ತೆ ಮುಂದುವರಿಯಲಿಲ್ಲ. ರಾಜಶ್ರೀಯವರ ಪ್ರಸ್ತುತ ಸಂಶೋಧನೆಯು ಆ ಅಂಶಗಳನ್ನು ಮತ್ತಷ್ಟು ವಿಸ್ತರಿಸುತ್ತದೆ.



ತುಳುನಾಡಿನ ಮೂರಿಗಳ ಆರಾಧನೆ
ಲೇ: ರಾಜಶ್ರೀ ಟಿ. ರೈ ಪೆರ್ಲ
ಪ್ರ: ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ
ಸಂ:8547947876
ಪು: 220 ₹150

ಒಳನೋಟ

ನಾವಡ ದಂಪತಿಯು ತಮ್ಮ ಪುಸ್ತಕದಲ್ಲಿ ನೀಡಿದ ದಲಿತ ಹೊನ್ನಿಯ ಕತೆಯು ಬಹಳ ಅರ್ಥಪೂರ್ಣವಾಗಿದ್ದು, ಅದರಲ್ಲಿ ಆಕೆಗೆ ಕಾಡಲ್ಲಿ ಮೂರು ಮಡಕೆಗಳು ದೊರೆಯುತ್ತವೆ. ಅದರಲ್ಲಿ ಮೊದಲನೆಯದಾದ ಚಿನ್ನದ ಮಡಕೆಯು ಅಡಿಗರಿಗೂ, ಎರಡನೆಯದಾದ ತಾಮ್ರದ ಮಡಕೆಯು ಒಡೆಯರಿಗೂ, ಕೊನೆಯದಾದ ಮಣ್ಣಿನ ಮಡಕೆಯು ಸ್ವತಃ ಆಕೆಗೂ ದೊರಕುತ್ತದೆ. ಇದು ಮಣ್ಣು ಮತ್ತು ಮೂಲನಿವಾಸಿ ದಲಿತರ ನಡುವಣ ಸಂಬಂಧಕ್ಕೆ ಒಂದು ರೂಪಕವಾಗಿ ಕೆಲಸ ಮಾಡುತ್ತದೆ. ಇಂಥ ಹಲವು ಅಂಶಗಳನ್ನು ಹೊಸ ಮಾಹಿತಿಗಳ ಮೂಲಕ ಗುರುತಿಸುವ ರಾಜಶ್ರೀಯವರು, ಮೂರಿ ದೈವಗಳ ಪರಿಕಲ್ಪನೆ, ವೈವಿಧ್ಯ, ಭೌತಿಕ ಸ್ವರೂಪ, ಆರಾಧನೆಯು ಕಂಡು ಬರುವ ಪ್ರದೇಶಗಳು, ಪಾಡ್ದನಗಳಲ್ಲಿ ಉಲ್ಲೇಖಿತವಾದ ಆರಾಧನಾ ಕೇಂದ್ರಗಳು, ಮೂರಿ ಕಥನಗಳು, ಮತ್ತು ದೈವಾರಾಧನೆಯ ಜೊತೆಗೆ ಇವಕ್ಕಿರುವ ಸಂಬಂಧಗಳನ್ನು ಇಲ್ಲಿ ವಿವರವಾಗಿ ಮಂಡಿಸಿದ್ದಾರೆ.

ಪುಸ್ತಕದ ಕೊನೆಯಲ್ಲಿ ನೀಡಲಾದ 140ಕ್ಕೂ ಹೆಚ್ಚಿನ ವರ್ಣಚಿತ್ರಗಳು ಅಮೂಲ್ಯವಾಗಿವೆ. ಡಾ. ವಿವೇಕ ರೈ ಅವರು ಮುನ್ನುಡಿಯಲ್ಲಿ ಹೇಳಿರುವಂತೆ: ‘ಈ ಅಧ್ಯಯನ ಗ್ರಂಥವು ತುಳುಜಾನಪದ ಸಂಶೋಧನೆಗೆ ಹೊಸತೊಂದು ಆಯಾಮ ಕೊಡಲು ಶಕ್ತವಾಗಿದೆ. ಸೂಕ್ಷ್ಮವಾದ ಮತ್ತು ವ್ಯಾಪಕವಾದ ಕ್ಷೇತ್ರಕಾರ್ಯವು ಈ ಗ್ರಂಥದ ಒಂದು ಮುಖ್ಯವಾದ ಗಟ್ಟಿ ನೆಲೆಯಾಗಿದೆ. ಇವರು ನಡೆಸಿದ ವಿಶ್ಲೇಷಣೆ ಮತ್ತು ಮಂಡಿಸಿದ ಸಂಶೋಧನಾ ಪ್ರಮೇಯಗಳನ್ನು ಇನ್ನಷ್ಟು ವಿವೇಚಿಸಿ ಮುಂದುವರೆಸಲು ಉತ್ತಮ ಅವಕಾಶಗಳಿವೆ’.


‘ಮೂರ’ಗಳ ಆರಾಧನೆಯಂಥ ಹಲವು ಆಚರಣೆಗಳನ್ನು ಇವತ್ತು ನಾವು ಚಾರಿತ್ರಿಕವಾಗಿ ಮತ್ತು ಸಮಾಜಶಾಸ್ತ್ರೀಯವಾಗಿ ಅಧ್ಯಯನಕ್ಕೆ ಒಳಪಡಿಸಬೇಕಾದ ಅವಶ್ಯಕತೆಯಿದೆ. ಪ್ರಸ್ತುತ ಪುಸ್ತಕವು ಅಂಥ ಅಧ್ಯಯನಗಳಿಗೆ ಬೇಕಾದ ನೆಲೆಗಟ್ಟೊಂದನ್ನು ಒದಗಿಸಿಕೊಟ್ಟಿದೆ.

ಮೊದಲ ಓದು

ವ್ಯಾಸ ಮಹಾಭಾರತ ಸರಳ ಗದ್ಯಕಥನ

ಜನಜೀವನದ ಜೊತೆಗೆ ಹಾಸುಹೊಕ್ಕಾಗಿರುವ ಧರ್ಮಗ್ರಂಥ ಮಹಾಭಾರತ. ಮಹಾಕಾವ್ಯವೂ ಹೌದು. ಈ ಪೌರಾಣಿಕ ಕಥನ ಈಗಾಗಲೇ ಭಾರತದ ವಿವಿಧ ಭಾಷೆಗಳಲ್ಲಿ ಪುನರ್‌ಸೃಷ್ಟಿಯಾಗಿದೆ. ಹಳಗನ್ನಡದಿಂದ ಹೊಸಗನ್ನಡದಲ್ಲೂ ಇದರ ಮೇಲೆ ಕೃತಿಗಳು ರಚನೆಯಾಗಿವೆ. ಈ ಸಾಲಿಗೆ ಸೇರ್ಪಡೆಯಾಗುವ ಕೃತಿ ಕನ್ನಡದಲ್ಲಿ ಇತ್ತೀಚೆಗೆ ಪ್ರಕಟವಾದ ‘ವ್ಯಾಸ ಮಹಾಭಾರತ: ಸಂಕ್ಷಿಪ್ತ ಸರಳ ಗದ್ಯಕಥನ’. ನಾಲ್ಕು ದಶಕಗಳಿಂದ ಅನುವಾದಿತ, ಪೌರಾಣಿಕ ಕೃತಿ ಮತ್ತು ಚಾರಿತ್ರಿಕ ಕಾದಂಬರಿಗಳ ರಚನೆ ಮೂಲಕ ಹೆಜ್ಜೆಗುರುತು ಮೂಡಿಸಿರುವ ಸು.ರುದ್ರಮೂರ್ತಿ ಶಾಸ್ತ್ರಿ ಅವರ ಇತ್ತೀಚಿನ ಕೃತಿ ಇದು.

ವ್ಯಾಸಭಾರತವು ಮೂಲ ಮಹಾಭಾರತವೆಂದು ಪ್ರಚಲಿತದಲ್ಲಿದೆ. ಲೇಖಕರೇ ಹೇಳಿರುವಂತೆ ಇದು ಮೂಲಕೃತಿಯ ಸರಳ ರೂಪ. ಒಟ್ಟು 18 ಪರ್ವಗಳಲ್ಲಿ (ಆದಿಪರ್ವದಿಂದ ಸ್ವರ್ಗಾರೋಹಣ ಪರ್ವ) ಬರುವ ಮಹಾಭಾರತದ ಕಥನಗಳನ್ನು ರುದ್ರಮೂರ್ತಿ ಶಾಸ್ತ್ರಿ ಹೊಸಗನ್ನಡದಲ್ಲಿ ಅಚ್ಚುಕಟ್ಟಾಗಿ ದಾಖಲಿಸಿದ್ದಾರೆ. ಮೂಲಕೃತಿಗೆ ಧಕ್ಕೆ ಭಾರದಂತೆ, ಜೊತೆಗೆ ಯಾವುದೇ ಕಥಾ ಭಾಗವನ್ನು ಬಿಡದೇ ಸಂಗ್ರಹಿಸಿಕೊಟ್ಟಿರುವ ಶ್ರಮ ಮೆಚ್ಚುವಂಥದ್ದು. ಪಾತ್ರಗಳ ಕಥೆಗಳನ್ನೂ, ಪ್ರಸಂಗಗಳನ್ನು ಆಸಕ್ತಿಯಿಂದ ಓದಿಸಿಕೊಂಡು ಹೋಗುವ ರೀತಿಯಲ್ಲಿರುವಂತೆ ಲೇಖಕರು ಎಚ್ಚರಿಕೆ ವಹಿಸಿದ್ದಾರೆ. ಕೃತಿಯ ಕೆಲವು ಕಡೆ ಇರುವ ರೇಖಾಚಿತ್ರಗಳು (ಕಲಾವಿದ ಸುಧಾರಕ ದರ್ಬೆ) ಕಥೆಗಳಿಗೆ ಶೋಭೆ ಮೂಡಿಸಿವೆ. ಮಹಾಭಾರತದ ಬಗ್ಗೆ ತಿಳಿದುಕೊಳ್ಳುವ ಆಸಕ್ತ ಓದುಗರಿಗೆ ಇದು ಉಪಯುಕ್ತ ಕೃತಿಯಾಗಬಲ್ಲದು.



ವ್ಯಾಸ ಮಹಾಭಾರತ
ಲೇ: ರುದ್ರಮೂರ್ತಿ ಶಾಸ್ತ್ರಿ
ಪ್ರ: ಐಬಿಎಚ್ ಪ್ರಕಾಶನ
ಸಂ: 9845070613
ಪು: 992 ₹950

ಗಡಿನಾಡ ‘ವಿಕಾಸ’ಕ್ಕೆ ಒಳನಾಡ ಬಲ

ವಿಕ್ರಂ ಕಾಂತಿಕೆರೆ



ಮಾಯಿಪ್ಪಾಡಿ ಅರಮನೆಗೆ ಕೇರಳದಿಂದ ಬಂದ ಜಟ್ಟಿಯೊಬ್ಬ ತನ್ನನ್ನು ಸೋಲಿಸುವವರಿದ್ದರೆ ಮುಂದೆ ಬರಲಿ ಎಂದು ಸವಾಲೆಸೆದಿದ್ದ. ಮರುದಿನ ಕಾಳಗಕ್ಕೆ ವೇದಿಕೆ ಸಜ್ಜಾಯಿತು. ಅತಿಥಿ ಜಟ್ಟಿಗೂ ಅರಮನೆಯ ಜಟ್ಟಿಗೂ ರಾತ್ರಿ ಒಂದೇ ಕೊಠಡಿಯಲ್ಲಿ ಊಟಕ್ಕೆ ವ್ಯವಸ್ಥೆಯಾಗಿತ್ತು. ಅರಮನೆಯ ಜಟ್ಟಿ ಎಳ್ಳು ಬೇಕು ಎಂದ. ಎಳ್ಳು ಬಂತು. ಎಲ್ಲರೆದುರು ಅದನ್ನು ಮುಷ್ಟಿಯಲ್ಲಿ ಹಿಂಡಿ ಎಣ್ಣೆ ಮಾಡಿ ಅನ್ನಕ್ಕೆ ಹಾಕಿ ಊಟ ಮಾಡಿದ. ಕೇರಳದಿಂದ ಬಂದ ಜಟ್ಟಿ ರಾತ್ರೋರಾತ್ರಿ ಪರಾರಿಯಾಗಿದ್ದ!

ಅಹಂ ಹೊತ್ತು ಬಂದಿದ್ದವನನ್ನು ಹೀಗೆ ಸುಲಭವಾಗಿ ಮಣಿಸಿದಾತ ಪುಳ್ಕೂರು ಬಾಚ. ಬಲವಂತನೂ ಪರಾಕ್ರಮಿಯೂ ಆಗಿದ್ದ ಬಾಚನ ಕುರಿತ ಕಥೆಗಳು ಅನೇಕ ಇವೆ. ಕೇರಳದ ನಾಲ್ಕನೇ ತರಗತಿಗೆ ಒಮ್ಮೆ ಈತನ ವಿಷಯ ಪಠ್ಯವೂ ಆಗಿತ್ತು. ಯಕ್ಷಗಾನ ಪ್ರಸಂಗಗಳೂ ಬಾಚನ ಹೆಸರಿನಲ್ಲಿವೆ. ಪುಳ್ಕೂರು ಬಾಚ ಎಂಬ ಪುಸ್ತಕವೂ ರಚನೆಯಾಗಿದೆ.

ಹೌದು, ಕಾಸರಗೋಡಿನ ಪ್ರಸಿದ್ಧ ಮಧೂರು ದೇವಸ್ಥಾನದ ಹತ್ತಿರುವಿರುವ ಪುಳ್ಕೂರು ಎಂಬಲ್ಲಿನ ಬಾಚನ ಕುರಿತು ಸ್ಥಳೀಯರಲ್ಲಿ ಬಹುತೇಕರಿಗೆ ಇಂಥ ಮಾಹಿತಿಗಳು ಗೊತ್ತು. ಮಾಯಿಪ್ಪಾಡಿ ಮನೆತನದ ಇತಿಹಾಸ ಓದಿದವರಿಗೂ ಬಾಚನ ವಿಚಾರ ಹೊಸತಲ್ಲ. ಕೂಡ್ಲು ಗೋಪಾಲಕೃಷ್ಣ ದೇವಸ್ಥಾನದ ಎದುರು ಇರುವ ಆಳೆತ್ತರದ ಶಿಲಾಶಾಸನ ನೋಡಿದವರಿಗೂ ಬಾಚನ ಬಗ್ಗೆ ತಿಳಿದುಕೊಳ್ಳುವ ಅವಕಾಶದ ಬಾಗಿಲು ತೆರೆಯುತ್ತದೆ.

ಅಷ್ಟಕ್ಕೇ ಸೀಮಿತನಾಗಿದ್ದ ಬಾಚ ಈಗ ಕರ್ನಾಟಕದಾದ್ಯಂತ ಪ್ರಚಾರ ಪಡೆದಿದ್ದಾನೆ. ಬೆಂಗಳೂರಿನ ವಿಕಾಸ ಟ್ರಸ್ಟ್‌ನ ‘ಕಾಸರಗೋಡು ಕನ್ನಡ ವಿಕಾಸ ಮಾಹಿತಿ’ಯ ಜಾದೂ ಇದು. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಸದ್ದಿಲ್ಲದೆ ನಡೆದ ವಿಕಾಸ ಟ್ರಸ್ಟ್‌ನ ಅಭಿಯಾನ ಈಗ ವಿಧಾನಸೌಧದಿಂದ ಹಿಡಿದು ರಾಜ್ಯದ ಮೂಲೆಮೂಲೆಗೆ ತಲುಪಿದೆ. ವಿಶೇಷವಾಗಿ ಬೆಂಗಳೂರಿನಲ್ಲಿ ಹೊರನಾಡು ಮತ್ತು ಒಳನಾಡು ಕನ್ನಡಿಗರನ್ನು ರೋಮಾಂಚನಗೊಳಿಸಿದೆ.

ವಿಕಾಸ ಮಾಹಿತಿಯಲ್ಲಿ ಕಾಸರಗೋಡಿಗೆ ಸಂಬಂಧಿಸಿದ 75 ಮಾಹಿತಿ ತುಣುಕುಗಳಿವೆ. ಒಂದೆರಡು ನಿಮಿಷಗಳಲ್ಲಿ ಓದಿ ಮುಗಿಸಬಹುದಾದ ಸಣ್ಣ ಲೇಖನಗಳಿವು. ಆದರೆ ‘ಕಿರಿದರೊಳ್ ಹಿರಿದು’ ಹೇಳುವ ಮಾಹಿತಿಯ ಹೂರಣಗಳು. ಕಯ್ಯಾರ ಕಿಞ್ಞಣ್ಣ ರೈ, ಯು.ಪಿ.ಕುಣಿಕುಳ್ಳಾಯ, ಪುಂಡೂರು ವೆಂಕಟರಾಜ ಪುಣಿಂಚತ್ತಾಯ ಮುಂತಾಗಿ ಕನ್ನಡಕ್ಕಾಗಿ ಹೋರಾಡಿದ, ಕನ್ನಡದ ಸೇವೆ ಮಾಡಿದವರ ವ್ಯಕ್ತಿಚಿತ್ರಗಳು, ಮಧೂರು, ಮಲ್ಲ, ಕಣಿಪುರ ದೇವಸ್ಥಾನ, ಮಾಲಿಕ್ ದೀನಾರ್ ಮಸೀದಿ, ಬೇಳ ಚರ್ಚ್ ಮತ್ತಿತರ ದೇವಾಲಯಗಳ, ಮಠಗಳ ಮಾಹಿತಿ, ಸಿಪಿಸಿಆರ್‌ಐ, ಕೇಂದ್ರೀಯ ವಿದ್ಯಾಲಯ, ಐಎಡಿ ಸೇರಿದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪ್ರಮುಖ ಸಂಸ್ಥೆಗಳ ವಿವರ, ಅಮೃತಧಾರಾ ಗೋಶಾಲೆ, ತಳಂಗರೆ ಶಿಲಾಶಾಸನ, ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘ, ಕಾಸರಗೋಡು ಗಿಡ್ಡ ತಳಿ, ಪೆರ್ಲ ಕೈಮಗ್ಗ, ತೊರೆಗೆ ಅಡ್ಡಲಾಗಿ ಕಟ್ಟುವ ಕಟ್ಟಗಳು, ನೀರಿನ ಸೆಲೆಯ ಸುರಂಗಗಳು, ಪೊಸಡಿ ಗುಂಪೆಯಂಥ ಪ್ರೇಕ್ಷಣೀಯ ಸ್ಥಳಗಳು, ನದಿಗಳು, ಕಂಬಳ, ನರಕ ಸೃಷ್ಟಿಸಿದ ಎಂಡೋಸಲ್ಫಾನ್... ಹೀಗೆ ಇದರಲ್ಲಿ ಏನುಂಟು, ಏನಿಲ್ಲ...



ಇನ್ನಷ್ಟು ವಿಸ್ತಾರಕ್ಕೆ ವಿಕಾಸ



ಮಾಹಿತಿ ಕೊರತೆ ನೀಗಬೇಕು, ಕಾಸರಗೋಡಿನ ಒಟ್ಟಾರೆ ಅಭಿವೃದ್ಧಿ ಆಗಬೇಕು ಎಂಬ ಉದ್ದೇಶದಿಂದ ಶುರು ಮಾಡಿದ ವಿಕಾಸ ಟ್ರಸ್ಟ್‌ನ ಕಾರ್ಯಕ್ರಮಗಳನ್ನು ಇನ್ನಷ್ಟು ನಗರಗಳಿಗೆ ವಿಸ್ತರಿಸುವ ಯೋಜನೆ ಇದೆ. ಚೆನ್ನೈ ಮತ್ತು ಮುಂಬೈಯಲ್ಲಿ ಸದ್ಯದಲ್ಲೇ ಕೆಲಸಗಳು ಆರಂಭಗೊಳ್ಳಲಿವೆ. ಬೆಂಗಳೂರಿನಲ್ಲಿ 4 ಸಾವಿರಕ್ಕೂ ಹೆಚ್ಚು ಮಂದಿ ಕಾಸರಗೋಡಿನವರಿದ್ದಾರೆ. ಅನೇಕರು ಇಲ್ಲಿ ಬದುಕು ಕಟ್ಟಿಕೊಳ್ಳಲು ಹವಣಿಸುತ್ತಿದ್ದಾರೆ. ಅವರಿಗೆ ಎಲ್ಲ ರೀತಿಯ ನೆರವು ನೀಡಲು ಟ್ರಸ್ಟ್ ಸಿದ್ಧ. ಮಾಹಿತಿ ಅಭಿಯಾನ ಪೋಸ್ಟರ್, ಕಾಸರಗೋಡಿನ ಸ್ಥಳನಾಮಗಳನ್ನು ಒಳಗೊಂಡ ನಕಾಶೆ ಇತ್ಯಾದಿ ಈಗಾಗಲೇ ಜನರ ಮತ್ತು ಜನಪ್ರತಿನಿಧಿಗಳ ಮೆಚ್ಚುಗೆ ಗಳಿಸಿದೆ. ದೂರದೂರಿನಲ್ಲಿದ್ದು ಜನಿಸಿದ ಊರಿಗಾಗಿ ಏನೇನು ಮಾಡಬಹುದೋ ಅದೆಲ್ಲವನ್ನೂ ಟ್ರಸ್ಟ್ ಮಾಡುತ್ತಿದೆ. ಇದರಿಂದ ಊರವರಿಗೆ ಖುಷಿಯೂ ನಮಗೆ ಧನ್ಯತೆಯೂ ಮೂಡುತ್ತಿದೆ.

ರವಿನಾರಾಯಣ ಗುಣಾಜೆ, ವಿಕಾಸ ಟ್ರಸ್ಟ್ ರೂವಾರಿ

ಕಾಸರಗೋಡು ಕನ್ನಡಿಗರಿಗಾಗಿ...

ವಿಕಾಸ ಟ್ರಸ್ಟ್ ಆರಂಭಗೊಂಡದ್ದು ಸೇವೆಗಾಗಿ. ಅದರಲ್ಲೂ ಕನ್ನಡಿಗರ ಸೇವೆಗಾಗಿ; ಕಾಸರಗೋಡು ಕನ್ನಡಿಗರಿಗಾಗಿ. ಬೆಂಗಳೂರಿನಲ್ಲಿ ಉದ್ಯಮಿಯಾಗಿರುವ ರವಿನಾರಾಯಣ ಗುಣಾಜೆ ಇದರ ರೂವಾರಿ. ಸಾಮಾಜಿಕ ಕಾರ್ಯಗಳ ಜೊತೆಗೆ ಬೆಂಗಳೂರಿನಲ್ಲಿ ಇದ್ದುಕೊಂಡು ತಾಯ್ನೆಲದ ಸೇವೆ, ಕಾಸರಗೋಡು ಕನ್ನಡಿಗರಿಗೆ ಕರ್ನಾಟಕದಲ್ಲಿ ಅಗತ್ಯ ಅನುಕೂಲಗಳನ್ನು ಕಲ್ಪಿಸುವುದು, ಕಾಸರಗೋಡಿನ ಪ್ರವಾಸೋದ್ಯಮವನ್ನು ಉತ್ತೇಜಿಸಿವುದು ಮತ್ತು ಬೆಳೆಸುವುದು, ರಾಜಕೀಯವಾಗಿ ಕನ್ನಡಿಗರ ಪ್ರಾತಿನಿಧ್ಯಕ್ಕಾಗಿ ಶ್ರಮಿಸುವುದು ಮುಂತಾದ ಚಿಂತನೆಗಳೊಂದಿಗೆ ಕಳೆದ ವರ್ಷ ಜನವರಿಯಲ್ಲಿ ಶುರುವಾದ ಸಂಸ್ಥೆ ಇದು.

ಕೋವಿಡ್‌-19ರ ಸಂದರ್ಭದಲ್ಲಿ ಆರಂಭವಾದ ಕಾರಣ ಟ್ರಸ್ಟ್‌ನ ಆರಂಭಿಕ ಕೆಲಸಗಳೆಲ್ಲ ಆನ್‌ಲೈನ್ ಮೂಲಕವಷ್ಟೇ ನಡೆದಿದ್ದವು. ಮಾಹಿತಿಗಳು ವಾಟ್ಸ್ ಆ್ಯಪ್, ಇ-ಮೇಲ್ ಮುಂತಾದ ತಾಣಗಳಲ್ಲಿ ಹಂಚಿಕೆಯಾಗುತ್ತಿದ್ದವು. ‘ಡಿಜಿಟಲ್ ಸಂಘಟನೆ’ಯಾಗಿದ್ದ ಇದು ಈಗ ಆಫ್‌ಲೈನ್ ಮಾದರಿಗೆ ಕಾಲಿಟ್ಟಿರುವ ಕಾರಣ ಮಾಹಿತಿ ಎಲ್ಲೆಡೆ ಮುಕ್ತವಾಗಿ ಹಬ್ಬುತ್ತಿದೆ. ವೆಬ್‌ಸೈಟ್: *https://vikasatrust.org*

ಧ್ವನಿಯೊಳಗಿನ ಭಾವದ ಜಾದು



ನನ್ನ ಹಾಡು ನನ್ನದು
ಲೇ: ಕಟ್ಟೆ ಗುರುರಾಜ್
ಪ್ರ: ಸಾವಣ್ಣ ಎಂಟರ್‌ಪ್ರೈಸಸ್ ಬೆಂಗಳೂರು
ಸಂ: 90363 12786
ಪು: 368 ₹360

ಮೇರು ಗಾಯಕ ದಿವಂಗತ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರ ಬಗ್ಗೆ ಸಾಕಷ್ಟು ಸಂಗತಿಗಳನ್ನು ಅಲ್ಲಿ ಇಲ್ಲಿ ಕೇಳಿ, ಓದಿ ತಿಳಿದಿರಬಹುದು. ಆದರೆ, ಅವರೊಂದಿಗೆ ಒಡನಾಡಿದವರ ಬಾಯಲ್ಲೇ ಕೇಳಿದರೆ ಅಂತಹ ಅನುಭವಗಳು ಹೇಗಿರಬಹುದು?

ಅಂಥದ್ದೊಂದು ಪ್ರಯತ್ನ ಈ ಕೃತಿಯಲ್ಲಿ ಆಗಿದೆ. ಅಪರೂಪದ ಘಟನೆ, ಸಂಗತಿಗಳನ್ನು ಸಂಕಲಿಸಿ ಇಲ್ಲಿ ದಾಖಲಿಸಲಾಗಿದೆ. ಬಾಲಸುಬ್ರಹ್ಮಣ್ಯಂ ಅವರನ್ನು ಸಂಗೀತ, ವಿಜ್ಞಾನ, ಆಯುರ್ವೇದ, ಮನಃಶಾಸ್ತ್ರ ಹೀಗೆ ಎಲ್ಲ ನೆಲೆಯಲ್ಲಿಟ್ಟು ನೋಡುವ ಪ್ರಯತ್ನ ಇಲ್ಲಿದೆ ಎಂದು ಲೇಖಕರೇ ಹೇಳಿಕೊಂಡಿದ್ದಾರೆ.

ನಾಲ್ಕು ವಿಭಾಗಗಳಿರುವ (ಬಾಲು ಬದುಕು, ಬಾಲು ಗಾನಕ್ರಿಯಾ ಕೌತುಕ, ನಮ್ಮ ಪ್ರೀತಿಯ ಬಾಲು ಹಾಡುಗಳು ಮತ್ತು ಬಾಲು ಬಂಧ) ಈ ಕೃತಿಯಲ್ಲಿ ಬಾಲು ಅವರ ಪ್ರೀತಿಯ ಹಾಡುಗಳ ಕುರಿತು ಸಂಗೀತ ಕ್ಷೇತ್ರದ ಖ್ಯಾತನಾಮ ಒಡನಾಡಿಗಳು ಬರೆದಿದ್ದಾರೆ. ಕೊನೆಯಲ್ಲಿ ಅವರೊಂದಿಗೆ ಲೇಖಕರೇ ನಡೆಸಿದ ಸುದೀರ್ಘವಾದ ಹಾಗೂ ಅಪರೂಪದ ಸಂದರ್ಶನವೂ ಇದೆ. ಪಾಂಡಿತ್ಯದ ಮೇರು ಶಿಖರವಾದರೂ ಪಾಮರನಂತೆ ಬದುಕಿದ್ದ ಬಾಲು ಎಂಬ ಸಂಗೀತ ವಿಶ್ವವನ್ನು ಆಸಕ್ತರಿಗೆ, ಅಭಿಮಾನಿಗಳಿಗೆ ಕಟ್ಟಿಕೊಡುವ ಪ್ರಯತ್ನ ಈ ಕೃತಿಯಲ್ಲಿ ನಡೆದಿದೆ. ಬಾಲು ಮೇಲಿನ ಗೌರವ, ಪ್ರೀತಿ ಮತ್ತು ಒಳನೋಟ ಅರಿಯುವ ಕುತೂಹಲಿಗಳಿಗೆ ಓದಿಸಿಕೊಂಡು ಹೋಗುವ ಕೃತಿ ಇದಾಗಿದೆ. ಬಾಲು ಅವರ ವ್ಯಕ್ತಿತ್ವದ ನಾನಾ ಮಗ್ಗಲುಗಳನ್ನು ಪರಿಚಯಿಸುವ ಜತೆಗೆ ಗಾಯಕನಾಗಿ ಅವರು ಏರಿದ ಎತ್ತರವನ್ನು, ಅದಕ್ಕೆ ಕಾರಣವಾದ ಅವರ ಪರಿಶ್ರಮದ ಕಥೆಯನ್ನು ಕಟ್ಟಿಕೊಡುವಲ್ಲಿ ಈ ಕೃತಿ ಯಶಸ್ವಿಯಾಗಿದೆ.

ಜಾಲತಾಣದ ಜರಡಿಯ ಗಟ್ಟಿಕಾಳು

ಜನಪ್ರಿಯ ಜಾಲತಾಣದಲ್ಲಿ ಹೀಗೆ ಬಂದು ಹಾಗೆ ಮರೆಯಾಗಿ ಹೋಗಬಹುದಾದ ಪುಟ್ಟಪುಟ್ಟ ಸಂಗತಿಗಳನ್ನು ಹೆಕ್ಕಿ ಒಂದು ವ್ಯಕ್ತಿಚಿತ್ರದ ಗ್ರಂಥವಾಗಿ ರೂಪಿಸಿದ್ದಾರೆ ಲೇಖಕರು.

ಖ್ಯಾತನಾಮರಿಂದ ಹಿಡಿದು ಅಷ್ಟಾಗಿ ಬೆಳಕಿಗೆ ಬಾರದ ಅಪರೂಪದ ವ್ಯಕ್ತಿಗಳ ಪರಿಚಯ (ಶ್ರೀಸಾಮಾನ್ಯರು, ಬಹುಮಾನ್ಯರು) ಈ ಹೊತ್ತಗೆಯಲ್ಲಿದೆ. ಸದ್ದಿಲ್ಲದ ಸೇವಕರು, ಸಾಧಕರು, ಲೇಖಕರು ಇಲ್ಲಿ ಅನಾವರಣಗೊಂಡಿದ್ದಾರೆ. ಈ ಲೇಖನಗಳಿಗೆಲ್ಲ ಮೂಲವೇ ಫೇಸ್‌ಬುಕ್. ಲೇಖಕರ ಕರೆಗೆ ಹಲವಾರು ಜನ ಸ್ಪಂದಿಸಿ ಕೈಜೋಡಿಸಿ ಲೇಖನ ಬರೆದಿದ್ದಾರೆ. ಇಲ್ಲಿ ಅನಾವರಣಗೊಂಡ ಹೆಚ್ಚಿನ ವ್ಯಕ್ತಿಗಳು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯವರು. ಅನೇಕರು ಇಲ್ಲಿಂದ ಬೇರೆಡೆ ನೆಲೆಸಿ ಇಡೀ ದೇಶಕ್ಕೆ ಕೊಡುಗೆಯಾದವರು (ಜಾರ್ಜ್ ಫೆರ್ನಾಂಡಿಸ್, ಡಾ.ಬೆಳ್ಳಿಪಾಡಿ ಸತೀಶ್ ರೈ, ಕರ್ನಲ್ ಎಚ್.ಎಸ್. ಶಂಕರ್ ಇತ್ಯಾದಿ). ಹೀಗೆ ಪುಟ್ಟ ಲೇಖನ ಗುಚ್ಛದ ಮೂಲಕ ಅವರಿಗೆ ಗೌರವ ಸಲ್ಲಿಸಿದ್ದಾರೆ ಲೇಖಕರು. ಜಾಲತಾಣವೊಂದರ ಆಗು ಹೋಗುಗಳನ್ನು ಒಂದಿಷ್ಟು ಜರಡಿ ಹಿಡಿದು ಆಯ್ದರೆ ಒಂದು ಗಟ್ಟಿಕಾಳಿನಂತಹ ವಿಷಯ ಸಿಗುತ್ತದೆ. ಅದನ್ನು ಗ್ರಂಥರೂಪಕ್ಕೆ ತಂದು ದಾಖಲೆಯಾಗಿಸಬಹುದು ಎಂಬುದಕ್ಕೆ ಈ ಹೊತ್ತಗೆ ಉದಾಹರಣೆಯಾಗಿ ಮುಂದಿದೆ.



ಫೇಸ್‌ಬುಕ್ ಪ್ರಪಂಚ
ಲೇ: ಜಯಪ್ರಕಾಶ್ ಪುತ್ತೂರು
ಪ್ರ: ಸಪ್ನ ಬುಕ್‌ಹೌಸ್ ಬೆಂಗಳೂರು
ಸಂ: 080 4011455
ಪು: 200 ₹160

ಒಪ್ಪೊತ್ತಿನಲ್ಲಿ 20ರ ಪ್ರಯೋಗ



ಪ್ರವರ ಥಿಯೇಟರ್ಸ್ ಕಲಾವಿದರು ಅಭಿನಯಿಸಿದ 'ಒಂದರೊಳಗಿನ್ನೆರಡು' ನಾಟಕದ ದೃಶ್ಯ

ಮನರಂಜನಾ ಕ್ಷೇತ್ರದ ಡಿಜಿಟಲ್ ಜಗತ್ತು ಕಾಲಮಿತಿಗೆ ಸಂಕ್ಷೇಪವಾದಂತೆ, ವಾಸ್ತವದ ರಂಗ ಪ್ರಯೋಗಗಳೂ ಕಾಲಮಿತಿಗೆ ಒಳಗಾಗಿ 'ಷಾರ್ಟ್ಸ್' ರೂಪ ಪಡೆದಿವೆ. ಟ್ವೆಂಟಿ–20 ಕ್ರಿಕೆಟ್ ಮಾದರಿಯಲ್ಲೇ ನಡೆದ 20 ನಿಮಿಷಗಳ ನಾಟಕಗಳ ರಂಗೋತ್ಸವವೊಂದು ಹೊಸ ಪ್ರತಿಭೆಗಳನ್ನು, ಪ್ರೇಕ್ಷಕರನ್ನೂ ಸೆಳೆಯುವ ಪ್ರಯತ್ನ ಮಾಡಿತು. ಆ ಪ್ರಯೋಗಗಳು ಇನ್ನೂ ಮುಂದುವರಿದಿವೆ.

ಶರತ್ ಹೆಗ್ಡೆ

ಅಂತರ್ಜಾಲದಲ್ಲಿ ಕಾಣುವ ಷಾರ್ಟ್ಸ್, ರೀಲ್ಸ್, ಕಿರುಚಿತ್ರಗಳ ಮಾದರಿಯಲ್ಲೇ ನಾಟಕಗಳು ಕೂಡಾ 'ಕಿರು ನಾಟಕಗಳಾಗಿ' ಟ್ರೆಂಡ್ ಸೃಷ್ಟಿಸಿವೆ. ದುಡಿಮೆ ನಡುವೆ ಪುರುಸೊತ್ತಿಲ್ಲದವರು ಬಿಡುವಾಗಿಸಿಕೊಂಡು ಅಭಿನಯಿಸಿದ, ಪುರುಸೊತ್ತಿಲ್ಲದ ಪ್ರೇಕ್ಷಕರೂ ಪುರುಸೊತ್ತು ಮಾಡಿಕೊಂಡು ನೋಡುವಂತೆ ಮಾಡುವ ಪ್ರಯತ್ನ ಈ 'ಇಪ್ಪತ್ತ'ರದು.

ಕಲಾ ಪ್ರಕಾರಗಳು ಕಾಲಮಿತಿಗೊಳಗಾಗಿರುವ ಹೊತ್ತಿನಲ್ಲಿ ನಾಟಕಗಳನ್ನು ಕೂಡಾ ಕ್ರಿಕೆಟ್‌ನಂತೆ 20 ನಿಮಿಷಗಳ ಅವಧಿಗೆ ಇಳಿಸಿದ ಪ್ರಯೋಗ ಇತ್ತೀಚೆಗೆ ಸ್ಪರ್ಧೆ ಏರ್ಪಡುವವರೆಗೂ ಹೋಯಿತು.

ಬೆಂಗಳೂರಿನ ಪ್ರಕಸಂ (ಪ್ರದರ್ಶನ ಕಲಾ ಸಂಸ್ಥೆ) ಆಶ್ರಯದಲ್ಲಿ ಸುಚಿತ್ರಾ ಫಿಲಂ ಸೊಸೈಟಿ ಆವರಣದಲ್ಲಿ ನಡೆದ ಈ ಪ್ರದರ್ಶನಗಳು ಹೊಸ ಕಲಾವಿದರನ್ನು ಮತ್ತು ಪ್ರೇಕ್ಷಕರನ್ನು ರಂಗಭೂಮಿಯತ್ತ ಸೆಳೆಯುವಲ್ಲಿ ಒಂದಿಷ್ಟು ಪ್ರಯತ್ನ ಮಾಡಿದವು.

ನಾಟಕಗಳು ಕಿರು ಅವಧಿಗಿಳಿದದ್ದು ಹೊಸದೇನಲ್ಲ. ಆದರೆ, ಅದನ್ನೇ ಒಂದು ಪ್ರಕಾರವನ್ನಾಗಿ ಗುರುತಿಸಿ ವ್ಯಾಪಕಗೊಳಿಸಿದ್ದು ಈ ಸ್ಪರ್ಧೆಯ ವಿಶೇಷ. ಇದನ್ನೆಲ್ಲಾ ನೋಡಿದ 'ಪ್ರವರ' ತಂಡವೂ ಕೂಡಾ ಕಿರು ನಾಟಕ ಸ್ಪರ್ಧೆಯನ್ನು ಆಯೋಜಿಸಿದೆ. ಮೇ 16ರಂದು ಈ ಸರಣಿಯ ಅಂತಿಮ ಸ್ಪರ್ಧೆ ನಡೆಯಲಿದೆ.

ಎಲ್ಲವೂ ಕ್ರಿಕೆಟ್‌ಮಯ

ಈ ಸರಣಿಗಿಟ್ಟ ಹೆಸರು 'ರಿಫ್ರೆಷ್ ಟಿ-20'. ಸ್ಪರ್ಧೆಗೆ ಬಂದ ನೂರಾರು ನಾಟಕಗಳ ಪೈಕಿ ಆಯ್ಕೆಯಾದದ್ದು ಇಪ್ಪತ್ತು. ಪ್ರತಿ ನಾಟಕ ತಲಾ 20 ನಿಮಿಷ ಅವಧಿಯದ್ದು. ಕಾಕತಾಳೀಯವೆಂಬಂತೆ ಈ ಪ್ರಕಸಂಗೂ ಈಗ 20ರ ಹರೆಯ. ಹಾಗಾಗಿ ಇಲ್ಲಿ ಏನಿದ್ದರೂ ಇಪ್ಪತ್ತಕ್ಕೇ ಮಹತ್ವ.

ನಾಟಕಗಳ ಪ್ರದರ್ಶನ ವೇಳಾಪಟ್ಟಿ, ಅವಧಿ, ಪ್ರಚಾರ, ಅಂಕಪಟ್ಟಿ, ಮೌಲ್ಯಮಾಪನ, ಬಹುಮಾನ ವಿತರಣೆ, ಚೆಕ್ ವಿನ್ಯಾಸ ಎಲ್ಲವೂ ಟ್ವೆಂಟಿ -20 ಕ್ರಿಕೆಟ್‌ನ ಮಾದರಿಯಲ್ಲೇ ಇದ್ದವು. ಒಂದು ನಾಟಕದಲ್ಲಿ ಗರಿಷ್ಠ 5 ಪಾತ್ರಗಳಷ್ಟೇ ಇದ್ದವು. ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನ ಪಡೆದ ನಾಟಕಗಳ ಪುಟ್ಟ ನೋಟ ಕ್ರಮವಾಗಿ ಮುಂದಿದೆ.

ಪ್ರವರ ಸ್ಟುಡಿಯೊ ಅಭಿನಯಿಸಿದ 'ಒಂದರೊಳಗಿನ್ನೆರಡು' ನಾಟಕದಲ್ಲಿ ವರ್ಕ್‌ಫ್ರಂ ಹೋಂ, ಪತಿ ಪತ್ನಿ ನಡುವಿನ ವಿರಸ, ಸಾಮಾಜಿಕ ಮಾಧ್ಯಮಗಳ ಅಧ್ವಾನ, ಮನಸ್ಸು ಬುದ್ಧಿಗಳ ನಡುವಿನ ಸಂಘರ್ಷವನ್ನು ಕೊನೆಯವರೆಗೂ ರಂಜಿಸುತ್ತಲೇ ಹೇಳಿತು. ರಾಜ್ ಆರಾಧ್ಯ ಈ ನಾಟಕದ ನಿರ್ದೇಶಕರು.

ವ್ಯೋಮ ಆ್ಯಕ್ಟರ್ಸ್ ಸ್ಟುಡಿಯೊ ಅಭಿನಯಿಸಿದ ನಾಟಕ 'ಸಿಕ್ಕೋರ್ಗಾ ಸೀರುಂಡೆ'. ಭೂಮಿಯಲ್ಲಿ ಜಿರಳೆ, ಚಿರತೆ, ಮನುಷ್ಯ ಮೂವರಿಗೂ ಅವಕಾಶವಿದೆ. ಆದರೆ ಇತರ ಜೀವಿಗಳ ಅವಕಾಶವನ್ನು ಮನುಷ್ಯನೊಬ್ಬನೇ ಕಿತ್ತುಕೊಂಡು ಸಿಕ್ಕಿದ್ದೇ ಸೀರುಂಡೆ ಎಂದು ಎಲ್ಲವನ್ನೂ ಅನುಭವಿಸಲು ಹೋಗುವುದು, ನಾನೇ ಶ್ರೇಷ್ಠ ಎಂದು ಬೀಗುವುದು, ಕೊನೆಗೆ ಇದು ಸೇರಬೇಕಾದ್ದು ನಿಮಗಲ್ಲ ಎಂದು ಪರಮಶಕ್ತಿಯೊಂದು ಕಿತ್ತುಕೊಂಡು ಹೋಗುವುದು ನಾಟಕದ ತಿರುಳು. ಪುಟ್ಟ ಅವಧಿಯಲ್ಲಿ ವಿಸ್ತಾರವಾದ ವಿಷಯವೊಂದನ್ನು ಮುಟ್ಟಿಸಿತು ಈ ನಾಟಕ. ಶರತ್ ಪರ್ವತವಾಣಿ ಈ ನಾಟಕದ ನಿರ್ದೇಶಕರು.

ಬೆಂಗಳೂರು ಥಿಯೇಟರ್ ಎನ್ಸೆಂಬಲ್ ತಂಡ ಅಭಿನಯಿಸಿದ 'ಬೂದು' ನಾಟಕ ಸದ್ಯದ ರಷ್ಯಾ–ಉಕ್ರೇನ್ ನಡುವಿನ ಸಂಘರ್ಷದ ಹಿನ್ನೆಲೆಯಲ್ಲಿ ನಡೆಯುವ ಕಥೆ. ಖಿನ್ನತೆಗೊಳಗಾದ ಮೂವರು ಆಸ್ಪತ್ರೆಯಲ್ಲಿದ್ದುಕೊಂಡು ಸಾವನ್ನೇ ಬಯಸುತ್ತಿದ್ದವರು. ಅಲ್ಲಿಗೆ ಮಗುವನ್ನು ಕಳೆದುಕೊಂಡ ತಾಯಿ ಬಂದು ಸಹಾಯ ಕೇಳುತ್ತಾರೆ. ಆಗ ಈ ಮೂವರೂ ಮನಸ್ಸು ಬದಲಾಯಿಸಿ ತಮ್ಮ ಬದುಕಿಗೊಂದು ಉದ್ದೇಶವಿದೆ ಎಂದುಕೊಂಡು ಮತ್ತೆ ಭರವಸೆಯ ಹೆಜ್ಜೆ ಇಡುತ್ತಾರೆ.

ಈ ನಾಟಕದಲ್ಲಿ ಶಿಕ್ಷಣಕ್ಕಾಗಿ ಹಣ ಹೊಂದಿಸಲು ಬಾಡಿಗೆ ತಾಯಿಯಾಗಿ ಉಕ್ರೇನ್‌ಗೆ ಹೋಗುವ ವಿದ್ಯಾರ್ಥಿನಿ, ಸಾಮಾಜಿಕ ಮಾಧ್ಯಮದ ಗೀಳಿಗೊಳಗಾದ ಹುಡುಗಿ, ವಂಚನೆಗೊಳಗಾದ ಸಂಶೋಧಕ ಇದ್ದಾರೆ. ಖಾರ್ಕಿವ್ ಸಮೀಪದ ಆಸ್ಪತ್ರೆಯಲ್ಲಿ ನಡೆಯುವ ಘಟನೆ ಇದು. ಎಲ್ಲ ಪಾತ್ರಗಳೂ 'ಯುದ್ಧದಿಂದ ಯಾರಿಗೂ ಪ್ರಯೋಜನವಿಲ್ಲ' ಎಂಬುದನ್ನೇ ಒತ್ತಿ ಹೇಳುತ್ತವೆ. ಅಭಿಮನ್ಯು ಭೂಪತಿ ಈ ನಾಟಕದ ನಿರ್ದೇಶಕರು.



ಬೆಂಗಳೂರು ಥಿಯೇಟರ್ ಎನ್ಸೆಂಬಲ್‌ನ 'ಬೂದು' ನಾಟಕದ ದೃಶ್ಯ

ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳಬೇಕಾದ ವಿಷಯಗಳನ್ನೇ ಈ ಮೂರೂ ನಾಟಕಗಳು ಕಟ್ಟಿಕೊಟ್ಟವು.

ಹೆಚ್ಚಿನ ನಾಟಕಗಳು ಲಾಕ್‌ಡೌನ್ ಅವಧಿಯಲ್ಲಿ ಸಿದ್ಧಗೊಂಡವುಗಳು. ತಿರುಳು ಕೂಡಾ ಅಂಥ ಸನ್ನಿವೇಶಗಳದ್ದೇ ಇದೆ. ಅಭಿನಯಿಸಿದವರು ಹವ್ಯಾಸಿ ರಂಗತಂಡಗಳೇ. ಹೆಚ್ಚಿನವರು ಐ.ಟಿ. ಕ್ಷೇತ್ರದಲ್ಲಿ ದುಡಿಯುವವರು. ಬೆಳಗಿನ ವೇಳೆ ನಾಟಕಾಭ್ಯಾಸ ಮಾಡಿ, ನಂತರ ದುಡಿಮೆಗೆ ಹೋಗುತ್ತಿದ್ದವರು. ಈ ನಾಟಕಗಳಿಗೆ ಹಿರಿ–ಕಿರಿತೆರೆಯ ದಿಗ್ಗಜರು ಬೆನ್ನು ತಟ್ಟಿದ್ದಾರೆ. ಇನ್ನಷ್ಟು ಹೊಸ ಪ್ರಯೋಗಗಳನ್ನು ಮಾಡುವ ಹುಮ್ಮಸ್ಸಿನಲ್ಲಿ ಈ ತಂಡಗಳಿವೆ. ❖

ಪ್ರವಾಸದಲ್ಲಿ...

12ನೇ ಪುಟದಿಂದ...

ಆ ವಿಷಯದಲ್ಲಿ ರಾಜಸ್ಥಾನದ ಮಾರ್ವಾಡಿಗಳು ವ್ಯವಹಾರದ ದೃಷ್ಟಿಯಿಂದಲೇ ಆದರೂ 'ಚೌಕೀದಾನಿ'ಯಲ್ಲಿ ಆಹಾರವನ್ನು ತೆರೆದಿಡುತ್ತಾರೆ.

ಆಹಾರದ ಸಂಸ್ಕೃತಿ ವಿಪರೀತ ಮಾರ್ಪಾಡು ಹೊಂದಿರುವುದೂ ಸಾಧ್ಯವಿದೆ. ಗೋಬಿಮಂಚೂರಿಯ ಗಾಡಿ ಗಳಲ್ಲಿ, ಚೈನೀಸ್ ಹೋಟೆಲ್‌ನಲ್ಲಿ ನೂಡಲ್ಸ್-ಗೋಬಿ ನಮ್ಮ ಇಡೀ ಭಾರತವನ್ನು ಆವರಿಸಿದೆ. ಅದು ಭಾರತೀಯ ಮಸಾಲೆಗೆ ಎಷ್ಟು ಹೊಂದಿಕೊಂಡಿದೆಯೆಂದರೆ, ನಮ್ಮ ನಾಲಿಗೆಗೆ ಬೀಜಿಂಗ್‌ನ ಖಾಸಾ, ಒರಿಜಿನಲ್ ಖಾದ್ಯ ಮಂಚೂರಿಯನ್-ನೂಡಲ್ಸ್ ಸ್ವಲ್ಪವೂ ರುಚಿಸದೆ ಹೋಯಿತು. ಒಟ್ಟಿನಲ್ಲಿ ಪ್ರವಾಸದಲ್ಲಿ ಆಹಾರದ ಬಗ್ಗೆ ಏನು, ಏಕೆ, ಹೇಗೆ ಎಂದು ಪ್ರಶ್ನಿಸುತ್ತಾ, ಅದರ ಹಿಂದಿನ ವೈಜ್ಞಾನಿಕತೆ, ಕಲಾತ್ಮಕತೆ ಬಗೆಗೆ ನಾವು ಗಮನಿಸುವುದು ಕಡಿಮೆ.

ಈ ವಿಷಯದಲ್ಲಿ ಯೂರೋಪಿಯನ್ನರನ್ನು ನಾವು ಮುಕ್ತಕಂಠದಿಂದ ಪ್ರಶಂಸಿಸಲೇಬೇಕು. ನೆದರ್ಲೆಂಡ್ಸ್‌ನಲ್ಲಿ ಸಿಕ್ಕುವ ಚೀಸ್-ಗಿಣ್ಣು, ವಾಫೆಲ್ಸ್ ಎಂಬ ಬಿಸ್ಕೀಟು, ಬಿಯರ್ ಪ್ರತಿಯೊಂದಕ್ಕೂ ಒಂದೊಂದು ಕಥೆ ಹೇಳುವ ದೊಡ್ಡ ಮ್ಯೂಸಿಯಂಗಳೇ ಇವೆ. ಒಂದಷ್ಟು ಚಿತ್ರಗಳು, ಈ ತಿಂಡಿಯ ಮೂಲ ಎಲ್ಲಿದೆ ಎಂಬ ವಿಷಯವಾಗಿ ಸ್ವಾರಸ್ಯದ ಕಥೆ, ಪ್ರಾತ್ಯಕ್ಷಿಕೆಯ ಮೂಲಕ ತಿಂಡಿ ಮಾಡುವ ವಿಧಾನದ ಅರಿವು, ಮನರಂಜನೆಗಾಗಿ ಪ್ರೇಕ್ಷಕರಿಂದಲೇ ಆ ತಿಂಡಿ ಮಾಡಿಸುವುದು, ಕೊನೆಯಲ್ಲಿ ತಿಂಡಿಯ ವಿವಿಧ ರೂಪುಗಳಲ್ಲಿ ಪ್ರೇಕ್ಷಕರಿಗೆ ಮಾರಾಟಕ್ಕೆ ಲಭ್ಯವಾಗುವುದು ಇವು ಇಂತಹ ತಿಂಡಿ ಮ್ಯೂಸಿಯಂಗಳಲ್ಲಿ ಇರುವ ಹಂತಗಳು.

ಮೊನ್ನೆ ಅರಕ್ಕು ಎಂಬ ವಿಶಾಖಪಟ್ಟಣ ಸಮೀಪದ ಕಣಿವೆಗೆ ಹೋದಾಗ, ಇಂಥದ್ದೇ ಮಾದರಿಯ ಕಾಫಿ ಮ್ಯೂಸಿಯಂ ನೋಡಿ, 'ಓ ಇಲ್ಲಿಯೂ ಹೀಗೆ ಮಾಡಿದ್ದಾರಲ್ಲ' ಎಂದುಕೊಂಡೆ. 'ಇದೆಲ್ಲ ಬಿಸಿನೆಸ್ ಟ್ರಿಕ್ ಅಷ್ಟೆ' ಎಂದು ಮೂಗು ಮುರಿಯುವವರಿರಬಹುದು. ಆದರೆ ತಿಂಡಿಯ ಬಗೆಗೆ ಒಂದಿಷ್ಟು ಮಾಹಿತಿ, ಚರಿತ್ರೆಯ ಅರಿವು, ಸಂತೋಷಕ್ಕಾಗಿ ಬಂದಿರಬೇಕಾದರೆ ಕೊಳ್ಳುವ, ಮನೆಯಲ್ಲಿ ಎದುರು ನೋಡುವ ಆತ್ಮೀಯರಿಗೆ ಕೊಡುವ ಅವಕಾಶ ಇದು ಎಂದು ನನಗನ್ನಿಸುತ್ತದೆ. ಈ ನೆಪದಲ್ಲಿಯಾದರೂ ಆಹಾರದ ವಿಷಯದಲ್ಲಿ ಸಾಂಸ್ಕೃತಿಕ ಅಸ್ಮಿತೆಯನ್ನು ಉಳಿಸಲು ಸಾಧ್ಯವಿದೆ ಎನಿಸುತ್ತದೆ.

ಪ್ರವಾಸ ಕಥನಗಳಲ್ಲಿ ಪ್ರೇಕ್ಷಣೀಯ ಸ್ಥಳದ ಆಹಾರದ ಬಗ್ಗೆ ಬರೆಯುವವರು ಕಡಿಮೆಯೇ. ಅದರ ಬಗೆಗೂ ಅನುಭವವನ್ನು ಹಂಚಿಕೊಂಡದ್ದೇ ಆದರೆ ಅದೂ ರಸಮಯವೇ ಆಗಬಹುದು. ಅಂಥದ್ದೇ ಅನುಭವ ನನಗೆ ಸಿಕ್ಕಿದ್ದು ಡಾ. ಎ.ಎನ್. ಮೂರ್ತಿರಾಯರ 'ಅಪರ ವಯಸ್ಕನ ಅಮೆರಿಕ ಯಾತ್ರೆ' ಪುಸ್ತಕದಲ್ಲಿ.

ಭಾರತೀಯ ಸಸ್ಯಾಹಾರಿಗಳಿಗೆ ಒದಗುವ ಸಮಸ್ಯೆಗಳ ಬಗ್ಗೆ ವಿವರಿಸುವ ಮೂರ್ತಿರಾಯರು ಬ್ರೆಡ್ ಭರಾಟೆಯ ಬಗ್ಗೆ ಹೀಗೆ ಬರೆಯುತ್ತಾರೆ. 'ಬ್ರೆಡ್‌ಗೆ ಕೊಟ್ಟಿರುವ ಪ್ರಾಶಸ್ತ್ಯ ವಿಪರೀತವಾಯಿತೆಂಬ ಭಾವನೆ ಭಗವಾನ್ ಯೇಸುವಿಗೆ ಕೂಡ ಬಂದಿರಬೇಕು. ಆದ್ದರಿಂದಲೇ ಆತ ಹೇಳಿದ: Man does not live by bread alone (ಮಾನವ ಬದುಕುವುದು ಬ್ರೆಡ್ ಒಂದರಿಂದಲೇ ಅಲ್ಲ) ಎಂದು. ಅರ್ಥಪೂರ್ಣ ಎಚ್ಚರಿಕೆಯ ಮಾತು. ಹೀಗೆ ಬ್ರೆಡ್‌ಗೆ ಪಾಶ್ಚಾತ್ಯರು ನಡೆಸುವ ವಿವಿಧ ಸಂಸ್ಕಾರಗಳೆಲ್ಲದರ ಬಗೆಗೆ ಓದುತ್ತ, ಒಬ್ಬರೇ ನಗುತ್ತಾ ಕುಳಿತಿರುವಂತೆ ಅವರು ವಿವರಿಸುತ್ತಾರೆ.



ಪ್ರವಾಸಕ್ಕೆ ಹೋದಾಗ 'ಪ್ರಸಿದ್ಧ' ಬೀದಿ ಬದಿ ಆಹಾರವನ್ನು ಸವಿಯುವ ಮಜವೇ ಬೇರೆ

ಆಹಾರದ ಬಗ್ಗೆ ಪ್ರವಾಸದಲ್ಲಿಯೂ ಇಷ್ಟೆಲ್ಲ ಯೋಚಿಸಬೇಕೆ? ಸಾಂಸ್ಕೃತಿಕ ಮನೋವೈದ್ಯಕೀಯದ (Cultural Psychiatry) ಅಧ್ಯಯನ ಮಾಡುವ ನಾನು 'ಹೌದು' ಎನ್ನುತ್ತೇನೆ. ಆಹಾರವು ಸಹಜವಾಗಿ ಸಾಂಸ್ಕೃತಿಕ ಅಸ್ಮಿತೆಯ ಗುರುತೂ ಅಹುದು. ಒಂದೊಂದು ತುತ್ತೂ ಸಂಸ್ಕೃತಿಯ ವೈಶಿಷ್ಟ್ಯವನ್ನು ನಮಗೆ ನೆನಪಿಸಬೇಕು. ನಾವು ಭೇಟಿ ನೀಡುವ ಸ್ಥಳದಲ್ಲಿ ನಾವು ಬದುಕಬೇಕಾಗಿ ಬಂದರೆ ಎಂಬ ಪ್ರಶ್ನೆಗೆ ಉತ್ತರವಾಗಿ ಅದು ಹೇಗಿರುತ್ತದೆ ಎಂಬ ಪರಿಚಯ ಮಾಡಿಸುವ ಸುಲಭ ವಿಧಾನ, ಅಲ್ಲಿನ ಆಹಾರ ಪದ್ಧತಿಯ ಒಂದು ಊಟ ಮಾಡುವುದು. ಆಹಾರದ ಬಗೆಗಿನ ನಮ್ಮ ಪೂರ್ವಗ್ರಹಗಳಿಗೆ ಈ ವಿಧಾನ ಸವಾಲೆಸೆಯಲು ಸಾಧ್ಯವಿದೆ. ಅದು ಮತ್ತೊಂದು ಸಂಸ್ಕೃತಿಗೆ ತೋರುವ ಗೌರವವೂ ಹೌದು. ಹಾಗೆಂದು ಯಾವಾಗಲೂ ನಾಲಿಗೆಗೆ-ಮನಸ್ಸಿಗೆ ರುಚಿಕರ ಆಗಿರಲೇಬೇಕೆಂದಿಲ್ಲ. ಆದರೆ ಬಾಂಧವ್ಯ ಬೆಸೆಯಬಲ್ಲದು. ಆಹಾರ ಎನ್ನುವುದು ಸಂಸ್ಕೃತಿಯೊಂದರ ತನ್ನತನವನ್ನು ತೋರಿಸುವ ಹೆಗ್ಗುರುತು ಎನ್ನುವ ಯುನೆಸ್ಕೊ ಪ್ರಪಂಚಾದ್ಯಂತ 25 ಆಹಾರ -ಪಾನೀಯ ಸಂಬಂಧಿತ ಸಂಪ್ರದಾಯಗಳನ್ನು, ತನ್ನ intangible heritage- ಅಮೂರ್ತ ಪರಂಪರೆಗಳ ಪಟ್ಟಿಯಲ್ಲಿ ದಾಖಲಿಸಿದೆ.

ಬೇಸಿಗೆಯ ಪ್ರವಾಸಗಳು ಆರಂಭವಾಗುತ್ತಿವೆ. ನಮ್ಮ ಸಂಸ್ಕೃತಿ-ಆಹಾರವನ್ನು ಜೊತೆಗೂಡಿಯೇ ಪ್ರವಾಸಕ್ಕೆ ಹೊರಡೋಣ. ಇನ್ನೊಬ್ಬರ ಸಂಸ್ಕೃತಿ ಆಹಾರದ ರುಚಿ ನೋಡೋಣ. ಪ್ರಸಿದ್ಧ ಪರಿಸರವಾದಿ-ಆದಿವಾಸಿಗಳ ಕಲ್ಯಾಣಕ್ಕೆ ಶ್ರಮಿಸುವ ಆರ್ಥಿಕ ತಜ್ಞೆ ವಿನೋನಾ ಲಡ್ಯೂಕ್ ಹೇಳಿರುವ ಮಾತು ನೆನಪಾಗುತ್ತಿದೆ. 'ನಮ್ಮ ಸಂಬಂಧಿಗಳಿಂದ ಆಹಾರ ನಮಗೆ ದಾಟುತ್ತದೆ- ಅವಕ್ಕೆ ರೆಕ್ಕೆ-ಕಿವಿರು-ಬೇರು ಯಾವುದೂ ಇರಬಹುದು. ಆದರೆ ಆಹಾರ ಎಂದರೆ ಸಂಸ್ಕೃತಿ, ಅದಕ್ಕೆ ಚರಿತ್ರೆಯಿದೆ-ಕಥೆಯಿದೆ-ಅದರಲ್ಲಿ ಸಂಬಂಧಗಳೂ ಇವೆ'. ❖

ರಜಾ ಮಜಾ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಪಂಚತಂತ್ರ ಮೆಥೆಮೆ'ಟ್ರಿಕ್ಸ್'

1 ಸಿನಿಮಾ ಹೆಸರು ಹೇಳುವ ಜಾದೂ

ಪಟ್ಟಿ A: 1. ಬಂಗಾರಿ 2. ಮಿಲನ 3. ಅರಸು 4. ಆಕಾಶ 5. ದುನಿಯಾ 6. ಗಜ 7. ಜಾಕಿ 8. ದತ್ತ 9. ಗಾಳಿಪಟ 10. ಅಣ್ಣಾಬಾಂಡ್ 11. ಅಭಯ 12. ಅಜಯ 13. ಶಿವಾ 14. ಲಕ್ಷ್ಮೀ 15. ಜೋಗಿ 16. ಮೈಲಾರಿ 17. ಸೂಪರ್ 18. ಡ್ರಾಮಾ 19. ಪರಮಾತ್ಮ 20. ಪಂಚರಂಗಿ 21. ಸಾರಥಿ 22. ಆಪ್ತಮಿತ್ರ 23. ಚಿಂಗಾರಿ 24. ವಂಶಿ 25. ಆಕಸ್ಮಿಕ 26. ಆಟೋರಾಜ 27. ಈ ಬಂಧನ 28. ಕಿಚ್ಚ 29. ಅಂಬಾರಿ 30. ನವಗ್ರಹ 31. ನೀಲಕಂಠ

ಪಟ್ಟಿ – B

ಬಂಗಾರಿ	ಮಿಲನ	ಆಕಾಶ	ದತ್ತ	ಮೈಲಾರಿ
ಅರಸು	ಅರಸು	ದುನಿಯಾ	ಗಾಳಿಪಟ	ಸೂಪರ್
ದುನಿಯಾ	ಗಜ	ಗಜ	ಅಣ್ಣಾಬಾಂಡ್	ಡ್ರಾಮಾ
ಜಾಕಿ	ಜಾಕಿ	ಜಾಕಿ	ಅಜಯ	ಪರಮಾತ್ಮ
ಗಾಳಿಪಟ	ಅಣ್ಣಾಬಾಂಡ್	ಅಜಯ	ಅಜಯ	ಪಂಚರಂಗಿ
ಅಭಯ	ಅಭಯ	ಶಿವಾ	ಶಿವಾ	ಸಾರಥಿ
ಶಿವಾ	ಲಕ್ಷ್ಮೀ	ಲಕ್ಷ್ಮೀ	ಲಕ್ಷ್ಮೀ	ಆಪ್ತಮಿತ್ರ
ಜೋಗಿ	ಜೋಗಿ	ಜೋಗಿ	ಜೋಗಿ	ಚಿಂಗಾರಿ
ಸೂಪರ್	ಡ್ರಾಮಾ	ಪಂಚರಂಗಿ	ವಂಶಿ	ವಂಶಿ
ಪರಮಾತ್ಮ	ಪರಮಾತ್ಮ	ಸಾರಥಿ	ಆಕಸ್ಮಿಕ	ಆಕಸ್ಮಿಕ
ಸಾರಥಿ	ಆಪ್ತಮಿತ್ರ	ಆಪ್ತಮಿತ್ರ	ಆಟೋರಾಜ	ಆಟೋರಾಜ
ಚಿಂಗಾರಿ	ಚಿಂಗಾರಿ	ಚಿಂಗಾರಿ	ಈ ಬಂಧನ	ಈ ಬಂಧನ
ಆಕಸ್ಮಿಕ	ಆಟೋರಾಜ	ಕಿಚ್ಚ	ಕಿಚ್ಚ	ಕಿಚ್ಚ
ಈ ಬಂಧನ	ಈ ಬಂಧನ	ಅಂಬಾರಿ	ಅಂಬಾರಿ	ಅಂಬಾರಿ
ಅಂಬಾರಿ	ನವಗ್ರಹ	ನವಗ್ರಹ	ನವಗ್ರಹ	ನವಗ್ರಹ
ನೀಲಕಂಠ	ನೀಲಕಂಠ	ನೀಲಕಂಠ	ನೀಲಕಂಠ	ನೀಲಕಂಠ

ಗುಟ್ಟುರಟ್ಟು: ನೀವು 'ಎ' ಪಟ್ಟಿಯಲ್ಲಿ ಯಾವುದಾದರೂ ಒಂದು ಸಿನಿಮಾ ಹೆಸರನ್ನು ನೆನಪಿಟ್ಟುಕೊಳ್ಳಿ. ಆ ಹೆಸರು 'ಬಿ' ಪಟ್ಟಿಯಲ್ಲಿನ ಐದೂ ಸಾಲುಗಳಲ್ಲಿ ಯಾವ ಯಾವ ಸಾಲಿನಲ್ಲಿದೆ ಎಂದು ಹೇಳಿದರೆ ನೀವು ನೆನಪಿಟ್ಟುಕೊಂಡ ಸಿನಿಮಾದ ಹೆಸರನ್ನು ನಾನು ಹೇಳುತ್ತೇನೆ. ಹೇಗೆ?

ಹೀಗೆ: ಉದಾಃ ನೀವು ಶಿವಾ ಎಂಬ ಹೆಸರನ್ನು ನೆನಪಿಟ್ಟುಕೊಂಡರೆ ಆ ಹೆಸರು 1ನೇ ಸಾಲಿನಲ್ಲಿ 3ನೇ ಸಾಲಿನಲ್ಲಿ ಮತ್ತು 4ನೇ ಸಾಲಿನಲ್ಲಿ ಇರುತ್ತದೆ. ಅವುಗಳಿಗೆ ಒಂದೊಂದು ಗುಪ್ತ ಸಂಖ್ಯೆಗಳಿದ್ದು ಆ ಮೂರೂ ಸಾಲಿನ ಗುಪ್ತ ಸಂಖ್ಯೆಗಳನ್ನು ಕೂಡಿಸಿದಾಗ 13 ಆಗುತ್ತದೆ. ನೀವು 13ನೇ ಕ್ರಮ ಸಂಖ್ಯೆಯ ಮುಂದಿನ ಹೆಸರನ್ನು ನೋಡಿದಾಗ ಶಿವಾ ಎಂದು ಸಿಗುತ್ತದೆ.

ಗುಪ್ತ ಸಂಖ್ಯೆಗಳು	1	2	3	4	8	16

2 ಬಿಡಿ ಅಂಕಿ ಹೇಳು – ಇಡೀ ಸಂಖ್ಯೆ ಕೇಳು

ನಿಮ್ಮ ಮಿತ್ರನಿಗೆ ಮೂರು ಅಂಕಿಗಳುಳ್ಳ ಒಂದು ಸಂಖ್ಯೆ ಬರೆದುಕೊಳ್ಳುವಂತೆ ತಿಳಿಸಿ. ಆ ಸಂಖ್ಯೆಯ ಅಂಕಿಗಳನ್ನು ಇಳಿಕೆ ಕ್ರಮದಲ್ಲಿ ಬರೆಯುವಂತೆ ಹೇಳಿ. ಈಗ ಆ ಸಂಖ್ಯೆಯ ತಿರುವು ಸಂಖ್ಯೆ(ವಿಲೋಮ ಸಂಖ್ಯೆ)ಯನ್ನು ಅದರ ಕೆಳಗೆ ಬರೆದು ಕಳೆಯುವಂತೆ ಹೇಳಿ. ಈಗ ಬಂದ ಉತ್ತರದ ಕೊನೆಯ ಅಂಕಿ ಹೇಳಿದರೂ ಸಾಕು. ನೀವು ಇಡೀ ಸಂಖ್ಯೆಯನ್ನು ಹೇಳಿ ಬಿಡಬಲ್ಲಿರಿ. ಅದು ಹೇಗೆ?

ನಿಮ್ಮ ಮಿತ್ರ ಕೊನೆಯ ಅಂಕಿ ಹೇಳಿದಾಗ ಆ ಅಂಕಿಯನ್ನು 9ರಲ್ಲಿ ಕಳೆಯಿರಿ. ಬಂದ ಅಂಕಿ ಉತ್ತರದ ಮೊದಲ ಅಂಕಿಯಾಗಿರುತ್ತದೆ. ಇದರ ಮುಂದೆ ಸ್ಥಿರಾಂಕ 9. ಇದು ಪ್ರತಿ ಬಾರಿಯೂ ಮಧ್ಯದಲ್ಲಿ ಇದ್ದೇ ಇರುತ್ತದೆ. ಈಗ ಉತ್ತರದ ಮೂರು ಅಂಕಿಗಳು ದೊರೆತಂತಾಯಿತು. ಈ ಮೂರು ಅಂಕಿಗಳ ಸಂಖ್ಯೆಯನ್ನು ನಿಮ್ಮ ಮಿತ್ರನಿಗೆ ತಿಳಿಸಿ. ಅವನು ನಿಜಕ್ಕೂ ಆಶ್ಚರ್ಯಗೊಳ್ಳುತ್ತಾನೆ. ಗುಟ್ಟು ರಟ್ಟಾಗುವವರೆಗೂ ಇದು ಜಾದೂವಿನಂತೆ ತೋರುತ್ತದೆ.

ಉದಾ:

ನಿಮ್ಮ ಮಿತ್ರನ ಸಂಖ್ಯೆ	319
ಇಳಿಕೆ ಕ್ರಮದಲ್ಲಿ ಬರೆದಾಗ	931
ತಿರುವು ಸಂಖ್ಯೆ	139
ಕಳೆದಾಗ	792

ಇಲ್ಲಿ ಕೊನೆಯ ಅಂಕಿ 2 ಎಂದು ನಿಮ್ಮ ಮಿತ್ರ ಹೇಳಿದಾಗ ಇಡೀ ಸಂಖ್ಯೆಯ ಮೊದಲ ಅಂಕಿ 7 ಅಲ್ಲವೇ? 9–2 = 7 ಹಾಗೆ 9 ಸ್ಥಿರಾಂಕ. ಈಗ ಎಲ್ಲಾ ಸೇರಿ 792 ಎಂದು ಹೇಳಿಬಿಟ್ಟರೆ ಆಯಿತು.

3 ಪಿಕ್‌ನಿಕ್ PUZZLE

ಸುಮಾರು 21ರಿಂದ 25 ದೀಪದ ಕಡ್ಡಿಗಳನ್ನು ನಿಮ್ಮ ಗೆಳೆಯನ ಎದುರು ಇಡಿ. ಬಳಿಕ ಅವನಿಂದ ದೂರ ಹೋಗಿ ನಿಲ್ಲಿ ಮತ್ತು ಅವನನ್ನು ನೋಡಲೇಬೇಡಿ. ಈಗ ಅವನಲ್ಲಿ ಈ ಮುಂದಿನ ಕೆಲಸ ಮಾಡಲು ಹೇಳಿ.

ಮೊದಲು ಅವನು ಎದುರಿನಲ್ಲಿರುವ ಬೆಂಕಿಕಡ್ಡಿಗಳಿಂದ 1ರಿಂದ 10ರ ಒಳಗೆ ಎಷ್ಟಾದರೂ ಕಡ್ಡಿಗಳನ್ನು ತೆಗೆದು ಅವನ ಚೀಲದಲ್ಲಿ ಹಾಕಲಿ. ನಂತರ ಮೇಜಿನ ಮೇಲೆ ಉಳಿದಿರುವ ಬೆಂಕಿಕಡ್ಡಿಗಳನ್ನು ಅವನು ಎಣಿಸಲಿ. ಅಷ್ಟಾದ ಬಳಿಕ ಆ ಕಡ್ಡಿಗಳ ಸಂಖ್ಯೆ 19 ಎಂದಿಟ್ಟುಕೊಳ್ಳಿ. ಆಗ 1 + 9 = 10 ಆಯಿತು. ಅದರಿಂದ ಅವನು ಮತ್ತೆ 10 ಕಡ್ಡಿಗಳನ್ನು ತೆಗೆದು ಅವನ ಚೀಲದಲ್ಲಿ ಹಾಕಲಿ. ಕೊನೆಗೆ ಅವನು ಉಳಿದ ಕಡ್ಡಿಗಳಲ್ಲಿ ಎಷ್ಟಾದರೂ ಬೆಂಕಿ ಕಡ್ಡಿಗಳನ್ನು ತೆಗೆದು ಅವನ ಕೈಯಲ್ಲಿ ಅಡಗಿಸಿಟ್ಟುಕೊಂಡಿರಲಿ.

ಆ ಬಳಿಕ ನೀವು ಅವನ ಬಳಿಗೆ ಬಂದು ಅವನ ಕೈಯಲ್ಲಿ ಎಷ್ಟು ಬೆಂಕಿಕಡ್ಡಿಗಳು ಇವೆ ಎಂದು ಹೇಳಿ ಆಶ್ಚರ್ಯಗೊಳಿಸುತ್ತೀರಿ. ಗುಟ್ಟೇನೆಂದರೆ ನಿಮ್ಮ ಗೆಳೆಯನು ಎರಡನೇ ಸಲ ಬೆಂಕಿ ಕಡ್ಡಿಗಳನ್ನು ತೆಗೆದು ಚೀಲದಲ್ಲಿ ಹಾಕಿದಾಗ ಮೇಜಿನ ಮೇಲೆ 9 ಇಲ್ಲವೇ 18 ಕಡ್ಡಿಗಳು ಮಾತ್ರವೇ ಉಳಿಯುತ್ತವೆ. ಆದ್ದರಿಂದ ನೀವು ಈಗ ಮೇಜಿನ ಮೇಲಿರುವ ಕಡ್ಡಿಗಳನ್ನು ಲೆಕ್ಕ ಮಾಡಿ ಆ ಅಂಕಿಯನ್ನು 9ರಿಂದ ಕಳೆಯಿರಿ. ಇಲ್ಲವೇ 18ರಿಂದ ಕಳೆಯಿರಿ. ಇದೇ ಅವನ ಕೈಯಲ್ಲಿರುವ ಬೆಂಕಿ ಕಡ್ಡಿಗಳ ಸಂಖ್ಯೆ ಆಗಿರುತ್ತದೆ.

ಉದಾ: ಮೇಜಿನ ಮೇಲೆ 25 ಕಡ್ಡಿಗಳಿವೆ. ಅವುಗಳಲ್ಲಿ ನಿಮ್ಮ ಮಿತ್ರ 8 ಕಡ್ಡಿ ತೆಗೆದು ಚೀಲದಲ್ಲಿ ಹಾಕಿದನೆಂದು ತಿಳಿಯಿರಿ. ಆಗ ಉಳಿದಿರುವ ಕಡ್ಡಿ ಎಣಿಸಿದಾಗ (25–8 = 17) 17 ಕಡ್ಡಿ ಉಳಿದಿರುತ್ತವೆ. ಆಗ ನಿಮ್ಮ ಮಿತ್ರ 1 + 7 = 8 ಕೂಡಿಸಿ ಈ ಕಡ್ಡಿಗಳನ್ನು ಮತ್ತೆ ಚೀಲದಲ್ಲಿ ಹಾಕಿದಾಗ ಮೇಜಿನ ಮೇಲೆ ಉಳಿದ ಕಡ್ಡಿಗಳು 9. ಈಗ ನಿಮ್ಮ ಮಿತ್ರ 5 ಕಡ್ಡಿಗಳನ್ನು ಕೈಯಲ್ಲಿ ಅಡಗಿಸಿಟ್ಟುಕೊಂಡಿದ್ದಾನೆ ಎಂದು ತಿಳಿಯಿರಿ. ನೀವು ಮೇಜಿನ ಹತ್ತಿರ ಬಂದು ದೃಷ್ಟಿ ಹಾಯಿಸಿ ಉಳಿದಿರುವ 4 ಕಡ್ಡಿ ಗಮನಿಸಿ. ಆ 4ನ್ನು ನಿಮ್ಮ ಸ್ಥಿರಾಂಕ 9ರಲ್ಲಿ ಕಳೆಯುತ್ತೀರಿ. ಆಗ ಅವನು ಬಚ್ಚಿಟ್ಟುಕೊಂಡ ಕಡ್ಡಿಗಳು 5 ಎಂದು ಥಟ್ಟನೆ ಹೇಳುವಿರಿ.

4 ನಿನ್ನ ಉತ್ತರ ನಾನು ಹೇಳಲೇ?

100ರ ಒಳಗಿನ ಒಂದು ಸಂಖ್ಯೆ ಬರೆದುಕೊಳ್ಳಿ. ಅದಕ್ಕೆ 7 ಕೂಡಿಸಿ. ಬಂದ ಉತ್ತರವನ್ನು 110ರಲ್ಲಿ ಕಳೆಯಿರಿ. ಬಂದ ಉತ್ತರಕ್ಕೆ 15 ಕೂಡಿಸಿರಿ. ನಂತರ ಮೊದಲು ಬರೆದುಕೊಂಡ ಸಂಖ್ಯೆ ಕೂಡಿಸಿ 2ರಿಂದ ಭಾಗಿಸಿ. ಆ ಮೇಲೆ 9 ಕಳೆಯಿರಿ. ಈಗ 3ರಿಂದ ಗುಣಿಸಿರಿ ಬಂದ ಉತ್ತರವನ್ನು ನಾನು ಹೇಳುತ್ತೇನೆ.

ಉತ್ತರ: 150 ಸರಿ ತಾನೆ?

ಉದಾ: 33 ನೀವು ಬರೆದುಕೊಂಡ ಸಂಖ್ಯೆ

ಹೌದು! ನಾನು ಹೇಳಿದ ಉತ್ತರವೂ 150. ಹೀಗೆ ನೀವು ಮೇಲಿನ ಕ್ರಮವನ್ನು ಅನುಸರಿಸಿ ನಿಮ್ಮ ಮಿತ್ರರೊಡನೆ ಆಡಿ ನೋಡಿ.

```
  33
  +7
 ----
  40
 110
 -40
 ----
 070
 +15
 ----
  85
 +33   ಮೊದಲು ಬರೆದುಕೊಂಡ ಸಂಖ್ಯೆ
2) 118 (59
  10
 ----
  18
  18
 ----
  00
  59   ಭಾಗಲಬ್ಧ
  -9
 ----
  50
  x3
 ----
 150
```

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

5 ನಿಮ್ಮ ಪದ ರಚನಾ ಸಾಮರ್ಥ್ಯಕ್ಕೊಂದು ಪರೀಕ್ಷೆ


ಇಲ್ಲಿ 'ಕ–ಡ' ಈ ಅಕ್ಷರಗಳಿಗೆ ಸ್ವರಾಕ್ಷರಗಳನ್ನು ಜೋಡಿಸಿಕೊಂಡು ಎಷ್ಟು ಪದ ರಚಿಸಬಲ್ಲಿರಿ? ಪ್ರಯತ್ನಿಸಿ. ಕನಿಷ್ಠ 17 ಪದಗಳನ್ನಾದರೂ ನೀವು ರಚಿಸಬಹುದು.

	ಕ	ಡ			
1	ಕಾ	ಡೆ	9		
2			10		
3			11		
4			12		
5			13		
6			14		
7			15		
8			16		
			17		

ಝೆನ್ ಗುರು ಮತ್ತು ಕಾಗೆ

ಡಣ್ಣ ಚಕ್ಕು ಕೇಶ್ರಪ್ಪ ಕಥೆಯ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ




ಒಮ್ಮೆ ಒಂದು ಕಾಗೆ ಝೆನ್ ಗುರುವಿನ ಬಳಿ ಬಂದು ಹೇಳಿತು. ನಾನು ಸುಂದರವಾಗಿಲ್ಲ. ಕಪ್ಪಗಿದ್ದೇನೆ. ಕೊಳದಲ್ಲಿರುವ ಹಂಸ ತುಂಬಾ ಬೆಳ್ಳಗಿದ್ದು ಸುಂದರವಾಗಿದೆ ಎಂದಿತು. ಹಂಸವನ್ನು ಮಾತನಾಡಿಸುವಂತೆ ಕಾಗೆಗೆ ಗುರುಗಳು ಹೇಳಿದರು



ಹಂಸದ ಬಳಿ ಹೋದ ಕಾಗೆ 'ನೀನು ತುಂಬಾ ಸುಂದರವಾಗಿ, ಆನಂದವಾಗಿದ್ದಿ' ಎಂದಿತು. ಹಂಸವು, 'ನಿಜ, ನಾನು ಸುಂದರ ವಾಗಿದ್ದೇನೆ. ಆದರೆ ಗಿಳಿ ಎರಡು ಬಣ್ಣಗಳಲ್ಲಿ ಸುಂದರವಾಗಿದೆ. ಅದರ ಮುಂದೆ ನಾನೇನೂ ಅಲ್ಲ' ಎಂದು ಬೇಸರಿಸಿತು




ಕಾಗೆ ಗಿಳಿ ಬಳಿ, 'ನೀನು ಹಂಸಕ್ಕಿಂತಲೂ ಸುಂದರವಾಗಿರುವೆ' ಎಂದಿತು. ಅದಕ್ಕೆ ಗಿಳಿ, 'ನನ್ನದೇನಿದೆ ಕೇವಲ ಎರಡು ಬಣ್ಣಗಳು. ನವಿಲು ಬಣ್ಣಬಣ್ಣದ ಗರಿಗಳಿಂದ ತುಂಬಾ ಸುಂದರವಾಗಿದೆ. ಅದನ್ನು ನೋಡಲು ಜನರು ಪೈಪೋಟಿ ನಡೆಸುತ್ತಾರೆ' ಎಂದಿತು



ನವಿಲನ್ನು ಕಂಡ ಕಾಗೆ, 'ನೀನು ತುಂಬಾ ಸುಂದರ, ಅದೃಷ್ಟವಂತ' ಎಂದಿತು. ನವಿಲು 'ಹಾಂ, ಸುಂದರವಾಗಿದ್ದೇನೆ ಎಂದು ಈ ಪ್ರಾಣಿ ಸಂಗ್ರಹಾಲಯದಲ್ಲಿಟ್ಟಿದ್ದಾರೆ. ಕಾಗೆಗಳನ್ನು ನೋಡು, ಅವು ಹೊರಗೆ ಓಡಾಡಿಕೊಂಡಿವೆ. ನಾನು ಕಾಗೆಯಾಗಿರಬೇಕಿತ್ತು' ಎಂದು ಹಲುಬಿತು



ಹಂಸ, ಗಿಳಿ ಮತ್ತು ನವಿಲಿನ ಜೊತೆ ಮಾತನಾಡಿದ ಬಳಿಕ ಕಾಗೆಗೆ ಜ್ಞಾನೋದಯವಾಯಿತು. ನಾನೂ ಬದುಕಿನಲ್ಲಿ ತುಂಬಾ ಚೆನ್ನಾಗಿದ್ದೇನಲ್ಲವೇ ಎಂದು ಯೋಚಿಸುತ್ತಾ ಗುರುವಿನ ಬಳಿ ವಾಪಸಾಯಿತು



ಇತರರೊಂದಿಗೆ ತಮ್ಮನ್ನು ಹೋಲಿಸಿಕೊಳ್ಳುವುದರಿಂದ ಕೀಳರಿಮೆ ಹೆಚ್ಚುತ್ತದೆ. ಅವರವರ ವಿಶೇಷ ಅವರಿಗೆ ಇದ್ದೇ ಇರುತ್ತದೆ. ನಮ್ಮ ಸಾಮರ್ಥ್ಯವನ್ನು ಸದ್ಬಳಕೆ ಮಾಡಿಕೊಂಡರೆ ಸಂತೃಪ್ತಿಯಾಗಿ ಜೀವಿಸಬಹುದು ಎಂದು ಗುರುಗಳು ಹೇಳಿದರು


ಕಳೆದ ಸಂಚಿಕೆಯ ಸರಿ ಉತ್ತರಗಳು

ಜಾಣಪದ ಆಟ: ಗಿಳಿ, ಗೀಳು, ಗಾಳಿ, ಗುಳಿ, ಗೋಳು

ಪದವಿನೋದ: ಹಳದಿಕಣ್ಣು, ಹಾಲಿನಪುಡಿ

ಟ್ವೆಂಟಿ –20 ಮ್ಯಾಚ್: A: 1-H 2-F 3-D 4-E 5-C 6-G 7-I 8-B 9-J 10-A
B: 1-G 2-H 3-E 4-I 5-J 6-F 7-C 8-B 9-D 10-A

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ನಿಹಾರಿಕಾ ಪಿ., ಮಂಡ್ಯ



ಲಕ್ಷ್ಮಿಬಾಯಿ ಕುಂಬಾರ, ರಡ್ಡೇರನಾಗನೂರ (ಗದಗ)



ಉಜ್ಮಾ ಕೌಸರ್, ಮಧುಗಿರಿ (ತುಮಕೂರು)

majakoora@prajavani.co.in

ಡ್ಯಾನಿಶ್ ಓಪನ್ ಈಜು ಕೂಟ: ವೇದಾಂತ್ ಮಾಧವನ್‌ಗೆ ಬೆಳ್ಳಿ ಪದಕ

ಸಜನ್ ಪ್ರಕಾಶ್‌ಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ಸಜನ್ ಪ್ರಕಾಶ್ ಡೆನ್ಮಾರ್ಕ್‌ನ ಕೋಪನ್‌ಹೇಗನ್‌ನಲ್ಲಿ ನಡೆಯುತ್ತಿರುವ ಡ್ಯಾನಿಶ್ ಓಪನ್ ಈಜುಕೂಟದಲ್ಲಿ ಚಿನ್ನದ ಪದಕಕ್ಕೆ ಮುತ್ತಿಟ್ಟಿದ್ದಾರೆ.

ಶುಕ್ರವಾರ 200 ಮೀಟರ್ಸ್ ಬಟರ್‌ಫ್ಲೈ ವಿಭಾಗದಲ್ಲಿ ನೀರಿಗಿಳಿದಿದ್ದ ಸಜನ್ 1 ನಿಮಿಷ 59.27 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಈ ಋತುವಿನಲ್ಲಿ ಮೊದಲ ಬಾರಿ ಅವರು ಸ್ಪರ್ಧಿಸಿದ್ದಾರೆ.

ಪ್ರದೀಪ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ದುಬೈನಲ್ಲಿ ತರಬೇತಿ ಪಡೆಯುತ್ತಿರುವ ಕೇರಳದ ಸಜನ್, ಹೀಟ್ಸ್‌ನಲ್ಲಿ 2 ನಿಮಿಷ 3.67 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ್ದರು. ಕಳೆದ ವರ್ಷ ರೋಮ್‌ನಲ್ಲಿ 1 ನಿಮಿಷ 56.38 ಸೆಕೆಂಡುಗಳಲ್ಲಿ ಗುರಿ ತಲುಪಿ ವೈಯಕ್ತಿಕ ಶ್ರೇಷ್ಠ ಸಾಧನೆ ಮಾಡಿದ್ದ ಸಜನ್, ಒಲಿಂಪಿಕ್ಸ್‌ಗೆ 'ಎ' ಅರ್ಹತೆ ಗಳಿಸಿದ ಭಾರತದ ಮೊದಲ ಈಜುಪಟು ಎನಿಸಿಕೊಂಡಿದ್ದರು.

'ಈ ತಿಂಗಳಲ್ಲಿ ಕೆಲವು ಸ್ಪರ್ಧೆಗಳಿವೆ. ಡೆನ್ಮಾರ್ಕ್ ಓಪನ್ ಪೂರ್ವಸಿದ್ಧತಾ ಕೂಟವಾಗಿತ್ತು. ಕಾಮನ್‌ವೆಲ್ತ್ ಮತ್ತು ಏಷ್ಯನ್ ಗೇಮ್ಸ್‌ಗಳ ವೇಳೆಗೆ ಸಾಮರ್ಥ್ಯವನ್ನು ಹಂತಹಂತವಾಗಿ ಉತ್ತಮಪಡಿಸಿಕೊಳ್ಳುವೆವು' ಎಂದು ಎರಡು ಬಾರಿಯ ಒಲಿಂಪಿಯನ್ ಸಜನ್ ಹೇಳಿದ್ದಾರೆ.


ಪದಕಗಳೊಂದಿಗೆ ಸಜನ್ ಪ್ರಕಾಶ್ ಮತ್ತು ವೇದಾಂತ್ ಮಾಧವನ್– ಸಾಯ್ ಮೀಡಿಯಾ ಟ್ವಿಟರ್ ಚಿತ್ರ

ವೇದಾಂತ್‌ಗೆ ಬೆಳ್ಳಿ: ವೇದಾಂತ್ ಮಾಧವನ್ ಕೂಡ ಕೂಟದಲ್ಲಿ ಶುಭಾರಂಭ ಮಾಡಿದ್ದರು. 1500 ಮೀಟರ್ಸ್ ಫ್ರೀಸ್ಟೈಲ್ ವಿಭಾಗದಲ್ಲಿ ಸ್ಪರ್ಧಿಸಿದ್ದ ಅವರು ವೈಯಕ್ತಿಕ ಶ್ರೇಷ್ಠ ಸಾಧನೆಯೊಂದಿಗೆ ಬೆಳ್ಳಿ ಪದಕ ಜಯಿಸಿದರು.

ಖ್ಯಾತ ನಟ ಆರ್. ಮಾಧವನ್ ಪುತ್ರ ವೇದಾಂತ್ 15 ನಿಮಿಷ 57.86 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. 16 ವರ್ಷದ ವೇದಾಂತ್, ಹೋದ ವರ್ಷ ಮಾರ್ಚ್‌ನಲ್ಲಿ ನಡೆದಿದ್ದ ಲಾತ್ವಿಯಾ ಓಪನ್‌ನಲ್ಲಿ ಕಂಚು ಗೆದ್ದಿದ್ದರು. ಅದೇ ವರ್ಷ ನಡೆದ ರಾಷ್ಟ್ರೀಯ ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲೂ ಏಳು ಪದಕಗಳು ಅವರ ಕೊರಳಿಗೇರಿದ್ದವು.ಮಹಿಳೆಯರ 400 ಮೀಟರ್ಸ್ ಮೆಡ್ಲೆ 'ಬಿ' ಫೈನಲ್‌ನಲ್ಲಿ ಶಕ್ತಿ ಬಾಲಕೃಷ್ಣನ್ ಎರಡನೇ ಸ್ಥಾನ ಗಳಿಸಿದರು. 5 ನಿ. 10.71 ಸೆಕೆಂಡುಗಳಲ್ಲಿ ಅವರು ಗುರಿ ಮುಟ್ಟಿದರು.

ಪುರುಷರ 50 ಮೀಟರ್ಸ್ ಫ್ರೀಸ್ಟೈಲ್ ಹೀಟ್ಸ್‌ನಲ್ಲಿ ತನಿಶ್ ಜಾರ್ಜ್ ಮ್ಯಾಥ್ಯೂ (24.29 ಸೆಕೆಂಡು) 29ನೇ ಸ್ಥಾನ ಗಳಿಸಿದರು.


ಭಾರತ್ ಎಸ್‌ಯು. ಮತ್ತು ಪಿ.ಪಿ.ಸಿ. ತಂಡಗಳ ಆಟಗಾರರ ನಡುವಣ ಸೆಣಸಾಟ

ಸೆಮಿಗೆ ಎಚ್‌ಬಿಆರ್

ಬೆಂಗಳೂರು: ಎಚ್‌ಬಿಆರ್ ಮತ್ತು ನ್ಯಾಷನಲ್ಸ್ ಬಿ.ಸಿ. ಮೈಸೂರು ತಂಡಗಳು ಇಲ್ಲಿ ನಡೆಯುತ್ತಿರುವ ರಾಜ್ಯ ಸಬ್‌ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿವೆ.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಎಂಟರಘಟ್ಟದ ಪಂದ್ಯದಲ್ಲಿ ಶನಿವಾರ ಎಚ್‌ಬಿಆರ್ ಬಿ.ಸಿ 47–8ರಿಂದ ಪ್ರೊಟೆಕ್ ಚಾಲೆಂಜರ್ಸ್ ಮೈಸೂರು ವಿರುದ್ಧ ಗೆದ್ದಿತು. ವಿಜೇತ ತಂಡದ ಸಂವೇಗ್ 18 ಪಾಯಿಂಟ್ಸ್ ಗಳಿಸಿದರು.

ಬಾಲಕರ ವಿಭಾಗದ ಇನ್ನುಳಿದ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲು ಬೆಂಗಳೂರು ಸ್ಪೋರ್ಟಿಂಗ್ 57–32ರಿಂದ ಅಪ್ಪಯ್ಯ ಬಿ.ಸಿ. ವಿರುದ್ಧ, ಎಂ.ಎನ್.ಕೆ.ರಾವ್ ಪಾರ್ಕ್ 43–36ರಿಂದ ಕೋರಮಂಗಲ ಎಸ್‌ಸಿ ವಿರುದ್ಧ, ಭಾರತ್ ಎಸ್‌ಯು 38–36ರಿಂದ ಪಿ.ಪಿ.ಸಿ ತಂಡದ ಎದುರು ಜಯಿಸಿದವು.ಬಾಲಕಿಯರ ವಿಭಾಗದ ಎಂಟರಘಟ್ಟದ ಪಂದ್ಯದಲ್ಲಿ ನ್ಯಾಷನಲ್ಸ್ ಬಿ.ಸಿ. ಮೈಸೂರು 45–12ರಿಂದ ಬೀಗಲ್ಸ್ ಬಿ.ಸಿ. ಎದುರು ಗೆದ್ದಿತು. ನ್ಯಾಷನಲ್ಸ್ ತಂಡಕ್ಕಾಗಿ ನಮಿತಾ 12 ಪಾಯಿಂಟ್ಸ್ ಗಳಿಸಿದರು. ಇನ್ನುಳಿದ ಪಂದ್ಯಗಳಲ್ಲಿ ಎಂಸಿಎಚ್‌ಎಸ್ 56–11ರಿಂದ ಮಲ್ಲಸಜ್ಜನ ಬಿ.ಸಿ. ಧಾರವಾಡ ಎದುರು, ಅಪ್ಪಯ್ಯ ಬಿ.ಸಿ. 38– 33ರಿಂದ ಡಿವೈಇಎಸ್ ಮಂಡ್ಯ ಎದುರು, ಕೋರಮಂಗಲ ಎಸ್‌ಸಿ 32–5ರಿಂದ ಪಿ.ಪಿ.ಸಿ ಎದುರು ಜಯ ಸಾಧಿಸಿದವು.ಬಾಲಕರ ಸೆಮಿಫೈನಲ್ ಪಂದ್ಯಗಳಲ್ಲಿ ಭಾನುವಾರ ಬೆಂಗಳೂರು ಸ್ಪೋರ್ಟಿಂಗ್– ಎಚ್‌ಬಿಆರ್ ಬಿ.ಸಿ. ಮತ್ತು ಎಂ.ಎನ್.ಕೆ.ರಾವ್– ಭರತ್ ಎಸ್.ಯು. ತಂಡಗಳು ಮುಖಾಮುಖಿಯಾಗಲಿವೆ.